ಗುರುವಾರ, ಫೆಬ್ರುವರಿ 8, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 39 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಉಭಯವಾಸಿಗಳಲ್ಲಿ ಬೆಂಗಳೂರಿನ ಪ್ರಭೇದವೊಂದು ಪತ್ತೆಯಾಗಿದೆ, ಯಾವುದದು ಗೊತ್ತೆ?

ಆಳ-ಅಗಲ
'ತೀವ್ರ ಬರ' ಘೋಷಣೆ ಪ್ರಕ್ರಿಯೆ ಸಂಕೀರ್ಣಗೊಳಿಸಿದ ಕೇಂದ್ರ ಸರ್ಕಾರ

ಕಬ್ಬಿನ ಬಾಕಿ ಪಾವತಿ ಶೇ 99 ಗುರಿ ಸಾಧನೆ 12

₹25 ಕೋಟಿಗೆ ಶಾಸಕರ ಪೈಪೋಟಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,152 ▼	21,930 ▲	₹64,580 (ಬೆಂಗಳೂರು) ▲	₹72,100 (ಬೆಂಗಳೂರು) ▼	82.96 ▲

ದೆಹಲಿಯ ಜಂತರ್ ಮಂತರ್‌ನಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತಿಭಟನೆ • ರಾಜ್ಯಸಭೆಯಲ್ಲಿ ತಿರುಗೇಟು ನೀಡಿದ ಮೋದಿ • ರಾಜ್ಯದಲ್ಲಿ ಬಿಜೆಪಿ ಹೋರಾಟ

ತೆರಿಗೆ ಪಾಲು: ಸಿ.ಎಂ 'ಚಳವಳಿ', ಪ್ರಧಾನಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ನಿರಂತರ ದ್ರೋಹ ಹಾಗೂ ವಂಚನೆ ಆಗುತ್ತಿದೆ ಎಂದು ಆರೋಪಿಸಿ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ರಾಜಧಾನಿಯಲ್ಲಿ ಬುಧವಾರ ರಣಕಹಳೆ ಮೊಳಗಿಸಿತು. ಈ ಆರೋಪಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು ಹಾಗೂ ಸಂಸದರು ತೀಕ್ಷ್ಣ ತಿರುಗೇಟು ಕೊಟ್ಟರು.

ಜಂತರ್ ಮಂತರ್‌ನಲ್ಲಿ ಸಂಪುಟದ ಸಹೋದ್ಯೋಗಿಗಳು, ಕಾಂಗ್ರೆಸ್ ಶಾಸಕರು, ಸಂಸದರು ಹಾಗೂ ವಿಧಾನ ಪರಿಷತ್ ಸದಸ್ಯರ ಜತೆಗೆ ಪ್ರತಿಭಟನೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದಾಗಿ 2017-18ರಿಂದ ಕರ್ನಾಟಕಕ್ಕೆ ₹1,87,867 ಕೋಟಿ ನಷ್ಟವಾಗಿದೆ. ಇದರಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಅವಕಾಶವನ್ನು ತಪ್ಪಿಸಿದಂತಾಗಿದೆ' ಎಂದರು.

'ಈ ಹೋರಾಟ ರಾಜ್ಯದ, ಕನ್ನಡಿಗರ ಹಿತ ಕಾಪಾಡುವ ಚಳವಳಿಯಾಗಿದೆ. ಇದು ರಾಜಕೀಯ ಚಳವಳಿ ಅಲ್ಲ' ಎಂದು ಹೇಳುವ ಮೂಲಕ ಕೇಂದ್ರದ ಜತೆಗಿನ ಸಂಘರ್ಷಕ್ಕೆ ಹೊಸ ವ್ಯಾಖ್ಯಾನ ನೀಡುವ ಪ್ರಯತ್ನ ಮಾಡಿದರು. 'ಅನುದಾನ ಬಿಡುಗಡೆಗೆ ಅಸಹಾಯಕತೆ ವ್ಯಕ್ತಪಡಿಸುವ ಕೇಂದ್ರ ಸರ್ಕಾರ ಏಕಿರಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಟುವಾಗಿ ಪ್ರಶ್ನಿಸಿದರು.

ನವದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಶಾಸಕ ಲಕ್ಷ್ಮಣ ಸವದಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಗೃಹಸಚಿವ ಜಿ. ಪರಮೇಶ್ವರ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಜತೆಗೂಡಿ ಬುಧವಾರ ಸಂಜೆ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ಕಾಂಗ್ರೆಸ್ ಜತೆಗೆ ದೇಶ ವಿಭಜನೆ ಮಾಡುವ ಗ್ಯಾಂಗ್ ಇದೆ. ಉತ್ತರ ಹಾಗೂ ದಕ್ಷಿಣ ಎಂದು ವಿಂಗಡಿಸಿ ದೇಶ ವಿಭಜನೆ ಮಾಡುವ ಷಡ್ಯಂತ್ರದಿಂದ ಕೇಂದ್ರದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದೆ' ಎಂದು ಆರೋಪಿಸಿದರು. ಯುಪಿಎ ಸರ್ಕಾರದ ಅವಧಿಗಿಂತ ಎನ್‌ಡಿಎ ಅವಧಿಯಲ್ಲಿ ರಾಜ್ಯಕ್ಕೆ ಹೆಚ್ಚು ಅನುದಾನ ನೀಡಲಾಗಿದೆ ಎಂದು ಸಮರ್ಥಿಸಿಕೊಂಡರು. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರೂ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡಿರುವ ವಿವರಗಳನ್ನು ಒದಗಿಸಿದರು. ರಾಜ್ಯವನ್ನು ಪ್ರತಿನಿಧಿಸುವ ಬಿಜೆಪಿ ಸಂಸದರು ಪತ್ರಿಕಾಗೋಷ್ಠಿ ನಡೆಸಿ ಕಾಂಗ್ರೆಸ್‌ನ ಆರೋಪಗಳಿಗೆ ತಿರುಗೇಟು ಕೊಟ್ಟರು.

> 5ನೇ ಹಣಕಾಸು ಆಯೋಗದ ಶಿಫಾರಸಿಗಿಂತ ಹೆಚ್ಚು ಹಣವನ್ನು ಕರ್ನಾಟಕಕ್ಕೆ ನೀಡಲಾಗಿದೆ. ನೆರವಿನ ರೂಪದಲ್ಲಿ ₹12,476 ಕೋಟಿಯನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ
> **ನಿರ್ಮಲಾ ಸೀತಾರಾಮನ್**
> ಕೇಂದ್ರ ಹಣಕಾಸು ಸಚಿವೆ

> ಹಣಕಾಸು ಆಯೋಗ ಸ್ವಾಯತ್ತ ಸಂಸ್ಥೆ. ಆದರೆ, ಒಂದು ರಾಜ್ಯಕ್ಕೆ ಆಗಿರುವ ತಾರತಮ್ಯವನ್ನು ಸರಿಪಡಿಸುವ ಅಧಿಕಾರವಿಲ್ಲದ ಕೇಂದ್ರದ ಈ ಸರ್ಕಾರ ಏಕಿರಬೇಕು?
> **ಡಿ.ಕೆ. ಶಿವಕುಮಾರ್**
> ಕರ್ನಾಟಕದ ಉಪ ಮುಖ್ಯಮಂತ್ರಿ

ಇನ್ನಷ್ಟು ಸುದ್ದಿಗಳು 8

ಬಿಜೆಪಿ ಪ್ರತಿಭಟನೆ ರಾಜ್ಯ ಸರ್ಕಾರ ಬರ ಪರಿಸ್ಥಿತಿ ನಿಭಾಯಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ಬಿಜೆಪಿ ಶಾಸಕರು ಬೆಂಗಳೂರಿನ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ 8

'ವಿಭಜನೆ ಸಂಕಥನ ನಿಲ್ಲಿಸಿ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೇಶವನ್ನು ಉತ್ತರ ಮತ್ತು ದಕ್ಷಿಣ ಎಂಬುದಾಗಿ ವಿಭಜಿಸುವಂತಹ ಸಂಕಥನ ಸೃಷ್ಟಿಸುವುದನ್ನು ನಿಲ್ಲಿಸುವಂತೆ ಕಾಂಗ್ರೆಸ್ ಹಾಗೂ ಕರ್ನಾಟಕ ಸರ್ಕಾರವನ್ನು ಒತ್ತಾಯಿಸಿದ ಪ್ರಧಾನಿ ನರೇಂದ್ರ ಮೋದಿ, ಇಂಥ ನಡೆಯಿಂದ ದೇಶದ ಭವಿಷ್ಯ ಗಂಡಾಂತರಕ್ಕೆ ಸಿಲುಕಲಿದೆ ಎಂದು ಹೇಳಿದರು.

9ನೇ ಪುಟ ನೋಡಿ

> ದೇಶದ ಒಂದು ಪ್ರದೇಶದಲ್ಲಿ ತಯಾರಿಸಲಾಗುವ ಲಸಿಕೆಯನ್ನು ಮತ್ತೊಂದು ಭಾಗಕ್ಕೆ ಕೊಡುವುದಿಲ್ಲ ಎಂದು ಯಾರಾದರೂ ಹೇಳಲು ಸಾಧ್ಯವೇ? ಇದು ಎಂತಹ ಯೋಚನೆ?
> **ನರೇಂದ್ರ ಮೋದಿ,** ಪ್ರಧಾನಿ

> ಪ್ರಧಾನಿಯವರು ವಿರೋಧ ಪಕ್ಷಗಳನ್ನು ಗುರಿಯಾಗಿಸಿ ಟೀಕೆ ಮಾಡುವ ಬದಲು ಕಳೆದ 10 ವರ್ಷಗಳಲ್ಲಿ ತಮ್ಮ ಸರ್ಕಾರ ಮಾಡಿದ ಸಾಧನೆಗಳ ಬಗ್ಗೆ ಹೇಳಬೇಕಿತ್ತು
> **ಪ್ರಿಯಾಂಕಾ ಚತುರ್ವೇದಿ,** ರಾಜ್ಯಸಭೆ ಸದಸ್ಯೆ, ಶಿವಸೇನಾ (ಯುಬಿಟಿ)

ಉತ್ತರಾಖಂಡ: ಯುಸಿಸಿ ಅಂಗೀಕಾರ

ಡೆಹ್ರಾಡೂನ್ (ಪಿಟಿಐ): ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮಸೂದೆಗೆ ಉತ್ತರಾಖಂಡ ವಿಧಾನ ಸಭೆಯಲ್ಲಿ ಬುಧವಾರ ಅಂಗೀಕಾರ ನೀಡಲಾಯಿತು.

ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಗಿದ್ದ ಈ ಮಸೂದೆಗೆ ಧ್ವನಿಮತದ ಮೂಲಕ ಒಪ್ಪಿಗೆ ಸೂಚಿಸಲಾಯಿತು.

ಈ ಮಸೂದೆಗೆ ರಾಜ್ಯಪಾಲರ ಅಂಕಿತ ದೊರೆತರೆ, ದೇಶದಲ್ಲಿ ಮದುವೆ, ವಿಚ್ಛೇದನ, ಭೂಮಿ, ಆಸ್ತಿ ವಿಚಾರವಾಗಿ ಎಲ್ಲ ನಾಗರಿಕರೂ ಸಮಾನವಾದ ಕಾನೂನುಗಳನ್ನು ಹೊಂದಿರುವ ಮೊದಲ ರಾಜ್ಯ ಇದಾಗಲಿದೆ.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಮಸೂದೆ ಅಂಗೀಕಾರವಾಗುವ ಮುನ್ನ ಮಾತನಾಡಿ, 'ಇದು ಸಾಮಾನ್ಯ ಶಾಸನ ವಲ್ಲ. ಯುಸಿಸಿಯು ವಿಶೇಷವಾಗಿ ಮಹಿಳೆಯರ ಹಕ್ಕುಗಳನ್ನು ರಕ್ಷಿಸುತ್ತದೆ ಮತ್ತು ಅವರ ಮೇಲೆ ನಡೆಯುವ ದೌರ್ಜನ್ಯವನ್ನು ಕೊನೆಗಾಣಿಸುತ್ತದೆ' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

'2022ರ ವಿಧಾನಸಭೆ ಚುನಾವಣೆಗೂ ಮೊದಲು ಜನರಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ 'ಅಭಿವೃದ್ಧಿ ಹೊಂದಿದ ಭಾರತ' ನಿರ್ಮಿಸುವ ದಿಸೆಯಲ್ಲಿ ಯುಸಿಸಿ ಮಸೂದೆಯು ಉತ್ತರಾಖಂಡ ನೀಡಿರುವ ಸಣ್ಣ ಕೊಡುಗೆ' ಎಂದರು.

ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳು ಯುಸಿಸಿ ಜಾರಿಗೊಳಿಸುವುದಕ್ಕಾಗಿ ಈ ಮಸೂದೆಯನ್ನು ಮಾದರಿಯನ್ನಾಗಿ ಇರಿಸಿಕೊಳ್ಳಬಹುದು ಎನ್ನಲಾಗಿದೆ.



ಮುಖ್ಯಮಂತ್ರಿಯವರ ರಾಜ್ಯಮಟ್ಟದ ಜನಸ್ಪಂದನ ಕಾರ್ಯಕ್ರಮಕ್ಕಾಗಿ ವಿಧಾನಸೌಧದ ಆವರಣದಲ್ಲಿ ನಡೆದಿರುವ ಸಿದ್ಧತೆ – ಪ್ರಜಾವಾಣಿ ಚಿತ್ರ

ಸಿ.ಎಂ ಜನಸ್ಪಂದನಕ್ಕೆ ವಿಧಾನಸೌಧ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜನರ ದೂರು ಹಾಗೂ ಮನವಿಗಳನ್ನು ನೇರವಾಗಿ ಸ್ವೀಕರಿಸಿ, ಪರಿಹಾರ ಒದಗಿಸುವ ಮುಖ್ಯಮಂತ್ರಿಯವರ ಜನಸ್ಪಂದನ ಕಾರ್ಯಕ್ರಮಕ್ಕೆ ವಿಧಾನಸೌಧ ಸಜ್ಜಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಇಡೀ ದಿನ ಜನರ ಅಹವಾಲು ಆಲಿಸಲಿದ್ದಾರೆ.

ಇದು ಮುಖ್ಯಮಂತ್ರಿಯವರ ರಾಜ್ಯಮಟ್ಟದ ಎರಡನೇ ಜನಸ್ಪಂದನ ಕಾರ್ಯಕ್ರಮ. ಬೆಳಿಗ್ಗೆ 10ರಿಂದ ಸಂಜೆ 6ರವರೆಗೂ ಮುಖ್ಯಮಂತ್ರಿಯವರು ಸಾರ್ವಜನಿಕರ ಅಹವಾಲು ಆಲಿಸುವರು.

ವಿಧಾನಸೌಧದ ಆವರಣದಲ್ಲಿ ಜನಸ್ಪಂದನ ಕಾರ್ಯಕ್ರಮಕ್ಕಾಗಿ ವಿಶೇಷ ವ್ಯವಸ್ಥೆ ಮಾಡಲಾಗಿದೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಕೈ ಹಿಡಿದ 10 ಅಂತರ್ಜಾತಿ ಜೋಡಿ 5
ಮೀಸಲಾತಿ: ಉಪ ವರ್ಗೀಕರಣಕ್ಕೆ ಕೇಂದ್ರ ಸರ್ಕಾರದ ಬೆಂಬಲ 12
ಗೋಕರ್ಣ: ಜಪಾನ್ ಮಹಿಳೆ ನಾಪತ್ತೆ 7

ಸುಧಾ, ಮಯೂರ ಓದಿರಿ

ಆಸ್ತಿ ವಿಚಾರಕ್ಕೆ ಸಂಬಂಧಿಯಿಂದಲೇ ಕೊಲೆ ಶಂಕೆ: ಆರೋಪಿ ಬಂಧನ

ಕುಂಬಾರಪೇಟೆಯಲ್ಲಿ ಜೋಡಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಸೂರು ಗೇಟ್ ಠಾಣಾ ವ್ಯಾಪ್ತಿಯ ಕುಂಬಾರಪೇಟೆಯ ಹರಿ ಮಾರುಕಟ್ಟೆಯ ಕಟ್ಟಡವೊಂದರಲ್ಲಿ ಬುಧವಾರ ರಾತ್ರಿ ಇಬ್ಬರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪದ್ಮನಾಭನಗರದ ಸುರೇಶ್(55) ಹಾಗೂ ಮಹೇಂದ್ರ(68) ಕೊಲೆಯಾದವರು. ಆರೋಪಿ ಭದ್ರ ಎಂಬಾತನನ್ನು ಬಂಧಿಸಲಾಗಿದೆ.

‘ಕೊಲೆಯಾದ ಸುರೇಶ್ ಅವರ ಸಂಬಂಧಿಯೇ ಆರೋಪಿ ಎನ್ನಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

‘ರಾತ್ರಿ 8.30ರ ಸುಮಾರಿಗೆ ಭದ್ರ ಎಂಬಾತ ಸುರೇಶ್ ಅವರ ಮಳಿಗೆಗೆ ನುಗ್ಗಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ. ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಕೊಲೆ ಮಾಡಿ ಶರಣು: ‘ಸುರೇಶ್ ಅವರು ಕಿಚನ್ ಸೆಟ್ ಮಳಿಗೆ ನಡೆಸುತ್ತಿದ್ದರು. ಇಬ್ಬರೂ ಮಳಿಗೆಯಲ್ಲಿ ಕುಳಿತಿದ್ದ ವೇಳೆ ಕೊಲೆ ಮಾಡಲಾಗಿದೆ. ನಂತರ, ತಾನೇ ಪೊಲೀಸರಿಗೆ ಶರಣಾಗಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ಸುರೇಶ್

‘ಸುರೇಶ್ ಹಾಗೂ ಮಹೇಂದ್ರ ಅವರು ಆತ್ಮೀಯ ಸ್ನೇಹಿತರಾಗಿದ್ದರು. ಸುರೇಶ್ ಅವರನ್ನು ಭೇಟಿಯಾಗಲು ಮಹೇಂದ್ರ ಬುಧವಾರ ರಾತ್ರಿ 8 ಗಂಟೆ ಸುಮಾರಿಗೆ ಬಂದಿದ್ದರು. ಅದೇ ವೇಳೆ ಮಳಿಗೆಗೆ ಬಂದಿದ್ದ ಆರೋಪಿ, ಸುರೇಶ್ ಮೇಲೆ ಹಲ್ಲೆ ನಡೆಸಲು ಮುಂದಾಗಿದ್ದ. ಆರೋಪಿಯನ್ನು ತಡೆಯಲು ಮುಂದಾದ ವೇಳೆ ಮಹೇಂದ್ರ ಅವರಿಗೂ ಚಾಕುವಿನಿಂದ ಇರಿದಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಘಟನೆಯ ಮಾಹಿತಿ ತಿಳಿದ ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಯಿತು. ಇಬ್ಬರೂ ಪ್ರತ್ಯೇಕ ಮಳಿಗೆಗಳಲ್ಲಿ ವ್ಯಾಪಾರ ನಡೆಸುತ್ತಿದ್ದರು. ಮೇಲ್ನೋಟಕ್ಕೆ ಆಸ್ತಿ ವಿಚಾರಕ್ಕೆ ನಡೆದ ಕೊಲೆ ಎನ್ನಲಾಗುತ್ತಿದೆ. ಈ ಕುರಿತು ತನಿಖೆ ನಡೆಸಿದ ಬಳಿಕವೇ ಕೃತ್ಯಕ್ಕೆ ನಿಖರವಾದ ಕಾರಣ ಗೊತ್ತಾಗಲಿದೆ’ ಎಂದು ಪೊಲೀಸರು ತಿಳಿಸಿದರು.

ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೊಬೈಲ್ ಕಳ್ಳರ ಬೆನ್ನಟ್ಟಿ ಹಿಡಿದ ಪೊಲೀಸರು

ಬೆಂಗಳೂರು: ನಗರದ ಮೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿವಿಧ ಬಡಾವಣೆಗಳಲ್ಲಿ ಪಾದಚಾರಿಗಳ ಮೊಬೈಲ್ ಕಸಿದು ಪರಾರಿಯಾಗುತ್ತಿದ್ದ ಇಬ್ಬರು ಆರೋಪಿಗಳನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿನೋದ್ ಅಲಿಯಾಸ್ ಗುಂಡು ಹಾಗೂ ಸ್ಟೀಫನ್ ರಾಜ್ ಅಲಿಯಾಸ್ ರಾಜ್ ಬಂಧಿತ ಆರೋಪಿಗಳು.

‘ಆರೋಪಿಗಳು ಪಾದಚಾರಿಗಳನ್ನು ಗುರಿಯಾಗಿಸಿ, ಮೊಬೈಲ್ ಕಸಿದು ಪರಾರಿ ಆಗುತ್ತಿದ್ದರು. ಎಚ್.ಕೆ.ಸಿದ್ದೇಶ್ ಎಂಬುವವರು ಇಂದಿರಾನಗರದ ಅರ್ಥರ್ ಶೋರೂಂ ಬಳಿ ಆಟೊವನ್ನು ನಿಲುಗಡೆ ಮಾಡಿ ಮುಂಜಾನೆ ನಾಲ್ಕರ ಸುಮಾರಿಗೆ ನಿದ್ರೆಗೆ ಜಾರಿದ್ದರು. ಅಲ್ಲಿಗೆ ಬಂದಿದ್ದ ಇಬ್ಬರು ಆರೋಪಿಗಳು, ಮೊಬೈಲ್ ಕಸಿದು ಪರಾರಿಯಾಗಿದ್ದರು.

ಸಿದ್ದೇಶ್ ಅವರು ಬೇರೊಬ್ಬರ ಮೊಬೈಲ್ ಪಡೆದು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದರು. ಸ್ಥಳಕ್ಕೆ ಬಂದಿದ್ದ ಹೊಯ್ಸಳ ಸಿಬ್ಬಂದಿ ಇಬ್ಬರು ಕಳ್ಳರನ್ನು ಬೆನ್ನಟ್ಟಿ ಹಿಡಿದು ಮೊಬೈಲ್ ಜಪ್ತಿ ಮಾಡಿಕೊಂಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಆರೋಪಿಗಳು ಮೊಬೈಲ್ ಸುಲಿಗೆಯನ್ನೇ ಕಾಯಕ ಮಾಡಿಕೊಂಡಿದ್ದರು. ಇವರ ವಿರುದ್ಧ ಇಂದಿರಾನಗರ ಹಾಗೂ ಹಲಸೂರಿನಲ್ಲಿ ತಲಾ ಒಂದು ಹಾಗೂ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ’ ಎಂದು ಹೇಳಿವೆ.

ಅಪಘಾತ ಯುವಕ ಸಾವು

ಬೆಂಗಳೂರು: ಸ್ನೇಹಿತರನ್ನು ಭೇಟಿಯಾಗಿ ಮನೆಗೆ ವಾಪಸ್ ಬರುತ್ತಿದ್ದ ವೇಳೆ ಬುಲೆಟ್ ಬೈಕ್ ರಸ್ತೆಯ ವಿಭಜಕಕ್ಕೆ ಡಿಕ್ಕಿಯಾಗಿ ಉರುಳಿ ಬಿದ್ದ ಪರಿಣಾಮ ವೈದ್ಯಕೀಯ ಉಪಕರಣಗಳ ವಿತರಕರೊಬ್ಬರು ಮೃತಪಟ್ಟಿದ್ದಾರೆ.

ಕುಲದೀಪ್

ದೊಮ್ಮಲೂರಿನಲ್ಲಿ ನೆಲೆಸಿದ್ದ ಹಾಸನದ ಕುಲದೀಪ್ (26) ಮೃತಪಟ್ಟವರು.

ಮಂಗಳವಾರ ಸ್ನೇಹಿತರನ್ನು ಭೇಟಿಯಾಗಲು ಬನ್ನೇರುಘಟ್ಟ ಕಡೆ ಬುಲೆಟ್‌ನಲ್ಲಿ ಹೋಗಿದ್ದರು. ತಡರಾತ್ರಿ 1 ಗಂಟೆ ಸುಮಾರಿಗೆ ಅತಿ ವೇಗದಿಂದ ಮನೆ ಕಡೆ ವಾಪಸ್ ಬರುವಾಗ ಎನ್.ಎಸ್.ಪಾಳ್ಯ ಬಳಿ ಬುಲೆಟ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದು, ಬೈಕ್ ಸಹಿತ ಕುಲದೀಪ್ ಉರುಳಿ ಬಿದ್ದಿದ್ದರು. ಕುಲದೀಪ್ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ. ಚಂದ್ರು ಹಾಗೂ ಬಾನು ಅವರ ಪುತ್ರ ಕುಲದೀಪ್ ನಗರದಲ್ಲಿ ವಿತರಕರಾಗಿ ಕೆಲಸ ಮಾಡುತ್ತಿದ್ದರು.

ಮೈಕೊ ಲೇಔಟ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Bank of Baroda

ಅರದೇಶಹಳ್ಳಿ ಶಾಖೆ

ಅರದೇಶಹಳ್ಳಿ, ದೇವನಹಳ್ಳಿ ತಾಲೂಕು ಬೆಂಗಳೂರು–562110

ಚಿನ್ನಾಭರಣಗಳ ಹರಾಜಿಗೆ ಸಾರ್ವಜನಿಕ ಸೂಚನೆ

ಬ್ಯಾಂಕ್‌ಗೆ ಭದ್ರತೆಯಾಗಿ ಅಡಮಾನ ಮಾಡಿರುವ ಚಿನ್ನಾಭರಣಗಳ ಸಾಲದ ಖಾತೆಯು ಓವರ್‌ಡ್ಯೂ/ಎನ್‌ಪಿಎ ಆಗಿದ್ದು ಅದನ್ನು ಈಗ ಬ್ಯಾಂಕ್ ಆಫ್ ಬರೋಡ ಆವರಣ, ಅರದೇಶಹಳ್ಳಿ ಶಾಖೆ, ಬೆಂಗಳೂರು ಇಲ್ಲಿ 19.02.2024 ರಂದು ಮಧ್ಯಾಹ್ನ 12 ಗಂಟೆಗೆ ಸಾರ್ವಜನಿಕ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಸಾಲದ ವಿವರ ಈ ಕೆಳಗಿನಂತಿದೆ.

ಸಾಲದ ಖಾತಾ ಸಂ.	ಸಾಲಗಾರರ ಹೆಸರು	ಬಾಕಿ ಮೊತ್ತ+ಬಡ್ಡಿ ಮತ್ತು ಇತರೆ ದರಗಳು
54050600003000	ಶಿವಪ್ರಕಾಶ್ ಎ ಎನ್ ಬಿನ್ ದೊಡ್ಡ ನಾಗಣ್ಣ ಅರದೇಶಹಳ್ಳಿ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾ॥ ಬೆಂಗಳೂರು ಗ್ರಾ. ಜಿಲ್ಲೆ 562110	ರೂ. 2,01,000/–

ಆಸಕ್ತರು ರೂ.10000/– ವನ್ನು ಡಿಡಿ/ನಗದು (ಹಿಂತಿರುಗಿಸಲಾಗುವುದು) ಬ್ಯಾಂಕ್ ಆಫ್ ಬರೋಡ, ಅರದೇಶಹಳ್ಳಿ ಶಾಖೆ, ಬೆಂಗಳೂರು ಇಲ್ಲಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು. ಶಾಖಾ ಮುಖ್ಯಸ್ಥರು ಯಾವುದೇ ಕಾರಣ ನೀಡದೆ ಹರಾಜನ್ನು ಸ್ವೀಕರಿಸುವ/ತಿರಸ್ಕರಿಸುವ/ಮುಂದೂಡುವ/ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– ಮುಖ್ಯ ವ್ಯವಸ್ಥಾಪಕರು

Dr.AMBEDKAR INSTITUTE OF TECHNOLOGY

BDA Outer Ring Road, Mallathahally, Bengaluru – 560 056

Tel – 080- 23211232 & Mob No -9986003865

A I T/S S/3417/2023-24 Date: 07.02.2024

TENDER NOTIFICATION

Sealed quotations are invited from Reputed/ Authorized firms for supply, installation, testing & commissioning of the following.

A) 03 numbers of 10 Passengers (680 Kg) lifts.

B) 80 numbers of 12V, 200AH batteries and 80 numbers batteries to buyback.

C) Supply of Engineering Books to central library.

Details and specification of requirements can be downloaded from college website **www.drait.edu.in.** The sealed quotation shall be attached with a DD of **Rs.500/-** for each item on or before **28.02.2024** and submit the sealed quotations on or before **29.02.2024 by 1.00 PM.** Quotations will be opened on the same day i.e.**29.02.2024 at 4.00 PM.**

Sd/- Principal Sd/- Secretary, PVPWT

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ತುಮಕೂರು ವಿಭಾಗ ತುಮಕೂರು

ಸಂ/ಕರಾಸಾ/ತುವಿ/ಸಂ/ವಾ/ಇ–ಟೆಂ/ಹ&ಟೆಂ/4098/4099/4100/2023–24 ದಿನಾಂಕ:06.02.2024

ಇ–ಟೆಂಡರ್ & ಸಂಧಾನ ಪ್ರಕಟಣೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, **ತುಮಕೂರು** ವಿಭಾಗದ ವ್ಯಾಪ್ತಿಗೆ ಬರುವ **ಗುಬ್ಬಿ, ಕುಣಿಗಲ್, ಅಮೃತೂರು, ತುರುವೇಕೆರೆ, ಸಿ.ಎಸ್.ಪುರ, ಕಡಬ, ತಿಪಟೂರು, ಕೊರಟಗೆರೆ, ಸಿರಾ, ಮಧುಗಿರಿ, ನಿಟ್ಟೂರು, ಚಿಕ್ಕನಾಯಕನಹಳ್ಳಿ ಮತ್ತು ಸ್ಮಾರ್ಟ್‌ಸಿಟಿ ಯೋಜನೆಯ ತುಮಕೂರು ನೂತನ ಬಸ್ ನಿಲ್ದಾಣಗಳಲ್ಲಿ ಹಾಗೂ ಕೆ.ಬಿ ಕ್ರಾಸ್ ನಿಯಂತ್ರಣ ಬಿಂದುವಿನಲ್ಲಿ** ಖಾಲಿಯಿರುವ / ಖಾಲಿಯಾಗಲಿರುವ ಮತ್ತು ಹೊಸ ವಾಣಿಜ್ಯ ಮಳಿಗೆಗಳಿಗೆ ಹಾಗೂ ಜಾಹೀರಾತು ಪ್ಯಾಕೇಜ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **“ಇ–ಟೆಂಡರ್ ಮತ್ತು ಸಂಧಾನ”** ಪ್ರಕಟಣೆಗಳನ್ನು ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು **ದಿ:26.02.2024 ರ 17:00 ಗಂಟೆಯೊಳಗಾಗಿ** ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ತುಮಕೂರು ವಿಭಾಗ, ಮಧುಗಿರಿ ಮುಖ್ಯರಸ್ತೆ, ಎ.ಪಿ.ಎಂ.ಸಿ ಮಾರ್ಕೆಟ್ ಹತ್ತಿರ, ಅಂತರಸನ ಹಳ್ಳಿ, ತುಮಕೂರು–572106** ರಲ್ಲಿ ಸಂಪರ್ಕಿಸಲು ಕೋರಲಾಗಿದೆ, ಸಂಪರ್ಕಿಸುವ ಮೊಬೈಲ್ ಸಂಖ್ಯೆ: **7760990902 (ವಿಭಾಗೀಯ ಸಂಚಲನಾಧಿಕಾರಿಗಳು)**

ಸಹಿ/
ವಿಭಾಗೀಯ ನಿಯಂತ್ರಣಾಧಿಕಾರಿ

ಡಿ.ಐ.ಪಿ.ಆರ್/3466/2023–24 ಕ.ರಾ.ರ.ಸಾ.ನಿಗಮ, ತುಮಕೂರು ವಿಭಾಗ, ತುಮಕೂರು

ನಗರದಲ್ಲಿ ಇಂದು

‘ಕುರುಕ್ಷೇತ್ರ’ ನಾಟಕ ಪ್ರದರ್ಶನ: ಸಂಗೀತ ನಿರ್ದೇಶನ: ಲಕ್ಷ್ಮಣ್ ಮಾಲೂರು, ಉದ್ಘಾಟನೆ: ರಂಗಪ್ಪ, ಅಧ್ಯಕ್ಷತೆ: ಮರಿಲಿಂಗೇಗೌಡ, ಆಯೋಜನೆ: ಅಖಿಲ ಕರ್ನಾಟಕ ರಂಗಭೂಮಿ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 1ರಿಂದ

‘ಜಾತಿ ಗಣತಿ’ಯಿಂದ ಸಾಮಾಜಿಕ ನ್ಯಾಯ ಸಾಧ್ಯವೇ?’: ಅತಿಥಿ: ಸತೀಶ್ ದೇಶಪಾಂಡೆ, ಅಧ್ಯಕ್ಷತೆ: ಅವಿನಾಶ್ ಕುಮಾರ್, ಆಯೋಜನೆ: ಬೆಂಗಳೂರು ಕಲೆಕ್ಟಿವ್, ಸ್ಥಳ: ಸೇಂಟ್ ಜೋಸೆಫ್ ಕಾನೂನು ಕಾಲೇಜು, ಸಂಜೆ 4

‘ಎಸ್.ಪಿ. ವರದರಾಜು ಪ್ರಶಸ್ತಿ’ ಪ್ರದಾನ: ಗಿರೀಶ್ ಕಾಸರವಳ್ಳಿ, ಪ್ರಶಸ್ತಿ ಪುರಸ್ಕೃತರು: ಅನ್ನಪೂರ್ಣ ಸಾಗರ, ಬಿ. ಮಲ್ಲೇಶ್, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಆಯೋಜನೆ: ಎಸ್.ಪಿ. ವರದರಾಜು ಆತ್ಮೀಯರ ಬಳಗ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ವ್ಯಾಸನಕೆರೆ ಸ್ವಾಮೀಜಿ

‘ಶ್ರೀ ಮಧ್ವ ಪುರಂದರ’ ಪ್ರಶಸ್ತಿ ಪ್ರದಾನ: ಗುತ್ತಲ್ ರಂಗಾಚಾರ್, ಪ್ರಶಸ್ತಿ ಪುರಸ್ಕೃತರು: ವ್ಯಾಸನಕೆರೆ ಪ್ರಭಂಜನಾಚಾರ್ಯ, ಅತಿಥಿಗಳು: ಸತ್ಯಧ್ಯಾನಾಚಾರ್ ಕಟ್ಟಿ, ಆರ್.ಕೆ. ಪದ್ಮನಾಭ, ಎಸ್. ವೆಂಕಟೇಶಮೂರ್ತಿ, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ಉತ್ತರಾದಿ ಮಠ, ಬಸವನಗುಡಿ, ಸಂಜೆ 5.45

ಪುರಂದರದಾಸರ ಪುಣ್ಯದಿನ ಮಹೋತ್ಸವ: ಹರಿದಾಸ ಝೇಂಕಾರ: ಸುಶ್ಮಾ ಶ್ರೇಯಸ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಪ್ರವಚನ ವಾಹಿನಿ: ‘ಪ್ರಹ್ಲಾದ ರಾಜರ ನರಸಿಂಹ ಸ್ತೋತ್ರ’ ಕುರಿತು ಉಪನ್ಯಾಸ: ಖೇಡಾ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಪುರಂದರ ನಮನ: ಗಾಯನ: ಭವಾನಿ ಎಂ. ರಾವ್, ಸುಮಲತಾ ಮಂಜುನಾಥ್, ಕಿ–ಬೋರ್ಡ್: ಆನಂದಕುಮಾರ್, ತಬಲಾ: ಎನ್. ಮೋಹನ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಪ್ರಕಾಶನಗರ, ಸಂಜೆ 7

‘ರಸ್ತೆ ನಿಯಮ ಪಾಲಿಸಿದರೆ ಅಪಘಾತ ನಿಯಂತ್ರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳನ್ನು ಚಲಾಯಿಸುವಾಗ ನಿಯಮಗಳನ್ನು ಉಲ್ಲಂಘಿಸುವ ಕಾರಣದಿಂದಲೇ ಬಹುತೇಕ ಅಪಘಾತಗಳು ಉಂಟಾಗುತ್ತಿವೆ. ನಿಯಮ ಪಾಲನೆ ಮತ್ತು ವೇಗ ನಿಯಂತ್ರಣ ಮಾಡಿದರೆ ಅಪಘಾತಗಳನ್ನು ಕಡಿಮೆ ಮಾಡಬಹುದು ಎಂದು ಬೆಂಗಳೂರು ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ. ಶ್ರೀನಿವಾಸ ಪ್ರಸಾದ್ ತಿಳಿಸಿದರು.

ಬೆಂಗಳೂರು ಪೂರ್ವ ಪ್ರಾದೇಶಿಕ ಸಾರಿಗೆ ಕಚೇರಿ ವತಿಯಿಂದ ಕಸ್ತೂರಿನಗರದಲ್ಲಿ ಬುಧವಾರ ರಾಷ್ಟ್ರೀಯ ರಸ್ತೆ ಸುರಕ್ಷತಾ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ರಸ್ತೆ ಬಳಕೆದಾರರಲ್ಲಿ ಅರಿವಿನ ಕೊರತೆ ಇದೆ. ಪ್ರಾಣ ಉಳಿಸುವ ಮೂಲ ಕೌಶಲದ ಸುರಕ್ಷತಾ ಶಿಕ್ಷಣವೂ ಬೇಕಿದೆ. ಜನರಲ್ಲಿ ಜವಾಬ್ದಾರಿಯುತ ನಡವಳಿಕೆ ಮೂಡಿಸಲು ರಸ್ತೆ ಸುರಕ್ಷತಾ ಸಪ್ತಾಹ ಆಚರಿಸಲಾಗುತ್ತದೆ ಎಂದು ವಿವರಿಸಿದರು.

ಸಂಕಲ್ಪ ಇಂಡಿಯಾ ಫೌಂಡೇಶನ್ ಪದಾಧಿಕಾರಿಗಳಾದ ನರಸಿಂಹ ಶಾಸ್ತ್ರಿ, ಡಾ. ಗಿರೀಶ್, ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ಸ್ವದೇಶಿ ಮೇಳ

ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ವದೇಶಿ ಜಾಗರಣ ಮಂಚ್ ಆಯೋಜಿಸಿದ್ದ ಸ್ವದೇಶಿ ಮೇಳವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಉದ್ಘಾಟಿಸಿದರು. ಶಾಸಕ ಸಿ.ಕೆ. ರಾಮಮೂರ್ತಿ, ಅದಮ್ಯ ಚೇತನ ಟ್ರಸ್ಟ್ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಪರಿಸರ ತಜ್ಞ ಬಿ.ಎಂ. ಕುಮಾರಸ್ವಾಮಿ, ನಟಿ ತಾರಾ ಅನುರಾಧ, ಸಂಘಟಕ ಅಮಿತ್ ಅಮರನಾಥ್, ನಟ–ರಂಗಕರ್ಮಿ ಪ್ರಕಾಶ್ ಬೆಳವಾಡಿ ಭಾಗವಹಿಸಿದ್ದರು

ವೈದ್ಯರಿಗೆ ₹6.20 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಂದರ್ಯ ವರ್ಧಕ ಚಿಕಿತ್ಸೆಗೆ ಬಂದಿದ್ದ ವೇಳೆ ಪರಿಚಿತವಾಗಿದ್ದ ಮಹಿಳೆಯೊಬ್ಬರು ಕಾರು ಕೊಡಿಸುವುದಾಗಿ ವೈದ್ಯರಿಗೆ ನಂಬಿಸಿ ಕೋಟ್ಯಂತರ ರೂಪಾಯಿ ವಂಚಿಸಿದ್ದು, ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯನಗರದ ನಿವಾಸಿ ಡಾ.ಗಿರೀಶ್ ಅವರಿಗೆ ಐಶ್ವರ್ಯ ಗೌಡ ಎಂಬುವವರು ಬರೋಬ್ಬರಿ ₹ 6.20 ಕೋಟಿ ಪಡೆದು ವಂಚಿಸಿರುವ ಆರೋಪದ ಅಡಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

‘2022ರ ಮಾರ್ಚ್‌ನಲ್ಲಿ ಗಿರೀಶ್ ಅವರ ಆಸ್ಪತ್ರೆಗೆ ರಾಜರಾಜೇಶ್ವರಿ ನಗರದ ನಿವಾಸಿ ಐಶ್ವರ್ಯ ಗೌಡ ಅವರು ಚಿಕಿತ್ಸೆಗೆ ಬಂದಿದ್ದರು. ಆಗ ವೈದ್ಯರಿಗೆ ಮಹಿಳೆಯ ಪರಿಚಯವಾಗಿತ್ತು. ತಾನು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದು, ಸೆಕೆಂಡ್ ಹ್ಯಾಂಡ್ ಕಾರುಗಳ ಮಾರಾಟವನ್ನೂ ನಡೆಸುತ್ತಿರುವುದಾಗಿ ಮಹಿಳೆ ಹೇಳಿಕೊಂಡಿದ್ದರು‘ ಎಂದು ಪೊಲೀಸರು ಹೇಳಿದರು.

‘ಐಶಾರಾಮಿ ಕಾರು ಖರೀದಿಸುವ ಆಲೋಚನೆಯಲ್ಲಿದ್ದ ಗಿರೀಶ್ ಅವರು ಐಶ್ವರ್ಯ ಅವರನ್ನು ಸಂಪರ್ಕಿಸಿದ್ದರು. ಒಳ್ಳೆಯ ಕಾರು ಕೊಡಿಸುವುದಾಗಿ ನಂಬಿಸಿ ಹಂತ ಹಂತವಾಗಿ ಮಹಿಳೆ ಹಣ ಪಡೆದುಕೊಂಡಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘₹2.75 ಕೋಟಿಯನ್ನು ಆರ್‌ಟಿಜಿಎಸ್ ಮೂಲಕ, ₹3.25 ಕೋಟಿಯನ್ನು ನಗದು ರೂಪದಲ್ಲಿ ಪಡೆದುಕೊಂಡಿದ್ದರು. ಆದರೆ, ಕಾರು ಕೊಡಿಸಿರಲಿಲ್ಲ. ಹಣ ವಾಪಸ್ ಕೊಡುವಂತೆ ಕೇಳಿದಾಗ ಸಬೂಬು ಹೇಳಿಕೊಂಡು ತಪ್ಪಿಸಿಕೊಂಡಿದ್ದರು’ ಎಂದು ದೂರಲಾಗಿದೆ.

‘ಡಿಸೆಂಬರ್‌ನಲ್ಲಿ ಹಣ ಹಿಂದಿರುಗಿಸುವಂತೆ ಕೇಳಿದಾಗ ವಿಜಯನಗರ ಕ್ಲಬ್ ಹತ್ತಿರ ಬರಲು ಸೂಚಿಸಿದ್ದರು. ಅದರಂತೆ ಗಿರೀಶ್ ಮತ್ತು ಅವರ ಪತ್ನಿ ಕ್ಲಬ್ ಹತ್ತಿರ ಹೋದಾಗ, ಅವಾಚ್ಯವಾಗಿ ನಿಂದಿಸಿದ್ದರು. ಹಣ ವಾಪಸ್ ಕೇಳಿದರೆ ಅತ್ಯಾಚಾರದ ದೂರು ನೀಡಲಾಗುವುದು ಎಂದು ಮಹಿಳೆ ಬೆದರಿಕೆ ಹಾಕಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕರ್ಕಶ ಹಾರ್ನ್: ಸವಾರರ ವಿರುದ್ಧ ಪ್ರಕರಣ

ಬೆಂಗಳೂರು: ನಗರದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, ಕರ್ಕಶ ಹಾರ್ನ್, ದೋಷಪೂರಿತ ಸೈಲೆನ್ಸರ್, ನಂಬರ್ ಪ್ಲೇಟ್ ಮರೆಮಾಚುವಿಕೆ ಹಾಗೂ ದೋಷಪೂರಿತ ನಂಬರ್ ಪ್ಲೇಟ್ ಬಳಸುತ್ತಿದ್ದ 1,510 ಬೈಕ್ ಸವಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕರ್ಕಶ ಹಾರ್ನ್ ಬಳಕೆ ಮಾಡುತ್ತಿದ್ದ 483, ದೋಷಪೂರಿತ ಸೈಲೆನ್ಸರ್ ಅಳವಡಿಸಿಕೊಂಡಿದ್ದ 137 ಹಾಗೂ ದೋಷಪೂರಿತ ನಂಬರ್ ಪ್ಲೇಟ್ ಅಳವಡಿಕೆ ಹಾಗೂ ನಂಬರ್ ಪ್ಲೇಟ್ ಮರೆಮಾಚಿದ್ದ 890 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ಆಸ್ತಿ ಇ–ಖಾತೆ: ₹1.50 ಲಕ್ಷ ವಂಚನೆ

ಕನಕಪುರ: ಕನಕಪುರ ನಗರಸಭೆ ಪೌರಾಯುಕ್ತರ ಹೆಸರು ಬಳಸಿಕೊಂಡ ವಂಚಕನೊಬ್ಬ ಇ-ಖಾತೆ ಮಾಡಿಕೊಡಿಸಿಕೊಡುವುದಾಗಿ ನಂಬಿಸಿ ಮೂವರಿಂದ ₹1.50 ಲಕ್ಷ ಹಣ ಪಡೆದು ವಂಚಿಸಿದ್ದಾನೆ. ನಗರಸಭೆ ಪೌರಾಯುಕ್ತ ಬುಧವಾರ ಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬೆಂಗಳೂರಿನ ಬನಶಂಕರಿಯ 2ನೇ ಹಂತದ ಟೀಚರ್ಸ್ ಕಾಲೊನಿ ಎಸ್. ಹೊನ್ನಮ್ಮ, ಡಾ. ಕೆ.ಎಲ್.ಶಿವಪ್ರಸಾದ್ ಹಾಗೂ ಯಡಿಯೂರಿನ ನಿವಾಸಿ ನಂಜಮ್ಮಣ್ಣಿ ಎಂಬುವವರು ವಂಚನೆಗೊಳಗಾದವರು.

ಮೂವರೂ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದು, ಕನಕಪುರದಲ್ಲಿರುವ ತಮ್ಮ ಕುಟುಂಬದ ಆಸ್ತಿಗೆ ಸಂಬಂಧಿಸಿದಂತೆ ಇ- ಖಾತೆ ಮಾಡಿಸಲು ಫೆ. 5ರಂದು ಕನಕಪುರಕ್ಕೆ ಬಂದಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU–217/2497/2023–24 ದಿನಾಂಕ: 07.02.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು **ಕೈಗಾರಿಕೆ(ಹೈಟೆಕ್) ವಲಯ** ದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ವತ್ಸಲಾ ಪ್ರಭು ಇವರ ಜಿಪಿಎ & ಜಿಡಿಎ ದಾರರಾದ ಎಲ್.ವಿ.ಯೂನಿಕ್	ಬೆಂಗಳೂರು ಪೂರ್ವ	ಕೆ.ಆರ್. ಪುರ	ಪಟ್ಟಂದೂರು ಅಗ್ರಹಾರ	109/1	3–12	ಕೈಗಾರಿಕೆ (ಹೈಟೆಕ್)	ವಸತಿ

ಷರಾ: ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಜಮೀನನ್ನು **‘ಕೈಗಾರಿಕೆ(ಹೈಟೆಕ್) ವಲಯ’** ದಿಂದ **‘ವಸತಿ ಉಪಯೋಗಕ್ಕೆ’** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

Government of Madhya Pradesh
Office of the Engineer-in-Chief, Water Resources Department,
Jal Sansadhan Bhawan, Tulsi Nagar, Bhopal (M.P.)
Email Id: ceproc.encwrd.bpl@nic.in Tel: 0755-2767635 Fax: 0755-2552406

N.I.T. No. 1051/2023-24/E-in-C/e-tendering Bhopal, Dated 01.02.2024

Bids for following works are invited on website **https://www.mptenders.gov.in** Last Date of purchase/download of Bid Document and submission of bid is 26-02-2024, 17:30 hrs. Any amendment/modification can be seen only on the website. Detailed N.I.T. and other details can be viewed on above mentioned website.

No.	Tender No.	Work	District	Amount (Lakhs)
1.	2024_WRD_329692	On Turnkey Basis:- Construction of jhara ogee wier, as per detailed scope of work but not limited to that.	Singrauli	1300.00

G-23834/23 Chief Engineer (Procurement)

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100

ದೂರವಾಣಿ : 080 41362000 ಫ್ಯಾಕ್ಸ್ : 080 41362010 ಇ-ಮೇಲ್ : tilinvestor@timken.com

ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳು ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	31/12/2023 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	31/12/2022 ಕ್ಕೆ ಕೊನೆಗೊಂಡ ಕಳೆದ ವರ್ಷದ ತ್ರೈಮಾಸಿಕಕ್ಕೆ ಅನುಗುಣವಾಗಿ (ಪರಿಶೋಧಿತವಲ್ಲದ)	31/03/2023 ಕ್ಕೆ ಕೊನೆಗೊಂಡ ವಾರ್ಷಿಕ ಅವಧಿ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	6,227.90	6,238.05	28,597.85
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	912.26	951.65	5,235.21
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	912.26	951.65	5,235.21
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	675.29	705.59	3,907.45
5.	ಈ ಅವಧಿಯ ಒಟ್ಟು ಸಮಸ್ತ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಸ್ತ ಆದಾಯ (ತೆರಿಗೆ ನಂತರ)}	(2.86)	(2.73)	7.68
6.	ಈಕ್ವಿಟಿ ಷೇರು ಬಂಡವಾಳ	752.19	752.19	752.19
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	8.98*	9.39*	51.95

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

ಬೆಂಗಳೂರು
6ನೇ ಫೆಬ್ರವರಿ, 2024

SOBHA LIMITED

SOBHA PASSION AT WORK

CIN : L45201KA1995PLC018475
Regd. Office: ‘SOBHA’, Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000
email: investors@sobha.com
website: www.sobha.com

Extract of the consolidated unaudited financial results for the quarter and nine months ended 31 December 2023

(₹. in Million)

Particulars	3 months ended 31.12.2023 [Unaudited]	Preceeding 3 months ended 30.09.2023 [Unaudited]	Corresponding 3 months ended 31.12.2022 [Unaudited]	"Year to date figures for current period ended 31.12.2023 [Unaudited]"	"Year to date figures for previous period ended 31.12.2022 [Unaudited]"	"Previous year ended 31.03.2023 [Audited]"
Total income from operations	7,137.48	7,736.40	8,979.79	24,266.32	21,622.68	34,024.33
Profit before tax	213.63	246.69	351.29	633.19	780.18	1,449.75
Profit after tax	150.82	149.46	318.05	420.82	556.07	1,042.05
Total comprehensive income for the period (comprising profit for the period (after tax) and other comprehensive income (after tax)	152.64	131.01	317.79	406.88	531.07	1,002.12
Paid-up Equity Share Capital	948.46	948.46	948.46	948.46	948.46	948.46
Other equity	-	-	-	-	-	23,998.25
Earnings per Share (of ₹10/- each) (for continuing and discontinued operations) Basic and diluted EPS	1.59	1.58	3.35	4.44	5.86	10.99

Notes :
(1)The key data of standalone financial results is as under:

(₹. in Million)

Particulars	3 months ended 31.12.2023 [Unaudited]	Preceeding 3 months ended 30.09.2023 [Unaudited]	Corresponding 3 months ended 31.12.2022 [Unaudited]	"Year to date figures for current period ended 31.12.2023 [Unaudited]"	"Year to date figures for previous period ended 31.12.2022 [Unaudited]"	"Previous year ended 31.03.2023 [Audited]"
Total income	7,262.24	7,788.83	9,190.01	24,279.95	21,733.45	34,258.65
Profit before tax	242.18	228.72	421.49	592.59	690.46	1,317.10
Profit after tax	177.81	147.86	366.08	405.90	512.37	952.89
Total comprehensive income	**179.63**	**129.41**	**365.82**	**391.96**	**487.37**	**912.96**

(2) The consolidated unaudited financial results of Sobha Limited (‘the Holding Company’) and its subsidiaries (the Holding Company, along with its subsidiaries referred to as ‘the Group’) and its associate and joint venture for the quarter and nine months ended 31 December 2023 have been prepared in accordance with the recognition and measurement principles laid down in the applicable Indian Accounting Standards (Ind AS) as prescribed under Section 133 of the Companies Act, 2013 (‘The Act’) read with relevant rules thereunder and in terms of Regulation 33 of the SEBI (Listing Obligations and Disclosure Requirements) Regulations, 2015. These consolidated unaudited financial results have been reviewed and recommended by the Audit Committee and approved by the Board of Directors at their meeting held on 07 February 2024.

(3) The Statutory auditors of the Holding Company have carried out a limited review as required under Regulation 33 of SEBI (Listing Obligations and Disclosure Requirements) Regulations 2015 of the above consolidated unaudited financial results for the quarter and nine months ended 31 December 2023 and have issued an unmodified review report.

(4) The aforesaid consolidated unaudited financial results are available on the Holding Company’s website www.sobha.com and on the website of BSE Limited (www.bseindia.com) and National Stock Exchange of India Limited (www.nseindia.com).

(5) The Board of Directors, in their meeting held on 22 January 2024, have approved the issuance of equity shares of the Holding Company for an amount not exceeding ₹ 20,000 million by way of a rights issue to the eligible equity shareholders of the Holding Company as on the record date (to be determined and notified subsequently), in accordance with applicable laws, including the Securities and Exchange Board of India (Issue of Capital and Disclosure Requirements) Regulations, 2018, SEBI Listing Regulations, the Companies Act, 2013 and Rules made thereunder as amended from time to time, subject to such regulatory and statutory approvals, as may be required under the applicable laws.

For the purposes of giving effect to the rights issue, the detailed terms in relation to the rights issue, including but not limited to the issue price, rights entitlement ratio, record date, timing and terms of payment will be determined and disclosed to the exchange in due course by the Board and/ or the Rights Issue Committee of the Board of Directors authorised in this regard.

(6) Previous period’s / year’s figures have been regrouped or reclassified wherever necessary to conform with the current period figures. The impact of such reclassification / regrouping is not material to the consolidated financial results.

For and on behalf of the Board of Directors
Sobha Limited

Bengaluru, India
07 February 2024

Jagadish Nangineni
Managing Director
DIN: 01871780

ಕಡತದಿಂದ ತೆಗೆದ ಮಾತುಗಳನ್ನು ಮತ್ತೆ ಸೇರಿಸಿ: ಖರ್ಗೆ

ನವದೆಹಲಿ (ಪಿಟಿಐ): ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ ವೇಳೆ ತಾವು ಆಡಿರುವ ಕೆಲ ಮಾತುಗಳನ್ನು ಕಡತದಿಂದ ತೆಗೆಯಲಾಗಿದ್ದು, ಅದನ್ನು ಪುನಃ ಕಡತಕ್ಕೆ ಸೇರಿಸುವಂತೆ ರಾಜ್ಯಸಭಾ ವಿರೋಧ ಪಕ್ಷದ ನಾಯಕರೂ ಆಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಸಭಾಪತಿ ಜಗದೀಪ್ ಧನಕರ್ ಅವರನ್ನು ಆಗ್ರಹಿಸಿದ್ದಾರೆ.

ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಖರ್ಗೆ ಅವರು, 'ಫೆಬ್ರುವರಿ 2ರಂದು ತಮ್ಮ ಭಾಷಣದಿಂದ ಎರಡು ಪುಟಗಳಷ್ಟು ಮಾಹಿತಿಯನ್ನು ತೆಗೆದು-ಹಾಕಲಾಗಿದೆ' ಎಂದು ಹೇಳಿದ್ದಾರೆ.

'ನಾನು ಯಾರ ಹೆಸರನ್ನೂ ಉಲ್ಲೇಖಿಸದೆ, ನಿಯಮವನ್ನೂ ಉಲ್ಲಂಘಿಸದೆ ಕೆಲವು ಅಂಶಗಳನ್ನು ಪ್ರಸ್ತಾಪಿಸಿದ್ದೆ. ಆದರೆ ಅವುಗಳನ್ನು ದಾಖಲೆಯಿಂದ ತೆಗೆಯಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಉನ್ನತ ಅಧಿಕಾರದಲ್ಲಿ ಇರುವ ಯಾವ ವ್ಯಕ್ತಿಗಳ ಬಗ್ಗೆ, ಯಾವ ಟೀಕೆಗಳನ್ನು ಮಾಡದಿದ್ದರೂ ನನ್ನ ಹೇಳಿಕೆಯ ಕೆಲ ಅಂಶಗಳನ್ನು ಕಡತದಿಂದ ತೆಗೆದಿರುವುದು ಸರಿಯಲ್ಲ. ಇದಕ್ಕಾಗಿ ನಾನು ತೀವ್ರ ಆಕ್ಷೇಪ ದಾಖಲಿಸುತ್ತಿದ್ದೇನೆ. ಅಲ್ಲದೆ ಕಡತದಿಂದ ತೆಗೆದಿರುವ ಆ ಅಂಶಗಳನ್ನು ಪುನಃ ಸೇರಿಸಬೇಕು ಎಂದು ತಮ್ಮನ್ನು ಕೋರುತ್ತೇನೆ' ಎಂದು ಖರ್ಗೆ ಅವರು ಸಭಾಪತಿ ಅವರಿಗೆ ಲಿಖಿತ ಮನವಿ ಸಲ್ಲಿಸಿದ್ದಾರೆ. ಈ ಕುರಿತು ಪರಿಶೀಲಿಸಿ ಆದೇಶ ನೀಡುವುದಾಗಿ ಧನಕರ್ ತಿಳಿಸಿದ್ದಾರೆ.

ಬೆಂಗಳೂರು, ಸುತ್ತಮುತ್ತಲಿನ ಪಟ್ಟಣಗಳಿಗೆ 500 ಎಂಎಲ್‌ಡಿ ನೀರು ಪೂರೈಸಲು ಯೋಜನೆ

ಕಾವೇರಿ 6ನೇ ಹಂತ ಡಿಪಿಆರ್‌ಗೆ ಸಜ್ಜು

• ಆರ್. ಮಂಜುನಾಥ್

ಬೆಂಗಳೂರು: ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಜಿಲ್ಲೆಯ ಪಟ್ಟಣಗಳಿಗೆ ಕಾವೇರಿ ನೀರು ಪೂರೈಸಲು ಬೆಂಗಳೂರು ಜಲಮಂಡಳಿ ಮತ್ತೊಂದು ಹೆಜ್ಜೆ ಇರಿಸಿದ್ದು, ಕಾವೇರಿ 6ನೇ ಹಂತದ ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಸಜ್ಜಾಗಿದೆ.

ಬೆಂಗಳೂರಿನ ಕೆಲವು ಭಾಗಗಳು ಸೇರಿದಂತೆ ಸುತ್ತಮುತ್ತ-ಲಿನ ಪಟ್ಟಣಗಳ ಕೇಂದ್ರ ಭಾಗಕ್ಕೆ ಪ್ರತಿನಿತ್ಯ 500 ದಶಲಕ್ಷ ಲೀಟರ್ ನೀರು ಪೂರೈಸಲು ಕಾವೇರಿ 6ನೇ ಹಂತದಲ್ಲಿ ಯೋಜಿಸಲಾಗಿದೆ.

ಸುಪ್ರೀಂ ಕೋರ್ಟ್ ಆದೇಶದಂತೆ 6 ಟಿಎಂಸಿ ಅಡಿ ಕಾವೇರಿ ನೀರನ್ನು ಹೆಚ್ಚುವರಿಯಾಗಿ ಕುಡಿಯುವ ಉದ್ದೇಶಕ್ಕೆ ಬಳಸಿಕೊಳ್ಳಬಹುದು. ಈ ನೀರನ್ನು ಬೆಂಗಳೂರು ಹಾಗೂ ಸುತ್ತಮುತ್ತಲಿನ ಪಟ್ಟಣಗಳಿಗೆ ಪೂರೈಸಲು ಸರ್ಕಾರ ಆದೇಶಿಸಿದೆ. ಇದೂ ಸೇರಿದಂತೆ, ಒಟ್ಟಾರೆ 24 ಟಿಎಂಸಿ ಅಡಿ ಕಾವೇರಿ ನೀರು ಕುಡಿಯುವುದಕ್ಕಾಗಿ ಸರಬರಾಜು ಆದಂತಾಗುತ್ತದೆ.

ಸರ್ಕಾರದ ಆದೇಶದಂತೆ ಜಲಮಂಡಳಿ ಜನವರಿ 25ರಂದು ನಡೆಸಿದ ಮಂಡಳಿ ಸಭೆಯಲ್ಲಿ ಯೋಜನೆಯ ಮುಖ್ಯ ಎಂಜಿನಿಯರ್ ನೇತೃತ್ವದಲ್ಲಿ ಐವರು ಸದಸ್ಯರ ಸಮಿತಿ ರಚಿಸಲಾಗಿದೆ. ಈ ಸಮಿತಿಗೆ ಡಿಪಿಆರ್ ರಚಿಸುವ ಹೊಣೆ ನೀಡಲಾಗಿದೆ. ಫೆ.6ರಂದು ಜಲಮಂಡಳಿ ಟೆಂಡರ್ ಕರೆದಿದ್ದು, ಫೆ.21ರವರೆಗೆ ಬಿಡ್ ಸಲ್ಲಿಸಬಹುದಾಗಿದೆ. ಗುತ್ತಿಗೆ ನೀಡಿದ ನಂತರದ ಆರು ತಿಂಗಳಲ್ಲಿ ಡಿಪಿಆರ್ ಸಲ್ಲಿಸಬೇಕಾಗಿದೆ.

ಶಿವನಸಮುದ್ರದಿಂದ ತೊರೆಕಾಡನಹಳ್ಳಿಗೆ ಕಾವೇರಿ ನೀರು ಬರಲಿದ್ದು, ಅಲ್ಲಿ ಸಂಸ್ಕರಣೆಯಾಗುತ್ತದೆ. ಅಲ್ಲಿಂದ ಪಂಪಿಂಗ್ ಸ್ಟೇಷನ್ ಮೂಲಕ ಹೊರ ವರ್ತುಲ ರಸ್ತೆ, ನೈಸ್ ರಸ್ತೆಗಳ ಮೂಲಕ ಪಟ್ಟಣಗಳಿಗೆ 6ನೇ ಹಂತದಲ್ಲಿ ಕಾವೇರಿ ನೀರು ಪೂರೈಸಲು ಯೋಜಿಸಲಾಗಿದೆ. ಕೊಳವೆ ಮಾರ್ಗ ಎಲ್ಲಿ ಬರಬೇಕು, ಹೇಗೆ ಬರಬೇಕು, ಅದರ ವಿನ್ಯಾಸ, ಈಗಿರುವ ಸೌಲಭ್ಯ, ಮೂಲಸೌಕರ್ಯಗಳ ಬಳಕೆ, ಪರಿಸರದ ಮೇಲಾಗುವ ಪರಿಣಾಮ, ವಿವರವಾದ ಅಂದಾಜು ಪಟ್ಟಿ, ಕಾಮಗಾರಿಗೆ ಹಣ ಒದಗಿಸಬಹುದಾದ ಆಯ್ಕೆಗಳು, ಸಂಬಂಧಿಸಿದ ಪ್ರಾಧಿಕಾರ, ಸಚಿವಾಲಯಗಳಿಂದ ಸಮ್ಮತಿ ಸೇರಿದಂತೆ ಈ ಯೋಜನೆ ರೂಪುರೇಷೆಯನ್ನು ಸಿದ್ಧಪಡಿಸಲು ಅಂದಾಜು ₹96 ಲಕ್ಷ ವೆಚ್ಚದ ಟೆಂಡರ್ ಆಹ್ವಾನಿಸಲಾಗಿದೆ.

ಕೇಂದ್ರ ಭಾಗಕ್ಕೆ ನೀರು: 'ಕಾವೇರಿ 6ನೇ ಹಂತದಲ್ಲಿ 500 ಎಂಎಲ್‌ಡಿ ನೀರು ಪೂರೈಸಲು ಯೋಜಿಸಲಾಗಿದ್ದು, ಇದರಲ್ಲಿ ಬಹುಪಾಲು ನೀರು ಪಟ್ಟಣಗಳನ್ನೇ ತಲುಪುತ್ತದೆ. ಪಟ್ಟಣದ ಕೇಂದ್ರ ಸ್ಥಾನಕ್ಕೆ ಕೊಳವೆ ಮಾರ್ಗದ ಮೂಲಕ ನೀರನ್ನು 'ಸಗಟು' (ಬಲ್ಕ್) ಆಗಿ ಪೂರೈಸಲಾಗುತ್ತದೆ. ಅಲ್ಲಿಂದ ಸ್ಥಳೀಯ ಸಂಸ್ಥೆಗಳು ನಾಗರಿಕರಿಗೆ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ' ಎಂದು ಜಲಮಂಡಳಿ ಎಂಜಿನಿಯರ್ ಮಾಹಿತಿ ನೀಡಿದರು.

'ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿ ಕಾವೇರಿ ನೀರು ಪಡೆಯುವ ವ್ಯವಸ್ಥೆ ಇದ್ದು, ಅಲ್ಲಿಂದ ತೊರೆಕಾ-ಡನಹಳ್ಳಿಗೆ ಪಂಪ್ ಮಾಡಲಾಗುತ್ತಿದೆ. ಅಲ್ಲಿಂದ ಪಟ್ಟಣಗಳಿಗೆ ನೀರು ಪೂರೈಸಲು ಯೋಜಿಸಲಾಗಿದೆ. ಅಲ್ಲದೆ, ತಾತಗುಣಿ ಸೇವಾಕೇಂದ್ರದಿಂದ ಬೆಂಗಳೂರು ನಗರದ ಕೆಲವು ಭಾಗಕ್ಕೆ ನೀರು ಒದಗಿಸಲು ಯೋಜಿಸಲಾಗಿದೆ' ಎಂದರು.

'ಕಾವೇರಿ 6ನೇ ಹಂತದ ಯೋಜನೆ ಇನ್ನೂ ಪ್ರಾರಂಭಿಕ ಹಂತದಲ್ಲಿದ್ದು, ಹಣದ ಹೊಂದಾಣಿಕೆಯಾಗಿ ಯೋಜನೆ ಆರಂಭವಾಗಲು ಇನ್ನೂ ಒಂದು ವರ್ಷ ಬೇಕಾಗುತ್ತದೆ. ಅದಾದ ಮೇಲೆ ಕನಿಷ್ಠ ಮೂರು ವರ್ಷ ಕಾಮಗಾರಿ ನಡೆಯುತ್ತದೆ' ಎಂದು ಅಭಿಪ್ರಾಯಪಟ್ಟರು.



ಸ್ವಾಭಿಮಾನ ಉದ್ಯಾನದಲ್ಲಿ 10, 11ಕ್ಕೆ 'ಪುಸ್ತಕ ಸಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಬಡಾವಣೆಯ ಸ್ವಾಭಿಮಾನ ಉದ್ಯಾನದಲ್ಲಿ ಫೆ.10 ಹಾಗೂ 11ರಂದು 'ಪುಸ್ತಕ ಸಂತೆ' ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಹಿರಿಯ ಹಾಗೂ ಕಿರಿಯ ಪ್ರಕಾಶನ ಸಂಸ್ಥೆಗಳು ಒಗ್ಗೂಡಿ ವೀರಲೋಕ ಪ್ರತಿಷ್ಠಾನದ ನೇತೃತ್ವದಲ್ಲಿ ಇದೇ ಮೊದಲ ಬಾರಿ ಬೆಂಗಳೂರಿನಲ್ಲಿ ಪುಸ್ತಕ ಸಂತೆ ಹಮ್ಮಿಕೊಂಡಿವೆ. ಪುಸ್ತಕೋದ್ಯಮ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಇದೊಂದು ವಿನೂತನ ಹೆಜ್ಜೆ. ಎರಡು ದಿನಗಳು ನಡೆಯುವ ಸಂತೆಯಲ್ಲಿ 20 ಸಾವಿರಕ್ಕೂ ಹೆಚ್ಚು ಪುಸ್ತಕ ಪ್ರೇಮಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಬುಧವಾರ ಪತ್ರಿಕಾ-ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸಾಹಿತ್ಯ ಸಮ್ಮೇಳನ, ಕಲಾಕ್ಷೇತ್ರ-ಗಳಲ್ಲಿ ಹಿಂದಿನಿಂದಲೂ ಪ್ರದರ್ಶನ–ಮಾರಾಟ ನಡೆಯುತ್ತಾ ಬಂದಿವೆ. ಸಂತೆ ಸ್ವರೂಪ ನೀಡಿರುವುದು ಇದೇ ಮೊದಲು. ಜನರು ತಮ್ಮ ಆಸಕ್ತಿಯ, ಜನಪ್ರಿಯ ಲೇಖಕರ ಪುಸ್ತಕಗಳನ್ನು ಕೊಂಡು ಓದುತ್ತಾರೆ. ಆದರೆ, ಹೊಸ ಲೇಖಕರ ಕುರಿತು ಹೆಚ್ಚಿನ ಮಾಹಿತಿ ಇರುವುದಿಲ್ಲ. ಹೊಸ ತಲೆಮಾರಿನ ಬರಹಗಾರರ ಪುಸ್ತಕಗಳನ್ನೂ ಓದುಗರಿಗೆ ಪರಿಚಯಿಸಬೇಕಿದೆ. ಪುಸ್ತಕೋದ್ಯಮದ ಪ್ರಸ್ತುತ ಸ್ಥಿತಿಗಳ ಕುರಿತೂ ಮನವರಿಕೆ ಮಾಡಿಸುವ ಅಗತ್ಯವಿದೆ. ಈ ಎಲ್ಲ ಕಾರಣಗಳಿಗಾಗಿ ಪುಸ್ತಕ ಸಂತೆ ಹಮ್ಮಿಕೊಳ್ಳಲಾಗಿದೆ ಎಂದರು.

ವೀರಲೋಕ ಪ್ರತಿಷ್ಠಾನದ ಪ್ರಕಾಶಕ ಶ್ರೀನಿವಾಸ ಮಾತನಾಡಿ, 'ಫೆ.10ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತೆಗೆ ಚಾಲನೆ ನೀಡುವರು. ಇನ್ನೂರಕ್ಕೂ ಹೆಚ್ಚು ಸಾಹಿತಿಗಳು ಭಾಗವಹಿಸುವರು. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ನೂರಕ್ಕೂ ಹೆಚ್ಚು ಪುಸ್ತಕ ಮಳಿಗೆಗಳ ಜತೆಗೆ, ಆಹಾರ ಸಂತೆ, ಸಂಗೀತ ಕಾರ್ಯಕ್ರಮಗಳೂ ಇರಲಿವೆ' ಎಂದರು.

ಪತ್ರಿಕಾಗೋಷ್ಠಿಯಲ್ಲಿ ರೋಟರಿ ಅಧ್ಯಕ್ಷ ರಾಜೀವ್ ಥ್ಯಾಕಟ್, ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ, ಪ್ರಕಾಶಕರು ಮತ್ತು ಬರಹಗಾರರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಅಧಿಕಾರಿ ಬಿ.ಎನ್.ಪರಡ್ಡಿ, ವಿದ್ಯಾರ್ಥಿ ಮುಖಂಡ ಅನಿಲ್ ಕುಮಾರ್ ರೆಡ್ಡಿ ಉಪಸ್ಥಿತರಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ವಿವಿಧ ಸಂಘಟನೆಗಳ ಪ್ರತಿಭಟನೆ

ಕಾಯಂ ನೇಮಕಾತಿ, ಅನುದಾನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ವಿವಿಧ ಸಂಘಟನೆಗಳು ಬುಧವಾರ ಪ್ರತಿಭಟನೆ ನಡೆಸಿದವು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಲಾಯಿತು.

ರಾಜ್ಯ ಸರ್ಕಾರಿ ನೌಕರರ ವಿವಿಧ ಸಂಘಟನೆಗಳ ಮತ್ತು ಇಲಾಖಾ ಹಾಗೂ ವೃಂದ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ-ಯಲ್ಲಿ ನೌಕರರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಲಾಯಿತು.

'ಶೇ 40ರಷ್ಟು ಹೆಚ್ಚಳದೊಂದಿಗೆ 7ನೇ ವೇತನ ಪರಿಷ್ಕರಣೆಯನ್ನು ತಕ್ಷಣವೇ ಜಾರಿಗೆ ತರಬೇಕು. ರಾಜ್ಯದ ಎಲ್ಲ ನೌಕರರಿಗೂ ಎನ್‌ಪಿಎಸ್ ರದ್ದುಪಡಿಸಿ ನಿಶ್ಚಿತ ಪಿಂಚಣಿ ಯೋಜನೆ ಜಾರಿಗೆ ತರಬೇಕು' ಎಂದು ಆಗ್ರಹಿಸಿದರು.

'ಖಾಲಿಯಿರುವ ಎಲ್ಲ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಇನ್ನು ಮುಂದೆ ಗುತ್ತಿಗೆ, ಹೊರಗುತ್ತಿಗೆ ಪದ್ಧತಿ ಕೈಬಿಟ್ಟು ಕಾಯಂ ನೇಮಕಾತಿ ಮಾಡಿಕೊಳ್ಳಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಕೋವಿಡ್–19 ನೆಪದಲ್ಲಿ ತಡೆ ಹಿಡಿಯಲಾಗಿದ್ದ 10 ತಿಂಗಳ ತುಟ್ಟಿಭತ್ಯೆ ಬಿಡುಗಡೆ ಮಾಡಬೇಕು. ಬಡ್ತಿ ಮೀಸಲಾತಿ ಕಾಯ್ದೆ ಸಂಪೂರ್ಣ ಅನುಷ್ಠಾನಗೊಂಡು, ಬ್ಯಾಕ್ ಲಾಗ್ ಹುದ್ದೆಗಳ ಭರ್ತಿ ಮಾಡಬೇಕು' ಎಂದು ಆಗ್ರಹಿಸಿದರು.

'ರಾಜ್ಯದ ಪಂಚಾಯತ್ ಅಭಿವೃದ್ಧಿ ಅಧಿಕಾರಗಳ ಮೇಲಿನ ಕೆಲಸದ ಒತ್ತಡ ಹಾಗೂ ದೌರ್ಜನ್ಯಗಳನ್ನು ತಡೆಗಟ್ಟಲು ತಜ್ಞರ ಸಮಿತಿ ನೇಮಕ ಮಾಡಬೇಕು. ಎಲ್ಲ ನೌಕರರಿಗೆ ಹಾಗೂ ಎಲ್ಲ ನಿವೃತ್ತರಿಗೂ ನಗದು ರಹಿತ ಆರೋಗ್ಯ ಭಾಗ್ಯ ಯೋಜನೆ ಜಾರಿಗೆ ತರಬೇಕು' ಎಂದು ಕೋರಿದರು.

ಅನುದಾನ ಕಲ್ಪಿಸಲು ಆಗ್ರಹ: ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ರಾಜ್ಯ ಸಂಘಟನಾ ಕಾರ್ಯದರ್ಶಿ ಎಲ್.ಜೀವನ್ ಮಾತನಾಡಿ, 'ರಾಜ್ಯಕ್ಕೆ ಬರಬೇಕಾದ ಅನುದಾನ ಕೇಳಿದರೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಉಡಾಫೆ ಉತ್ತರ ನೀಡುತ್ತಿದ್ದಾರೆ. ಬಜೆಟ್ ಮಂಡನೆ ಮಾತ್ರ ನಮ್ಮದು, ಹಣ ಹಂಚಿಕೆಯಲ್ಲ. ಅನುದಾನ ಬೇಕಿದ್ದರೆ ಹಣಕಾಸು ಆಯೋಗವನ್ನು ಕೇಳಿ ಎಂದು ಹೇಳಿರುವುದು ಸರಿಯಾದ ಕ್ರಮ ಅಲ್ಲ' ಎಂದು ದೂರಿದರು.

'ಒಕ್ಕೂಟ ವ್ಯವಸ್ಥೆಯಲ್ಲಿ ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಎಂಬ ಧೋರಣೆ ಇದೆ. ರಾಜ್ಯದ ಜನರು ಮುಂದಿನ ದಿನಗಳಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ತಕ್ಕಪಾಠ ಕಲಿಸುತ್ತಾರೆ' ಎಂದು ರಾಜ್ಯ ಕಾರ್ಯದರ್ಶಿ ಎಸ್.ಮಂಜುನಾಥ್ ತಿಳಿಸಿದರು.

'ಅತಿ ಹೆಚ್ಚು ತೆರಿಗೆ ಕಟ್ಟುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ನಮ್ಮ ಪಾಲಿನ ಅನುದಾನವನ್ನು ಮಾತ್ರವೇ ನಾವು ಕೇಳುತ್ತಿದ್ದೇವೆ' ಎಂದು ರಾಜ್ಯ ಕಾರ್ಯದರ್ಶಿ ರಘು ಜಾಣಗೆರೆ ಹೇಳಿದರು.

ರವಿ ಕೃಷ್ಣಾರೆಡ್ಡಿ ಮಾತನಾಡಿ, 'ಕೇಂದ್ರವು ರಾಜ್ಯಕ್ಕೆ ಬಹುದೊಡ್ಡ ಅನ್ಯಾಯ ಮಾಡುತ್ತಿದೆ' ಎಂದರು.

ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎನ್.ದೀಪಕ್, ಕಾರ್ಯದರ್ಶಿಗಳಾದ ಬಿ.ಎಸ್.ಮಲ್ಲಿಕಾರ್ಜುನಯ್ಯ, ಸೋಣ್ಣಪ್ಪಗೌಡ, ಯು.ಬಿ.ವಿಜಯ ಕುಮಾರ್ ಪಾಲ್ಗೊಂಡಿದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ 'ಜೀವಿಕ' ನೇತೃತ್ವದಲ್ಲಿ ಜಾಗೃತಿ ಸಮಾವೇಶ ನಡೆಯಿತು (ಎಡಚಿತ್ರ) ರಾಜ್ಯ ಸರ್ಕಾರಿ ನೌಕರರ ವಿವಿಧ ಇಲಾಖೆ ಮತ್ತು ವೃಂದ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ರಾಜ್ಯಮಟ್ಟದ ಪ್ರತಿಭಟನಾ ಧರಣಿ ನಡೆಸಿದರು
– ಪ್ರಜಾವಾಣಿ ಚಿತ್ರ

'₹100 ಕೋಟಿ ಅನುದಾನ ನೀಡಿ'

ಜೀತ ವಿಮುಕ್ತರ ಸಮಗ್ರ ಪುನರ್ವಸತಿಗೆ ರಾಜ್ಯ ಸರ್ಕಾರವು ಮುಂದಿನ ಬಜೆಟ್‌ನಲ್ಲಿ ವಿಶೇಷ ಅನುದಾನ ಘೋಷಿಸಬೇಕು ಎಂದು ಆಗ್ರಹಿಸಿ, ಜೀತ ವಿಮುಕ್ತಿ ಕರ್ನಾಟಕ (ಜೀವಿಕ) ಹಾಗೂ ಕರ್ನಾಟಕ ಜೀತದಾಳು ಕೃಷಿ ಕಾರ್ಮಿಕರ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಜೀತ ವಿಮುಕ್ತರಿಗೆ ಕೇಂದ್ರ ಸರ್ಕಾರದ ಪುನರ್ವಸತಿ ಯೋಜನೆಯ ಸಮಗ್ರ ಅಂಶಗಳ ಪ್ರಕಾರ ಎಲ್ಲ ಸೌಲಭ್ಯಗಳನ್ನು ಕೂಡಲೇ ಕಲ್ಪಿಸಬೇಕು. ಹಳ್ಳಿಗಳಲ್ಲಿ ವಾಸಿಸುವ ಜೀತ ವಿಮುಕ್ತರಿಗೆ ಸಿಗಬೇಕಾದ 5 ಎಕರೆ ಜಮೀನು ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಫಾರ್ಮ್ ನಂ. 50, 53, 57ರಡಿ ಅರ್ಜಿ ಹಾಕಿದ ಜೀತ ಮುಕ್ತರಿಗೆ ಮೊದಲ ಆದ್ಯತೆಯಲ್ಲಿ ಬಗರ್‌ಹುಕುಂ ಜಮೀನು ಮಂಜೂರು ಮಾಡಬೇಕು. ಜೀತ ವಿಮುಕ್ತರ ಮಕ್ಕಳಿಗೆ ಸರ್ಕಾರಿ ನೌಕರಿಗಳಲ್ಲಿ ಆದ್ಯತೆ ಮೇರೆಗೆ ಆಯ್ಕೆ ಮಾಡಬೇಕು. ಮಕ್ಕಳಿಗೆ ವಸತಿಶಾಲೆಯಲ್ಲಿ ಓದುವ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಸಮಾಜ ಕಲ್ಯಾಣ ಇಲಾಖೆಯಿಂದ ಒಂದು ವಿಶೇಷ ಯೋಜನೆ ರೂಪಿಸಿ, ಅದನ್ನು ಕಾರ್ಯರೂಪಕ್ಕೆ ತರಬೇಕು. ಇದಕ್ಕಾಗಿ ಸರ್ಕಾರ ಮುಂದಿನ ಬಜೆಟ್‌ನಲ್ಲಿ ₹100 ಕೋಟಿ ಅನುದಾನ ನೀಡಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಲಂಡನ್‌ನ ಕನ್ನಡ ಕವಿ ಜಿ.ಎಸ್. ಶಿವಪ್ರಸಾದ್‌ಗೆ ಸನ್ಮಾನ

ಸಾಹಿತ್ಯಕ್ಕೆ ಜಿಎಸ್‌ಎಸ್ ಕೊಡುಗೆ ಅನನ್ಯ

ಪ್ರಜಾವಾಣಿ ವಾರ್ತೆ

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಜನ್ಮ ದಿನಾಚರಣೆಯಲ್ಲಿ ಲಂಡನ್‌ನಲ್ಲಿರುವ ಕನ್ನಡ ಕವಿ ಹಾಗೂ ಜಿ.ಎಸ್. ಶಿವರುದ್ರಪ್ಪ ಅವರ ಪುತ್ರ ಜಿ.ಎಸ್. ಶಿವಪ್ರಸಾದ್ ಅವರನ್ನು ಸನ್ಮಾನಿಸಲಾಯಿತು

ಬೆಂಗಳೂರು: ಸಾಹಿತ್ಯಲೋಕಕ್ಕೆ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಕೊಡುಗೆ ಅನುಪಮವಾದುದು. ಜಾತಿ ಮತಗಳನ್ನು ಮೀರಿ ತಮ್ಮ ವೈಚಾರಿಕ ಚಿಂತನೆಗಳ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿದರು ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ತಿಳಿಸಿದರು.

ವಿಜಯನಗರದ ಬಸವೇಶ್ವರ ಕಾಲೇಜಿನಲ್ಲಿ ನಡೆದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಮೂಢನಂಬಿಕೆಯ ವಿರುದ್ಧ ಜಿಎಸ್‌ಎಸ್ ಅವರ ಹೋರಾಟ ನಿರಂತರವಾಗಿತ್ತು. ಕುವೆಂಪು ಅವರ ಅತ್ಯಂತ ನಿಕಟವರ್ತಿಯಾಗಿದ್ದ ಜಿಎಸ್‌ಎಸ್ ನಮ್ಮ ನಡುವಿನ ಮಹಾನ್ ಚೈತನ್ಯ ಶಕ್ತಿ' ಎಂದು ಅವರು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಲಂಡನ್‌ನ ಪ್ರಸಿದ್ಧ ಕನ್ನಡ ಕವಿ ಹಾಗೂ ಜಿ.ಎಸ್. ಶಿವರುದ್ರಪ್ಪ ಅವರ ಪುತ್ರ ಜಿ.ಎಸ್.ಶಿವಪ್ರಸಾದ್ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿವಪ್ರಸಾದ್, 'ಜಿಎಸ್‌ಎಸ್ ಅವರ ಬದುಕು ಮತ್ತು ಬರಹ ಒಂದೇ ಆಗಿತ್ತು' ಎಂದರು.

ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹಾದೇವಯ್ಯ ಅಧ್ಯಕ್ಷತೆ ವಹಿಸಿದ್ದರು. ರಂಗಕರ್ಮಿ ನಾಗರಾಜ ಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರಮೌಳಿ, ಮಧುರ ಅಶೋಕ್ ಕುಮಾರ್, ಸಂಗಮೇಶ ಗೌಡಪ್ಪ. ಪ್ರೇಮಾ ಶಾಂತವೀರಯ್ಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬಫರ್ ಝೋನ್: ರಸ್ತೆ ನಿರ್ಮಾಣಕ್ಕೆ ಭೂ ಸ್ವಾಧೀನ

• ನವೀನ್ ಮಿನೇಜಸ್

ಬೆಂಗಳೂರು: ಯಲಹಂಕ ಮತ್ತು ಜಕ್ಕೂರು ಕೆರೆಗಳ ನಡುವಿನ ಬೃಹತ್ ನೀರುಗಾಲುವೆಯ ಬಫರ್ ಝೋನ್‌ನಲ್ಲಿರುವ 120 ಖಾಲಿ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಬಿಬಿಎಂಪಿ ಮುಂದಾಗಿದೆ.

2.62 ಕಿ.ಮೀ. ಉದ್ದವಿರುವ ಈ ಬಫರ್ ಝೋನ್ ಭೂಮಿಯಲ್ಲಿ ಹೊಸ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ. ಮಳೆ ಬಂದಾಗ ಈ ಭಾಗದಲ್ಲಿ ಪ್ರವಾಹ ಉಂಟಾಗುತ್ತಿದ್ದು, ಯಲಹಂಕ ಮತ್ತು ಜಕ್ಕೂರು ಕೆರೆಗಳ ನಡುವಿನ ರಾಜಕಾಲುವೆಯನ್ನೂ ವಿಸ್ತರಣೆ ಮಾಡಲು ಯೋಜಿಸಲಾಗಿದೆ.

120 ಖಾಸಗಿ ಆಸ್ತಿಗಳು 56,838 ಚದರ ಮೀಟರ್ ವಿಸ್ತೀ-ರ್ಣದಲ್ಲಿದ್ದು, ವರ್ಗಾವಣೆ ಅಭಿವೃದ್ಧಿ ಹಕ್ಕುಗಳು (ಟಿಡಿಆರ್) ನೀಡುವ ಮೂಲಕ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ನಾಲ್ಕು ಪಥಗಳ ರಸ್ತೆಯನ್ನು ನಿರ್ಮಿಸಿ, ಜಕ್ಕೂರು ರಸ್ತೆಗೆ ಸಂಪರ್ಕಿಸಲಾಗುತ್ತದೆ. ಇದನ್ನು ಮಣ್ಣಿನ ರಸ್ತೆಯಾಗಿ ಉಳಿಸಿಕೊಳ್ಳಲು ಯೋಜಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಪ್ರಾಥಮಿಕ ರಾಜಕಾಲುವೆಗಳ ಮಧ್ಯದಿಂದ 25 ಮೀಟರ್ ಹಾಗೂ ಎರಡನೇ ಹಂತದ ರಾಜಕಾಲುವೆಗಳ ಮಧ್ಯದಿಂದ 15 ಮೀಟರ್ ಪ್ರದೇಶವನ್ನು ಬಫರ್ ಝೋನ್ ಎಂದು ನಿಗದಿಪಡಿಸಿದೆ. ಅದರಂತೆ, ಭೂಸ್ವಾಧೀನ ಮಾಡಿಕೊಳ್ಳಲು ಬಿಬಿಎಂಪಿ ಯೋಜಿಸಿದೆ.

'ಮೊದಲ ಬಾರಿಗೆ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿ-ಕೊಂಡು ರಾಜಕಾಲುವೆಯನ್ನು ವಿಸ್ತರಿಸಲು ಯೋಜಿಸಲಾಗಿದೆ. ಬಫರ್ ಝೋನ್‌ನಲ್ಲಿ ರಸ್ತೆ ಮಾಡುವುದರಿಂದ ಒತ್ತುವರಿ ಸಮಸ್ಯೆಯೂ ಇರುವುದಿಲ್ಲ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು. 'ಈ ರಸ್ತೆ ನಿರ್ಮಾಣದಿಂದ ಹೆಬ್ಬಾಳ ಜಂಕ್ಷನ್‌ನಲ್ಲಿನ ವಾಹನ ದಟ್ಟಣೆ ಕಡಿಮೆಯಾಗುವ ನಿರೀಕ್ಷೆ ಇದ್ದು, ರಾಚೇನಹಳ್ಳಿ, ನಾಗವಾರಕ್ಕೆ ಪರ್ಯಾಯ ಸಂಪರ್ಕ ರಸ್ತೆ ದೊರೆತಂತಾಗುತ್ತದೆ' ಎಂದರು.

ತಾಯಿ -ಮಗು ಸಾವು: ತಾಂತ್ರಿಕ ಲೋಪವೇ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷ ನವೆಂಬರ್‌ನಲ್ಲಿ ಕಾಡುಗೋಡಿ ಸಮೀಪದ ಹೋಪ್ ಫಾರ್ಮ್ ಜಂಕ್ಷನ್ ಬಳಿ ವಿದ್ಯುತ್ ತಂತಿ ತುಳಿದು ತಾಯಿ – ಮಗು ಮೃತಪಟ್ಟ ದುರ್ಘಟನೆಗೆ ಪ್ರಮುಖ ತಾಂತ್ರಿಕ ಲೋಪಗಳೇ ಕಾರಣ ಎಂದು, ಪ್ರಕರಣದ ತನಿಖೆ ನಡೆಸಿದ ತಜ್ಞರ ಸಮಿತಿ ವರದಿಯಲ್ಲಿ ತಿಳಿಸಿದೆ.

ಕೆಪಿಟಿಸಿಎಲ್ ನಿವೃತ್ತ ನಿರ್ದೇಶಕ ಎಸ್.ಸುಮಂತ್ ನೇತೃತ್ವದ ತಾಂತ್ರಿಕ ತಜ್ಞರ ಸಮಿತಿ ಪ್ರಕರಣದ ತನಿಖೆ ನಡೆಸಿ ಇಂಧನ ಇಲಾಖೆಗೆ ಸಲ್ಲಿಸಿರುವ ವರದಿಯಲ್ಲಿ ಈ ಅಂಶಗಳನ್ನು ಉಲ್ಲೇಖಿಸಿದೆ. ಜೊತೆಗೆ ತಕ್ಷಣ ಕೈಗೊಳ್ಳಬೇಕಾದ ತುರ್ತು ಕ್ರಮಗಳನ್ನು ತಿಳಿಸಿದೆ.

'ಘಟನಾ ಸ್ಥಳದ ಸಮೀಪವಿರುವ ಅಪಾರ್ಟ್‌ಮೆಂಟ್‌ನ ಟ್ರಾನ್ಸ್‌ಫಾರ್ಮರ್‌ನಲ್ಲಿ ಇಲಿ ನುಸುಳಿ ತಂತಿಯೊಂದನ್ನು ತುಂಡರಿಸಿತ್ತು. ಇದರಿಂದ ಶಾರ್ಟ್ ಸರ್ಕೀಟ್ ಆಗಿ, ಇದರಿಂದ ಹೆಚ್ಚು ವಿದ್ಯುತ್ ಪ್ರವಹಿಸಿ ತಂತಿ ದುರ್ಬಲಗೊಂಡು ತುಂಡಾಗಿ ಬಿದ್ದು, ಅವಘಡ ಸಂಭವಿಸಿತ್ತು' ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದರು. ಆದರೆ ತಜ್ಞರ ಸಮಿತಿಯ ವರದಿಯಲ್ಲಿ ಇಲಿಯ ವಿಷಯವನ್ನೇ ಪ್ರಸ್ತಾಪಿಸಿಲ್ಲ. ಬದಲಿಗೆ, ನಿಯಮಿತ ನಿರ್ವಹಣೆ ಕೊರತೆ, ತಾಂತ್ರಿಕ ಲೋಪಗಳು ಮತ್ತು ಬೆಸ್ಕಾಂ ಅಧಿಕಾರಿಗಳು ತಾಂತ್ರಿಕ ನಿಯಮಗಳನ್ನು ಉಲ್ಲಂಘಿಸಿರುವುದನ್ನು ಪ್ರಮುಖವಾಗಿ ಉಲ್ಲೇಖಿಸಿದೆ.

ಪ್ರಮುಖ ಅಂಶಗಳು : 11 ಕೆವಿ ಫೀಡರ್ ಲೈನ್‌ನಲ್ಲಿ ಕೊಯ್ಟೆ ಮತ್ತು ರ್‍ಯಾಬಿಟ್ ಕಂಡಕ್ಟರ್ ಎಂಬ ಎರಡು ಭಿನ್ನ ಸಾಮರ್ಥ್ಯದ ವಿದ್ಯುತ್ ವಾಹಕ ತಂತಿಗಳನ್ನು ಜೋಡಿಸಿರುವುದು ಸರಿಯಲ್ಲ. ಅವಘಡ ನಡೆದ ಸ್ಥಳದಲ್ಲಿ ಎರಡು ವರ್ಷಗಳಿಂದ ಜಾಯಿಂಟ್‌ಗಳನ್ನು ಪರಿಶೀಲಿಸಿಲ್ಲ. ರಸ್ತೆಯ ಮೇಲುಭಾಗದಲ್ಲಿ ಅಳವಡಿಸಲಾದ ತಂತಿಗಳಿಗೆ ಗಾರ್ಡ್ ಅಳವಡಿಸಿಲ್ಲ. ಜೊತೆಗೆ ಅರ್ಥ್ ಗಾರ್ಡ್ ಸ್ಟಿರಪ್‌ಗಳನ್ನು ಬಳಸಿಲ್ಲ. ವಿದ್ಯುತ್ ಕಂಬಗಳಿಗೆ ಸರಿಯಾಗಿ ಅರ್ಥಿಂಗ್ ಆಗಿಲ್ಲ ಎಂದು ವರದಿಯಲ್ಲಿ ತಿಳಿಸಿದೆ.

ಈ ಲೋಪಗಳ ಜೊತೆಗೆ, ಕೇಂದ್ರೀಯ ವಿದ್ಯುತ್ ಆಯೋಗ ನೀಡಿರುವ ಮಾರ್ಗದರ್ಶಿ ಸೂತ್ರಗಳ ಪಾಲ-ನೆಯಾಗದಿರುವುದನ್ನು ಸಮಿತಿ ಗುರುತಿಸಿದೆ. ವಿದ್ಯುತ್ ಪರಿವೀಕ್ಷಕರು ಕಾಲಕಾಲಕ್ಕೆ ಪರಿಶೀಲಿಸಿ ಸೂಚನೆ ನೀಡಿಲ್ಲ ಹಾಗೂ ಲೈನ್‌ಮನ್‌ಗಳಿಗೆ ನೀಡುತ್ತಿರುವ ತರಬೇತಿ ಸಾಲದು ಎಂಬುದನ್ನೂ ವರದಿಯಲ್ಲಿ ಉಲ್ಲೇಖಿಸಿದೆ.

ಪ್ರಕರಣದ ತನಿಖೆಗಾಗಿ ಸರ್ಕಾರ ರಚಿಸಿದ್ದ ಸುಮಂತ್ ನೇತೃತ್ವದ ತಾಂತ್ರಿಕ ಪರಿಣತರ ಸಮಿತಿಯಲ್ಲಿ ಪ್ರಧಾನ ವಿದ್ಯುತ್ ಪರಿವೀಕ್ಷಕ ರವಿಕುಮಾರ್ ಹಾಗೂ ಬಿ.ವಿ, ಗಿರೀಶ್ ಹಾಗೂ ಸಿಪಿಆರ್‌ಐ ತಜ್ಞ ಪ್ರಭಾಕರ್ ಇದ್ದರು. ತಜ್ಞರ ಸಮಿತಿ ವರದಿ ಸಲ್ಲಿಸುವ ಮೊದಲು, ವಿದ್ಯುತ್ ಪರಿವೀಕ್ಷಕರ ಇಲಾಖೆಯೂ ಈ ಪ್ರಕರಣದ ತನಿಖೆ ನಡೆಸಿ ವರದಿ ಸಲ್ಲಿಸಿತ್ತು. ಆ ವರದಿಯಲ್ಲೂ ತಾಂತ್ರಿಕ ಲೋಪಗಳನ್ನು ಉಲ್ಲೇಖಿಸಲಾಗಿತ್ತು.

ಘಟನೆ ವಿವರ: ಕಳೆದ ವರ್ಷ ನವೆಂಬರ್ 19ರಂದು ಬೆಳಗಿನ ಜಾವ 3.50 ರ ಸಮಯದಲ್ಲಿ ಕಾಡುಗೋಡಿ ಸಮೀಪದ ಹೋಪ್ ಫಾರ್ಮ್ ಬಳಿ ಪಾದಚಾರಿ ಮಾರ್ಗದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ತಾಯಿ ಮತ್ತು ಮಗು ಸುಟ್ಟು ಭಸ್ಮವಾಗಿದ್ದರು. ಘಟನೆಗೆ ಸಂಬಂಧಿಸಿದಂತೆ ಇಂಧನ ಸಚಿವ ಜಾರ್ಜ್ ಅವರು ಬೆಸ್ಕಾಂ, ಪೊಲೀಸ್, ವಿದ್ಯುತ್ ಪರಿವೀಕ್ಷಕರು ಹಾಗೂ ಸ್ವತಂತ್ರ ಸಮಿತಿಗಳ ಮೂಲಕ ನಾಲ್ಕು ವಿಧಾನಗಳಲ್ಲಿ ತನಿಖೆ ನಡೆಸಲು ಆದೇಶಿಸಿದ್ದರು.

ರಾಯಚೂರಿಗೆ ಏಮ್ಸ್: ಕೇಂದ್ರಕ್ಕೆ ಮತ್ತೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಯಚೂರು ನಗರದಲ್ಲಿ ಏಮ್ಸ್ ಸ್ಥಾಪಿಸಬೇಕು ಎಂದು ಒತ್ತಾಯಿಸಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಹಾಗೂ ಸಣ್ಣ ನೀರಾವರಿ ಸಚಿವ ಎನ್.ಎಸ್.ಭೋಸರಾಜು ಅವರು ಕೇಂದ್ರ ಆರೋಗ್ಯ ಸಚಿವ ಮನ್ಸುಕ್ ಮಾಂಡವಿಯಾ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

ಭೇಟಿಯ ನಂತರ ಶರಣ ಪ್ರಕಾಶ ಪಾಟೀಲ ಮಾತನಾಡಿ, 'ರಾಯಚೂರು ನಗರದಲ್ಲಿ ಏಮ್ಸ್ ಸ್ಥಾಪನೆ ಆಗಬೇಕೆಂದು ನಡೆಸಲಾಗುತ್ತಿರುವ ಹೋರಾಟ 636 ದಿನಗಳಿಗೆ ತಲುಪಿದೆ. ಜಿಲ್ಲೆಗೆ ಏಮ್ಸ್ ಮಂಜೂರು ಮಾಡುವುದರಿಂದ ಆಗುವ ಅನುಕೂಲತೆಗಳ ಬಗ್ಗೆ, ಜನರ ಜೀವನ ಮಟ್ಟದಲ್ಲಾಗುವ ಬದಲಾವಣೆಗಳ ಬಗ್ಗೆ ವಿವರವಾಗಿ ಸಚಿವರಿಗೆ ತಿಳಿಸಲಾಗಿದೆ. ಬಜೆಟ್ ಅಧಿವೇಶನ ಮುಗಿಯುವ ಮುನ್ನವೇ ಘೋಷಣೆ ಮಾಡುವಂತೆಯೂ ಒತ್ತಾಯಿಸಲಾಗಿದೆ' ಎಂದರು.

ಎನ್.ಎಸ್. ಭೋಸರಾಜು ಮಾತನಾಡಿ, 'ರಾಯಚೂರು ಜಿಲ್ಲೆಯ ಅಭಿವೃದ್ಧಿಗಾಗಿ ಏಮ್ಸ್ ಸ್ಥಾಪನೆ ಆಗಬೇಕು ಎನ್ನುವುದು ಜಿಲ್ಲೆಯ ನಾಗರಿಕರ ಬಹುದಿನಗಳ ಬೇಡಿಕೆ ಆಗಿದೆ' ಎಂದು ಹೇಳಿದರು.

'ಸಾಹಿತ್ಯ ಸಮೀರ' ಲೋಕಾರ್ಪಣೆ ಕಾರ್ಯಕ್ರಮದಲ್ಲಿ ದೊಡ್ಡರಂಗೇಗೌಡ

'ವಿಕ್ಷಿಪ್ತ ಜಗತ್ತಿನಲ್ಲಿ ನಾವೆಲ್ಲ ದ್ವೀಪಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುತ್ತಲ ಜಗತ್ತು ವಿಕ್ಷಿಪ್ತ-ಗೊಂಡಿದ್ದು, ಅಪಮೌಲ್ಯಗಳೇ ತುಂಬಿ ತುಳುಕುತ್ತಿವೆ. ಶ್ರೇಷ್ಠವಾದುದನ್ನು ಅರಸುವ ಬದಲು ಕನಿಷ್ಠದ ಕಡೆಗೆ ಜನರು ಹೋಗುತ್ತಿದ್ದಾರೆ' ಎಂದು ಕವಿ ದೊಡ್ಡರಂಗೇಗೌಡ ವಿಷಾದಿಸಿದರು.

ನಗರದಲ್ಲಿ ಬುಧವಾರ ನಡೆದ ದೊಡ್ಡರಂಗೇಗೌಡರ ಸಮಗ್ರ ಸಾಹಿತ್ಯ ಕೃತಿ 'ಸಾಹಿತ್ಯ ಸಮೀರ' ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮೊಬೈಲ್ ಬಂದ ಬಳಿಕ ಎಲ್ಲರೂ ಅಕ್ಷರಶಃ ದ್ವೀಪಗಳಾಗಿ ಬಿಟ್ಟಿದ್ದೇವೆ. ಮಾನವೀಯ ಸಂಬಂಧಗಳು ನಶಿಸಿ ಹೋಗಿವೆ. ಈ ವ್ಯವಸ್ಥೆಯನ್ನು ಸತ್ಸಂಗ, ಸದಾಶಯ, ಶ್ರದ್ಧೆಯಿಂದ ತಿಳಿಗೊಳಿಸಲು ಸಾಧ್ಯ. ಆದರೆ, ಅದಕ್ಕೆ ಬಹಳ ಸಮಯ ಬೇಕು' ಎಂದು ವಿವರಿಸಿದರು.

ಸಂಶೋಧಕ ಬೈರಮಂಗಲ ರಾಮೇಗೌಡ ಮಾತನಾಡಿ, 'ಚಲನಚಿತ್ರದ ಹಾಡುಗಳ ಮೂಲಕ ದೊಡ್ಡರಂ-ಗೇಗೌಡರು ಮನೆಗಳಿಗೆ, ಮನಗಳಿಗೆ ತಲುಪಿದರು. ಚಿತ್ರಗೀತೆಗಳೆಂದರೆ ಅರ್ಥಹೀನ ಪ್ರಾಸಗಳು ಎಂಬಂತಾಗಿದ್ದ ಕಾಲದಲ್ಲಿ ಗಟ್ಟಿ ಸಾಹಿತ್ಯವನ್ನು ಅವರು ನೀಡಿದರು' ಎಂದು ಶ್ಲಾಘಿಸಿದರು.

ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಮಾತನಾಡಿ, 'ಮೂರು ವರ್ಷಗಳಿಂದ ಸರ್ಕಾರದಿಂದ ಪುಸ್ತಕ ಖರೀದಿ ನಡೆದಿಲ್ಲ. ಸನ್ಮಾನ, ಸಮ್ಮೇಳನ, ಪ್ರಶಸ್ತಿ ಪ್ರದಾನಗಳಷ್ಟೇ ಆಗುತ್ತಿವೆ. ಪುಸ್ತಕ ಖರೀದಿ ಮಾಡುವ ಮೂಲಕ ಸರ್ಕಾರವು ಪುಸ್ತಕ ಸಂಸ್ಕೃತಿಯನ್ನು ಉಳಿಸಬೇಕು' ಎಂದು ಆಗ್ರಹಿಸಿದರು.

'ಸೌಲಭ್ಯದ ಬದಲು ಗ್ಯಾರಂಟಿ': 'ರಸ್ತೆ, ಚರಂಡಿ, ನೀರು, ಮನೆ ಸಹಿತ ಮೂಲಸೌಕರ್ಯಗಳನ್ನು ಒದಗಿಸಬೇಕಾಗಿರುವ ಸರ್ಕಾರ 'ಗ್ಯಾರಂಟಿ'ಗಳನ್ನು ನೀಡಿ, ಅದರ ಮರೆಯಲ್ಲಿ ಹಣವನ್ನು ಅಕ್ರಮವಾಗಿ ಕೂಡಿಡುತ್ತಿದೆ. ಚುನಾವಣೆ ಸಂದರ್ಭದಲ್ಲಿ ಅಕ್ರಮ ಹಣ ಹೊರಗೆ ಬರುತ್ತದೆ. ಮತ ಗಳಿಸುವುದೂ ಒಂದು ಕಲೆ. ಎಲ್ಲರೂ ಆ ಲೆಕ್ಕಾಚಾರದಲ್ಲಿಯೇ ಮುಳುಗಿದ್ದಾರೆ' ಎಂದು ದೊಡ್ಡರಂಗೇಗೌಡ ಆರೋಪಿಸಿದರು.

ನಟ ಸುಚೇಂದ್ರ ಪ್ರಸಾದ್, ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಮೋಹನ್ ರಾಜಣ್ಣ, ಸಂಗೀತ ನಿರ್ದೇಶಕ ವಿ. ಮನೋಹರ್, ಪ್ರಕಾಶಕ ಭದ್ರಾವತಿ ರಾಮಾಚಾರಿ, ಕವಿ ಶಾಂತರಾಮ ಶೆಟ್ಟಿ, ಬಿಎಂಶ್ರೀ ಪ್ರತಿಷ್ಠಾನದ ಶಾಂತರಾಮ್, ದೊಡ್ಡರಂಗೇಗೌಡ ಅಭಿಮಾನಿ ಬಳಗದ ಅಧ್ಯಕ್ಷ ಉಪೇಂದ್ರ ಕುಮಾರ್, ಸಂಚಾಲಕ ಪರಮ್ ಗುಬ್ಬಿ ಭಾಗವಹಿಸಿದ್ದರು.

ದೊಡ್ಡರಂಗೇಗೌಡ ಅಭಿಮಾನಿಗಳ ಬಳಗ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸಾಹಿತ್ಯ ಸಮೀರ' ಸಂಪುಟ ಲೋಕಾರ್ಪಣೆ ಮಾಡಲಾಯಿತು. ನಟ ಸುಚೇಂದ್ರ ಪ್ರಸಾದ್, ಲಯನ್ಸ್ ಅಧ್ಯಕ್ಷ ಕುಮಾರಸ್ವಾಮಿ ಪಿ.ಎಸ್, ಕವಿ ದೊಡ್ಡರಂಗೇಗೌಡ, ಸಂಶೋಧಕ ಬೈರಮಂಗಲ ರಾಮೇಗೌಡ, ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಪಾಲ್ಗೊಂಡಿದ್ದರು
–ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- ಸಂಪುಟ: ಸಾಹಿತ್ಯ ಸಮೀರ
- ಪ್ರಕಾಶನ: ಮಹಿಮಾ ಪ್ರಕಾಶನ
- ಪುಟ: 892
- ದರ: ₹ 1,000

ಪ್ರೇಮಿಗಳ ದಿನ: ಐಎಫ್‌ಎಬಿಯಿಂದ 50 ಲಕ್ಷ ಗುಲಾಬಿಗಳನ್ನು ಪೂರೈಸುವ ನಿರೀಕ್ಷೆ

ಬಣ್ಣಗಟ್ಟಿದ ಗುಲಾಬಿ ಹೂ ಮಾರುಕಟ್ಟೆ

• ಖಲೀಲಅಹ್ಮದ ಶೇಖ

ಬೆಂಗಳೂರು: ಪ್ರೇಮಿಗಳ ದಿನ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕೆಂಗುಲಾಬಿಗೆ ಬೇಡಿಕೆ ಹೆಚ್ಚಾಗಿದೆ. ಬೆಂಗಳೂರು ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದಿಂದ (ಐಎಫ್‌ಎಬಿ) ಹೊರ ರಾಜ್ಯ ಹಾಗೂ ದೇಶಗಳಿಗೆ ಪೂರೈಕೆಯಾಗುತ್ತಿರುವ ಗುಲಾಬಿ ಪ್ರಮಾಣ ಕಳೆದ ಒಂದು ವಾರದಿಂದ ಏರಿಕೆಯಾಗುತ್ತಿದೆ.

ಹೆಬ್ಬಾಳದ ಐಎಫ್‌ಎಬಿ ಕೇಂದ್ರಕ್ಕೆ ಬಣ್ಣ ಬಣ್ಣದ ಗುಲಾಬಿಗಳು ಅಧಿಕ ಪ್ರಮಾಣದಲ್ಲಿ ಬರುತ್ತಿವೆ. ಅಷ್ಟೇ ಪ್ರಮಾಣದಲ್ಲಿ ದೆಹಲಿ, ಮುಂಬೈ, ಹೈದರಾಬಾದ್, ಚೆನ್ನೈ, ಕೋಲ್ಕತ್ತ, ಒಡಿಶಾ, ಗುವಾಹಟಿ, ಚಂಡೀಗಢ, ಗುಜರಾತ್, ರಾಜಸ್ಥಾನ ಹಾಗೂ ಉತ್ತರ ಪ್ರದೇಶ ಸೇರಿದಂತೆ ದೇಶದ ಪ್ರಮುಖ ನಗರಗಳು ಹಾಗೂ ಮಲೇಷ್ಯಾ, ಅರಬ್ ರಾಷ್ಟ್ರಗಳು, ಸಿಂಗಪುರ ಹಾಗೂ ನ್ಯೂಜಿಲ್ಯಾಂಡ್ ರಾಷ್ಟ್ರಗಳಿಗೆ ಪ್ರತಿನಿತ್ಯ ಲಕ್ಷಾಂತರ ಗುಲಾಬಿಗಳು ಈ ಕೇಂದ್ರದಿಂದ ರಫ್ತಾಗುತ್ತಿವೆ.

ಫೆಬ್ರುವರಿ ತಿಂಗಳಲ್ಲಿ ಈ ಕೇಂದ್ರಕ್ಕೆ ಪ್ರತಿನಿತ್ಯ ಬರುವ ಗುಲಾಬಿಗಳ ಪ್ರಮಾಣ ಹೆಚ್ಚಾಗುತ್ತದೆ. ಅದರಲ್ಲೂ ಫೆ. 14ರ ಪ್ರೇಮಿಗಳ ದಿನಕ್ಕೆ ಮುಂಚಿನ ಕೆಲವು ದಿನಗಳಲ್ಲಿ ಇಲ್ಲಿಂದ ಪೂರೈಕೆಯಾಗುವ ಗುಲಾಬಿ ಹೂಗಳ ಸಂಖ್ಯೆ ದುಪ್ಪಟ್ಟಾಗುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬೇಡಿಕೆ ಹೆಚ್ಚಾಗಿದ್ದು, ದರವೂ ಏರಿಕೆಯಾಗಿದೆ. ಸದ್ಯ ಇಲ್ಲಿ ರಂಗು ರಂಗಿನ ಗುಲಾಬಿಗಳ ವಹಿವಾಟು ಜೋರಾಗಿದೆ.

'ಸಾಮಾನ್ಯ ದಿನಗಳಲ್ಲಿ ಈ ಕೇಂದ್ರಕ್ಕೆ ಪ್ರತಿನಿತ್ಯ 5 ಲಕ್ಷ ಗುಲಾಬಿಗಳು ಪೂರೈಕೆಯಾಗುತ್ತವೆ. ಹೋದವರ್ಷ ಪ್ರೇಮಿಗಳ ದಿನದ ಸಂದರ್ಭದಲ್ಲಿ ಪ್ರತಿದಿನ 7 ಲಕ್ಷಕ್ಕೂ ಹೆಚ್ಚು ಗುಲಾಬಿಗಳು ಪೂರೈಕೆಯಾಗಿದ್ದವು. ಈ ವರ್ಷ ಪ್ರತಿನಿತ್ಯ 9 ಲಕ್ಷದಿಂದ 10 ಲಕ್ಷ ಗುಲಾಬಿಗಳು ಪೂರೈಕೆಯಾಗುವ ಸಾಧ್ಯತೆ ಇದ್ದು, ಒಟ್ಟು 50 ಲಕ್ಷ ಗುಲಾಬಿಗಳು ಪೂರೈಕೆಯಾಗುವ ನಿರೀಕ್ಷೆ ಇದೆ' ಎಂದು ಐಎಫ್‌ಎಬಿ ಸಹಾಯಕ ಮುಖ್ಯ ವ್ಯವಸ್ಥಾಪಕಿ ವೀಣಾ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಐಎಫ್‌ಎಬಿ ಎಂದರೆ ಗುಲಾಬಿಗಳಷ್ಟೇ ಮಾರಾಟವಾಗುತ್ತದೆ ಎಂಬ ಭಾವನೆ ಇದೆ. ಈ ಬಾರಿಯ ಪ್ರೇಮಿಗಳ ದಿನಕ್ಕೆ ಗುಲಾಬಿಯ ಜೊತೆಗೆ ಬರ್ಡ್ ಆಫ್ ಪ್ಯಾರಡೈಸ್, ಆರ್ಕಿಡ್ಸ್, ಕಾರ್ನೇಷನ್ ಹೂವುಗಳನ್ನು ಪೂರೈಕೆ ಮಾಡುವ ಉದ್ದೇಶವಿದೆ. ಮಧ್ಯಮ ವರ್ಗದ ಜನ ಕಡಿಮೆ ಬೆಲೆಗೆ ಸಿಗುವ ಪ್ಲಾಸ್ಟಿಕ್ ಹೂಗಳನ್ನು ಹೆಚ್ಚಾಗಿ ಖರೀದಿಸುತ್ತಿದ್ದಾರೆ. ಆದ್ದರಿಂದ, ನೈಸರ್ಗಿಕ ಹೂಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ' ಎಂದರು.

ಪ್ರೇಮಿಗಳ ದಿನದ ಸಮಯದಲ್ಲಿ ಒಂದು ಕೆಂಗುಲಾಬಿಯ (ತಾಜಮಹಲ್) ದರ ಗರಿಷ್ಠ ₹15ರಂತೆ ಹರಾಜಿನಲ್ಲಿ ಮಾರಾಟವಾಗಲಿದೆ. ಹೋದವರ್ಷ ನ್ಯೂ ಆರ್ಲಿಯನ್ಸ್ ಗುಲಾಬಿಯು (ನೇರಳೆ ಬಣ್ಣದ್ದು) ಒಂದಕ್ಕೆ ಗರಿಷ್ಠ ದರ ₹40ರಂತೆ ಹರಾಜಿನಲ್ಲಿ ಮಾರಾಟವಾಗಿತ್ತು' ಎಂದು ಅವರು ತಿಳಿಸಿದರು.

ವಾರದವರೆಗೆ ತಾಜಾತನ

ವಿಶೇಷ ಗುಣವುಳ್ಳ ಈ ಗುಲಾಬಿಗಳನ್ನು ಕಟಾವು ಆದ ಬಳಿಕ ಗರಿಷ್ಠ 7 ದಿನಗಳವರೆಗೆ ಇಡಬಹುದು. ಕಾಂಡದ ಸಹಿತ ನೀರಿನಲ್ಲೇ ಇಡುವುದರಿಂದ ಒಂದು ವಾರದವರೆಗೆ ತಾಜಾತನದಿಂದ ಕೂಡಿರುತ್ತದೆ. ಹರಾಜು ಪ್ರಕ್ರಿಯೆ ನಂತರ ಬೇರೆ ಸ್ಥಳಗಳಿಗೆ ಹೂವು ಪೂರೈಕೆಯಾಗುತ್ತದೆ. ಈ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಗುಲಾಬಿಗಳನ್ನು ತಾಜಾ ಸ್ಥಿತಿಯಲ್ಲಿಡುವ ಶೀತಲೀಕರಣ ವ್ಯವಸ್ಥೆ ಕೇಂದ್ರದಲ್ಲಿದೆ.

ಬೆಂಗಳೂರು ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದಲ್ಲಿ (ಐಎಫ್‌ಎಬಿ) ಬುಧವಾರ ಹರಾಜಿಗೆ ಬಂದಿದ್ದ ಕೆಂಗುಲಾಬಿಯನ್ನು ಜೋಡಿಸುತ್ತಿರುವ ಸಿಬ್ಬಂದಿ –ಪ್ರಜಾವಾಣಿ ಚಿತ್ರ/ರಂಜು ಪಿ

ಬೇಡಿಕೆ ಇರುವ ಗುಲಾಬಿಗಳು

• ತಾಜ್‌ಮಹಲ್ • ಹಾಟ್‌ಶಾಟ್ • ಕಾರ್ವೆಟ್ • ರಾಕ್‌ಸ್ಟಾರ್ • ಬ್ರಿಲಿಯಂಟ್ • ಫರ್ಸ್ಟ್ ರೆಡ್ • ಗ್ರ್ಯಾಂಡ್‌ಗಾಲಾ

ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ಗುಲಾಬಿಗಳು ಉತ್ತಮ ಗುಣಮಟ್ಟದಿಂದ ಕೂಡಿರುತ್ತವೆ. ಆದ್ದರಿಂದ ಇವುಗಳಿಗೆ ದೇಶ–ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ.
ವೀಣಾ, ಐಎಫ್‌ಎಬಿ ಸಹಾಯಕ ಮುಖ್ಯ ವ್ಯವಸ್ಥಾಪಕಿ

ನೋಂದಣಿಯಾದವರಿಗೆ ಮಾತ್ರ ಅವಕಾಶ

'ಐಎಫ್‌ಎಬಿ ಕೇಂದ್ರದಲ್ಲಿ ನೋಂದಣಿಯಾದ ರೈತರು ಹಾಗೂ ಖರೀದಿದಾರರಿಗೆ ವಹಿವಾಟು ನಡೆಸಲು ಅವಕಾಶವಿದೆ. ಇಲ್ಲಿ 235 ರೈತರು ಹಾಗೂ 200ಕ್ಕೂ ಹೆಚ್ಚು ಖರೀದಿದಾರರು ನೋಂದಣಿ ಮಾಡಿಕೊಂಡಿದ್ದಾರೆ. 80ರಿಂದ 90 ಜನ ರೈತರು ಹಾಗೂ 30ರಿಂದ 40 ಜನ ಖರೀದಿದಾರರು ಪ್ರತಿನಿತ್ಯ ನಡೆಯುವ ವಹಿವಾಟಿನಲ್ಲಿ ಪಾಲ್ಗೊಳ್ಳುತ್ತಾರೆ' ಎಂದು ವೀಣಾ ತಿಳಿಸಿದರು.

ಸುದ್ದಿ 2 ನಿಮಿಷ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ವಜಾ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ. ವಿ. ಲೋಕೇಶ್ ಅವರನ್ನು ವಜಾ ಮಾಡಿದ್ದು, ಡಾ. ಸೈಯದ್ ಅಲ್ತಾಫ್ ಅವರನ್ನು ನೂತನ ನಿರ್ದೇಶಕರನ್ನಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಡಾ. ವಿ. ಲೋಕೇಶ್ ಅವರ ವಿರುದ್ಧ ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ವಿವಿಧ ಆರೋಪಗಳ ಬಗ್ಗೆ ಲೋಕಾಯುಕ್ತಕ್ಕೆ ದೂರು ಬಂದಿದ್ದವು. ಪೆಟ್‌ಸ್ಕ್ಯಾನ್ ದರ ನಿಗದಿಗೆ ಸಂಬಂಧಿಸಿದಂತೆ ಹೊರಡಿಸಿದ್ದ ಕಾರ್ಯಾದೇಶ ರದ್ದುಪಡಿಸಿ, ಹೊಸ ಕಾರ್ಯಾದೇಶ ಹೊರಡಿಸಿದ್ದೂ ಸೇರಿದಂತೆ ಹಲವು ಆರೋಪಗಳು ಅವರ ಮೇಲೆ ಇದ್ದವು.

ಈ ಬಗ್ಗೆ ಐಎಎಸ್ ಅಧಿಕಾರಿ ಅರುಂಧತಿ ಚಂದ್ರಶೇಖರ್ ಅಧ್ಯಕ್ಷತೆಯ ಸಮಿತಿಯು ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಈ ವರದಿಯ ಆಧಾರದಲ್ಲಿ ನಿರ್ದೇಶಕ ಹುದ್ದೆಯಿಂದ ಡಾ.ವಿ. ಲೋಕೇಶ್ ಅವರನ್ನು ಸರ್ಕಾರ ವಜಾಗೊಳಿಸಿತ್ತು.

ಕಿದ್ವಾಯಿಯ ಸರ್ಜಿಕಲ್ ಆಂಕಾಲಜಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಾ. ಸೈಯದ್ ಅಲ್ತಾಫ್ ಅವರನ್ನು ಇದೀಗ ನಿರ್ದೇಶಕ ಸ್ಥಾನಕ್ಕೆ ನೇಮಕ ಮಾಡಲಾಗಿದೆ.

ಜನಸ್ಪಂದನ ಕಾರ್ಯಕ್ರಮ: ವಾಹನ ಸಂಚಾರ ನಿಷೇಧ

ಬೆಂಗಳೂರು: ವಿಧಾನಸೌಧದಲ್ಲಿ ಜನಸ್ಪಂದನ ಕಾರ್ಯಕ್ರಮ ಆಯೋಜಿಸಲಾಗಿದ್ದು, ವಿಧಾನಸೌಧ ಆವರಣದ ಕೆಂಗಲ್ ಹನುಮಂತಯ್ಯ ವೃತ್ತದಿಂದ ಗೇಟ್ ನಂಬರ್ 4ರ ವರೆಗೆ ಫೆ.8ರಂದು ವಾಹನ ಸಂಚಾರ ನಿಷೇಧಿಸಲಾಗಿದೆ.

ಪರ್ಯಾಯ ಮಾರ್ಗವಾಗಿ ಡಿ.ದೇವರಾಜ ಅರಸು ರಸ್ತೆಯಲ್ಲಿ ಬರುವ ವಾಹನಗಳು ಎಜಿಎಸ್ ವೃತ್ತದ ಮೂಲಕ ಎಂಎಸ್ ಬಿಲ್ಡಿಂಗ್ ಒಳಭಾಗದಿಂದ ಪ್ರವೇಶಿಸಿ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆಯಲ್ಲಿ ಎಡಕ್ಕೆ ತಿರುವು ಪಡೆದುಕೊಂಡು ಸಂಚರಿಸಬಹುದು.

ಚಾಲುಕ್ಯ ವೃತ್ತದಿಂದ ಬರುವ ವಾಹನಗಳು ಸಿಐಡಿ ಕಚೇರಿ ಮುಂಭಾಗವಾಗಿ ಚಲಿಸಿ ಮಹಾರಾಣಿ ಕಾಲೇಜು, ಅಪ್ಪರ್ ರ್‍ಯಾಂಪ್ ಮಾರ್ಗವಾಗಿ ಎಡಕ್ಕೆ ತಿರುವು ಪಡೆದು ಕೆ.ಆರ್.ವೃತ್ತದಿಂದ ಅಂಬೇಡ್ಕರ್ ವೀದಿ, ಸಿಟಿ ಸಿವಿಲ್ ಕೋರ್ಟ್ ರಸ್ತೆಯನ್ನು ಬಳಕೆ ಮಾಡಬಹುದು.

8ರಂದು ಬೆಳಿಗ್ಗೆ 6ರಿಂದ ರಾತ್ರಿ 7ರ ವರೆಗೆ ಬಿ.ಆರ್.ಅಂಬೇಡ್ಕರ್ ರಸ್ತೆ, ರಾಜಭವನ ರಸ್ತೆ, ಪ್ಯಾಲೆಸ್ ರಸ್ತೆ, ಶೇಷಾದ್ರಿ ರಸ್ತೆಯಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ.

ಕಾರ್ಯಕ್ರಮ ನಡೆಯುವ ದಿನದಿಂದ ಸ್ಪೌಟ್ಸ್ ಮತ್ತು ಗೈಡ್ಸ್ ಪಾರ್ಕಿಂಗ್ ಸ್ಥಳ, ಜ್ಞಾನ ಜ್ಯೋತಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯ ಪಾರ್ಕಿಂಗ್ ಸ್ಥಳ, ಸೆಂಟ್ರಲ್ ಕಾಲೇಜು, ಸ್ವಾತಂತ್ರ್ಯ ಉದ್ಯಾನ, ಅರಮನೆ ಮೈದಾನ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ಕಬೀರ್ ಬೇಡಿ ಆತ್ಮಕಥೆ ನಿರ್ಬಂಧ ಕೋರಿಕೆ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ಕಬೀರ್ ಬೇಡಿಯ ಆತ್ಮಕಥನದಲ್ಲಿ ನನ್ನ ವಿರುದ್ಧ ಅವಹೇಳನಕಾರಿ ಹೇಳಿಕೆಗಳಿದ್ದು, ಕೃತಿಯ ಪ್ರಕಟಣೆ ಮತ್ತು ಮಾರಾಟಕ್ಕೆ ನಿರ್ಬಂಧ ವಿಧಿಸಬೇಕು' ಎಂದು ಕೋರಿ, ಕಬೀರ್ ಬೇಡಿಯ ಅಣ್ಣ ರಂಗ ತ್ರಿಲೋಚನ ಬೇಡಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಕಬೀರ್ ಬೇಡಿ ಅವರ ಆತ್ಮಕಥನ, 'ಸ್ಟೋರೀಸ್ ಐ ಮಸ್ಟ್ ಟೆಲ್; ದಿ ಎಮೋಷನಲ್ ಲೈಫ್ ಆಫ್ ಆ್ಯನ್ ಆ್ಯಕ್ಟರ್'ನ ಪ್ರಕಟಣೆ ನಿರ್ಬಂಧಿಸಲು ನಿರಾಕರಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ತ್ರಿಲೋಚನ ಬೇಡಿ ಸಲ್ಲಿಸಿದ್ದ ಈ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

'ವಿಚಾರಣಾ ನ್ಯಾಯಾಲಯ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿರುವುದಕ್ಕೆ ಸಕಾರಣ ನೀಡಿದೆ. ಹೀಗಾಗಿ, ಮೇಲ್ಮನವಿ ಪರಿಗಣಿಸಲು ಯಾವುದೇ ಆಧಾರಗಳಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ವಿಚಾರಣಾ ನ್ಯಾಯಾಲಯ 2022ರ ಸೆಪ್ಟೆಂಬರ್ 27ರಂದೇ ಆದೇಶ ನೀಡಿದೆ. ಆದರೆ, ಅರ್ಜಿದಾರರು 9 ತಿಂಗಳ ನಂತರ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. 2021ರಲ್ಲಿಯೇ ಪುಸ್ತಕ ಪ್ರಕಟಗೊಂಡು, ಮಾರಾಟವಾಗಿದೆ. ಈ ಹಂತದಲ್ಲಿ ತಡೆ ನೀಡಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

'ಕಬೀರ್ ಬೇಡಿ ತಮ್ಮ ಆತ್ಮಕಥೆ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಲಿ ಎಂದು ಅದರಲ್ಲಿ ಸಾಕಷ್ಟು ಸುಳ್ಳುಗಳಿಂದ ಕೂಡಿದ ಅಂಶಗಳನ್ನು ದಾಖಲಿಸಿದ್ದಾರೆ' ಎಂದು ಆರೋಪಿಸಿದ್ದ ತ್ರಿಲೋಚನ ಬೇಡಿ, 'ನನಗೆ ₹ 1 ಕೋಟಿ ಪರಿಹಾರ ನೀಡಲು ನಿರ್ದೇಶಿಸಬೇಕು' ಎಂದು ಕೋರಿದ್ದರು.

'ವೆಸ್ಟ್ ಲ್ಯಾಂಡ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ' ಈ ಆತ್ಮಕಥೆ ಪುಸ್ತಕವನ್ನು ಹೊರತಂದಿದೆ.

'ಸಿದ್ಧತೆಯಿಲ್ಲದೆ 'ನೆಕ್ಸ್ಟ್' ಜಾರಿ ಸಲ್ಲ'

ನವದೆಹಲಿ (ಪಿಟಿಐ): ಸಮರ್ಪಕವಾದ ಪೂರ್ವ ಸಿದ್ಧತೆ ಇಲ್ಲದೆ 'ರಾಷ್ಟ್ರೀಯ ನಿರ್ಗಮನ ಪರೀಕ್ಷೆ' (ನೆಕ್ಸ್ಟ್) ಅನುಷ್ಠಾನ ಸರಿಯಲ್ಲ ಎಂದು ಭಾರತೀಯ ವೈದ್ಯಕೀಯ ಸಂಘವು (ಐಎಂಎ) ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ) ಪತ್ರ ಬರೆದಿದೆ.

ವೈದ್ಯಕೀಯ ಶಿಕ್ಷಣದ ಕೈಗೆಟುಕುವಿಕೆ ಮತ್ತು ಪ್ರವೇಶಕ್ಕೆ 'ನೆಕ್ಸ್ಟ್' ಅಪಾಯಕಾರಿಯಾಗಿದೆ. ಅಲ್ಲದೆ ಈ ಸಂಬಂಧ ಕೆಲ ನಿಬಂಧನೆಗಳನ್ನು ಮರು ಪರಿಶೀಲಿಸುವ ಅಗತ್ಯವೂ ಇದೆ ಅದು ಪ್ರಸ್ತಾಪಿಸಿದೆ.

ಮೈಸೂರು ರೇಸ್

ಎನ್.ಆರ್.ಐ ಏಸ್ ಗೆಲ್ಲುವ ನಿರೀಕ್ಷೆ

ಮೈಸೂರು ಬುಕ್‌ಮೇಕರ್ಸ್ ಅಸೋಸಿಯೇಶನ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎನ್.ಆರ್.ಐ ಏಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.,

1ನೇ ರೇಸ್: ಸಿಟಿ ಆಫ್ ಹಸ್ಲ್ 1, ಡಿ ಗೋಲ್ಡನ್ ಕಪ್ 6, ಫೆಲಿಸಿಟ 7
2ನೇ ರೇಸ್: ಸುಲ್ತಾನ್ ಸ್ವೋರ್ಡ್ 3, ಎನ್.ಆರ್.ಐ ಸೀಕ್ರೆಟ್ 5, ಡಿ ಥರ್ಟೀನ್ ಟ್ವೆಲ್ವ್ 6
3ನೇ ರೇಸ್: ಸ್ಕ್ವಾಂಟೊ 12, ಸೆನ್ಸೇಷನಲ್ ಟೈಟಲ್ 3, ಕಂಟ್ರೆಸ್ ಮ್ಯಾಜಿಕ್ 6
4ನೇ ರೇಸ್: ಮನಿ ಎಕ್ಸ್‌ಚೇಂಜ್ 7, ಒನ್ ಡೈಮಂಡ್ 8, ವರ್ದಾನ್ 6
5ನೇ ರೇಸ್: ಬ್ರೈಟೆಸ್ಟ್ ಸ್ಟಾರ್ 13, ಮ್ಯಾಜಿಕ್ ಸರ್ಕಲ್ 10, ಸಿಯೋಲ್ 14
6ನೇ ರೇಸ್: ಎನ್.ಆರ್.ಐ ಏಸ್ 6, ಸಿರಾ 9, ಪರ್ಫೆಕ್ಟ್ ಹಾರ್ಟ್ 7
7ನೇ ರೇಸ್: ಗ್ಯಾಮ 5, ಹ್ಯಾವೆಲಾಕ್ ಕ್ರೂಝ್ 2, ಸರ್ ಕ್ಯಾಲ್‌ಕ್ಯುಲಸ್ 9
8ನೇ ರೇಸ್: ಕಾನ್ಫಿಡೆಂಟ್ ಗೇಮ್ 4, ಅತುಲ್ಯ 2, ಐ ಕ್ಯಾನ್ 7

ಉತ್ತಮ ಬೆಟ್: ಬ್ರೈಟೆಸ್ಟ್ ಸ್ಟಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ನಿರ್ದೇಶಕರ ಬೇಡಿಕೆಗೆ 'ಯುವಿಸಿಇ' ಕಂಗಾಲು

• ರಶ್ಮಿ ಬೇಲೂರು

ಬೆಂಗಳೂರು: 'ಸೆಂಚುರಿ ಕ್ಲಬ್ ಸದಸ್ಯತ್ವ, ಓಡಾಟಕ್ಕೆ 'ಬ್ಯುಸಿನೆಸ್ ಕ್ಲಾಸ್' ವಿಮಾನಗಳ ವ್ಯವಸ್ಥೆ ಮಾಡಬೇಕು. ಮನೆ ಕೆಲಸದವರನ್ನು ನೇಮಿಸಬೇಕು...'

–ಇದು ಸ್ವಾಯತ್ತ ವಿಶ್ವವಿದ್ಯಾಲಯವಾದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ನಿರ್ದೇಶಕ ಸ್ಥಾನಕ್ಕೆ ನೇಮಕವಾಗಿರುವ ಬಾಂಬೆ ಐಐಟಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಡಿ. ಮಂಜುನಾಥ್ ಅವರ ಬೇಡಿಕೆಯ ಪಟ್ಟಿ.

ರಾಜ್ಯ ಸರ್ಕಾರ ಮಂಜುನಾಥ್ ಅವರನ್ನು 2023ರ ಮಾರ್ಚ್‌ನಲ್ಲೇ ಯುವಿಸಿಇ ನಿರ್ದೇಶಕರನ್ನಾಗಿ ಆಯ್ಕೆ ಮಾಡಿತ್ತು. ಆದರೆ, ಅವರು ಸ್ಥಾನದ ಜವಾಬ್ದಾರಿ ವಹಿಸಿಕೊಂಡಿರಲಿಲ್ಲ. ಹೆಚ್ಚುವರಿ ಸಮಯ ಕೇಳುತ್ತಲೇ ಬಂದಿದ್ದರು. ಅವರಿಗೆ ನೀಡಿದ್ದ ಸಮಯಾವಕಾಶದಂತೆ ಇದೇ ವರ್ಷದ ಜ.31ಕ್ಕೆ ಅವರು ಅಧಿಕಾರ ಸ್ವೀಕರಿಸಬೇಕಿತ್ತು.

ಈಗ ಯುವಿಸಿಇ ಆಡಳಿತ ಮಂಡಳಿಗೆ ಪತ್ರ ಬರೆದಿರುವ ಅವರು, ಅಧಿಕಾರ ವಹಿಸಿಕೊಳ್ಳಬೇಕಾದರೆ ಸಂಬಳದ ಪ್ಯಾಕೇಜ್ ಜತೆಗೆ ಕೆಲ ಷರತ್ತುಗಳನ್ನೂ ಪೂರೈಸುವಂತೆ, ಅದಕ್ಕೆ ಅಗತ್ಯವಾದ ಭತ್ಯೆ ನಿಗದಿ ಮಾಡುವಂತೆ ಕೋರಿದ್ದಾರೆ. 'ಇಲ್ಲದಿದ್ದರೆ ತಮ್ಮ ಬಳಿ ಇತರೆ ಸರ್ಕಾರಿ ಸಂಸ್ಥೆಗಳಿಂದ ಆಹ್ವಾನವಿದ್ದು, ಯುವಿಸಿಇ ಜವಾಬ್ದಾರಿ ವಹಿಸಿಕೊಳ್ಳುವ ಕುರಿತು ಪರಿಶೀಲಿಸಬೇಕಾಗುತ್ತದೆ. ಯಾವುದಕ್ಕೂ ಪ್ರತಿಕ್ರಿಯಿಸಿ' ಎಂದಿದ್ದಾರೆ.

'ಮಂಜುನಾಥ್ ಅವರ ಬೇಡಿಕೆ ಸಹಜವಾಗಿಯೇ ಇವೆ. ಐಐಟಿಯಲ್ಲಿ ಕೆಲಸ ಮಾಡಿದ ಅನುಭವವಿದೆ. ಅವರನ್ನು ತೆಗೆದುಕೊಂಡರೆ ಎಂಜಿನಿಯರಿಂಗ್ ಕಾಲೇಜನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಅವಕಾಶವಾಗಲಿದೆ. ಆದರೆ, ಕೆಲವು ಬೇಡಿಕೆ ಈಡೇರಿಕೆಗೆ ಸರ್ಕಾರದ ಅನುಮತಿ ಅಗತ್ಯವಿದೆ. ಒಂದು ವೇಳೆ ಬೇಡಿಕೆಗೆ ಅನುಮತಿ ದೊರೆತರೆ ಸಂಸ್ಥೆಯ ಇತರರ ಬೇಡಿಕೆಗಳನ್ನೂ ಪರಿಶೀಲಿಸಬೇಕಾಗುತ್ತದೆ' ಎನ್ನುತ್ತಾರೆ ಯುವಿಸಿಇ ಆಡಳಿತ ಮಂಡಳಿ ಅಧ್ಯಕ್ಷ ಬಿ. ಮುತ್ತುರಾಮನ್.

'ನಿರ್ದೇಶಕರ ಹುದ್ದೆ ಒಂದು ವರ್ಷದಿಂದ ಖಾಲಿ ಇದೆ. ಪ್ರಗತಿಯ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಲ್ಲ. ಇವನ್ನೆಲ್ಲ ಸರ್ಕಾರ ಹೇಗೆ ಸಹಿಸಿಕೊಳ್ಳುತ್ತಿದೆ? ಒಂದು ಸಂಸ್ಥೆ ಒಬ್ಬ ವ್ಯಕ್ತಿಗಾಗಿ ಹೀಗೆ ಕಾಯುತ್ತಿರುವುದು ಕರ್ನಾಟಕದ ಉನ್ನತ ಶಿಕ್ಷಣದ ಇತಿಹಾಸದಲ್ಲಿ ಇದೇ ಮೊದಲು. ಆ ಮೂಲಕ ಅವರು ವಿಶ್ವೇಶ್ವರಯ್ಯ ಅವರನ್ನೂ ಅವಮಾನಿಸಿದ್ದಾರೆ' ಎಂದು ಯುವಿಸಿಇ ನಿವೃತ್ತ ಪ್ರಾಂಶುಪಾಲ ಕೆ.ರಂಗ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕಿಲಿಮಂಜಾರೊ ಶಿಖರ ಏರಿದ ನಗರದ ಯುವಕ

ಪ್ರಜಾವಾಣಿ ವಾರ್ತೆ

ಗೌತಮ್ ಪುಟ್ಟಮಾದಯ್ಯ

ಬೆಂಗಳೂರು: ನಗರದ ಏಜೀಸ್ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗೌತಮ್ ಪುಟ್ಟಮಾದಯ್ಯ ಅವರು ಇತ್ತೀಚೆಗೆ ಆಫ್ರಿಕಾ ಖಂಡದ ಅತಿ ಎತ್ತರದ ಪರ್ವತ ಕಿಲಿಮಂಜಾರೊ ಆರೋಹಣ ಮಾಡಿದ್ದಾರೆ. ದೇಶದ ಗಣರಾಜ್ಯೋತ್ಸವದ ಅಂಗವಾಗಿ ಈ ಸಾಹಸ ಕೈಗೊಂಡಿದ್ದಾಗಿ ಅವರು ತಿಳಿಸಿದ್ದಾರೆ.

ಪರ್ವತಾರೋಹಿಗಳ ಪಾಲಿಗೆ ನೆಚ್ಚಿನ ತಾಣವಾದ, ತಾಂಜಾನಿಯಾ ದೇಶದಲ್ಲಿರುವ ಕಿಲಿಮಂಜಾರೊ ಪರ್ವತ 19,340 ಅಡಿ (5,895 ಮೀ.) ಎತ್ತರ ಹೊಂದಿದೆ. ಇದು ವಿಶ್ವದ ಅತಿ ಎತ್ತರದ ಸ್ವತಂತ್ರ ಪರ್ವತ ಸಹ. ಮೂಲತಃ ಮಳವಳ್ಳಿಯವರಾದ 39 ವರ್ಷದ ಪುಟ್ಟಮಾದಯ್ಯ ಜನವರಿ 25ರಂದು ಬೆಳಗಿನ ಜಾವ ಪರ್ವತದ ಶಿಖರ ತಲುಪಿದ್ದಾರೆ. ಈ ಪರ್ವತ ಮೂರು ಶಿಖರಗಳನ್ನು ಒಳಗೊಂಡಿದ್ದು, ಅವರು ಕಿಬೊ ಶಿಖರದ ತುತ್ತತುದಿ 'ಉಹುರು'ವನ್ನು ತಲುಪಿದ್ದಾರೆ.

'ಚಾರಣಕ್ಕೆ ಸಂಬಂಧಿಸಿ ನಾನು ಯಾವುದೇ ಕಠಿಣ ತರಬೇತಿ ಪಡೆದಿಲ್ಲ. ನಿತ್ಯ ಬೆಳಿಗ್ಗೆ ಮತ್ತು ಸಂಜೆ ಒಟ್ಟು 10 ರಿಂದ 12 ಕಿ.ಮೀ. ನಡಿಗೆ ತಮ್ಮ ದಿನಚರಿ. ಜೊತೆಗೆ ಬೆಂಗಳೂರು ಸುತ್ತಮುತ್ತಲ ಪ್ರದೇಶದಲ್ಲಿ ಟ್ರೆಕಿಂಗ್‌ನಲ್ಲಿ ಭಾಗವಹಿಸಿದ ಅನುಭವ ಅಷ್ಟೇ ತಮಗೆ ಇತ್ತು' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಐಎ': ಹಲವು ವರ್ಷಗಳ ಬೇಡಿಕೆ ಈಡೇರಿಸಿದ ರಾಜ್ಯ ಸರ್ಕಾರ

ಇಂದಿರಾ ಕ್ಯಾಂಟೀನ್ ಶೀಘ್ರ ಕಾರ್ಯಾರಂಭ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎರಡು ಇಂದಿರಾ ಕ್ಯಾಂಟೀನ್‌ಗಳು ಕಾರ್ಯಾರಂಭ ಮಾಡಲಿವೆ.

ವಿಮಾನ ನಿಲ್ದಾಣದಲ್ಲಿ ಇಂದಿರಾ ಕ್ಯಾಂಟೀನ್ ತೆರೆಯಬೇಕು ಎಂಬ ಬೇಡಿಕೆ ಹಲವು ವರ್ಷಗಳಿಂದ ಇತ್ತು. ಇದಕ್ಕೆ ಸ್ಪಂದಿಸಿದ್ದ ರಾಜ್ಯ ಸರ್ಕಾರ ಕ್ಯಾಂಟೀನ್ ಸ್ಥಾಪಿಸುವುದಾಗಿ ಹೇಳಿತ್ತು. ಇದೀಗ, ವಿಮಾನ ನಿಲ್ದಾಣದ 'ಪಾರ್ಕಿಂಗ್ 7'ರ ಆವರಣದಲ್ಲಿ ಬಿಬಿಎಂಪಿ ವತಿಯಿಂದ 'ಇಂದಿರಾ ಕ್ಯಾಂಟೀನ್' ನಿರ್ಮಿಸಲಾಗುತ್ತಿದ್ದು, ಇದು ಮುಂದಿನ ವಾರದಿಂದ ಕಾರ್ಯಾರಂಭ ಮಾಡಲಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿ ನಿರ್ಮಾಣವಾಗುತ್ತಿರುವ ಇಂದಿರಾ ಕ್ಯಾಂಟೀನ್ ಕಟ್ಟಡ

'ವಿಮಾನ ನಿಲ್ದಾಣದಲ್ಲಿ ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಾಣ ಅಂತಿಮ ಹಂತದಲ್ಲಿದ್ದು, ಮೂರ್ನಾಲ್ಕು ದಿನದಲ್ಲಿ ಪೂರ್ಣಗೊಳ್ಳಲಿದೆ. ಮತ್ತೊಂದು ಇಂದಿರಾ ಕ್ಯಾಂಟೀನ್‌ಗೆ ಅಡುಗೆಮನೆ ಸ್ಥಾಪಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಅದು ತಿಂಗಳ ಅಂತ್ಯಕ್ಕೆ ಪೂರ್ಣಗೊಳ್ಳುತ್ತದೆ. ಆದರೆ, ಮುಂದಿನ ವಾರದಿಂದಲೇ ಯಲಹಂಕ ವಲಯದ ವತಿಯಿಂದ ಆಹಾರ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಅವರು ತಿಳಿಸಿದರು.

ಹೊಸ ಮೆನು ವಿಳಂಬ: 'ಇಂದಿರಾ ಕ್ಯಾಂಟೀನ್‌ನಲ್ಲಿ 'ಹೊಸ ಮೆನು'ವಿನಲ್ಲಿ ಆಹಾರ ಒದಗಿಸಲು ನಿರ್ಧರಿಸಲಾಗಿತ್ತು. ಕ್ಯಾಂಟೀನ್‌ಗಳ ನಿರ್ವಹಣೆಗೆ ಹೊಸ ಟೆಂಡರ್ ಕರೆಯಲಾಗಿದ್ದು, ಕೆಲವು ತಾಂತ್ರಿಕ ಕಾರಣಗಳಿಂದ ಗುತ್ತಿಗೆ ಅಂತಿಮಗೊಳಿಸಲು ವಿಳಂಬವಾಯಿತು' ಎಂದು ವಿಕಾಸ್ ಹೇಳಿದರು.

'ಹೊಸ ಟೆಂಡರ್ ಗುತ್ತಿಗೆ ಪ್ರಕ್ರಿಯೆ ಇದೀಗ ಪೂರ್ಣಗೊಂಡಿದ್ದು, ಸರ್ಕಾರದ ಅನುಮೋದನೆಗೆ ಕಳುಹಿಸಲಾಗುತ್ತಿದೆ. ಸರ್ಕಾರದ ಒಪ್ಪಿಗೆ ದೊರೆತ ಮೇಲೆ ನಿರ್ವಹಣೆ ಜೊತೆಗೆ ಹೊಸ ಮೆನು ಕೂಡ ಜಾರಿಯಾಗಲಿದೆ' ಎಂದು ಮಾಹಿತಿ ನೀಡಿದರು.

'ಹಿಂದಿನ ಗುತ್ತಿಗೆದಾರರಿಂದಲೇ 169 ಇಂದಿರಾ ಕ್ಯಾಂಟೀನ್‌ಗಳು ಇದೀಗ ಚಾಲನೆಯಲ್ಲಿವೆ. ಹೊಸದಾಗಿ 50 ಇಂದಿರಾ ಕ್ಯಾಂಟೀನ್ ನಿರ್ಮಿಸಲು ಯೋಜಿಸಲಾಗಿದ್ದು, ಅದಕ್ಕೆ ಸರ್ಕಾರದಿಂದ ಅನುಮೋದನೆ ಇನ್ನೂ ಸಿಕ್ಕಿಲ್ಲ' ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS
Business Offers
Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL
Change of Name

CHANGE OF NAME
I, SIRAJUNNKISA Alias SHAHEEN BEGUM, R/at Musiab Apartment, Kanika School Road, Veerasagara, Maralur PO, Tumkuru Dist. have changed my name to SHAHEENA BEGUM vide affidavit dt:18-01-2024, before Notary Shafiq Ahamed, Tumakuru. Henceforth I shall be called SHAHEENA BEGUM only.

CHANGE OF NAME
I, PADMA PRIYA, R/at Flat No. 11/T-08, Suraj Enclave, 36th A Cross, 4th T Block, Jayanagar, Bengaluru-560041, have changed my name to PRIYA J NAIDU vide affidavit dated 02-02-2024, before Notary D K Rameshappa, Bengaluru Henceforth I shall be called PRIYA J NAIDU only.

I,RADHA BAI Spouse of No. 2548263 Rank: Ex-Sep, Name: P. THYAGARAJ Residing at #10/E, 4th Cross, Marappa Thotta, J.C.Nagar, Bengaluru- 560006 Have Changed My Name From RADHA BAI to T. RADHA BAI and My Correct Date of Birth is 05.07.1948 Vide affidavit dated 23.01.2024 Before Notary Guna Shekar, Bangalore

I, MOHAMMED MOHIDDIN S/o. Late Khaja Mohammed Queedbuddin R/at No.5, 2nd cross, Chunna Lane, Hidayath Nagar, K.G. Halli, Bangalore- 560045 have changed my name from Mohamed Mueenuddin to MOHAMMED MOHIDDIN vide affidavit 31/01/2024 before notary Kundan Babu, Bengaluru.

PUBLIC NOTICE

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀ ಕೆ.ವಿ.ಜಯಪ್ರಕಾಶ್ ಮತ್ತು ಸತೀಶ್ ಬಾಬು ಜೆ ರವರುಗಳು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಯನ್ನು ಖರೀದಿಸುವ ಸಲುವಾಗಿ ಇದರ ಮಾಲೀಕರಾದ ಬೆಂಗಳೂರು–560029, ತಾವರೆಕೆರೆ, ಫೋರಂ ಮಾಲ್ ನಂತರ, ಹೊಸೂರು ರಸ್ತೆ, ನಂ. 20 ರಲ್ಲಿರುವ ಅಥೆನ್ಸ್–1 ರಲ್ಲಿರುವ ಫ್ಲಾಟ್ ನಂ. 001 ರಲ್ಲಿ ವಾಸವಾಗಿರುವ ದಿವಂಗತ ಡಾ॥ ರಮಾನಂದ ಹೆಗ್ಡೆ ರವರ ಧರ್ಮಪತ್ನಿಯಾದ ಶ್ರೀಮತಿ ಸುಮಿ ಹೆಗ್ಡೆ ಉರುಫ್ ಸುಮತಿ ಹೆಗ್ಡೆ ಹಾಗೂ ಪರಸ್ಪರ ಒಡಂಬಡಿಕೆದಾರರಾದ ಬೆಂಗಳೂರು–560102, ಹೆಚ್.ಎಸ್.ಆರ್ ಬಡಾವಣೆ 3ನೇ ಸೆಕ್ಟರ್, 18ನೇ ಅಡ್ಡರಸ್ತೆ, 3ನೇ ಮಹಡಿಯಲ್ಲಿರುವ ಕಛೇರಿಯ ವಿಳಾಸ ನಂ. 1090ಟ, **ಮೆ॥ ಸೆಂಟಿಯೆಂಟ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್,** ಹಾಲಿ **ಮೆ॥ ಹೆವಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್,** ಇದರ ಪರವಾಗಿ ವ್ಯವಸ್ಥಾಪಕ ನಿರ್ದೇಶಕರು ಇವರುಗಳ ಕಡೆಯಿಂದ ದಿನಾಂಕ 02–12–2023 ರಂದು ಬೆಂಗಳೂರು, ಇಂದಿರಾನಗರ ಉಪನೊಂದಣಾಧಿಕಾರಿಯವರ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ್ ಐಎನ್‌ಆರ್–1–11835–2023–24 ಆಗಿ ಕೇಂದ್ರಿತ ದತ್ತಾಂಶ ಕೋಶದಲ್ಲಿ ಶೇಖರಣೆಯಾಗಿ ನೋಂದಣಿಯಾಗಿರುವ ಸ್ವಾಧೀನರಹಿತ ಕರಾರುಪತ್ರವನ್ನು ಮಾಡಿಕೊಂಡಿರುತ್ತಾರೆ ಹಾಗು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮಾಲೀಕರಿಗೆ ಎಲ್ಲಾ ರೀತಿಯ ಮಾಲಿಕತ್ವ, ಇತರೆ ವಗೈರೆ ಹಕ್ಕುಗಳು ಇರುತ್ತವೆ ಹಾಗು ಪರಭಾರೆ ಮಾಡಲು ತಮಗೆ ಎಲ್ಲಾ ಹಕ್ಕುಗಳು ಇವೆಯೆಂದು ತಿಳಿಸಿರುತ್ತಾರೆ. ಮತ್ತು ಯಾವುದೇ ತರಹದ ಕ್ರಯದ ಕರಾರು ಪತ್ರ, ಅಡಮಾನ, ಅಪ್ರಾಪ್ತ ಹಿತಾಸಕ್ತಿಗಳು, ಪೂರ್ವ ಕ್ರಯದ ಹಕ್ಕು, ಸ್ವಾಧೀನ ಪ್ರಕ್ರಿಯೆಗಳು ಮತ್ತು ಯಾವುದೇ ಸ್ವಾಧೀನ ಪ್ರಕ್ರಿಯೆಗಳಿಂದ, ಯಾವುದೇ ದಾವೆ / ವ್ಯಾಜ್ಯ ಹಾಗೂ ನಿರ್ಬಂಧಾಜ್ಞೆಗಳಿಂದ ಮುಕ್ತವಾಗಿವೆಯೆಂತಲೂ ಹೇಳಿಕೊಳ್ಳುತ್ತಿದ್ದಾರೆ ಹಾಗು ಷೆಡ್ಯೂಲ್ ಸ್ವತ್ತಿನ ಪರಸ್ಪರ ಒಡಂಬಡಿಕೆದಾರರೊಂದಿಗೆ ಸೇರಿಕೊಂಡು ಸ್ವತ್ತನು ಮಾರಾಟ ಮಾಡುವ ಸಲುವಾಗಿ ಮೇಲ್ಕಂಡ ಕ್ರಯದ ಕರಾರು ಪತ್ರವನ್ನು ನೋಂದಣಿ ಮಾಡಿಕೊಟ್ಟಿರುತ್ತೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ.

ಆದ್ದರಿಂದ ಉದ್ದೇಶಿತ ಕ್ರಯದ ಸ್ವಾಧೀನರಹಿತ ಕರಾರು ಪತ್ರವನ್ನು ಹಾಗೂ ಖರೀದಿಯನ್ನು ವಿರೋಧಿಸುವ ಅಥವಾ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಆಸಕ್ತಿ ಮತ್ತು ಹಕ್ಕು ಹೊಂದಿರುವ ವ್ಯಕ್ತಿ ಅಥವಾ ಸಂಸ್ಥೆ ತಮ್ಮ ಸಮಂಜಸವಾದ ಅಥವಾ ಸಮರ್ಥನೀಯವಾದ ತಮ್ಮ ಅಸ್ತಿತ್ವದಲ್ಲಿರುವ ಯಾವುದೇ ಹಕ್ಕು, ಸ್ವಾಮ್ಯತೆ, ಹಿತಾಸಕ್ತಿ, ಆಧಾರ ಅಥವಾ ಕ್ಲೇಮ್‌ಗಳನ್ನು ಹೊಂದಿದಲ್ಲಿ ಅಥವಾ ಶ್ರೀಮತಿ ಸುಮಿ ಹೆಗ್ಡೆ ಉರುಫ್ ಸುಮತಿ ಹೆಗ್ಡೆ ಮತ್ತು ಮಾಲೀಕರಿಂದ ಪರಸ್ಪರ ಒಡಂಬಡಿಕೆದಾರರಾದ ಮೆ॥ ಸೆಂಟಿಯೆಂಟ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್, ಹಾಲಿ ಹೆವಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್, ಇವರುಗಳಿಂದ ನಮ್ಮ ಕಕ್ಷಿದಾರರಿಗೆ ಉದ್ದೇಶಿತ ಕ್ರಯದ ಕರಾರು ಪತ್ರ ಹಾಗೂ ಖರೀದಿಯ ಸಂಬಂಧ ಯಾವುದೇ ಸಮಂಜಸ / ಸಮರ್ಥನೀಯವಾದ ತಕರಾರುಗಳಿದ್ದಲ್ಲಿ ಅಥವಾ ಅಹವಾಲುಗಳಿದ್ದಲ್ಲಿ ಅಂತಹ ವ್ಯಕ್ತಿ ಅಥವಾ ಸಂಸ್ಥೆ ಸಮರ್ಥನೀಯ ದಾಖಲೆಗಳೊಂದಿಗೆ ತಮ್ಮ ತಕರಾರು / ಕ್ಲೇಮ್‌ಗಳನ್ನು ಲಿಖಿತವಾಗಿ ಈ ಕೆಳಗೆ ಸಹಿಮಾಡಿರುವವರಿಗೆ ಈ ಸೂಚನೆ ಪ್ರಕಟಣೆಯಾದ 21 (ಇಪ್ಪತ್ತೊಂದು) ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ನಿಗದಿತ ಅವಧಿಯೊಳಗೆ ಉದ್ದೇಶಿತ ಕ್ರಯದ ಕರಾರು ಪತ್ರ ಹಾಗೂ ಖರೀದಿಗೆ ಸಂಬಂಧಿಸಿದಂತೆ ಯಾವುದೇ ತಕರಾರುಗಳು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಯಾರಿಂದಲೂ ಯಾವುದೇ ರೀತಿ ಆಕ್ಷೇಪಣೆಗಳು, ಹಕ್ಕುಗಳು ಹಾಗೂ ಕ್ಲೇಮ್‌ಗಳು ಇರುವುದಿಲ್ಲವೆಂಬ ರೀತಿಯಲ್ಲಿ ತಿಳಿದು ಕ್ರಯದ ಕರಾರು ಪತ್ರದಂತೆ ಶುದ್ಧ ಕ್ರಯಪತ್ರ ಹಾಗೂ ಅದರ ನೋಂದಣಿ ಕ್ರಮಗಳನ್ನು ಕೈಗೊಳ್ಳಲು ಮುಂದಾಗುವರು.

ಷೆಡ್ಯೂಲು ಸ್ವತ್ತಿನ ವಿವರ

ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ಹಾಲಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕಸವನಹಳ್ಳಿ ಗ್ರಾಮದ ಸರ್ವೆ ನಂ. 46 (46ಪಿ)ರ ಪೈಕಿ ದಿನಾಂಕ 23–05–1995 ರಂದು ವಾಸದ ಉದ್ದೇಶಕ್ಕಾಗಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ರವರು ನೀಡಿರುವ ಅಧಿಕೃತ ಜ್ಞಾಪನಾ ಸಂಖ್ಯೆ ಬಿಡಿಎಸ್.ಎಎಲ್‌ಎನ್.ಎಸ್‌ಆರ್(ಎಸ್‌ಎ)156/94–95 ರ ಆದೇಶದಂತೆ ಭೂ ಪರಿವರ್ತನೆಯಾಗಿರುವ ಜಮೀನಿನ ಪೈಕಿ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.150–ಬೆಳ್ಳಂದೂರು, ಕಸವನಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಶುಭ ಎನ್‌ಕ್ಲೇವ್ ಬಡಾವಣೆ, ಹಾಲಿ ಬಿಬಿಎಂಪಿ ಖಾತಾ ನಂ. 3037/2871/5, 6, 11, 12, ಖಾಲಿ ನಿವೇಶನಗಳ ಸಂಖ್ಯೆ 5,6,11 & 12 ಗಳ ನಿವೇಶನಗಳ ಸ್ವತ್ತಿಗೆ ಸಂಬಂಧಿಸಿದಂತೆ ಚಕ್ಕುಬಂಧಿ. **ಪೂರ್ವಕ್ಕೆ:** ನಿವೇಶನಗಳ ಸಂಖ್ಯೆ 7 & 10; **ಪಶ್ಚಿಮಕ್ಕೆ :** ನಿವೇಶನಗಳ ಸಂಖ್ಯೆ 4 & 13; **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ರಸ್ತೆ.
ಈ ಮಧ್ಯೆ ಇರುವ ಪೂರ್ವ–ಪಶ್ಚಿಮ 160–0 ಅಡಿ ಮತ್ತು ಉತ್ತರ–ದಕ್ಷಿಣ 240–0 ಅಡಿಗಳ ಒಟ್ಟು ವಿಸ್ತೀರ್ಣ 38400 ಚದರ ಅಡಿವುಳ್ಳ ಖಾಲಿ ನಿವೇಶನಗಳ ಸ್ವತ್ತು.

ಸಹಿ/– ವಿ.ಎಸ್. ರುದ್ರೇಶ್ ಮತ್ತು ಎಂ.ಎಂ.ರುದ್ರೇಶ್
ಆರ್ & ಆರ್ ಅಸೋಸಿಯೇಟ್ಸ್, ವಕೀಲರು,
ನಂ. 90/1, ಮೊದಲನೇ ಮಹಡಿ, 5ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003. ಮೊ: 9880435398
ದಿನಾಂಕ: 07–02–2024 ಸ್ಥಳ: ಬೆಂಗಳೂರು

EDUCATIONAL
Special Courses

DIPLOMA IN Life Skills & Emotional Intelligence 6 months, ONLINE, Starts 15 Feb. For parents teachers, counsellors. Become a Life Skills&EI coach. WhatsApp 9886044221 www.darwinpsychologycentre.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

CONNECT

ಸುತ್ತೂರು ಜಾತ್ರಾ ಮಹೋತ್ಸವ: ವೈವಾಹಿಕ ಜೀವನಕ್ಕೆ 118 ಜೋಡಿಗಳು

ಕೈ ಹಿಡಿದ 10 ಅಂತರ್ಜಾತಿ ಜೋಡಿ

ಪ್ರಜಾವಾಣಿ ವಾರ್ತೆ

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಸುತ್ತೂರಿನಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಪ್ರಯುಕ್ತ ಬುಧವಾರ ಆಯೋಜಿಸಿದ್ದ ಸಾಮೂಹಿಕ ವಿವಾಹದಲ್ಲಿ ಸತಿಪತಿಗಳಾದ 118 ಜೋಡಿ

ಮೈಸೂರು: ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಬುಧವಾರ ಆಯೋಜಿಸಿದ್ದ ಸಾಮಾಹಿಕ ವಿವಾಹದಲ್ಲಿ 10 ಅಂತರ್ಜಾತಿ ಜೋಡಿ ಕೈ ಹಿಡಿದು ಸಾಮರಸ್ಯ ಸಾರಿದವು.

4 ಲಿಂಗಾಯತ, 61 ಪರಿಶಿಷ್ಟ ಜಾತಿ, 26 ಪರಿಶಿಷ್ಟ ಪಂಗಡ, 18 ಹಿಂದುಳಿದ ವರ್ಗದ ಜೋಡಿಗಳಿದ್ದವು. 4 ಅಂಗವಿಕಲ, ಒಂದು ಮರು ಮದುವೆ ಸೇರಿ 118 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು. ತಮಿಳುನಾಡಿನ 23 ಜೋಡಿಗಳು ಬಂದಿದ್ದವು.

ಕಣ್ಣಲು ತುಂಬಿದವು: ವಧು–ವರರ ಪೋಷಕರೂ ಮದುವೆ ನೋಡಲು ಬಂದಿದ್ದರು. ಬೆಳಿಗ್ಗೆ 11.52ಕ್ಕೆ ಮದುವೆ ಯಾಗುತ್ತಿದ್ದಂತೆಜೋಡಿಗಳ ಕಣ್ಣಲು ತುಂಬಿ ಬಂದವು.

ಮೈಸೂರಿನ ಇಲವಾಲದ ಪರಿಶಿಷ್ಟ ಜಾತಿ ಸಮುದಾಯದ ರಾಧಿಕಾ, ಮಳವಳ್ಳಿ ತಾಲ್ಲೂಕಿನ ವಡ್ಡರ ಕಾಲೊನಿಯ ಯಳವ ಸಮುದಾಯದ ಮನು ಕುಮಾರ್, ಚಿಕ್ಕಮಗಳೂರಿನ ಕಡೂರು ಕೋಟೆಯ ಒಕ್ಕಲಿಗ ಸಮುದಾಯದ ಬಿ.ಸಿ. ಲಾವಣ್ಯ ಅವರು ನಂಜನಗೂಡು ತಾಲ್ಲೂಕಿನ ಬಿಳುಗಲಿ ಗ್ರಾಮದ ಉಪ್ಪಾರ ಸಮುದಾಯದ ಎಸ್.ಮಹದೇವಸ್ವಾಮಿ ಅವರನ್ನು ಕೈ ಹಿಡಿದರು.

ಚಾಮರಾಜನಗರ ತಾಲ್ಲೂಕಿನ ಮೂಡಲ ಅಗ್ರಹಾರದ ಅಂಗವಿಕಲೆ ಬಿ.ಮೇಘಾ, ಬಸವರಾಜಪ್ಪ ಸತಿಪತಿಗಳಾದರು. ವ್ಹೀಲ್‌ಚೇರ್‌ನಲ್ಲಿ ಮೇಘಾ ಅವರನ್ನು ಕರೆತಂದ ಬಸವರಾಜಪ್ಪ ಆದರ್ಶ ಜೋಡಿಯೆಂದು ಸಾರಿದರು.

ಶ್ರೀರಂಗಪಟ್ಟಣತಾಲ್ಲೂಕಿನಪಿ.ಹೊಸಹಳ್ಳಿಯ ಎಂ.ಸೌಮ್ಯ, ಮೈಸೂರಿನ ತಿಲಕ್ ನಗರದ ರಾಜು ವಾಕ್ ಮತ್ತು ಶ್ರವಣ ಸಮಸ್ಯೆ ಎದುರಿಸುತ್ತಿದ್ದು, ಒಬ್ಬರಿಗೊಬ್ಬರು ಆಸರೆಯಾಗಿದ್ದಾರೆ. ವಿವಾಹದಲ್ಲಿ ಒಂದು ಮರು ಮದುವೆಯಿದ್ದದ್ದೂ ವಿಶೇಷ. ನಂಜನಗೂಡು ತಾಲ್ಲೂಕಿನ ಆಕಳ ಗ್ರಾಮದ ಸತೀಶ, ಕುರಿಹುಂಡಿಯ ವಿ. ಗೀತಾ ಅವರನ್ನು ವರಿಸಿದರು.

ಮಠದ ವತಿಯಿಂದ ವರನಿಗೆ ಪಂಚೆ, ಶರ್ಟ್ ಹಾಗೂ ವಲ್ಲಿ, ವಧುವಿಗೆ ಸೀರೆ, ರವಿಕೆ, 2.6 ಗ್ರಾಂನ ಚಿನ್ನದ ಮಾಂಗಲ್ಯ, ಕಾಲುಂಗುರ ನೀಡಲಾಯಿತು. ಎಲ್ಲರನ್ನೂ ಶಿವರಾತ್ರೀಶ್ವರ ಶಿವಯೋಗಿಗಳ ಗದ್ದುಗೆಯಿಂದ ಮದುವೆ ಮಂಟಪದವರೆಗೆ ಡೊಳ್ಳು, ಪೂಜಾ ಕುಣಿತ, ಮಂಗಳವಾದ್ಯ ಸೇರಿ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಕರೆತರಲಾಯಿತು.

ವಿದ್ವಾನ್ ಮಲ್ಲಣ್ಣ ಮದುವೆ ಶಾಸ್ತ್ರ ನೆರವೇರಿಸಿದರು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ಸ್ವಾಮಿ ಗುರುರತ್ನಂ ಜ್ಞಾನ ತಪಸ್ವಿ, ರಾಜಶೇಖರ ಶಿವಾಚಾರ್ಯ, ಚನ್ನಬಸವ ಸ್ವಾಮೀಜಿ, ಶಿವಲಿಂಗೇಂದ್ರ ಸ್ವಾಮೀಜಿ ಆಶೀರ್ವದಿಸಿದರು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜೈನ ಸಮ್ಮೇಳನ: ಭವ್ಯ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ ತಾಲ್ಲೂಕಿನ ಶಮನೇವಾಡಿಯಲ್ಲಿ ಬುಧವಾರ ಆರಂಭವಾದ ರಾಷ್ಟ್ರಸಂತ ಆಚಾರ್ಯ ಗುಣಧರನಂದಿ ಮಹಾರಾಜ ಅವರ 33ನೇ ದೀಕ್ಷಾ ಜಯಂತಿ ಕಾರ್ಯಕ್ರಮದಲ್ಲಿ ಮಹಿಳೆಯರು ಜೈಕಾರ ಹಾಕಿದರು

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ರಾಷ್ಟ್ರಸಂತ, ಆಚಾರ್ಯ ಗುಣಧರನಂದಿ ಮಹಾರಾಜ ಅವರ 33ನೇ ದೀಕ್ಷಾ ಜಯಂತಿ ಪ್ರಯುಕ್ತ ಎರಡು ದಿನಗಳ ಜೈನ ಸಮ್ಮೇಳನದ ಭಾಗವಾಗಿ ತಾಲ್ಲೂಕಿನ ಶಮನೇವಾಡಿ ಗ್ರಾಮದಲ್ಲಿ ಬುಧವಾರ 'ಮಂಗಲ ಮಹಾಕಲಶ'ದ ಭವ್ಯ ಮೆರವಣಿಗೆ ನೆರವೇರಿತು. ಜಿಲ್ಲೆ ಮತ್ತು ಮಹಾರಾಷ್ಟ್ರದಿಂದ ಬಂದ ಅಪಾರ ಸಂಖ್ಯೆಯ ಜನ ಇದಕ್ಕೆ ಸಾಕ್ಷಿಯಾದರು.

ಚಂದ್ರಪ್ರಭು ದಿಗಂಬರ ಜೈನ ಮಂದಿರದಿಂದ ಕಲಶ ಹೊತ್ತು ಮಹಿಳೆಯರು ಪ್ರಮುಖ ಬೀದಿಗಳಲ್ಲಿ ಸಾಗಿದರು. ಆನೆ, ಕುದುರೆ ಸಾರೋಟು, ವಿವಿಧ ವಾದ್ಯವೃಂದಗಳ ತಂಡಗಳೂ ಮೇಳೈಸಿದವು.

ಇದಕ್ಕೂ ಮೊದಲು ಚಂದ್ರಪ್ರಭು ದಿಗಂಬರ ಜೈನ ಮಂದಿರದಲ್ಲಿ ಗುಣಧರನಂದಿ ಮಹಾರಾಜರ ಸಾನ್ನಿಧ್ಯದಲ್ಲಿ ಜಿನಾಭಿಷೇಕ ನಡೆಯಿತು. ಆರಿಕಾರತ್ನ 105 ಪ್ರಜ್ಞಮತಿ ಮಾತಾಜಿ ಸಾನ್ನಿಧ್ಯದಲ್ಲಿ ಮೃತ್ಯುಂಜಯ ವಿಧಾನ, ಪಂಚಾಮೃತ ಅಭಿಷೇಕ ನಡೆದವು. ನಂತರ ಗುಣಧರನಂದಿ ಮಹಾರಾಜರು ಧರ್ಮೋಪದೇಶ ನೀಡಿದರು.

₹80 ಲಕ್ಷ ವೆಚ್ಚದ ಸಾಧುನಿವಾಸ ಕಟ್ಟಡ ನಿರ್ಮಾಣಕ್ಕೆ ಚಂದ್ರಪ್ರಭು ದಿಗಂಬರ ಜೈನ ಸಮಿತಿಯಿಂದ ಚಾಲನೆ ನೀಡಲಾಯಿತು.

ಮುಖಂಡರಾದ ಕುಮಾರ ಕೋರುಚೆ, ಕುಮಾರ ಮಗದುಮ್, ಆರ್.ಬಿ. ಖೋತ, ಅಣ್ಣಾಸಾಹೇಬ ಖೋತ, ಬಾಬಾಸಾಹೇಬ ಐನಾಪೂರೆ, ಸುದರ್ಶನ ಖೋತ, ಜಿತೇಶ ಖೋತ, ದೀಪಕ ಖೋತ, ರಾಜಕುಮಾರ ಖೋತ, ಸಚಿನ ಖೋತ, ಸೋಮನಖೋತ, ಜೈಕುಮಾರ ಖೋತ ಭಾಗವಹಿಸಿದ್ದರು.

ಸಂಜೆ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಬಾಬಾಸಾಹೇಬ ಹನಮನಾಳೆ ಪ್ರಸಾದ ವ್ಯವಸ್ಥೆ ಮಾಡಿದರು.

ಇಂದಿನಿಂದ ವಾಲ್ಮೀಕಿ ಜಾತ್ರೆ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ನಾಯಕ ಸಮುದಾಯದವರನ್ನು ಸಾಂಸ್ಕೃತಿಕವಾಗಿ ಎಚ್ಚರಿಸುವ ಹಾಗೂ ಸಂಘಟಿಸುವ ದೃಷ್ಟಿಯಿಂದ ಇಲ್ಲಿ ಆಯೋಜಿಸಿರುವ 6ನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಆವರಣ ಸಿದ್ಧಗೊಂಡಿದೆ.

ಗುರುವಾರ ಮತ್ತು ಶುಕ್ರವಾರ ನಡೆಯುವ ಜಾತ್ರೆಗೆ ರಾಜ್ಯದ ವಿವಿಧೆಡೆಯಿಂದ ನಾಯಕ ಸಮುದಾಯದವರು ಲಕ್ಷಾಂತರ ಸಂಖ್ಯೆಯಲ್ಲಿ ಬರುವ ನಿರೀಕ್ಷೆಯಿದೆ.

ಪೀಠಾಧಿಪತಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಫೆ. 8 ರಂದು ಬೆಳಿಗ್ಗೆ 7ಕ್ಕೆ ರಾಜನಹಳ್ಳಿ ಗ್ರಾಮದಿಂದ ಮಠದವರೆಗೆ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಧ್ವಜಾರೋಹಣ ನೆರವೇರಿದ ನಂತರ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವ, ಉದ್ಯೋಗ ಮೇಳ, ಕೃಷಿ ವಸ್ತು ಪ್ರದರ್ಶನ, ಮಹಿಳಾ ಗೋಷ್ಠಿ, ನೌಕರರ ಗೋಷ್ಠಿಗಳು ನಡೆಯಲಿವೆ.

ಫೆ. 9ರಂದು ಬೆಳಿಗ್ಗೆ 9ಕ್ಕೆ 63 ಅಡಿ ಎತ್ತರದ ಭವ್ಯ ತೇರಿನ ರಥೋತ್ಸವ ಜರುಗಲಿದೆ. ನಂತರ ನಡೆಯುವ ಧರ್ಮ ಸಭೆಯಲ್ಲಿ ನಾಡಿನ ವಿವಿಧ ಮಠಾಧೀಶರು ಭಾಗವಹಿಸುವರು. ಮಧ್ಯಾಹ್ನ 12.30ರಿಂದ ನಡೆಯುವ ಜನ ಜಾಗೃತಿ ಜಾತ್ರಾ ಮಹೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು.

ಶ್ರೀ ಜ್ಯೋತಿ ವಿದ್ಯಾಸಂಸ್ಥೆ (ರಿ.)
ತೋವಿನಕೆರೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ–572138.

ಪ್ರೌಢಶಾಲಾ ಶಿಕ್ಷಕರ ಹುದ್ದೆ ಭರ್ತಿಗೆ ಅರ್ಜಿ ಆಹ್ವಾನ

ಈ ಮೇಲ್ಕಂಡ ವಿದ್ಯಾಸಂಸ್ಥೆಯ ವತಿಯಿಂದ ನಡೆಯುತ್ತಿರುವ ಅನುದಾನಿತ ಶ್ರೀ ಜ್ಯೋತಿ ಗ್ರಾಮಾಂತರ ಪ್ರೌಢಶಾಲೆ, ತೋವಿನಕೆರೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ, ಈ ಪ್ರೌಢಶಾಲೆಯಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಉಚ್ಛ ನ್ಯಾಯಾಲಯದ ದಾವೆ ಸಂಖ್ಯೆ: W.P. No. 11667/22 ರ ಆದೇಶದಂತೆ ನೇಮಕಾತಿ ಮಾಡಿಕೊಳ್ಳಲಾಗುವುದು. ಅರ್ಹ ಅಭ್ಯರ್ಥಿಗಳು ಈ ಜಾಹೀರಾತು ಪ್ರಕಟವಾದ 21 ದಿನಗಳ ಒಳಗಾಗಿ ಕಾರ್ಯದರ್ಶಿಯವರ ವಿಳಾಸಕ್ಕೆ ಶೈಕ್ಷಣಿಕ ಎಲ್ಲಾ ಅರ್ಹತಾ ಪತ್ರಗಳೊಂದಿಗೆ ಸಂಸ್ಥೆಯ ಕಾರ್ಯದರ್ಶಿಯವರ ಹೆಸರಿಗೆ 500–00 ರೂ.ಗಳ ಡಿ.ಡಿ. ಸಹಿತ ಅರ್ಜಿ ಸಲ್ಲಿಸುವುದು ಹಾಗೂ ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ, ಮಧುಗಿರಿ ಶೈಕ್ಷಣಿಕ ಜಿಲ್ಲೆ ರವರಿಗೆ ಕಳುಹಿಸಲು ತಿಳಿಸಿದೆ. ಈ ಹುದ್ದೆಯ ಸಾಮಾನ್ಯ ಅಭ್ಯರ್ಥಿಗಳಿಗೆ ಮೀಸಲಿದೆ.

ಕ್ರ.ಸಂ.	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ
1	ಸಹಶಿಕ್ಷಕರು – ಗಣಿತ	01	B.Sc. (PCM), B.Ed

ಸಹಿ/– ಕಾರ್ಯದರ್ಶಿ, ಶ್ರೀ ಜ್ಯೋತಿ, ವಿದ್ಯಾಸಂಸ್ಥೆ (ರಿ.), ತೋವಿನಕೆರೆ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.
ದೂರವಾಣಿ ಸಂಖ್ಯೆ: 080–29753354/56, ಇ–ಮೇಲ್: Karbuildworkerswelfare@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಂಖ್ಯೆ: KBOCWWB/RPL/CR-01/2022-23 ದಿನಾಂಕ : 06–02–2024

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಉದ್ದೇಶಿಸಿರುವ ಬೆಂಗಳೂರು–1, ಬೆಂಗಳೂರು–2, ಹಾಸನ, ಬೆಳಗಾವಿ ಮತ್ತು ಕಲಬುರಗಿ ಪ್ರಾದೇಶಿಕಗಳಲ್ಲಿ ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ಆರ್.ಪಿ.ಎಲ್ ತರಬೇತಿಗೆ ಸಂಬಂಧಿಸಿದಂತೆ ಪೂರ್ವ ಅರ್ಹತೆ ಟೆಂಡರ್‌ಗಳನ್ನು ಅರ್ಹ ಏಜೆನ್ಸಿಗಳಿಂದ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ www.kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 19–02–2024 ರಂದು ಸಂಜೆ 5.00 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ
ಕ.ಕ&ಇ.ನಿ.ಕಾ.ಕ.ಮಂಡಳಿ
DIPR/CP/3460/Zen/2023-24

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ವಿಭಾಗ ಕಾರ್ಯಾಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ –581301.
ದೂರವಾಣಿ: 08382–228935 ಫ್ಯಾಕ್ಸ್: 229735 E-mail: eerdwsd.uk@gmail.com
ನಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಟಿಬಿ–1/ಅಲ್ಪಾವಧಿ ಟೆಂಡರ/JJM/2023–24/2612 ದಿನಾಂಕ: 06/02/2024

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ/ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document KW-4** ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು: (1) RWSSD/2023-24/WS/WORK_INDENT2283/CALL-03 (1) Downloading of document through e-proc portal: **07.02.2024 to 14.02.2024 up to 16.30 Hrs.** (2) Time & date of Pre-Bid Conference: **12.02.2024 Time: 11.30 Hrs.** Venue: O/o. Executive Engineer, Rural Drinking Water & Sanitation Division Po: Habbuwada, Karwar - Uttara Kannada Dist. (3) Last Date & Time for Receipt of Bids: **14.02.2024 Time: 16.30 Hrs.** (4) Date & Time of Technical Bid Opening: **15.02.2024 Time: 17:00 Hrs.** (5) Date & Time of Financial Bid Opening: Will be informed technically qualified bidders after approval of Technical Bid.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಕಾರವಾರ (ಉ. ಕ. ಜಿಲ್ಲೆ).
DIPR/ADK/KSMCA/637/23-24 dt.06.02.2024

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.
ದೂ.ಸಂ: 0821–2424070, E. mail : dudc_mys@yahoo.co.in
ಸಂ: ಮುನಿಸಿ(4)ಅಮೃತ ನಗರೋತ್ಥಾನ(ಮುನಿಸಿಪಾಲಿಟಿ)ಹಂತ–4/ಹುಣಸೂರು/ಸಿ.ಆರ್–46/2022–23 ದಿನಾಂಕ: 05.02.2024

ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು www.kppp.karnataka.gov.in ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.1) **ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ:** ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ ಕಟ್ಟಡ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು DMA/2023-24/OW/Work_Indent14130 **ಟೆಂಡರ್‌ಗಿಟ್ಟ ಮೊತ್ತ:** 387.66 ಇ.ಎಂ.ಡಿ.: 5.82

ಪೂರ್ವಭಾವಿ ಸಭೆ ದಿ: 10.02.2024 ಮಧ್ಯಾಹ್ನ 3.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿ: 20.02.2024 ಸಂಜೆ 5.00 ಗಂಟೆಯೊಳಗೆ. ತಾಂತ್ರಿಕ ಬಿಡ್ ತೆರೆಯುವ ದಿ: 21.02.2024 ಸಂಜೆ 5.15 ಗಂಟೆಗೆ

ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
DIPR/DDMYS/KSMCA/1014/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ:– No: EE/ KNNL/ BCD-5/DVG/PB-2/4701-Bheemsamudra/2329/2023-24 Dtd: 03.02.2024.

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಪತ್ರ ದಲ್ಲಿ ಲೆಕ್ಕಶೀರ್ಷಿಕೆ 4701– ಭೀಮಸಮುದ್ರ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ದ್ವಿಲಕೋಟೆ ಪದ್ಧತಿಯಡಿ ಕೆಪಿಪಿಪಿ–ಪೋರ್ಟ್‌ಲ್ ಮುಖಾಂತರ ಮರುಟೆಂಡರ್‌ನ್ನು ಅಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿಪಿ–ಪೋರ್ಟ್‌ಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿ: 03.02.2024 ರಿಂದ 12.02.2024 ಸಂಜೆ 4.30 ರವರೆಗೆ ಡೌನಲೋಡ್ ವಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತ ಸ್ಪಷ್ಟೀಕರಣಕ್ಕೆ ದಿನಾಂಕ: 09.02.2024 ರಂದು ಸಂಜೆ 5.30 ಘಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 13.02.2024 ರಂದು ಸಂಜೆ 5.00 ಘಂಟೆ ಒಟ್ಟು ಕಾಮಗಾರಿ ಸಂಖ್ಯೆ 1. KNNL/2023-24/RD/WORK_INDENT/305/Call-2- 100.00ಲಕ್ಷ

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ವಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟ್‌ಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/573/ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ
ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಎ6/ಬಿಜಿಟಿ/ಟೆಂಡರ್/ಸಿಆರ್–02/2023–24 ದಿನಾಂಕ:05.02.2024

ಮರು ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2023–24 ನೇ ಸಾಲಿನಲ್ಲಿ 4406-Capital Outlay on Forestry & Wildlife-01-Forestry-101-0-03- Afforestration on Forest Areas-139-MW-DDF or Other Scheme & 4406-Capital Outlay on Forestry & Wildlife - 01-Forestry-101 - Forest Conservation, Development and Regeneration -0-02-Flexi Fund - 139 MW ಲೆಕ್ಕ ಶೀರ್ಷಿಕೆ ರಡಿ ಶಿವಮೊಗ್ಗ ಅರಣ್ಯ ವಿಭಾಗದ, ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಮುಂಗಡ ಕಾಮಗಾರಿ ಮತ್ತು ಸಸಿಗಳನ್ನು ಬೆಳೆಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2023–24 ನೇ ಸಾಲಿಗೆ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ– ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:12.02.2024 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/52/02/23–24/1209

ಕರ್ನಾಟಕ ಸರ್ಕಾರ
ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ದೂರವಾಣಿ ಸಂಖ್ಯೆ: 08352–276996, ಫ್ಯಾಕ್ಸ: 08352–276984,
ವೆಬ್‌ಸೈಟ್:www.vijayapur.uda.gov.in
ಇ–ಮೇಲ್:bdacommissionerbijapur@gmail.com
ಸಂಖ್ಯೆ: ನಪ್ರಾವಿ/ಸಾಉನಿವಿ/ಪ್ರಕಟಣೆ–2023–24/2788 ದಿನಾಂಕ:03.02.2024

ಮರು ಪ್ರಕಟಣೆ
ನಾಗರಿಕ ಸೌಲಭ್ಯದ 30 ನಿವೇಶನಗಳನ್ನು 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು.

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರವು ನಾಗರಿಕ ಸೌಲಭ್ಯದ ನಿವೇಶನಗಳನ್ನು 30 (ಮೂವತ್ತು) ವರ್ಷಗಳ ಗತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು ಈ ಕಾರ್ಯಾಲಯದ ಅಧಿಸೂಚನೆಯ ಸಂಖ್ಯೆ: ನಪ್ರಾವಿ:ಸಾಉನಿವಿ/2023–24/2445 ದಿ: 04.12.2023 ರಂತೆ ದಿನಾಂಕ: 06.12.2023 ರಂದು ವಿಶ್ವವಾಣಿ ಕನ್ನಡ ದಿನ ಪತ್ರಿಕೆ ಮತ್ತು ಡೆಕ್ಕನ್ ಹೆರಾಲ್ಡ್ ಆಂಗ್ಲ ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ. ಪ್ರಕಟಣೆಯಲ್ಲಿ ನಮೂನೆ–1 ಹಾಗೂ–2 ನ್ನು ಸ್ವೀಕರಿಸುವ ಕೊನೆಯ ದಿನಾಂಕ:18–12–2023 ರಂದು ನಿಗದಿಪಡಿಸಲಾಗಿತ್ತು.ಸದರಿ ಪ್ರಕಟಣೆಗೆ ಸಾಕಷ್ಟು ಪ್ರಮಾಣದಲ್ಲಿ ಅರ್ಜಿಗಳು ಬಾರದೇ ಇರುವದರಿಂದ,ಮರು ಪ್ರಕಟಣೆ ಹೊರಡಿಸಲು ಪ್ರಾಧಿಕಾರದ ನಿರ್ಣಯದಂತೆ ಸದರಿ ನಮೂನೆ–1 ಹಾಗೂ–2 ನ್ನು ಪಡೆಯುವ ಹಾಗೂ ಭರ್ತಿ ಮಾಡಿದ ನಮೂನೆ ಸ್ವೀಕರಿಸುವ ಕೊನೆಯ ದಿನಾಂಕ:29–02–2024 ಸಾಯಂಕಾಲ 5–00 ಗಂಟೆವರೆಗೆ ತಲುಪುವಂತೆ ಸಲ್ಲಸಬಹುದು. ಇನ್ನುಳಿದಂತೆ ಈ ಹಿಂದಿನ ಪ್ರಕಟಣೆಯಲ್ಲಿ ಪ್ರಚುರಪಡಿಸಿದ ವಿವರ ಮತ್ತು ಷರತ್ತುಗಳು ಯಥಾವತ್ತಾಗಿ ಇರುತ್ತವೆ. ಹೆಚ್ಚಿನ ಮಾಹಿತಿ ಹಾಗೂ ನಾಗರಿಕ ಸೌಲಭ್ಯದ ನಿವೇಶನಗಳ ವಿವರಗಳುಳ್ಳ ಪ್ರತಿಯನ್ನು ಪ್ರಾಧಿಕಾರದ ಕಾರ್ಯಾಲಯದಲ್ಲಿ ಸಂಪರ್ಕಿಸಿ ಕಚೇರಿ ವೇಳೆಯಲ್ಲಿ ಪಡೆಯಬಹುದು. ಮತ್ತು ಪ್ರಾಧಿಕಾರದ ವೆಬ್‌ಸೈಟ್ www.vijayapur.uda.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ವಾಸಾಸಂಇ/ವಿಜಯಪುರ/444/ಕೆಎಸ್‌ಎಂಸಿಎ/2023–24

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ.
ದೂ. : 080–2727 1259. ಇ–ಮೇಲ್ : eempdrmgm@gmail.com
ಟೆಂಡರ್ ಪ್ರಕಟಣೆ ಸಂಖ್ಯೆ : 10/2023–24 ದಿನಾಂಕ : 02–02–2024

ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 4701 ಲೆಕ್ಕ ಶೀರ್ಷಿಕೆಯಡಿಯಲ್ಲಿ ವಿವಿಧ ಮೊತ್ತದ ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು.

ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ, ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪೂರ್ವಭಾವಿ ಸಭೆ ನಡೆಯುವ ದಿನಾಂಕ ಹಾಗೂ ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು ಪಡೆಯಲು https://kppp.karnataka.gov.in ಅನ್ನು ಸಂಪರ್ಕಿಸುವುದು ಮತ್ತು ಮಾಹಿತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ.ಪಿ. ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/430/ಮಣಿಪಾಲ್/2023–24

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ
ಐ.ಎಫ್.ಟಿ.ಸಂಖ್ಯೆ: 07/2023–24
ದಿನಾಂಕ: 06.02.2024

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1,2 ಮತ್ತು 3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅಂದಾಜು ಕನಿಷ್ಠ ಮೊತ್ತ ರೂ.7.00 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.75.00 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 15–02–2024 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/740/ಕೆಎಸ್‌ಎಂಸಿಎ/744/2023–24

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ವಿಜಯನಗರ ಪ್ರಾದೇಶಿಕ ವಿಭಾಗ, ಹೊಸಪೇಟೆ
ದೂ.ಸಂ:08394–200270 ಮೇಲ್–dcfvijayanagara@gmail.com

ನೆಡುತೋಪುಗಳ ನಿರ್ವಹಣೆ, ನೆಡುತೋಪುಗಳ ನಿರ್ಮಾಣ ಸಸಿಗಳನ್ನು ಮತ್ತು ನಿರ್ವಹಣೆ ಮಾಡುವುದು ಮತ್ತು ಸಸ್ಯೋಧ್ಯಾನವನ ಕಾವಲುಗಾರರನ್ನು ಒದಗಿಸುವುದು ಮತ್ತು ದೈವಿವನಕ್ಕೆ ಕಾವಲುಗಾರರನ್ನು ಒದಗಿಸುವ ಕಾಮಗಾರಿಗೆ ಟೆಂಡರ್ ಜರುಗಿಸುವ ಕುರಿತು. (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವಿಜಯನಗರ ವಿಭಾಗ, ಹೊಸಪೇಟೆ ಇವರ ಕಛೇರಿ ಅಧಿಸೂಚನೆ ಸಂಖ್ಯೆ: **ಬಿಜಿಟಿ/ಟೆಂಡರ್/ಸಿಆರ್–54/2023–24** ದಿನಾಂಕ :06.02.2024 ರ ಪ್ರಕಾರ 2024–25 ನೇ ಸಾಲಿನಲ್ಲಿ ವಿಜಯನಗರ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ವಿವಿಧ ವಲಯಗಳಲ್ಲಿ ನೆಡುತೋಪುಗಳ ನಿರ್ವಹಣೆ, ನೆಡುತೋಪುಗಳ ನಿರ್ಮಾಣ, ಸಸಿಗಳನ್ನು ಮತ್ತು ನಿರ್ವಹಣೆ ಮಾಡುವುದು ಮತ್ತು ಸಸ್ಯೋಧ್ಯಾನವನ ಕಾವಲುಗಾರರನ್ನು ಒದಗಿಸುವುದು ಮತ್ತು ದೈವಿವನಕ್ಕೆ ಕಾವಲುಗಾರರನ್ನು ಒದಗಿಸುವ ಕಾಮಗಾರಿಗೆ ಸಂಬಂಧಿಸಿದಂತೆ 2023–24ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿದವರಿಂದ ನಿಗದಿತ ನಮೂನೆಯಲ್ಲಿ ದ್ವಿಲಕೋಟೆ (ತಾಂತ್ರಿಕ ಮತ್ತು ಆರ್ಥಿಕ) ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೊದಲನೆ ಬಾರಿ ಟೆಂಡರ್ ಜರುಗಿಸುವುದಕ್ಕೆ **ದಿನಾಂಕ: 16.02.2024** ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಮತ್ತು ಎರಡನೇ ಬಾರಿ ಟೆಂಡರ್ ಜರುಗಿಸುವುದಕ್ಕೆ **ದಿನಾಂಕ : 26.02.2024** ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯನಗರ ವಿಭಾಗ, ಹೊಸಪೇಟೆ
ಡಿಐಪಿಆರ್/ವಿಜಯನಗರ/382/ಕೆಎಸ್‌ಎಂಸಿಎ/2023–24

ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಮನಗರ ಜಿಲ್ಲೆ ರಾಮನಗರ.
ದೂ. : 080–27273777, ಇಮೇಲ್ : deo.ramanagara@gmail.com
ಸಂಖ್ಯೆ : ರಾ.ಜಿ.ಕಾ./ಸಿ.ಎ.ಎಲ್./32/2023–24 ದಿನಾಂಕ : 06–02–2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)
(ದ್ವಿ–ಟೆಂಡರ್ ದಸ್ತಾವೇಜು ಪದ್ಧತಿ)

ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಬರಪೀಡಿತ ತಾಲ್ಲೂಕುಗಳಲ್ಲಿ ಹಸಿ ಮತ್ತು ಒಣ ಮೇವು ಸರಬರಾಜು ಮಾಡಲು ಅಪರ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರ ಮೂಲಕ ಕೆ.ಪಿ.ಪಿ. ಪೋರ್ಟಲ್ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಏಜೆನ್ಸಿ / ಬಿಡ್‌ದಾರರು ಕೆ.ಪಿ.ಪಿ. ಪೋರ್ಟಲ್‌ನಿಂದ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್ ದಸ್ತಾವೇಜು ಶುಲ್ಕ ಹಾಗೂ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ವಿದ್ಯುನ್ಮಾನವಾಗಿ ಸಲ್ಲಿಸುವುದು.

ವಿವರಗಳು : 1) ಇಂಡೆಂಟ್ ಸಂಖ್ಯೆ : RD/2023-24/IND0130 ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಬರಪೀಡಿತ ತಾಲ್ಲೂಕುಗಳಲ್ಲಿ ಒಣ ಮೇವು ಸರಬರಾಜು ಮಾಡುವುದು. ಟೆಂಡರ್‌ಗಿಟ್ಟ ಮೊತ್ತ : ರೂ. 130.00 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 2.00 ಲಕ್ಷಗಳು. ಯೋಜನೆಯ ಕಾಲಾವಧಿ : 04 ತಿಂಗಳು, 2) ಇಂಡೆಂಟ್ ಸಂಖ್ಯೆ : RD/2023-24/IND0129 ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಬರಪೀಡಿತ ತಾಲ್ಲೂಕುಗಳಲ್ಲಿ ಹಸಿ ಮೇವು ಸರಬರಾಜು ಮಾಡುವುದು. ಟೆಂಡರ್‌ಗಿಟ್ಟ ಮೊತ್ತ : ರೂ. 70.00 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 1.40 ಲಕ್ಷಗಳು. ಯೋಜನೆಯ ಕಾಲಾವಧಿ : 04 ತಿಂಗಳು.

1) ಪೂರ್ವಭಾವಿ ಸಭೆ ದಿನಾಂಕ : 09–02–2024 ರ ಬೆಳಿಗ್ಗೆ 11.00 ಗಂಟೆಗೆ, 2) ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 14–02–2024 ರ ಸಂಜೆ 5.00 ಗಂಟೆಗೆ, 3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16–02–2024 ರ ಬೆಳಿಗ್ಗೆ 11.00 ಗಂಟೆಗೆ.

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ಅವಧಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.

ಸಹಿ/– ಅಪರ ಜಿಲ್ಲಾಧಿಕಾರಿಗಳು,
ರಾಮನಗರ ಜಿಲ್ಲೆ, ರಾಮನಗರ.
ಡಿಐಪಿಆರ್/ರಾಮನಗರ/434/ಮಣಿಪಾಲ್/2023–24

ಲೋಕೋಪಯೋಗಿ ಇಲಾಖೆ
ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ., 4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ ಕೆ.ಆರ್. ವೃತ್ತ, ಬೆಂಗಳೂರು – 560 001.
ಸಂಖ್ಯೆ : ಪ್ರ.ಇ./71/ಪಿ.ಆರ್.ಎ.ಎಂ.ಸಿ./ರ.ಸು./2022–23/992 ದಿನಾಂಕ : 05–02–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲೆಯಲ್ಲಿ 01 ರಸ್ತೆ ಸುರಕ್ಷತಾ ಕಾಮಗಾರಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 02 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಹಾಗೂ ರಾಯಚೂರು ಜಿಲ್ಲೆಯಲ್ಲಿ 01 ಕಟ್ಟಡ ಕಾಮಗಾರಿಗೆ ಕಾರ್ಯಪಾಲಕ ಇಂಜಿನಿಯರ್ ಪಿ.ಆರ್.ಎ.ಎಂ.ಸಿ. ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ https://kppp.karnataka.gov.in ದಿನಾಂಕ : 05–02–2024 ರ ಸಂಜೆ 5.30 ಗಂಟೆಯ ನಂತರ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಿ.ಆರ್.ಎ.ಎಂ.ಸಿ. ಲೋ.ಇ., ಬೆಂಗಳೂರು.
ವಾಸಾಇ/ಬೆಂ.ನ./3419/ಮಣಿಪಾಲ್/2023–24

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–1/ಟೆಂಡರ್–09/2023–24 ದಿನಾಂಕ: 07.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ರಾಯಚೂರು, ತುಮಕೂರು, ರಾಮನಗರ, ಹಾಸನ, ಚಿಕ್ಕಬಳ್ಳಾಪುರ ಜಿಲ್ಲೆಯ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳ ಮೊದಲನೇ ಹಂತದ ಕಾಮಗಾರಿ, ಮಂಡ್ಯ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 2ನೇ ಹಂತದ ಕಾಮಗಾರಿ ಮತ್ತು ಮೈಸೂರು, ಬೆಂಗಳೂರು, ಬೆಳಗಾವಿ ಹಾಗೂ ಕಲ್ಬುರ್ಗಿ ಕಂದಾಯ ವಿಭಾಗಗಳಲ್ಲಿ ಆವರಣ ಗೋಡೆ ನಿರ್ಮಾಣ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 156, 161, 154, 170, 130, 120, 155, 153, 160, 158 ಹಾಗೂ 159)** ಇ–ಪೋರ್ಟಲ್ ಮುಖಾಂತರ ದಿನಾಂಕ: **07.02.2024** ರಿಂದ ಟೆಂಡರ್ ಆಹ್ವಾನಿಸಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 21.02.2024** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–1
ಕ.ವ.ಶಿ.ಸಂ.ಸಂಘ
DIPR/CP/YC/3459/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ) CIN:- U85110KA1998SGC024503.
ಕಾರ್ಯಪಾಲಕ ಇಂಜಿನೀಯರವರ ಕಚೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ
ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ 580001.
ಫೋನ್: 0836–2461218 ಇ–ಮೇಲ್: eesliddwd@gmail.com
No.KNN/SLID/DWD/PB-1/Savanur-Drip-Consultancy/Tender/2023-24/2060 Date:05-02-2024

ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಶೇಕಡಾವಾರು ಟೆಂಡರನ್ನು "QUALITY AND COST BASED SELECTION (QCBS)" ಪದ್ಧತಿಯಲ್ಲಿ ದ್ವಿ–ಲಕೋಟೆ (KC-4) ಮುಖಾಂತರ ನೋಂದಾಯಿತ ಅರ್ಹ ಸಮಾಲೋಚಕ ಏಜೆನ್ಸಿಗಳಿಂದ "Consultancy Services for planning, survey, investigation, and preparation of designs, drawings, estimates, package estimate and DTP for gravity pipe distribution network (MP model) under Savanur Lift Irrigation Scheme" (ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.76.19 ಲಕ್ಷಗಳಿಗೆ) ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://www.KPPP.karnataka.gov.in) ಮುಖಾಂತರವೇ **ದಿನಾಂಕ: 12/02/2024 ಬೆಳಿಗ್ಗೆ 11.00** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ: 27/02/2024 ರ ಸಂಜೆ 4.00 ಘಂಟೆವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಟೆಂಡರಗಳನ್ನು **ದಿ:28/02/2024 ರಂದು ಸಾಯಂಕಾಲ 4.30 ಘಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು **ದಿನಾಂಕ:01/03/2024 ರಂದು ಬೆಳಿಗ್ಗೆ 11.00 ಘಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (e-Procurement portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ವಾ.ಸಾ.ಇ/ಧಾರವಾಡ/775/ದೇಶಪಾಂಡೆಪಬ್ಲಿಸಿಟಿ/2023–24
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.49, 4 ಮತ್ತು 5ನೇ ಮಹಡಿ, 'ಈಸ್ಟ್‌ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001. ದೂ.ಸಂ: 080–22265383
ವೆಬ್‌ಸೈಟ್: www.kiadb.in ಇಮೇಲ್: ceoemkiadb@gmail.com
ಸಂ: ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:44705/19328 /2023–24 ದಿನಾಂಕ: 07.02.2024

ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಮಂಡಳಿಯ ಅಧಿಸೂಚನೆ ಸಂ:ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:44705/19145/2023–24 ದಿನಾಂಕ:05–02–2024ರ ಮೂಲಕ ಅಧಿಸೂಚನೆ ಹೊರಡಿಸಿ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿರುವ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಖಾಸಗಿ ಉದ್ಯಮ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 23.02.2024 ರೊಳಗೆ ಅರ್ಜಿ ಸಲ್ಲಿಸಲು ಮತ್ತು ದಿನಾಂಕ: 08.02.2024 ರಿಂದ ಮಂಡಳಿ ವೆಬ್‌ಸೈಟ್ ನಲ್ಲಿ **(www.kiadb.in)** ರಲ್ಲಿ ಪ್ರಕಟಿಸಲಾಗುವುದೆಂದು ತಿಳಿಸಲಾಗಿತ್ತು.

ಮುಂದುವರೆದು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಐ 78 ಎಸ್‌ಪಿಕ್ಯೂ 2021 ದಿ:05.02.2024 ರಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ.24.10 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ ಆದೇಶಿಸಲಾಗಿದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ). ಸದರಿ ಆದೇಶದನ್ವಯ, ದಿನಾಂಕ: 05.02.2024ರ ಅಧಿಸೂಚನೆಯಲ್ಲಿ ತಿಳಿಸಿರುವಂತೆ **ದಿನಾಂಕ: 08.02.2024 ರಿಂದ** ಮಂಡಳಿ ವೆಬ್‌ಸೈಟ್ **(www.kiadb.in)** ರಲ್ಲಿ ಪ್ರಕಟಿಸಲಾಗುವ ಹಂಚಿಕೆಗೆ ಪ್ರಸ್ತಾಪಿಸಿರುವ ಸಿಎ/ಅಮೆನಿಟಿ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ.24.10 ರಷ್ಟು ನಿವೇಶನಗಳನ್ನು ಮೀಸಲಿಟ್ಟು ಪ್ರಕಟಿಸಲಾಗುವುದು.

ಮೂಲ ಅಧಿಸೂಚನೆ ಸಂ:ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ: 44705/19145/2023–24 ದಿನಾಂಕ: 05.02.2024 ರಲ್ಲಿ ಸೂಚಿಸಿರುವ ಷರತ್ತು ಮತ್ತು ನಿಬಂಧನೆಗಳು ಅನ್ವಯವಾಗುತ್ತದೆ.

ದಿನಾಂಕ: 07.02.2024
ಸ್ಥಳ: ಬೆಂಗಳೂರು
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು

ಸ್ಪರ್ಧಾ ವಾಣಿ

MASTERMIND
ಉದ್ಯೋಗ ಅವಕಾಶಗಳ ಮಾಹಿತಿ ಮತ್ತು ಪ್ರಚಲಿತ ವಿದ್ಯಮಾನಗಳ ಕುರಿತು ದೈನಂದಿನ ಮಾಹಿತಿಗಾಗಿ, QR ಅನ್ನು ಸ್ಕ್ಯಾನ್ ಮಾಡಿ ನಮ್ಮ ಟೆಲಿಗ್ರಾಮ್ ಚಾನಲ್‌ಗೆ ಸದಸ್ಯರಾಗಿ

ಬಿಲದ ಕಪ್ಪೆ ಬೆಂಗಳೂರಿನ ಹೊಸ ಪ್ರಭೇದ

ಉಭಯವಾಸಿ ಜೀವಿಗಳ ಸಾಂದರ್ಭಿಕ ಚಿತ್ರ

UPSC-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, KPSC-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾಗಿ...

ಇತ್ತೀಚಿನ ದಶಕಗಳಲ್ಲಿ ವಿಶ್ವದಾದ್ಯಂತ ಉಭಯವಾಸಿಗಳ ಸಂಖ್ಯೆಯು ಗಣನೀಯವಾಗಿ ಕ್ಷೀಣಗೊಳ್ಳುತ್ತಿರುವ ನಡುವೆಯೇ ಬೆಂಗಳೂರು ನಗರ ಪ್ರದೇಶದಲ್ಲಿ ಹೊಸಹೊಸ ಪ್ರಭೇದಗಳ ಕಪ್ಪೆಗಳು ಕುಪ್ಪಳಿಸುತ್ತಿರುವುದು ಖುಷಿಯವಿಚಾರ.

ಹೌದು, ವಿವಿಧ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳ ಸಂಶೋಧಕರ ತಂಡವು ಬೆಂಗಳೂರಿನ ನಗರ ಪರಿಸರದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಹೊಸ ಕಪ್ಪೆ ಪ್ರಭೇದವನ್ನು ಪತ್ತೆಹಚ್ಚಿದೆ.

- ಹೊಸದಾಗಿ ಪತ್ತೆಯಾದ ಈ ಉಭಯಚರಗಳಿಗೆ ಸ್ಫೇರೋಥೆಕಾ ವರ್ಷಭು ಎಂದು ಹೆಸರಿಸಲಾಗಿದೆ. ಆರಂಭಿಕ ಮಳೆಯ ಸಮಯದಲ್ಲಿ ಬಿಲಗಳಿಂದ ಹೊರಬರುವ ಅವುಗಳ ನಡವಳಿಕೆಯಿಂದಾಗಿ ಈ ಕಲಾತ್ಮಕ ಹೆಸರನ್ನು ಪಡೆದುಕೊಂಡಿವೆ. ಈ ವಿಶಿಷ್ಟ ಗುಣಲಕ್ಷಣಗಳು ಹಿಂದೆ ಗುರುತಿಸಲಾದ ಕಪ್ಪೆ ಪ್ರಭೇದಗಳಿಂದ ಇವನ್ನು ಸ್ಪಷ್ಟವಾಗಿ ಪ್ರತ್ಯೇಕಿಸುತ್ತವೆ.
- 2020 ರಲ್ಲಿ, ಬೆಂಗಳೂರು ನಗರದಲ್ಲಿಯೇ Sphaerotheca Bengaluru ಎಂಬ ಹೆಸರಿನ ಬಿಲದ ಕಪ್ಪೆ ಪ್ರಭೇದವನ್ನು ಪತ್ತೆಹಚ್ಚಲಾಗಿತ್ತು. ಈ ಕಪ್ಪೆಗಳನ್ನು ಕೂಡಾ ಅದೇ ಪ್ರದೇಶದಲ್ಲಿ ಗುರುತಿಸಲಾಗಿರುವುದು ವಿಶೇಷ.
- ಹೊಸದಾಗಿ ಪತ್ತೆಯಾದ ಉಭಯಚರಗಳು ನಗರ ಪರಿಸರಕ್ಕೆ ಒಗ್ಗಿಕೊಂಡಿದ್ದು ನಗರೀಕರಣವು ಎದುರಿಸುತ್ತಿರುವ ಸವಾಲುಗಳನ್ನು ಶಕ್ತವಾಗಿ ಎದುರಿಸಬಲ್ಲಂತಹಾ ನಡವಳಿಕೆಗಳು ಮತ್ತು ದೈಹಿಕ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತಿವೆ ಎಂದು ಸಂಶೋಧಕರು ಸ್ಪಷ್ಟಪಡಿಸಿದ್ದಾರೆ. ಈ ಉಭಯಚರಗಳ ವಿಶಿಷ್ಟ ಲಕ್ಷಣಗಳನ್ನು ಮೌಲ್ಯೀಕರಿಸಲು ಸಂಶೋಧನಾ ತಂಡವು ಅತ್ಯಾಧುನಿಕ ಮಾದರಿಯ ಆನುವಂಶಿಕ ವಿಶ್ಲೇಷಣೆ ಮತ್ತು ರೂಪಾಂತರ ವಿಜ್ಞಾನದ ಅಧ್ಯಯನಗಳನ್ನು ಬಳಸಿಕೊಂಡಿದೆ.
- ಉಭಯವಾಸಿಗಳು ಎಂದರೆ ಭೂಮಿಯಲ್ಲೂ ನೀರಿನಲ್ಲೂ ಬದುಕುವ ಪ್ರಾಣಿಗಳು ಎಂದರ್ಥ. ಆದರೆ ಬಹಳಷ್ಟು ಉಭಯವಾಸಿಗಳು ಭೂವಾಸಿಗಳಾಗಿದ್ದು ಕೆಲವು ಮರವಾಸಿಗಳಾಗಿರುತ್ತವೆ ಅಥವಾ ಸಿಹಿ ನೀರಿನ ಮೂಲದ ಜಲ ಪರಿಸರವ್ಯವಸ್ಥೆಯಲ್ಲಿ ಕಂಡು ಬರುತ್ತವೆ.

ಉಭಯವಾಸಿಗಳು ಸಾಮಾನ್ಯವಾಗಿ ನೀರಿನಲ್ಲಿ ಲರ್ವಾ ರೂಪದಲ್ಲಿ ತಮ್ಮ ಜೀವನವನ್ನು ಆರಂಬಿಸುತ್ತವೆ. ಆದರೆ ಕೆಲವು ಜಾತಿಯ ಉಭಯವಾಸಿಗಳು ವರ್ತನಾ ಬದಲಾವಣೆಗಳ ಹೊಂದಾಣಿಕೆಯಿಂದಾಗಿ ಈ ಹಂತವನ್ನು ಹೊರತಾಗಿ ಕೂಡಾ ಬೆಳೆಯುತ್ತವೆ.

- ಉಭಯವಾಸಿಗಳು ತಮ್ಮ ಚರ್ಮವನ್ನು ದ್ವಿತೀಯಕ ಉಸಿರಾಟದ ಅಂಗವಾಗಿ ಬಳಸಿಕೊಳ್ಳುತ್ತವೆ. ಹಾಗೂ ಕೆಲವು ಚಿಕ್ಕ ಭೂವಾಸಿ ಸಾಲ್ ಮೆಂಡರ್ಗಳು ಮತ್ತು ಕಪ್ಪೆಗಳು ಉಸಿರಾಟಕ್ಕಾಗಿ ಸಂಪೂರ್ಣವಾಗಿ ತಮ್ಮ ಚರ್ಮವನ್ನೆ ಅವಲಂಬಿಸಿವೆ. ಉಭಯವಾಸಿಗಳು ಸಂಕೀರ್ಣಮಯವಾದ ಸಂತಾನೋತ್ಪತ್ತಿಯ ಅವಶ್ಯಕತೆಗಳು ಹಾಗೂ ಸೂಕ್ಷ್ಮವಾದ ಚರ್ಮ ಹೊಂದಿರುತ್ತವೆ.

ಪರಿಸರ ರಕ್ಷಣೆಯಲ್ಲಿ ಉಭಯಚರಗಳ ಪಾತ್ರ

ಉಭಯಚರಗಳು ಎಂದರೆ ಕಪ್ಪೆಗಳು, ನೆಲಗಪ್ಪೆಗಳು, ಕಾಡುಗಪ್ಪೆಗಳು, ಸಾಲ್ ಮಾಂಡರ್‌ಗಳು ಮತ್ತು ನ್ಯೂಟ್‌ಗಳನ್ನು(ಸಣ್ಣ ಉಭಯಚರ ಪ್ರಾಣಿಗಳು) ಒಳಗೊಳ್ಳುತ್ತವೆ. ಅವು ವಿವಿಧ ಪರಿಸರ ವ್ಯವಸ್ಥೆಗಳಲ್ಲಿ ನಿರ್ಣಾಯಕ ಪರಿಸರ ಪಾತ್ರವನ್ನು ವಹಿಸುತ್ತವೆ. ಈ ಉಭಯವಾಸಿಗಳು ಜೀವವೈವಿಧ್ಯ, ಪೋಷಕಾಂಶಗಳ ಹರಿವಿನ ಚಕ್ರ ಮತ್ತು ಪರಿಸರ ವ್ಯವಸ್ಥೆಯ ಸ್ಥಿರತೆಗೆ ಕೊಡುಗೆ ನೀಡುತ್ತವೆ.

1. ಜೀವವೈವಿಧ್ಯ ನಿರ್ವಹಣೆ

ಉಭಯಚರಗಳು ಪರಿಸರ ವ್ಯವಸ್ಥೆಯ ವಿವಿಧ ವಲಯಗಳಲ್ಲಿ ಜೀವವೈವಿಧ್ಯಕ್ಕೆ ಗಣನೀಯವಾಗಿ ಕೊಡುಗೆ ನೀಡುತ್ತವೆ. ಇವುಗಳ ವೈವಿಧ್ಯಮಯ ರೂಪಾಂತರಗಳು ಮತ್ತು ವಿಶಿಷ್ಟ ನಡವಳಿಕೆಗಳು ಜಲವಾಸಿ ಸಂತಾನೋತ್ಪತ್ತಿ ಸ್ಥಳಗಳಿಂದ ಭೂ ಪರಿಸರದವರೆಗೆ ಹಲವಾರು ಆವಾಸಸ್ಥಾನಗಳನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಯಾವುದೇ ಪರಿಸರದಲ್ಲಿ ವಿವಿಧ ಉಭಯಚರ ಪ್ರಭೇದಗಳ ಉಪಸ್ಥಿತಿಯು ಆಯಾ ಪರಿಸರ ವ್ಯವಸ್ಥೆಯ ಆರೋಗ್ಯ ಮತ್ತು ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆ.

2. ಸೂಚಕ ಜಾತಿಗಳು

ಉಭಯಚರಗಳು ಪರಿಸರದ ಪರಿಸ್ಥಿತಿಗಳಲ್ಲಿನ ಬದಲಾವಣೆಗಳಿಗೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸುವುದರಿಂದ ಪರಿಸರ ಸೂಚಕಗಳಾಗಿ ಪರಿಗಣಿಸಲಾಗುತ್ತದೆ. ಅವುಗಳ ಚರ್ಮವು ಹೊರಗಿನ ವಾತಾವರಣಕ್ಕೆ ತೆರೆದುಕೊಂಡಂತಿರುವುದರಿಂದ ಅವುಗಳನ್ನು ಮಾಲಿನ್ಯಕಾರಕಗಳಿಗೆ ಮತ್ತು ನೀರಿನ ಗುಣಮಟ್ಟದಲ್ಲಿನ ಬದಲಾವಣೆಗಳಿಗೆ ಬೇಗನೇ ಒಳಗಾಗುವಂತೆ ಮಾಡುತ್ತದೆ. ಇದು ಪರಿಸರದ ಆರೋಗ್ಯದ ಮೌಲ್ಯಮಾಪನ ಸೂಚಕಗಳಂತೆ ತೋರುತ್ತದೆ.

3. ಸೊಳ್ಳೆ ಮತ್ತು ಕೀಟ ನಿಯಂತ್ರಣ

ಅನೇಕ ಉಭಯಚರಗಳು, ವಿಶೇಷವಾಗಿ ಕಪ್ಪೆಗಳು ಮತ್ತು ನೆಲಗಪ್ಪೆಗಳು, ಸೊಳ್ಳೆಗಳು ಮತ್ತು ಕೃಷಿ ಕೀಟಗಳನ್ನು ಒಳಗೊಂಡಂತೆ ಕೀಟ ಭಕ್ಷಕಗಳಾಗಿವೆ. ಇವುಗಳು ಕೀಟಗಳ ಸಂಖ್ಯೆಯನ್ನು ನಿಯಂತ್ರಿಸುವ ಮೂಲಕ, ಪರಿಸರ ವ್ಯವಸ್ಥೆಯ ಸಮತೋಲನಕ್ಕೆ ಕೊಡುಗೆ ನೀಡುತ್ತವೆ ಮತ್ತು ರೋಗ ವಾಹಕಗಳ ಹರಡುವಿಕೆಯನ್ನು ಕಡಿಮೆ ಮಾಡುತ್ತವೆ. ಬೆಳೆಗಳನ್ನು ರಕ್ಷಿಸಿ ಮೂಲಕ ಮಾನವರಿಗೆ ಸಹಾಯ ಮಾಡುತ್ತವೆ.

4. ಪೋಷಕಾಂಶಗಳ ಹರಿವು

ಉಭಯಚರಗಳು ಪರಭಕ್ಷಕ ಜೀವಿಗಳೂ ಹೌದು ಜತೆಗೆ ಇತರ ಪ್ರಾಣಿಗಳ ಆಹಾರವೂ ಹೌದು. ಹೀಗೆ ಪೋಷಕಾಂಶಗಳ ಹರಿವಿನ ಚಕ್ರದಲ್ಲಿ ಪಾತ್ರವಹಿಸುತ್ತವೆ. ಅಕಶೇರುಕಗಳನ್ನು ಈ ಉಭಯವಾಸಿಗಳು ತಮ್ಮ ಪ್ರಧಾನ ಆಹಾರವಾಗಿ ಬಳಸುವುದರಿಂದ ಈ ಜೀವಿಗಳ ಸಂಖ್ಯೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಜತೆಗೆ ಉಭಯಚರಗಳು ತಮ್ಮ ದೇಹಗಳು ಕೊಳೆಯುವಾಗ ಭೂಮಿಯ ಪರಿಸರ ವ್ಯವಸ್ಥೆಗಳಿಗೆ ಪೋಷಕಾಂಶಗಳನ್ನು ಕೊಡುಗೆಯಾಗಿ ನೀಡುತ್ತವೆ. ಇದು ಪೋಷಕಾಂಶಗಳ ಲಭ್ಯತೆಯ ಮೇಲೆ ಮತ್ತಷ್ಟು ಪ್ರಭಾವ ಬೀರುತ್ತದೆ.

5. ಬೀಜ ಪ್ರಸರಣ

ಕೆಲವು ಉಭಯಚರಗಳು, ನಿರ್ದಿಷ್ಟವಾಗಿ ಕೆಲವು ಜಾತಿಯ ಕಪ್ಪೆಗಳು, ಬೀಜ ಪ್ರಸರಣದಲ್ಲಿ ತೊಡಗುತ್ತವೆ. ಇವು ಭೂಮಿಯ ತಮ್ಮ ಆವಾಸಸ್ಥಾನಗಳ ಮೂಲಕ ಚಲಿಸುವಾಗಲೆಲ್ಲಾ ತಮ್ಮ ದೇಹದ ಮೇಲೆ ಹೊತ್ತು ಸಾಗುವ ಬೀಜಗಳನ್ನು ಚೆಲ್ಲುತ್ತಾ ಸಸ್ಯಗಳ ಬೀಜಪ್ರಸರಣಕ್ಕೆ ಸಹಾಯ ಮಾಡುತ್ತವೆ. ಈ ಪ್ರಕ್ರಿಯೆಯು ಸಸ್ಯಗಳ ಬೆಳವಣಿಗೆಗೆ ಕೊಡುಗೆ ನೀಡುತ್ತದೆ ಮತ್ತು ಪ್ರಕೃತಿಯ ಒಟ್ಟು ರಚನೆಯನ್ನು ಬೆಂಬಲಿಸುತ್ತದೆ.

6. ಜಲವಾಸಿ ವಾಸಸ್ಥಾನ ನಿರ್ವಹಣೆ

ಉಭಯಚರಗಳು ಅದರಲ್ಲೂ ವಿಶೇಷವಾಗಿ ಗೊದಮೊಟ್ಟೆಗಳು, ಜಲವಾಸಿ ಆವಾಸಸ್ಥಾನಗಳ ಆರೋಗ್ಯವನ್ನು ಕಾಪಾಡುವಲ್ಲಿ ಪಾತ್ರವಹಿಸುತ್ತವೆ.

ಗೊದಮೊಟ್ಟೆಗಳು ಪಾಚಿ ಮತ್ತು ಡೆಟ್ರಿಟಸ್ ಅನ್ನು ಆಹಾರವಾಗಿ ಬಳಸುತ್ತಾ ಅವುಗಳ ಅತಿಯಾದ ಬೆಳವಣಿಗೆಯನ್ನು ತಡೆಯುತ್ತದೆ ಮತ್ತು ನೀರಿನ ಗುಣಮಟ್ಟವನ್ನು ಕಾಪಾಡುತ್ತದೆ. ಇಂತಹಾ ಆರೋಗ್ಯಕರ ಜಲವಾಸಿ ಆವಾಸಸ್ಥಾನಗಳು ಇತರ ಅಸಂಖ್ಯಾತ ಜೀವಿಗಳಿಗೆ ಪ್ರಯೋಜನವನ್ನು ನೀಡುತ್ತವೆ.

7. ಇತರ ಪ್ರಾಣಿಗಳಿಗೆ ಬೇಟೆ

ಪಕ್ಷಿಗಳು, ಸಸ್ತನಿಗಳು, ಸರೀಸೃಪಗಳು ಮತ್ತು ಅಕಶೇರುಕಗಳು ಸೇರಿದಂತೆ ವಿವಿಧ ಪರಭಕ್ಷಕಗಳಿಗೆ ಉಭಯಚರಗಳು ನಿರ್ಣಾಯಕ ಆಹಾರ ಮೂಲವಾಗಿ ಕಾರ್ಯನಿರ್ವಹಿಸುತ್ತವೆ.

ಅವುಗಳ ಸಮೃದ್ಧಿ ಮತ್ತು ವೈವಿಧ್ಯತೆಯು ಆಹಾರ ಜಾಲಗಳ ಅವಿಭಾಜ್ಯ ಘಟಕಗಳನ್ನಾಗಿ ಮಾಡುವ ಕಾರಣ ಇವು ಅನೇಕ ಪರಿಸರ ವ್ಯವಸ್ಥೆಗಳ ಬದಲಾವಣೆಗಳ ಮೇಲೆ ಪ್ರಭಾವ ಬೀರುತ್ತದೆ.

8. ಸಾಂಸ್ಕೃತಿಕ ಮಹತ್ವ

ಉಭಯಚರಗಳು ಅನೇಕ ಸಮಾಜಗಳಲ್ಲಿ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಹೊಂದಿವೆ. ಇವುಗಳು ಜಾನಪದ, ಪುರಾಣಗಳು, ಕತೆಗಳು ಮತ್ತು ಸಾಂಪ್ರದಾಯಿಕ ಜ್ಞಾನದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿರುವ ಪ್ರಾಣಿಗಳಾಗಿವೆ.

ಪರಿಸರ ವ್ಯವಸ್ಥೆಗಳಲ್ಲಿ ಅವುಗಳ ಉಪಸ್ಥಿತಿಯು ನೈಸರ್ಗಿಕ ಭೂದೃಶ್ಯಗಳ ಒಟ್ಟು ಸೌಂದರ್ಯ ಮತ್ತು ಸಾಂಸ್ಕೃತಿಕ ಮೌಲ್ಯಕ್ಕೆ ಕೊಡುಗೆ ನೀಡುತ್ತದೆ.

ಅವುಗಳ ಪರಿಸರ ಪ್ರಾಮುಖ್ಯತೆಯ ಹೊರತಾಗಿಯೂ, ಆವಾಸಸ್ಥಾನದ ನಷ್ಟ, ಹವಾಮಾನ ಬದಲಾವಣೆ, ಮಾಲಿನ್ಯ ಮತ್ತು ರೋಗದಂತಹ ಅಂಶಗಳಿಂದಾಗಿ ವಿಶ್ವಾದ್ಯಂತ ಉಭಯಚರಗಳ ಸಂಖ್ಯೆಯು ತೀವ್ರಕುಸಿತವನ್ನು ಎದುರಿಸುತ್ತಿದೆ. ಪರಿಸರ ವ್ಯವಸ್ಥೆಗಳಲ್ಲಿ ಉಭಯಚರಗಳ ನಿರಂತರ ಪರಿಸರ ಪಾತ್ರಗಳನ್ನು ಖಚಿತಪಡಿಸಿಕೊಳ್ಳಲು ಅವುಗಳ ವಾಸಸ್ಥಾನಗಳನ್ನು ಸಂರಕ್ಷಿಸುವ, ಪರಿಸರ ಬೆದರಿಕೆಗಳನ್ನು ತಗ್ಗಿಸುವ ಮತ್ತು ರೋಗ-ಸಂಬಂಧಿತ ಸವಾಲುಗಳನ್ನು ಎದುರಿಸುವ ಸಂರಕ್ಷಣಾ ಪ್ರಯತ್ನಗಳು ಅತ್ಯವಶ್ಯಕವಾಗಿವೆ. ❖

FDDI: ನಿಮಗೆಷ್ಟು ಗೊತ್ತು?

ಮಂಜುನಾಥ್ ಭದ್ರಶೆಟ್ಟಿ

FDDI: ನಿಮಗೆಷ್ಟು ಗೊತ್ತು?

ಭಾರತವು ಬಗೆ ಬಗೆಯ ಗುಡಿ ಕೈಗಾರಿಕೆಗಳಿಗೆ ಜಗತ್ತಿನಾದ್ಯಂತ ಹೆಸರುವಾಸಿ. ಅಂದಿನ ಹಲವು ಗುಡಿ ಕೈಗಾರಿಕೆಗಳು ಇಂದು ಸಾಂಸ್ಥಿಕ ರೂಪ ಪಡೆದು ದೇಶದ ಅರ್ಥ ವ್ಯವಸ್ಥೆಗೆ ತಮ್ಮದೇಯಾದ ಕೊಡುಗೆ ನೀಡುತ್ತಿವೆ. ಇಂತಹವುಗಳಲ್ಲಿ ಪಾದರಕ್ಷೆ, ಚರ್ಮೋದ್ಯಮ-ಫ್ಯಾಷನ್ ಕ್ಷೇತ್ರವೂ ಒಂದು.

ಪ್ರಾಚೀನ ಕಾಲದಿಂದ ಭಾರತ, ಪಾದರಕ್ಷೆ, ಚರ್ಮದ, ಫ್ಯಾಷನ್ ಸಂಬಂಧಿ ಉತ್ಪನ್ನಗಳು ಸಾಕಷ್ಟು ಹೆಸರುವಾಸಿ. ಈ ಕ್ಷೇತ್ರವನ್ನು ಬೆಳೆಸುವ ನಿಟ್ಟಿನಲ್ಲಿ 1986 ರಲ್ಲಿ ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ ಫುಟ್‌ವೇರ್ ಡಿಸೈನ್ ಆ್ಯಂಡ್ ಡೆವೆಲಪ್ಮೆಂಟ್ (ಪಾದರಕ್ಷೆಗಳ ವಿನ್ಯಾಸ ಮತ್ತು ಅಭಿವೃದ್ಧಿ ಸಂಸ್ಥೆ) ಇನ್‌ಸ್ಟಿಟ್ಯೂಟ್ (FDDI) ಸ್ಥಾಪಿಸಿದೆ.

ಪ್ರಸ್ತುತ ಪಾದರಕ್ಷೆ ಮತ್ತು ಚರ್ಮೋತ್ಪನ್ನಗಳ ತಯಾರಿಕೆಯಲ್ಲಿ ಭಾರತ, ಚೀನಾ ನಂತರ ಎರಡನೇ ಸ್ಥಾನದಲ್ಲಿದ್ದು, ಇದೇ ಕ್ಷೇತ್ರದ ರಫ್ತು ವಿಭಾಗದಲ್ಲಿ ಜಗತ್ತಿನಲ್ಲಿ ಐದನೇ ಸ್ಥಾನದಲ್ಲಿದೆ. ಈ ಕ್ಷೇತ್ರದಲ್ಲಿ ಪ್ರತ್ಯಕ್ಷ, ಪರೋಕ್ಷವಾಗಿ ಸುಮಾರು 42 ಲಕ್ಷ ಜನ ತೊಡಗಿಸಿಕೊಂಡಿದ್ದಾರೆ.

FDDI ಹೇಗಿದೆ? ಏನು ಕೆಲಸ?

FDDI ದೇಶದಲ್ಲಿನ ಪಾದರಕ್ಷೆ, ಚರ್ಮೋದ್ಯಮ, ಫ್ಯಾಷನ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆ, ಕೌಶಲ್ಯ, ಮಾರುಕಟ್ಟೆ ಅನ್ವೇಷಣೆ, ವಿಸ್ತರಣೆಗೆ ಸಂಬಂಧಿಸಿದ ಒಂದು ಪ್ರತಿಷ್ಠಿತ ಸಂಸ್ಥೆ.

ಈ ಸಂಸ್ಥೆ ಅಡಿಯಲ್ಲಿ 12 ಕೇಂದ್ರಗಳು ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿದ್ದು ಒಂದೊಂದು ಕ್ಯಾಂಪಸ್ ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಚಟುವಟಿಕೆ, ಸಂಶೋಧನೆ, ನಾವೀನ್ಯತೆ, ಕೌಶಲ ಹಾಗೂ ಕಾರ್ಯಾಗಾರಗಳನ್ನು ಆಯೋಜಿಸುತ್ತವೆ.

ಭಾರತವನ್ನು ಜಾಗತಿಕ ಉತ್ಪಾದನಾ ಜಾಲ ಮಾಡುವ ಯೋಜನೆಗಳಿಗೆ ಅನುಗುಣವಾಗಿ FDDI ಕಾರ್ಯನಿರ್ವಹಿಸುತ್ತಿದ್ದು, ಮೇಕ್ ಇನ್ ಇಂಡಿಯಾಗೂ ಇದು ಪೂರಕವಾಗಿದೆ. 2030ರ ವೇಳೆಗೆ 47 ಶತಕೋಟಿ ಅಮೆರಿಕನ್ ಡಾಲರ್ ಪಾದರಕ್ಷೆ ಹಾಗೂ ಚರ್ಮ ಸಂಬಂಧಿ ಉತ್ಪನ್ನಗಳ ವಹಿವಾಟು ನಿರೀಕ್ಷಿಸಲಾಗಿದೆ.

ಅಧ್ಯಕ್ಷ ಸೇರಿದಂತೆ 15 ಜನರ ಗವರ್ನಿಂಗ್ ಕೌನ್ಸಿಲ್ FDDI ಆಡಳಿತವನ್ನು ನೋಡಿಕೊಳ್ಳುತ್ತದೆ. ಪ್ರಸ್ತುತ ಆಶೀಸ್ ದೀಕ್ಷಿತ್ ಅವರು ಇದರ ಅಧ್ಯಕ್ಷರಾಗಿದ್ದಾರೆ.

ಶೈಕ್ಷಣಿಕ ಕೋರ್ಸ್‌ಗಳು

ಪದವಿ ಕೋರ್ಸ್‌ಗಳು (4 ವರ್ಷ)

ಬ್ಯಾಚುಲರ್ ಆಫ್ ಡಿಸೈನ್ ಇನ್ ಫುಟ್‌ವೇರ್ ಡಿಸೈನ್ ಆ್ಯಂಡ್ ಪ್ರೊಡಕ್ಷನ್ /ಬ್ಯಾಚುಲರ್ ಆಫ್ ಡಿಸೈನ್ ಇನ್ ಫ್ಯಾಷನ್ ಡಿಸೈನ್/ ಬ್ಯಾಚುಲರ್ ಆಫ್ ಡಿಸೈನ್ ಇನ್ ಲೆದರ್, ಲೈಫ್‌ಸ್ಟೈಲ್ ಆ್ಯಂಡ್ ಪ್ರೊಡಕ್ಟ್ ಡಿಸೈನ್

BBA ಇನ್ ರಿಟೇಲ್ ಆ್ಯಂಡ್ ಫ್ಯಾಶನ್ ಮರ್ಚಂಟೈಸ್

FDDI ಕೇಂದ್ರಗಳು

ನೋಯ್ಡಾ, ರಾಯ್‌ಬರೇಲಿ (ಉತ್ತರ ಪ್ರದೇಶ), ಚೆನ್ನೈ, ಕೋಲ್ಕತ್ತ, ಹೈದರಾಬಾದ್, ರೋಹ್ಟಕ್ (ಹರಿಯಾಣಾ), ಗುನಾ, ಚಿಂದ್‌ವಾಡಾ (ಮಧ್ಯಪ್ರದೇಶ), ಜೋದ್‌ಪುರ (ರಾಜಸ್ಥಾನ), ಅಂಕಲೇಶ್ವರ್ (ಗುಜರಾತ್), ಬಾನೂರ್ (ಪಂಜಾಬ್), ಪಟ್ನಾ.

INI ಸ್ಟೇಟಸ್

FDDI 2017ರ ಕಾಯ್ದೆ ಅನುಗುಣವಾಗಿ ಈ ಸಂಸ್ಥೆಗೆ INI ಸ್ಟೇಟಸ್ ಒದಗಿಸಲಾಗಿದೆ. INI ಸ್ಟೇಟಸ್ ಎಂಬುದು Institute of National Importance ಅಂದರೆ ರಾಷ್ಟ್ರೀಯ ಮಹತ್ವದ ಸಂಸ್ಥೆಗಳಲ್ಲಿ ಒಂದು.

ಸ್ನಾತಕೋತ್ತರ ಪದವಿ ಕೋರ್ಸ್‌ಗಳು (2 ವರ್ಷ)

ಮಾಸ್ಟರ್ ಆಫ್ ಡಿಸೈನ್ ಇನ್ ಫುಟ್‌ವೇರ್ ಡಿಸೈನ್ ಆ್ಯಂಡ್ ಪ್ರೊಡಕ್ಷನ್ /ಮಾಸ್ಟರ್ ಆಫ್ ಡಿಸೈನ್ ಇನ್ ಫ್ಯಾಷನ್ ಡಿಸೈನ್

MBA ಇನ್ ರಿಟೇಲ್ ಆ್ಯಂಡ್ ಫ್ಯಾಷನ್ ಮರ್ಚಂಟೈಸ್

FDDI ಅಡಿ ಕಾರ್ಯನಿರ್ವಹಿಸುವ ಶೈಕ್ಷಣಿಕ ಸಂಸ್ಥೆಗಳು

School of Footwear Design & Production (FDP)
School of Fashion Design (FD)
School of Leather Goods and Accessories Design (LGAD) School of Retail and Fashion Merchandise (RFM)

ಉದ್ಯೋಗಾವಕಾಶಗಳು

ಫ್ಯಾಷನ್ ಡಿಸೈನರ್ಸ್, ಆಕ್ಸೆಸರಿ ಡಿಸೈನರ್ಸ್, ಟೆಕ್ಸ್‌ಟೈಲ್ ಡಿಸೈನರ್ಸ್, ಫ್ಯಾಷನ್ ಇಲ್ಲಸ್ಟ್ರೇಟರ್ಸ್, ಸ್ಪೋರ್ಟ್ಸ್‌ವಿಯರ್ ಡಿಸೈನರ್ಸ್, ಡಿಜಿಟಲ್ ಡಿಸೈನರ್ಸ್ ಇನ್ ಫ್ಯಾಷನ್, ಫ್ಯಾಷನ್ ಇಂಡಸ್ಟ್ರಿ ಆ್ಯಂಡ್ ಎಜುಕೇಟರ್ಸ್, ಬ್ರ್ಯಾಂಡ್ ಮ್ಯಾನೇಜರ್ಸ್, ಉದ್ಯಮಿಗಳಾಗುವ ಅವಕಾಶ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

XI. Read the following passage and answer the questions that follow:

41. B. What kind of a man war Sardar Patel in his private life?

Ans:- Sardar Patel was Kind and Considerate. At times, he even became emotional, where his friends and followers were concerned in his private life.

XII Answer the following question in about 8-10 sentences:

42. According to the poet, his grandmother was genius, Substantiate this Statement.

Ans:- The tree may be high or spreading, she would have to climb. Even at the age of 62 she climbed a tree, she had the capacity or climbing the tree very quickly. She has this skill. She is fond of climbing a tree since her childhood. She had this gift and enjoying a lot. She feels happy to climb a tree. She had more pleasure in a tree than in a lift.

OR

The pathetic figure of Jazz player is lifted by his music. Justify.

Ans:- He wanted to tell that he was a Black Man. He had been sent here to preach the Black Gospel of Jazz. He was preaching it with words by loud musical sound. When he started to preach, he was transformed into a Bird. That Bird gathers its wings and flies high, high and higher until it flies away. Otherwise he come back to find himself as a Black man again.

OR

How does the poet portray the positive side of India in the poem 'The song of India'?

Ans:- The poet was answered by a wonderful vision. A vision of new and bright future. In the vision he saw the mother (motherland) rise gloriously against the blue sky. The three milky - white oceans, i.e., the Arabian sea, Bay of Bengal and the Indian Ocean, rose and fell with steady powerful motions. (There was calm on the sea's). Their waves sent forth a wonderful and illuminated her. She seemed to sit of this illuminating light to write the 'book of marrow'. (A new reign, a new future'.) She foresaw a new 'destiny', a new bright future like the bright sun - god, who destroyed darkness with his powerful rays, this new future wiped out the sorrow of her people. This new future will arrive like a 'clear dawn'. In this new future the sorrows and hardships of her people will flee like a nightmare (bad dream). This new future (sun beam) will act like the 'Hand that saves' her people.

XIII. Answer the following questions

43. Why did Nehru choose Ambedkar as the law minister?

Ans:- Dr. Ambedkar had talented skill in the field of law and legislation. He had a foresighted vision of social Justice. Above all he had succeeded in his own campaigns against social injustice. From all points of view he deserved person to choose as the law minister. Therefore Nehru chose him as the first law minister of free India.

44. What lessons did Keilis Borok learn at the Geneva Summit?

Ans:- Kellis Borok learn the following lessons at the Geneva summit.

i) he had similar people who think and inter act like him all over the world.

ii) There is no need to feel lonely in abroad.

iii) Where there is science, there is hope of survival and well being for all.

45. Why does the poet have the feeling that he is imprisoned?

Ans:- The poet have the feeling that he is imprisoned because in space there is no communication, no letters, no mail. Nobody visits him. Totally he was alone and he felt that he was in prison and he imprisoned in it.

46. How can you say that Don Anselmo was passionate about his land and the children of Rio en Medio?

Ans:- Don Anselmo was very passionate about his land and the children. His land had come from his ancestors. He lived in that land from his birth. He took possession of his house from his mother. Everyone in the village were his relatives and the children are his nieces, nephews and grand children. Every time a child has been born in Rio en Medio, a tree was planted in its name.

47. How can you say that Pepe was loyal to Columbus?

Ans:- We feel Pepe was loyal to Columbus because he was obedient to him and prefer to accompany though he was off duty. He requested Columbus to be careful from seamen because sometimes they were dangerous. He took more concern about Columbus.

48. What do you think is the writer of 'Narayanapur incident' trying to impress upon the readers?

Ans:- This incident was most common during 1942.

(Contd….)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHEMATICS

REVISION : MODEL QUESTIONS

47. Solve the different equation $x \log x \frac{dy}{dx} + y = \frac{2}{x}\log x$

Ans :– Given $\frac{dy}{dx} + \frac{y}{x \log x} = \frac{2}{x^2}$ is a L.D.E

compare with $\frac{dy}{dx} + py = Q$

we get, $P = \frac{1}{x \log x}$ and $Q = \frac{2}{x^2}$

(......Contd)

$$I.F = e^{\int p dx} = e^{\int \frac{1}{x \log x} dx} = e^{\log(\log x)} \quad (\log x = t)$$

$$= \log x$$

$$y \log x = \int \frac{2}{x^2} \log x \, dx + c$$

$$= 2\int \frac{1}{x^2} \log x \, dx + c \quad \text{(integrating by parts)}$$

$$y \log x = 2\left[\log x\left(\frac{-1}{x}\right) - \int \frac{1}{x}\left(\frac{-1}{x}\right) dx\right] + c$$

$$y \log x = \frac{-2\log x}{x} - \frac{2}{x} + c$$

48) Derive the equation of plane in normal form. (both in the vector and Cartesian form)

Ans:- Consider a plane whose perpendicular distance is d. If $\overrightarrow{ON}$ is the normal from the origin to the plane n is unit normal vector along $\overrightarrow{ON}$.

$$\overrightarrow{ON} = d\hat{n}$$



Let P (x y z) be any orbitary point in the plane on

$$\overrightarrow{NP} \perp \text{ to } \overrightarrow{ON}$$

$$\therefore \overrightarrow{NP} \cdot \overrightarrow{ON} \rightarrow (1)$$

Let $\vec{r}$ be the position vector of a point then

$$\overrightarrow{NP} = \overrightarrow{OP} - \overrightarrow{ON}$$

$$= \vec{r} - d\hat{n} \Rightarrow (\vec{r} - d\hat{n})\hat{n} = 0$$

$$\vec{r}\hat{n} - d\hat{n}\hat{n} = 0$$

$$\vec{r}\hat{n} - d = 0 \quad \text{as } \hat{n} \cdot \hat{n} = 1$$

$$\vec{r} \cdot \hat{n} = d$$

This is the vector equation of plane.

Cartesian form:

Since $\overrightarrow{OP} = \vec{r} = x\hat{i} - y\hat{j} + z\hat{k}$ then $n = l\hat{i} - m\hat{j} + n\hat{k}$

$$\vec{r} \cdot \vec{n} \; d = \Rightarrow (x\hat{i} + y\hat{j} + z\hat{k}).(l\hat{i} - m\hat{j} + n\hat{k}) = d$$

$$lx + my + nz = d$$

49)

Show that $\begin{vmatrix} x+y+2z & x & y \\ z & y+z+2x & y \\ z & x & z+x+2y \end{vmatrix} = 2(x+y+z)^3$

Ans :– $c_1 = c_1 + c_2 + c_3$ on LHS

$$LHS \begin{vmatrix} 2x+2y+2z & x & y \\ 2x+2y+2z & y+z+2x & y \\ 2x+2y+2z & x & z+x+2y \end{vmatrix}$$

$$\Rightarrow (2x+2y+2z)\begin{vmatrix} 1 & x & y \\ 1 & y+z+2x & y \\ 1 & x & z+x+2y \end{vmatrix}$$

$R_2 = R_2 - R_1$ and $R_3 = R_3 - R_1$

$$\Rightarrow 2(x+y+z)\begin{vmatrix} 1 & x & y \\ 0 & y+z+x & 0 \\ 0 & 0 & z+x+y \end{vmatrix}$$

$$\Rightarrow 2(x+y+z)(x+y+z)(x+y+z) = 2(x+y+z)^3$$

MODEL QUESTIONS -2

I. Answer ALL of the following:-

1. If $y = \cos(1-x)$ find $\frac{dy}{dx} =$

Ans :– Differentiating w.r.t we get

$$\frac{dy}{dx} = -[-\sin(1-x)] = \sin(1-x)$$

2. If $A = \begin{bmatrix} 1 & 2 \\ 4 & 2 \end{bmatrix}$ then find $|2A|$.

Ans :– 1st method : $2A = \begin{bmatrix} 2 & 4 \\ 8 & 4 \end{bmatrix}$

$$|2A| = \begin{vmatrix} 2 & 4 \\ 8 & 4 \end{vmatrix} = 8 - 32 = -24$$

2nd method : $|A| = \begin{vmatrix} 1 & 2 \\ 4 & 2 \end{vmatrix} = 2 - 8 = -6$

$$|2A| = 2^2(-6) = 4 \times -6 = -24$$

3. Evaluate $\int(2x - 3\cos x + e^x)dx$.

Ans :– $\int 2x\,dx - 3\int \cos x\,dx + \int e^x\,dx$.

$$= 2\frac{x^2}{2} - 3\sin x + e^x + c$$

$$= x^2 - 3\sin x + e^x + c$$

4. Define unit vector.

Ans:- A vector having magnitude 1 is called unit vector.

5. If a line makes angle 90^0, 60^0 and 30^0 with the direction of x y z axis respectively, find its cosines.

(Contd…….)

ಸಿ.ಎಂ ವಿಶೇಷ ಅನುದಾನ • ಕಾಮಗಾರಿ ಪಟ್ಟಿ, ಮೊತ್ತ, ಏಜೆನ್ಸಿ ವಿವರ ಅಗತ್ಯ

₹25 ಕೋಟಿಗೆ ಶಾಸಕರ ಪೈಪೋಟಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿಧಾನಸಭೆಯಲ್ಲಿನ ತಮ್ಮ ಪಕ್ಷದ ಸದಸ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿರುವ ತಲಾ ₹25 ಕೋಟಿ ವಿಶೇಷ ಅನುದಾನ ಮಂಜೂರು ಮಾಡಿಸಿಕೊಳ್ಳಲು 'ಕೈ' ಶಾಸಕರು ಪೈಪೋಟಿಗೆ ಬಿದ್ದಿದ್ದಾರೆ.

ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಾದರೆ ಅನುದಾನ ಸಿಕ್ಕಿ ದುರುಪಯೋಗವಾಗಲಿದೆ. ಈ ಕಾರಣದಿಂದ ವಿಶೇಷ ಅನುದಾನವನ್ನು ಆದಷ್ಟು ಬೇಗ ಮಂಜೂರು ಮಾಡಿಸಿಕೊಳ್ಳಲು ಶಾಸಕರು ಆತುರ ತೋರುತ್ತಿದ್ದಾರೆ.

ವಿಶೇಷ ಅನುದಾನ ಪಡೆಯಬೇಕಾದರೆ, ಕಾಮಗಾರಿಗಳ ಪಟ್ಟಿ, ಅದಕ್ಕೆ ತಗಲುವ ಅಂದಾಜು ಮೊತ್ತ ಮತ್ತು ಅನುಷ್ಠಾನಗೊಳಿಸಬೇಕಾದ ಏಜೆನ್ಸಿಯ ವಿವರಗಳನ್ನು ಸಲ್ಲಿಸಬೇಕಿದೆ. ಕೆಲವು ಶಾಸಕರು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಏಜೆನ್ಸಿಗಳ ವಿವರ ಸಹಿತ ಮುಖ್ಯಮಂತ್ರಿಗೆ ಪ್ರಸ್ತಾವ ಸಲ್ಲಿಸಿದ್ದಾರೆ. ಕೆಲವರು ನೇರವಾಗಿ ಇಲಾಖೆಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

'ಆರ್ಥಿಕ ಇಲಾಖೆಗೆ ಈಗಾಗಲೇ ಸುಮಾರು 25 ಶಾಸಕರು ಕಾಮಗಾರಿಗಳ ಪಟ್ಟಿ ಸಹಿತ ಪ್ರಸ್ತಾವ ಸಲ್ಲಿಸಿದ್ದಾರೆ' ಎಂದು ಇಲಾಖೆಯ ಕಾರ್ಯದರ್ಶಿ (ವೆಚ್ಚ) ಎಂ.ಟಿ. ರೇಜು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಶಾಸಕರ ಪ್ರಸ್ತಾವದಂತೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಅಭಿವೃದ್ಧಿ ಕಾಮಗಾರಿಗಳನ್ನು ಅಗತ್ಯ ಕ್ರಮ ಜರುಗಿಸುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್ ಪತ್ರ ಬರೆದಿದ್ದಾರೆ.

ಆರ್ಥಿಕ ಇಲಾಖೆಯಿಂದ ಹೊರಡಿಸಿದ ಅನಧಿಕೃತ ಟಿಪ್ಪಣಿಗಳಲ್ಲಿ ತಿಳಿಸಿರುವ ಮೊತ್ತಕ್ಕೆ ಅನುಗುಣವಾಗಿ ಶಾಸಕರಿಂದ ಕ್ರಿಯಾ ಯೋಜನೆ ಪಡೆಯಬೇಕು. ಜತೆಗೆ, ಆಡಳಿತಾತ್ಮಕ ಅನುಮೋದನೆ ನೀಡಿ ಕೂಡಲೇ ಕಾಮಗಾರಿಗಳನ್ನು ಆರಂಭಿಸಲು ಕ್ರಮ ವಹಿಸಬೇಕು ಎಂದೂ ಅವರು ಸೂಚನೆ ನೀಡಿದ್ದಾರೆ.

ಕಾಮಗಾರಿಗಳ ಅನುಷ್ಠಾನಕ್ಕೆ ಅನುದಾನ ಲಭ್ಯತೆ ಇಲ್ಲದೇ ಇದ್ದರೂ ಆರ್ಥಿಕ ಇಲಾಖೆಯಿಂದ ತಿಳಿಸಿದ ಮೊತ್ತಕ್ಕೆ ಎದುರಾಗಿ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಅನುಷ್ಠಾನಗೊಳಿಸಬೇಕು. ನಂತರ ಈ ಕಾಮಗಾರಿಗಳ ಬಿಲ್‌ಗಳನ್ನು ಸೃಜಿಸಿರುವ ಮೊತ್ತಕ್ಕೆ ಅನುಸಾರವಾಗಿ ಹೆಚ್ಚುವರಿ ಅನುದಾನ ಒದಗಿಸುವಂತೆ ಕೋರಿ ಸೂಕ್ತ ಪ್ರಸ್ತಾವ ಸಲ್ಲಿಸಬೇಕು. ಕಾಮಗಾರಿ ಅನುಷ್ಠಾನದಲ್ಲಿ ವಿಳಂಬಕ್ಕೆ ಅವಕಾಶ ಇರಬಾರದು ಎಂದೂ ಅವರು ಸೂಚನೆ ನೀಡಿದ್ದಾರೆ.

ಅನುದಾನ: ಆರ್ಥಿಕ ಇಲಾಖೆಯ ಷರತ್ತು

- ಶಾಸಕರು ಕೋರಿದ ಕಾಮಗಾರಿಗಳಿಗೆ ಒಮ್ಮೆ ಮುಖ್ಯಮಂತ್ರಿ ವಿಶೇಷ ಅನುದಾನ ಮಂಜೂರು ಮಾಡಿ ಅನುಮೋದನೆ ನೀಡಿದ ಬಳಿಕ ಮತ್ತೆ ವಿಶೇಷ ಅನುದಾನದಡಿ ಯಾವುದೇ ಹೊಸ ಕಾಮಗಾರಿಗಳ ಪ್ರಸ್ತಾವಗಳನ್ನು ಮಂಜೂರಾತಿಗೆ ಸಲ್ಲಿಸುವಂತಿಲ್ಲ
- ಅನುಮತಿ ನೀಡಿದ ಅನುದಾನದ ಮಿತಿಯಲ್ಲಿಯೇ ಕಾಮಗಾರಿಗಳ ಅಂದಾಜನ್ನು ಪ್ರಚಲಿತ ದರಪಟ್ಟಿಯ ಅನ್ವಯ ತಯಾರಿಸಬೇಕು
- ಅಂದಾಜು ಅನುದಾನದ ಮಿತಿಯಲ್ಲಿ ಟೆಂಡರ್ ಪ್ರೀಮಿಯಂ ಕೂಡಾ ಒಳಗೊಂಡಿರಬೇಕು. ಯಾವುದೇ ಕಾರಣಕ್ಕೂ ಅಂದಾಜಿನಲ್ಲಿ ನಿರ್ಣಾಯಕ ವಿವರಗಳನ್ನು ಕೈಬಿಡದಂತೆ ನೋಡಿಕೊಳ್ಳಬೇಕು
- ಪ್ರಸ್ತಾಪಿತ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು
- ಪ್ರಸ್ತಾಪಿತ ಕಾಮಗಾರಿಗಳ ಅಂದಾಜು ಮೊತ್ತ ಪರಿಷ್ಕರಿಸಲು ಅವಕಾಶ ಇಲ್ಲ
- 15 ದಿನಗಳ ಒಳಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕು

ಗುತ್ತಿಗೆದಾರ ಪಿಚ್ಚೇಶ್ವರರಾವ್ ಮನೆ-ಕಚೇರಿ ಮೇಲೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಶ್ರೀನಿವಾಸ್ ಕನ್‌ಸ್ಟ್ರಕ್ಷನ್ ಮಾಲೀಕ, ಜಿಲ್ಲೆಯ ಪ್ರಮುಖ ಗುತ್ತಿಗೆದಾರ ಪಿಚ್ಚೇಶ್ವರ ರಾವ್ ಅವರ ಮನೆ ಮತ್ತು ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬುಧವಾರ ದಾಳಿ ನಡೆಸಿದರು.

ತಾಳೂರು ರಸ್ತೆಯಲ್ಲಿರುವ ಅವರ ಮನೆ ಹಾಗೂ ಕಚೇರಿಯ ಮೇಲೆ ಬೆಳಿಗ್ಗೆ ದಾಳಿ ನಡೆಸಿದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಐದಾರು ಗಂಟೆ ಪರಿಶೀಲಿಸಿದರು.

ಪಿಚ್ಚೇಶ್ವರ ರಾವ್ ಅವರು ರಸ್ತೆ, ಕಾಲುವೆಗಳು ಸೇರಿ ಬೃಹತ್ ಕಾಮಗಾರಿಗಳ ಗುತ್ತಿಗೆದಾರರು. ಶ್ರೀನಿವಾಸ ಕನ್‌ಸ್ಟ್ರಕ್ಷನ್ಸ್ ಮತ್ತು ಶ್ರೀನಿವಾಸ ಮಿನರಲ್ಸ್ ಹೆಸರಿನಲ್ಲಿ ಅವರು ಗುತ್ತಿಗೆ ಕಾಮಗಾರಿಗಳನ್ನು ನಡೆಸುತ್ತಾರೆ.

ಆದಾಯ ತೆರಿಗೆ ವಂಚನೆ ಮತ್ತು ಆದಾಯಕ್ಕೂ ಮೀರಿದ ಆಸ್ತಿ ಸಂಪಾದನೆಯ ಆರೋಪದ ಮೇಲೆ ಬೆಂಗಳೂರಿನ ಆದಾಯ ತೆರಿಗೆ ಇಲಾಖೆಯ ನಾಲ್ವರು ಅಧಿಕಾರಿಗಳು ದಾಳಿ ನಡೆಸಿದ್ದಾರೆ.

'ಕಾರ್ಯಾಚರಣೆ ವೇಳೆ ಪಿಚ್ಚೇಶ್ವರ ರಾವ್ ಮನೆಯಲ್ಲಿದ್ದರು. ಅವರಿಂದ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಡಿ.ಕೆ. ಶಿವಕುಮಾರ್ ಆಪ್ತರ ಮನೆಯಲ್ಲೂ ಶೋಧ

ಕೊಪ್ಪಳ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತರಾದ ವಿ.ಆರ್. ಪಾಟೀಲ್ ಹಾಗೂ ಎಸ್.ಆರ್. ಪಾಟೀಲ್ ಅವರ ನಿವಾಸದ ಮೇಲೆ ಬುಧವಾರ ಐ.ಟಿ (ಆದಾಯ ತೆರಿಗೆ) ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಕೊಪ್ಪಳ ತಾಲ್ಲೂಕಿನ ಲಿಂಗಾಪುರ ಗ್ರಾಮದಲ್ಲಿರುವ ಪಾಟೀಲರ ಮನೆ ಹಾಗೂ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ಏಕಕಾಲಕ್ಕೆ ದಾಳಿ ನಡೆದಿದೆ.

ಪಾಟೀಲ ಅವರು, ಇಲ್ಲಿಗೆ ಸಮೀಪದ ಕಿಡದಾಳ ಗ್ರಾಮದಲ್ಲಿರುವ ಶಾರದಾ ಇಂಟರ್ ನ್ಯಾಷನಲ್ ಶಾಲೆಯ ಮಾಲೀಕರೂ ಹೌದು. ಅಂದಾಜು 20 ಅಧಿಕಾರಿಗಳನ್ನು ಒಳಗೊಂಡ ತಂಡ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದೆ ಎಂದು ಮೂಲಗಳು ತಿಳಿಸಿವೆ.

ಗವಿಮಠದ ಜಾತ್ರೆಯ ಮಹಾರಥೋತ್ಸವದಲ್ಲಿ ಪಾಲ್ಗೊಳ್ಳಲು ಬಂದಿದ್ದ ಶಿವಕುಮಾರ್ ಅವರು ಪಾಟೀಲರ ಶಾಲೆಗೂ ಭೇಟಿ ನೀಡಿದ್ದರು.

ಬಾಳ ಬಂಡಿ...

ಇದು ಬರಿಯ ಬೈಕ್ ಅಲ್ಲ, ಕುಟುಂಬವೊಂದರ ಬಾಳ ಬಂಡಿ. ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ ತುತ್ತಿನ ಚೀಲ ತುಂಬಿಸಲು ಬುಧವಾರ ಹೊರಟಿದ್ದ ಪತಿಯೊಂದಿಗೆ ಮಕ್ಕಳನ್ನು ಅಪ್ಪಿ ಕುಳಿತಿರುವ ಮಡದಿ

ಪ್ರಜಾವಾಣಿ ಚಿತ್ರ:ಅನೂಪ್ ರಾಘ.ಟಿ

ಹುಕ್ಕಾ ನಿಷೇಧಿಸಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎಲ್ಲ ಬಗೆಯ ಹುಕ್ಕಾ ಉತ್ಪನ್ನಗಳ ಮಾರಾಟ, ಸೇವನೆ, ಅವುಗಳ ಪರ ಜಾಹೀರಾತು, ಸೇವನೆಗೆ ಪ್ರಚೋದನೆ ಮತ್ತು ಸಂಗ್ರಹಣೆ ನಿಷೇಧಿಸಿ ಆರೋಗ್ಯ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಸಾರ್ವಜನಿಕರ ಆರೋಗ್ಯ ಕಾಪಾಡಲು ಸಂವಿಧಾನದ 47ನೇ ವಿಧಿಯಲ್ಲಿ ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರ ಬಳಸಿ ಈ ಆದೇಶ ಹೊರಡಿಸಿದೆ. ತಂಬಾಕು ಅಥವಾ ನಿಕೋಟಿನ್ ಒಳಗೊಂಡ ಹುಕ್ಕಾ, ತಂಬಾಕು ರಹಿತ ಮತ್ತು ನಿಕೋಟಿನ್ ರಹಿತ ಹುಕ್ಕಾ, ಸ್ವಾದಭರಿತ, ಮೊಲಾಸಿಸ್, ಶಿಶಾ ಒಳಗೊಂಡ ಹುಕ್ಕಾಗಳನ್ನು ನಿಷೇಧಿಸಲಾಗಿದೆ.

ಆದೇಶ ಉಲ್ಲಂಘಿಸಿದವರ ವಿರುದ್ಧ ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನಗಳ (ಕೋಟ್ಪಾ) ಕಾಯ್ದೆ, ಮಕ್ಕಳ ಆರೈಕೆ ಮತ್ತು ರಕ್ಷಣೆ ಕಾಯ್ದೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ, ಕರ್ನಾಟಕ ವಿಷ (ಸ್ವಾಧೀನ ಮತ್ತು ಮಾರಾಟ) ಕಾಯ್ದೆ, ಭಾರತೀಯ ದಂಡ ಸಂಹಿತೆ ಹಾಗೂ ಅಗ್ನಿ ನಿಯಂತ್ರಣ ಮತ್ತು ಸುರಕ್ಷತಾ ಕಾಯ್ದೆಗಳ ಅಡಿ ಕ್ರಮ ಜರುಗಿಸುವುದಾಗಿ ಆದೇಶದಲ್ಲಿ ತಿಳಿಸಿದೆ.

'ಕೋಟ್ಪಾ ಕಾಯ್ದೆಯಡಿ ಹುಕ್ಕಾವನ್ನು ತಂಬಾಕು ಎಂದು ಪರಿಗಣಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನಕ್ಕೆ ಅವಕಾಶವಿಲ್ಲ. ಮಕ್ಕಳು ಮತ್ತು ವಿದ್ಯಾರ್ಥಿಗಳಿಗೆ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧಿಸಲಾಗಿದೆ. ಕರ್ನಾಟಕ ವಿಷ (ಸ್ವಾಧೀನ ಮತ್ತು ಮಾರಾಟ) ಕಾಯ್ದೆ ಅಡಿಯಲ್ಲಿ ನಿಕೋಟಿನ್ ಅನ್ನು ವಿಷ ಎಂದು ಪರಿಗಣಿಸಲಾಗಿದೆ' ಎಂಬ ವಿವರಣೆ ಆದೇಶದಲ್ಲಿದೆ.

ಹುಕ್ಕಾ ಆರೋಗ್ಯಕ್ಕೆ ಅತ್ಯಂತ ಮಾರಕ. ಹುಕ್ಕಾ ಬಾರ್‌ಗಳು ಅಗ್ನಿ ಅನಾಹುತಗಳಿಗೆ ಕಾರಣವಾಗುತ್ತಿವೆ. ಹೀಗಾಗಿ ಹುಕ್ಕಾ ನಿಷೇಧಿಸಲಾಗಿದೆ ಎಂದು ಇಲಾಖೆ ಹೇಳಿದೆ.

ರಜೆ ಮೇಲೆ ತೆರಳಿದ ಕೆಪಿಎಸ್‌ಸಿ ಕಾರ್ಯದರ್ಶಿ

ಬೆಂಗಳೂರು: ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಕೆಲವು ಸದಸ್ಯರು ಮತ್ತು ಕಾರ್ಯದರ್ಶಿ ನಡುವಿನ ಜಟಾಪಟಿ ತಾರಕಕ್ಕೇರಿದ ಬೆನ್ನಲ್ಲೆ, ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) 10 ದಿನಗಳ (ಫೆ.7ರಿಂದ 17ರವರೆಗೆ) ಗಳಿಕೆ ರಜೆ ಮಂಜೂರು ಮಾಡಿ ಆದೇಶ ಹೊರಡಿಸಿದೆ.

ಲತಾಕುಮಾರಿ ಅವರ ರಜಾ ಅವಧಿಯಲ್ಲಿ ಕಾರ್ಯದರ್ಶಿ ಹುದ್ದೆಯನ್ನು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ರಾಕೇಶ್ ಕುಮಾರ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ. ವೈಯಕ್ತಿಕ ನೆಲೆಯಲ್ಲಿ ಲತಾ ಕುಮಾರಿ ಅವರಿಗೆ ಗಳಿಕೆ ರಜೆ ಮಂಜೂರು ಮಾಡಲಾಗಿದೆ ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಕೆಪಿಎಸ್‌ಸಿ ಕಾನೂನು ಮುಖ್ಯಸ್ಥ (ಎಚ್‌ಎಲ್‌ಸಿ) ಹುದ್ದೆಗೆ ನೇಮಕ ವಿಷಯದಲ್ಲಿ ಆರಂಭಗೊಂಡ ಸಂಘರ್ಷವು ರಾಜ್ಯ ಸರ್ಕಾರ ಮತ್ತು ರಾಜಭವನದವರೆಗೂ ತಲುಪಿದೆ. 'ಆಯೋಗದ ಆಯ್ಕೆ ಸಮಿತಿ ಸೂಚಿಸಿರುವ ಅಭ್ಯರ್ಥಿಯನ್ನು ಎಚ್‌ಎಲ್‌ಸಿ ಹುದ್ದೆಗೆ ನೇಮಿಸಿ ತಕ್ಷಣ ಆದೇಶ ಹೊರಡಿಸಬೇಕು. ಅದು ಸಾಧ್ಯವಾಗದೇ ಇದ್ದರೆ ರಜೆ ಮೇಲೆ ತೆರಳಬೇಕು' ಎಂದು ಕಾರ್ಯದರ್ಶಿ ಮೇಲೆ ಒತ್ತಡ ಹೇರಲಾಗಿತ್ತು ಎನ್ನಲಾಗಿದೆ. ಅದಕ್ಕೆ ಪೂರಕ ಎಂಬಂತೆ ಅವರಿಗೆ ಗಳಿಕೆ ರಜೆ ಮಂಜೂರು ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ.

ಸಂಕ್ಷಿಪ್ತ ಸುದ್ದಿ

ವಂಟಮೂರಿ: ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ ಆರೋಪಪಟ್ಟಿ ಸಲ್ಲಿಕೆ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿಯಲ್ಲಿ ಮಹಿಳೆ ವಿವಸ್ತ್ರಗೊಳಿಸಿ, ವಿದ್ಯುತ್ ಕಂಬಕ್ಕೆ ಕಟ್ಟಿ ಹಲ್ಲೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿ ಸಿಐಡಿ ಅಧಿಕಾರಿಗಳು ಬುಧವಾರ ಆರೋಪಪಟ್ಟಿ ಸಲ್ಲಿಸಿದ್ದಾರೆ.

ಬೆಳಗಾವಿಯ ನಾಲ್ಕನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ 12 ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾದ ಬಾಲಕನ ವಿರುದ್ಧದ ಚಾರ್ಜ್‌ಶೀಟ್ ಫೆಬ್ರುವರಿ 8ರಂದು ಬಾಲ ನ್ಯಾಯ ಮಂಡಳಿಗೆ ಸಲ್ಲಿಕೆಯಾಗಲಿದೆ.

2023ರ ಡಿಸೆಂಬರ್ 10ರಂದು ಪ್ರೇಮಿಗಳು ಮನೆ ಬಿಟ್ಟು ಹೋದರು ಎಂಬ ಕಾರಣಕ್ಕೆ, ಯುವತಿಯ ಪಾಲಕರು ಯುವಕನ ತಾಯಿಯನ್ನು ಬೆತ್ತಲೆಗೊಳಿಸಿ, ಕಂಬಕ್ಕೆ ಕಟ್ಟಿ ಗುಂಪಾಗಿ ಹಲ್ಲೆ ಮಾಡಿದ್ದರು. ಡಿಸೆಂಬರ್ 11ರಂದು ಕಾಕತಿ ಪೊಲೀಸರು ಪ್ರಕರಣ ದಾಖಲಿಸಿದ್ದರು. ಕರ್ನಾಟಕ ಹೈಕೋರ್ಟ್ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ರಾಜ್ಯ ಸರ್ಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿದೆ.

ಡಿ. 31ರೊಳಗೆ ಕಂಪ್ಯೂಟರ್ ಪರೀಕ್ಷೆ ಉತ್ತೀರ್ಣ ಕಡ್ಡಾಯ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು 2024ರ ಡಿ. 31ರ ಒಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಅಧಿಸೂಚನೆ ಹೊರಡಿಸಿದೆ. ಈ ಹಿಂದೆ 2023ರ ಡಿ. 31ರ ಗಡುವು ವಿಧಿಸಲಾಗಿತ್ತು.

ಈ ಉದ್ದೇಶದಿಂದ ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು– 2012ರ ತಿದ್ದುಪಡಿಗೆ ಕರಡು ನಿಯಮವನ್ನು ಡಿಪಿಎಆರ್ ಪ್ರಕಟಿಸಿದೆ. ಈ ನಿಯಮಕ್ಕೆ ಆಕ್ಷೇಪಣೆ ಸಲ್ಲಿಸಲು ಬಯಸುವವರು 15 ದಿನಗಳ ಒಳಗೆ ಡಿಪಿಎಆರ್ ಕಾರ್ಯದರ್ಶಿಗೆ ಸಲ್ಲಿಸಬಹುದು ಎಂದೂ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಚಿರತೆ ದಾಳಿ: ಮೂವರಿಗೆ ಗಾಯ

ಗಜೇಂದ್ರಗಡ (ಗದಗ ಜಿಲ್ಲೆ): ಚಿರತೆ ದಾಳಿಯಿಂದ ಬುಧವಾರ ಜಿಗೇರಿ ಗ್ರಾಮದ ಉದಯಕುಮಾರ್ ಶರಣಪ್ಪ ನಿಡಶೇಸಿ (18), ಉಮೇಶ ದೇವಪ್ಪ ಜಿಗಳೂರ (28) ಮತ್ತು ಮುದುಕಪ್ಪ ರಾಮಪ್ಪ ಕನಗೇರಿ (28) ಎಂಬುವರು ಗಾಯಗೊಂಡಿದ್ದಾರೆ.

ಬಾಳೆಗೊನೆ ಕೀಳಲು ಹೋದ ಸಂದರ್ಭದಲ್ಲಿ ಉದಯಕುಮಾರ್ ಮೇಲೆ ದಾಳಿ ನಡೆದ ಕೆಲ ಹೊತ್ತಿನಲ್ಲೇ ಉಮೇಶ ಮೇಲೆಯೂ ದಾಳಿಯಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು, ಅರವಳಿಕೆ ತಜ್ಞರು ಡ್ರೋಣ್ ಬಳಸಿ ಚಿರತೆ ಪತ್ತೆ ಮಾಡುವ ಕಾರ್ಯಾಚರಣೆ ವೇಳೆ ಬೇಡವೆಂದರೂ ಸ್ಥಳಕ್ಕೆ ತೆರಳಿದ ಮುದುಕಪ್ಪ ಅವರ ಮೇಲೆಯೂ ದಾಳಿ ನಡೆಯಿತು.

'ಗ್ರಾಮಗಳಲ್ಲಿ ಚಿರತೆಗಳು ಕಾಣಿಸಿಕೊಳ್ಳುತ್ತಿವೆ. ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಅವು ಮನುಷ್ಯರ ಮೇಲೆಯೂ ದಾಳಿ ಮುಂದುವರಿಸಿವೆ. ನಮಗೆ ರಕ್ಷಣೆ ನೀಡಬೇಕು' ಎಂದು ಗ್ರಾಮಸ್ಥರು ಕೋರಿದರು.

'ಚಿರತೆ ಸೆರೆ ಹಿಡಿಯಲು ಜಿಗೇರಿ ಗ್ರಾಮದ ಸುತ್ತ ಡ್ರೋಣ್ ಮೂಲಕ ಕಾರ್ಯಾಚರಣೆ ನಡೆದಿದೆ. ಚಿರತೆ ಸೆರೆ ಹಿಡಿಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ' ಎಂದು ಗಜೇಂದ್ರಗಡ ಆರ್‌ಎಫ್‌ಒ ಪ್ರವೀಣಕುಮಾರ ಸಾಸ್ವಿಹಳ್ಳಿ ತಿಳಿಸಿದ್ದಾರೆ.

'ಎಚ್‌.ಡಿ.ಕೆ ಹಾಕಿದ್ದು ಬಿಜೆಪಿ ಶಾಲಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮಂಡ್ಯದಲ್ಲಿ ಈಚೆಗೆ ನಡೆದ ಪ್ರತಿಭಟನೆ ವೇಳೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿಯವರು ಹಾಕಿದ್ದು ಬಿಜೆಪಿಯ ಕೇಸರಿ ಶಾಲಲ್ಲ. ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೋಗಿದ್ದಾಗ ಭಕ್ತನೊಬ್ಬ ಹಾಕಿದ ಶಾಲು ಅದು' ಎಂದು ಶಾಸಕ ಜಿ.ಟಿ. ದೇವೇಗೌಡ ಸಮರ್ಥಿಸಿಕೊಂಡರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಅದು ಬಿಜೆಪಿಯವರ ಶಾಲಲ್ಲ. ಕಾಂಗ್ರೆಸ್‌ನವರು ಅದನ್ನೇ ದೊಡ್ಡದು ಮಾಡಿದ್ದಾರಷ್ಟೆ' ಎಂದು ಪ್ರತಿಕ್ರಿಯಿಸಿದರು. 'ಲೋಕಸಭಾ ಚುನಾವಣೆಯ ದೃಷ್ಟಿಯಿಂದ ಮಾತ್ರ ಬಿಜೆಪಿ–ಜೆಡಿಎಸ್ ಹೊಂದಾಣಿಕೆಯಾಗಿದೆ. ನಮ್ಮ ತತ್ವ– ಸಿದ್ಧಾಂತವೇ ಬೇರೆ; ಬಿಜೆಪಿಯದ್ದೇ ಬೇರೆ. ಕೇಸರಿ ಶಾಲು ಹಾಕಿದಾಕ್ಷಣ ನಮ್ಮ ಸಿದ್ಧಾಂತ ಬದಲಾಗುವುದಿಲ್ಲ' ಎಂದರು.

'ಜನತಾ ಪಕ್ಷ ಕಟ್ಟಿದ ಜಯಪ್ರಕಾಶ್ ನಾರಾಯಣ್, ಪಕ್ಷ ಉಳಿಸಿ ಬೆಳೆಸಿದ ಎಚ್‌.ಡಿ. ದೇವೇಗೌಡರ ಹಾದಿಯಲ್ಲಿ ನಾವು ಸಾಗುತ್ತೇವೆ. ಮೈತ್ರಿ ಮಾಡಿಕೊಂಡ ಮಾತ್ರಕ್ಕೆ ತತ್ವ ಬದಲಾಗದು' ಎಂದು ಹೇಳಿದರು.

ಗೋಕರ್ಣ: ಜಪಾನ್ ಮಹಿಳೆ ನಾಪತ್ತೆ

ಪ್ರಜಾವಾಣಿ ವಾರ್ತೆ

ಗೋಕರ್ಣ: 'ಫೆಬ್ರುವರಿ 4ರಂದು ಇಲ್ಲಿಗೆ ಪ್ರವಾಸಕ್ಕೆ ಬಂದಿದ್ದ ಜಪಾನ್ ದೇಶದ ಎಮಿ ಯಮಾಝಾಕಿ (43) ಎಂಬ ಮಹಿಳೆ, ಸೋಮವಾರ ಬೆಳಿಗ್ಗೆ ರೆಸಾರ್ಟ್‌ನ ಕೊಠಡಿಯಿಂದ ಹೊರ ಹೋದವರು ವಾಪಸ್ ಬಂದಿಲ್ಲ' ಎಂದು ಅವರ ಪತಿ ದೈ ಯಮಾಝಾಕಿ ಮಂಗಳವಾರ ರಾತ್ರಿ ಗೋಕರ್ಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಪತಿ ಮತ್ತು ಪತ್ನಿ ಇಬ್ಬರೂ ಬಂಗ್ಲೆ ಗುಡ್ಡೆಯ ಖಾಸಗಿ ರೆಸಾರ್ಟ್‌ನಲ್ಲಿ ತಂಗಿದ್ದರು. ಎರಡು ದಿನಗಳಿಂದ ಮಹಿಳೆ ಪತ್ತೆ ಆಗಿಲ್ಲ. ಆಕೆಯ ಪತ್ತೆಗಾಗಿ ತೀವ್ರ ಹುಡುಕಾಟ ನಡೆದಿದೆ. ವಿವಿಧ ಆಯಾಮಗಳಿಂದ ತನಿಖೆ ಮುಂದುವರಿದಿದೆ. ಜಪಾನ್ ರಾಯಭಾರ ಕಚೇರಿಗೂ ವಿಷಯ ತಿಳಿಸಲಾಗಿದೆ' ಎಂದು ಪೊಲೀಸ್ ಇನ್‌ಸ್ಪೆಕ್ಟರ್ ವಸಂತ ಆಚಾರಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/2023–24/4606 ದಿನಾಂಕ: 03–02–2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2023-24/BD/WORK_INDENT8063 (Reserved for SC Category)	33.06
2)	PWD/2023-24/RD/WORK_INDENT7458 (Reserved for SC Category)	53.85
3)	PWD/2023-24/RD/WORK_INDENT8214 (Reserved for SC Category)	54.67
4)	PWD/2023-24/OW/WORK_INDENT7391 (Reserved for ST Category)	22.00
5)	PWD/2023-24/BD/WORK_INDENT8137 (Reserved for ST Category)	61.89
6)	PWD/2023-24/BD/WORK_INDENT7941 (General Category)	33.06
7)	PWD/2023-24/BD/WORK_INDENT7943 (General Category)	4.00
8)	PWD/2023-24/BD/WORK_INDENT8138 (General Category)	61.89
9)	PWD/2023-24/BD/WORK_INDENT8326 (General Category)	37.92
10)	PWD/2023-24/BD/WORK_INDENT8327 (General Category)	16.53
11)	PWD/2023-24/BD/WORK_INDENT8325 (General Category)	33.06
12)	PWD/2023-24/BD/WORK_INDENT8136 (General Category)	49.59
13)	PWD/2023-24/RD/WORK_INDENT8199 (General Category)	73.00
14)	PWD/2023-24/RD/WORK_INDENT8204 (General Category)	51.10
15)	PWD/2023-24/RD/WORK_INDENT7403 (General Category)	58.92
16)	PWD/2023-24/RD/WORK_INDENT8224 (General Category)	58.15
17)	PWD/2023-24/RD/WORK_INDENT8230 (General Category)	49.80

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **08–02–2024 ರಂದು 12.00 ಗಂಟೆಯ ವರೆಗೆ.** ಆ)ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **13–02–2024 ರಂದು 16.00 ಗಂಟೆಯ ವರೆಗೆ.** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **14–02–2024 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/799/ಕೆಎಸ್‌ಎಂಸಿಎ/2023–24

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.

ದೂರವಾಣಿ ಸಂ: 0821–2424070, E. mail : dudc_mys@yahoo.co.in

ಸಂ: ತಾಂತ್ರಿಕ ಶಾಖೆ(2)ಘವನಿ/ಸ್ವಭಾ.ಮಿ–02/ಸಿ.ಆರ್–42/2023–24 ದಿನಾಂಕ: 05.02.2024

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ, ಮೈಸೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಸ್.ಬಿ.ಎಂ–2.0 ಯೋಜನೆಯಡಿ ಮೆಟಿರಿಯಲ್ ರಿಕವರಿ ಫೆಸಿಲಿಟೀಸ್ (ಎಂ.ಆರ್.ಎಫ್) ಯ ಸಿವಿಲ್ ಕಾಮಗಾರಿಗಳಿಗೆ ಹಾಗೂ ಐ.ಇ.ಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸರಬರಾಜುದಾರರು/ಏಜೆನ್ಸಿದಾರರು www.eprocurement.karnataka.gov.in ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ.

(ರೂ.ಗಳಲ್ಲಿ)

ಕ್ರ ಸಂ	ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ.
1)	ಮೈಸೂರು ಜಿಲ್ಲೆಯ 03 ನಗರಸಭೆಗಳಲ್ಲಿ ವಾರ್ಷಿಕ ಐ.ಇ.ಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಟೆಂಡರ್ ಕಾಮಗಾರಿ ಇಂಡೆಂಟ್ ನಂ: DMA/2023-24/SE2256	41.97	1.05
2)	ಮೈಸೂರು ಜಿಲ್ಲೆಯ 05 ಪುರಸಭೆಗಳಲ್ಲಿ ವಾರ್ಷಿಕ ಐ.ಇ.ಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಟೆಂಡರ್ ಕಾಮಗಾರಿ ಇಂಡೆಂಟ್ ನಂ: DMA/2023-24/SE2257	69.95	1.74
3)	ಮೈಸೂರು ಜಿಲ್ಲೆಯ 05 ಪಟ್ಟಣ ಪಂಚಾಯಿತಿಗಳಲ್ಲಿ ವಾರ್ಷಿಕ ಐ.ಇ.ಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಟೆಂಡರ್ ಕಾಮಗಾರಿ ಇಂಡೆಂಟ್ ನಂ: DMA/2023-24/SE22593	69.95	1.74
	ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 13.02.2024 ಸಂಜೆ 5.00 ಘಂಟೆಯೊಳಗೆ **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 14.02.2024 ಸಂಜೆ 05.15 ಘಂಟೆಗೆ		
4)	ಹುಣಸೂರು ನಗರಸಭೆಯಲ್ಲಿ ಪಿ.ಇ.ಬಿ ರಚನೆಯ ಪ್ರಸ್ತಾವಿತ 10 ಟಿ.ಪಿ.ಡಿ ಮೆಟಿರಿಯಲ್ ರಿಕವರಿ ಫೆಸಿಲಿಟೀಸ್ (ಎಂ.ಆರ್.ಎಫ್) ನಿರ್ಮಾಣ ಕಾಮಗಾರಿ ಇಂಡೆಂಟ್ ನಂ: DMA/2023-24/OW/WORK_INDENT14246.	83.65	1.68
5)	ನಂಜನಗೂಡು ನಗರಸಭೆಯಲ್ಲಿ ಪಿ.ಇ.ಬಿ ರಚನೆಯ ಪ್ರಸ್ತಾವಿತ 10 ಟಿ.ಪಿ.ಡಿ ಮೆಟಿರಿಯಲ್ ರಿಕವರಿ ಫೆಸಿಲಿಟೀಸ್ (ಎಂ.ಆರ್.ಎಫ್) ನಿರ್ಮಾಣ ಕಾಮಗಾರಿ ಇಂಡೆಂಟ್ ನಂ: DMA/2023-24/OW/WORK_INDENT14233.	83.65	1.68
6)	ಹೂಟಗಳ್ಳಿ ನಗರಸಭೆಯಲ್ಲಿ ಪಿ.ಇ.ಬಿ ರಚನೆಯ ಪ್ರಸ್ತಾವಿತ 10 ಟಿ.ಪಿ.ಡಿ ಮೆಟಿರಿಯಲ್ ರಿಕವರಿ ಫೆಸಿಲಿಟೀಸ್ (ಎಂ.ಆರ್.ಎಫ್) ನಿರ್ಮಾಣ ಕಾಮಗಾರಿ ಇಂಡೆಂಟ್ ನಂ: DMA/2023-24/OW/WORK_INDENT14226.	83.65	1.68
	ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 13.02.2024 ಸಂಜೆ 5.30 ಘಂಟೆಯೊಳಗೆ **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 15.02.2024 ಬೆಳಿಗ್ಗೆ 10.30 ಘಂಟೆಗೆ		

ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು.

DIPR/DDMYS/KSMCA/1013/2023-24

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/23–24/54434–38 ದಿನಾಂಕ:06.02.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಗು.ವಿ.ಸ.ಕಂ.ನಿ ಯ ತಾಂತ್ರಿಕ ನಿರ್ದಿಷ್ಟತೆಯಂತೆ ಕೆಳಗಿನ ವಿದ್ಯುತ್ ಸಾಮಾಗ್ರಿಗಳನ್ನು ತಯಾರಿಕೆ ಮತ್ತು ಪೂರೈಕೆ ಮಾಡುವುದು.

ಪಿ.ಸಿ–1335: 11 ಕೆವಿ 400 ಆಂಪ್ಸ GOS.

ಅಲ್ಪಾವಧಿ: ಪಿ.ಸಿ–1334: 11 ಕೆವಿ 200 ಆಂಪ್ಸ ಸಿಂಗಲ್ ಬ್ರೇಕ್ ಪಾಲಿಮರ್ ಟೈಪ್ ಪೋಸ್ಟ್ ಇನ್ಸುಲೇಟರ್ಸ್ GOS ಮತ್ತು **ಪಿ.ಸಿ–1336:** 11 ಕೆವಿ DOLO ಕಟ್‌ಔಟ್ಸ್

ದಿನಾಂಕ: ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **08.02.2024** ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನ: **23.02.2024**. ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.02.2023/28.02.2023**

ಟೆಂಡರ್ ಮೊತ್ತ: **ಗರಿಷ್ಟ ರೂ. 802.44 ಲಕ್ಷಗಳು** ಮತ್ತು **ಕನಿಷ್ಟ ರೂ. 103.66 ಲಕ್ಷಗಳು.**

ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/786/ಕೆ.ಎಸ್.ಎಂ.ಸಿ.&ಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ ಬೆಂಗಳೂರು ದಕ್ಷಿಣ ವಿಭಾಗ,
ಅಮೃತನಗರ, ಕೋಣನಕುಂಟೆ ಮುಖ್ಯ ರಸ್ತೆ, ಸೌಧಾಮಿನಿ ಲೇಔಟ್, ಬೆಂಗಳೂರು–560 062

ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೆಂದವಿ/ಟೆಂಡರ್/13/2023–24 ದಿನಾಂಕ: 07.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಟೆಂಡರ್)

(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ 4) (ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಮಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಬೆಂಗಳೂರು ದಕ್ಷಿಣ ವಿಭಾಗ) ಬೃ.ಬೆಂ.ಮ.ಪಾ ಬೆಂಗಳೂರು–62, ಇವರು, ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಬೆಂಜಮಂ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಗಳ ಹೆಸರು
1.	ವಾರ್ಡ್ ಸಂಖ್ಯೆ–202 ಉತ್ತರಹಳ್ಳಿಯಲ್ಲಿ ಮಾರ್ಥಾಸ್ ಆಸ್ಪತ್ರೆ ರಸ್ತೆ ಮತ್ತು ಚರ್ಚ್ ರಸ್ತೆ, ವೆಂಕಟಗಿರಿ ಗಾರ್ಡನ್ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು ಹಾಗೂ ಸಹರಾ ಬಡಾವಣೆ ಮುಖ್ಯರಸ್ತೆಯಲ್ಲಿ ಬಾಕಿ ಉಳಿದಿರುವ ಭಾಗ 80 ಅಡಿ ರಸ್ತೆಯಿಂದ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ಸುಬ್ರಮಣ್ಯಪುರ ಮುಖ್ಯರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ಮರುನಿರ್ಮಾಣ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ ಮಾಡುವುದು. ದೇವಸ್ಥಾನದಿಂದ ಎಲಿಗೆಂಟ್ ಅಲ್ಟಿಮಾ ಅಪಾರ್ಟ್‌ಮೆಂಟ್‌ವರೆಗೆ ಆಂಜನೇಯಸ್ವಾಮಿ ದೇವಸ್ಥಾನದ ರಸ್ತೆ, ನಂದಿ ಹೋಮ್ ಅಪಾರ್ಟ್‌ಮೆಂಟ್ ರಸ್ತೆ, 7ನೇ ಮುಖ್ಯರಸ್ತೆ ಬನಶಂಕರಿ 5ನೇ ಹಂತ, ಜಿಟಿ ಬಡಾವಣೆ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಆರ್‌ಸಿಸಿ ಚರಂಡಿ ನಿರ್ಮಾಣ ಮತ್ತು ಕಲ್ವರ್ಟ್ ನಿರ್ಮಾಣ ಮಾಡುವುದು ಆಂಜನೇಯಸ್ವಾಮಿ ದೇವಸ್ಥಾನ ರಸ್ತೆ ನಂದಿ ಹೋಮ್ ಅಪಾರ್ಟ್‌ಮೆಂಟ್ ರಸ್ತೆ ಹಾಗೂ 7ನೇ ಮುಖ್ಯರಸ್ತೆ ಬನಶಂಕರಿ 5ನೇ ಹಂತದಲ್ಲಿ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು. 1ನೇ ಅಡ್ಡರಸ್ತೆ, ಕೇತಾನ್ ಬಡಾವಣೆಯಿಂದ ದೇವಸ್ಥಾನದವರೆಗೆ ತುರಹಳ್ಳಿ ಕಬ್ಬಾಳಮ್ಮ ರಸ್ತೆಯಲ್ಲಿ ಮತ್ತು ರಾಜಾ ಗಾರ್ಡನ್ ಮುಖ್ಯರಸ್ತೆಯಲ್ಲಿ ಆರ್‌ಸಿಸಿ ಚರಂಡಿ ಮತ್ತು ಕಲ್ವರ್ಟ್ ನಿರ್ಮಾಣ, ತುರಹಳ್ಳಿ ಗ್ರಾಮದ ಅಡ್ಡರಸ್ತೆಗಳು ಮತ್ತು ಕರಿಯಣ್ಣಪಾಳ್ಯ ಅಡ್ಡರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ, ದೊಡ್ಡಕಲ್ಲಸಂದ್ರ ಗ್ರಾಮದ ಅಡ್ಡರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಆರ್‌ಸಿಸಿ ಚರಂಡಿ ಮತ್ತು ಕಲ್ವರ್ಟ್‌ಗಳ ನಿರ್ಮಾಣ ವಾರ್ಡ್ ಸಂಖ್ಯೆ–203 ಸುಬ್ರಮಣ್ಯಪುರದ ದೊಡ್ಡಕಲ್ಲಸಂದ್ರ ಗ್ರಾಮದ ಅಡ್ಡರಸ್ತೆ ಮತ್ತು ಉಮಾಮಹೇಶ್ವರಿ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿ ಕಲ್ವರ್ಟ್ ನಿರ್ಮಾಣ, ನಾಯ್ಡು ಬಡಾವಣೆ 8ನೇ ಎ ಮತ್ತು ಬಿ ಅಡ್ಡರಸ್ತೆ, 9ನೇ ಅಡ್ಡರಸ್ತೆ, ಯಾದಾಳಂನಗರ ಅಡ್ಡರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ, ವಾರ್ಡ್ ಸಂಖ್ಯೆ–204 ವಸಂತಪುರದ ವಸಂತಪುರ ಗುಟ್ಟೆ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆಗಳ ನಿರ್ಮಾಣ, ಶ್ರೀಧರ ಆಶ್ರಮ ಮುಖ್ಯರಸ್ತೆ ಮತ್ತು ವಿವಿನಗರ ಅಡ್ಡರಸ್ತೆಗಳಲ್ಲಿ ಮರು ಡಾಂಬರೀಕರಣ ಮಾಡುವುದು (ಸರ್ಕಾರದ ಆದೇಶದ ಕ್ರ ಸಂ.01, 02, 03, 04, 05, 06, 07, 08 & 09) **ಕಾಮಗಾರಿಗಿಟ್ಟ ಅಂದಾಜು ಮೊತ್ತ ರೂ.1300.00 ಲಕ್ಷಗಳು ಇಎಂಡಿ ರೂ.1300000.00**
2.	ವಾರ್ಡ್ ಸಂಖ್ಯೆ–206 ಕೋಣನಕುಂಟೆಯ ಜೆಎಸ್‌ಎಸ್ ಶಾಲೆ ಮತ್ತು ಸರ್ಕಾರಿ ಶಾಲೆ ಹಾಗೂ ಗಣಪತಿಪುರದ 6 ರಿಂದ 12ನೇ ಅಡ್ಡರಸ್ತೆಯವರೆಗೆ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು, ಪಿಎನ್‌ಬಿ ಬಡಾವಣೆಯ 1 ಮತ್ತು 2ನೇ ಮುಖ್ಯ–ರಸ್ತೆಗಳಲ್ಲಿ ಕಲ್ವರ್ಟ್‌ಗಳು ಮತ್ತು ಸಿಸಿ ಚರಂಡಿಗಳ ನಿರ್ಮಾಣ ಮಾಡುವುದು, ಪಿಎನ್‌ಬಿ ಬಡಾವಣೆಯ 1, 2, 3 ಮತ್ತು 4ನೇ ಅಡ್ಡರಸ್ತೆಗಳಲ್ಲಿ ಸಿಸಿ ಚರಂಡಿಗಳ ನಿರ್ಮಾಣ ಮಾಡುವುದು ಕೊತ್ತನೂರು ಕಾಟೇರಮ್ಮ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು ಕೊತ್ತನೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು, ಗೊಟ್ಟಿಗೆರೆ ಧೋಬಿಘಾಟ್‌ನಲ್ಲಿ ಎಲ್ಲಾ ರೀತಿಯ ಕಾಂಪೌಂಡ್ ಮತ್ತು ಸಿಸಿ ರಸ್ತೆಯ ನಿರ್ಮಾಣ 1 ಕೊಳವೆಬಾವಿ ಎರೆಕ್ಷನ್ ಮತ್ತು ಸುಧಾರಣೆ ಮಾಡುವುದು ಜಂಬೂಸವಾರಿದಿಣ್ಣೆ ದಕ್ಷಿಣ ಭಾಗದಲ್ಲಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು, ಜಂಬೂಸವಾರಿದಿಣ್ಣೆ ಉತ್ತರ ಭಾಗದಲ್ಲಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು, ಗೊಟ್ಟಿಗೆರೆ ಗ್ರಾಮ ಮತ್ತು ವೀವರ್ಸ್ ಕಾಲೋನಿ ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು, ವಾರ್ಡ್ ಸಂಖ್ಯೆ–209, ಗೊಟ್ಟಿಗೆರೆಯ ಅಕ್ಷರ್ ವೃತ್ತ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧರಣೆ, ಬಿಟಿಎಸ್ ಬಡಾವಣೆ, ವೀವರ್ಸ್ ಕಾಲೋನಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಸರ್ಕಾರದ ಆದೇಶದ ಕ್ರ ಸಂ. 10, 11, 12, 13, 14, 15, 16, 17, 18, 19 & 20) **ಕಾಮಗಾರಿಗಿಟ್ಟ ಅಂದಾಜು ಮೊತ್ತ ರೂ.1350.00 ಲಕ್ಷಗಳು ಇಎಂಡಿ ರೂ.1350000.00**
3.	ವಾರ್ಡ್ ಸಂಖ್ಯೆ–210 ಕಾಳೇನ ಅಗ್ರಹಾರದ ಬಸವನಪುರ ಗ್ರಾಮದ ಬಸವೇಶ್ವರ ದೇವಸ್ಥಾನದ ರಸ್ತೆ, ಕೊರಮರ ಬೀದಿ, ಮುನಿಸ್ವಾಮಿ ಬಡಾವಣೆ ರಸ್ತೆಗಳು ಮತ್ತು ಓಣಿ ರಸ್ತೆಯಲ್ಲಿ ರಸ್ತೆಗಳ ಸುಧಾರಣೆ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ ಮಾಡುವುದು, ದೊಡ್ಡಕಮ್ಮನಹಳ್ಳಿ ಗ್ರಾಮದ ಹನುಮಂತನಗರದ ಅಡ್ಡರಸ್ತೆಗಳು, ಬಿಕೆ ರೆಸಿಡೆನ್ಸಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಚಿಕ್ಕಕಮ್ಮನಹಳ್ಳಿ ಗ್ರಾಮದ ಚರ್ಚ್ ರಸ್ತೆಯಲ್ಲಿ ರಸ್ತೆಗಳ ಸುಧಾರಣೆ ಮತ್ತು ಆರ್‌ಸಿಸಿ ಚರಂಡಿ ನಿರ್ಮಾಣ ಮಾಡುವುದು, ಎಂಎಲ್‌ಎ ಬಡಾವಣೆ ಮುಖ್ಯ ಮತ್ತು ಅಡ್ಡರಸ್ತೆಗಳಲ್ಲಿ ಎಲ್ಲೇನಹಳ್ಳಿ ಮುಖ್ಯರಸ್ತೆಯಲ್ಲಿ ರಸ್ತೆಗಳ ಸುಧಾರಣೆ ಹಾಗೂ ಆರ್‌ಸಿಸಿ ಚರಂಡಿಗಳ ಬಾಕಿ ಉಳಿಕೆ ಭಾಗವನ್ನು ನಿರ್ಮಾಣ ಮಾಡುವುದು, ಬೇಗೂರು ಹುಳಿಮಾವು ಸಂಪರ್ಕ ರಸ್ತೆ (ಹೊಬೇಬಂಡಿ ರಸ್ತೆ) ಗಳಲ್ಲಿ, ಮರು ಡಾಂಬರೀಕರಣ, ಆರ್‌ಸಿಸಿ ಚರಂಡಿ ಸುಧಾರಣೆ ಮಾಡುವುದು, ಕ್ಲಾಸಿಕ್ ಬಡಾವಣೆಯ 12ನೇ ಎ ಅಡ್ಡರಸ್ತೆಯ ಬಾಕಿ ಉಳಿಕೆ ಭಾಗಕ್ಕೆ ಮರು ಡಾಂಬರೀಕರಣ ಮಾಡುವುದು. (ಸರ್ಕಾರದ ಆದೇಶದ ಕ್ರ ಸಂ. 21, 22, 23, 24 & 25) **ಕಾಮಗಾರಿಗಿಟ್ಟ ಅಂದಾಜು ಮೊತ್ತ ರೂ.1050.00 ಲಕ್ಷಗಳು ಇಎಂಡಿ ರೂ.1050000.00**
4.	ಚಿಕ್ಕತೋಗೂರು ಗ್ರಾಮದ ಮಂಜುನಾಥನಗರದ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು, ಕ್ಷತ್ರಿಯ ನಗರ ರಸ್ತೆ, ಅರಳಿಕಟ್ಟೆ ರಸ್ತೆಯಲ್ಲಿ ರಸ್ತೆಗಳ ಸುಧಾರಣೆ, ಆರ್‌ಸಿಸಿ ಚರಂಡಿ ನಿರ್ಮಾಣ ಮಾಡುವುದು, ಸುಭಾಷ್‌ನಗರ ಮುಖ್ಯರಸ್ತೆಯಲ್ಲಿ ಆರ್‌ಸಿಸಿ ಚರಂಡಿಯ ಬಾಕಿ ಉಳಿಕೆ ನಿರ್ಮಾಣ 1, 6, 7, 8 ಮತ್ತು 10ನೇ ಅಡ್ಡರಸ್ತೆಗಳಲ್ಲಿ ಸಿಸಿ ರಸ್ತೆ ನಿರ್ಮಾಣ, ಸುಭಾಷ್‌ನಗರ ಎ ಬ್ಲಾಕ್‌ನಲ್ಲಿ ಸ್ಮಶಾನ ರಸ್ತೆಗೆ ಡಾಂಬರೀಕರಣ, ನ್ಯೂ ಮೈಕೋ ಬಡಾವಣೆಯ ರಾಘವೇಂದ್ರ ಬಡಾವಣೆ 4ನೇ ಅಡ್ಡರಸ್ತೆ, 1ನೇ ಅಡ್ಡರಸ್ತೆ ಮತ್ತು ಲಕ್ಷ್ಮಿ ಬಡಾವಣೆ ಲಿಂಕ್ ರಸ್ತೆ, ಮೈಕೋ ಬಡಾವಣೆ 3ನೇ ಬಿ ಮುಖ್ಯ ಮತ್ತು ಅಡ್ಡರಸ್ತೆಗಳಲ್ಲಿ ಹಾಗೂ ವಾರ್ಡ್ ಸಂಖ್ಯೆ–211 ಬೇಗೂರಿನ ಮುನೇಶ್ವರ ಬಡಾವಣೆ ಅಡ್ಡರಸ್ತೆಗಳಲ್ಲಿ ರಸ್ತೆಗಳ ಸುಧಾರಣೆ ಹಾಗೂ ಆರ್‌ಸಿಸಿ ಚರಂಡಿ ನಿರ್ಮಾಣ ಮಾಡುವುದು. (ಸರ್ಕಾರದ ಆದೇಶದ ಕ್ರ ಸಂ. 26, 27 & 29) **ಕಾಮಗಾರಿಗಿಟ್ಟ ಅಂದಾಜು ಮೊತ್ತ ರೂ.1250.00 ಲಕ್ಷಗಳು ಇಎಂಡಿ ರೂ.1250000.00**
5.	ವಾರ್ಡ್ ಸಂಖ್ಯೆ–211 ಬೇಗೂರಿನ ಬಸಾಪುರ ಗ್ರಾಮ ಮುಖ್ಯರಸ್ತೆಯಲ್ಲಿ ಬಾಕಿ ಉಳಿಕೆ ನಿರ್ಮಾಣ ಹಾಗೂ ಸುಶ್ರುತಿ ಬಡಾವಣೆ ಅಡ್ಡರಸ್ತೆಗಳಲ್ಲಿ ಡಾಂಬರೀಕರಣ ಮಾಡುವುದು, ಬೆರಟೇನ ಅಗ್ರಹಾರ ಗ್ರಾಮದ ಚೌಡೇಶ್ವರಿ ಬಡಾವಣೆಯಲ್ಲಿ 1, 2, 3, 4 ಮತ್ತು 5ನೇ ಅಡ್ಡರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ, ಇಂದ್ರಮ್ಮ ಬಡಾವಣೆಯಲ್ಲಿ 1ನೇ ಮುಖ್ಯರಸ್ತೆ, 1, 2, 3, 4, 5 ಮತ್ತು 6ನೇ ಅಡ್ಡರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು, ಆಂಜನೇಯ ದೇವಸ್ಥಾನ ರಸ್ತೆಯಲ್ಲಿ, ಅಂಬೇಡ್ಕರ್ ಕಾಲೋನಿ ಸ್ಮಶಾನ ರಸ್ತೆಯಲ್ಲಿ ಸಿಸಿ ರಸ್ತೆಗಳ ನಿರ್ಮಾಣ, ಪರಪ್ಪನ ಅಗ್ರಹಾರ ಗ್ರಾಮದ ಸರ್ಕಾರಿ ಶಾಲೆ ರಸ್ತೆಯಲ್ಲಿ ಆರ್‌ಸಿಸಿ ಚರಂಡಿ ನಿರ್ಮಾಣ ಮಾಡುವುದು, ವಾರ್ಡ್ ಸಂಖ್ಯೆ–212 ನಾಗನಾಥಪುರ ಗ್ರಾಮದ ಭುವನೇಶ್ವರಿ ಬಡಾವಣೆಯ 1ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು, ನಾರಾಯಣಪ್ಪ ಬಡಾವಣೆಯ ಮುಖ್ಯರಸ್ತೆ, ಶಿವಾರೆಡ್ಡಿ ಬಡಾವಣೆಯ ಬಾಕಿ ಉಳಿಕೆ ಭಾಗದಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು. (ಸರ್ಕಾರದ ಆದೇಶದ ಕ್ರ ಸಂ. 28, 30, 31 & 32) **ಕಾಮಗಾರಿಗಿಟ್ಟ ಅಂದಾಜು ಮೊತ್ತ ರೂ.1000.00 ಲಕ್ಷಗಳು ಇಎಂಡಿ ರೂ.1000000.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **21.02.2024**ರ ಸಂಜೆ **4:00** ಗಂಟೆಗೆ ಅಥವಾ ಮುಂಚಿತವಾಗಿ. (2) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **21.02.2024**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **22.02.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ. **ಸಹಿ/– ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ**

ರಾಷ್ಟ್ರ ರಾಜಧಾನಿಯಲ್ಲಿ ‘ಮೆರೆದ’ ರಾಜ್ಯದ ಕಳಕಳಿ

‘ಮೋದಿ ಪ್ರಧಾನಿಯಾದ ಬಳಿಕ ಅನ್ಯಾಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮೋದಿ ಅವರು ಪ್ರಧಾನಿಯಾದ ಬಳಿಕ ರಚಿಸಲಾದ 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ತೀವ್ರ ಅನ್ಯಾಯ ಆಯಿತು. ದಕ್ಷಿಣ ಭಾರತದ ರಾಜ್ಯಗಳು ಉತ್ತರ ಭಾರತದ ರಾಜ್ಯಗಳಿಗಿಂತ ಪರಿಣಾಮಕಾರಿಯಾಗಿ ಜನಸಂಖ್ಯೆ ನಿಯಂತ್ರಣ ಮಾಡಿದವು. ಹೀಗಿದ್ದೂ ಅನ್ಯಾಯ ಅನುಭವಿಸಿದವು. ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕೊಂದು ಹಾಕಬೇಡಿ. ಹಾಲು ಕೊಡುವ ಕೆಚ್ಚಲು ಕತ್ತರಿಸಬೇಡಿ ಎಂದು ಒತ್ತಾಯಿಸಲು ನಾವು ಪ್ರತಿಭಟನೆ ನಡೆಸಿದ್ದೇವೆ’ ಎಂದು ಸಿದ್ದರಾಮಯ್ಯ ಹೇಳಿದರು.

ಸಿ.ಎಂ. ಹೇಳಿದ್ದೇನು?

- 15ನೇ ಹಣಕಾಸು ಆಯೋಗದಿಂದಾಗಿ ತೆರಿಗೆಯೊಂದರಲ್ಲೇ ರಾಜ್ಯಕ್ಕೆ ₹62,098 ಕೋಟಿ ಅನ್ಯಾಯವಾಗಿದೆ. ಇದನ್ನು ನಾವು ಪ್ರಶ್ನಿಸ-ಬಾರದೇ? ಆದರೆ, ಬಿಜೆಪಿಯವರು ನಿರಂತರ ಸುಳ್ಳುಗಳ ಮೂಲಕ ತಮ್ಮ ದ್ರೋಹ ಮರೆಮಾಚಲು ನೋಡುತ್ತಿದ್ದಾರೆ
- ಕೇಂದ್ರದ ಬಜೆಟ್ ಗಾತ್ರ ಹೆಚ್ಚಾದ ಹಾಗೆ ರಾಜ್ಯದ ತೆರಿಗೆ ಪಾಲು ಹೆಚ್ಚಾಗಬೇಕಿತ್ತು. ಆದರೆ, ಈ ಪ್ರಮಾಣದಲ್ಲೂ ನಮಗೆ ಹಂಚಿಕೆ ಆಗಿಲ್ಲ. ಇದನ್ನು ಕೇಂದ್ರದ ಅಂಕಿ ಅಂಶಗಳೇ ಹೇಳುತ್ತಿವೆ. ಕೇಂದ್ರದ ಬಜೆಟ್ ಗಾತ್ರ ದುಪ್ಪಟ್ಟಾಗಿದೆ. ಆದರೆ, ರಾಜ್ಯದ ಪಾಲಿನ ತೆರಿಗೆ ಪಾಲು ಅರ್ಧಕ್ಕಿಂತ ಕಡಿಮೆ ಆಗಿದೆ. ನಮ್ಮ ಪಾಲು ದುಪ್ಪಟ್ಟಾಗಬೇಕಾದ ಜಾಗದಲ್ಲಿ ಅರ್ಧಕ್ಕಿಂತ ಕಡಿಮೆ ಆಗಿರುವುದು ಅನ್ಯಾಯ ಅಲ್ಲವೇ?
- ಕೇಂದ್ರದ ನಿರಂತರ ದ್ರೋಹ ಹಾಗೂ ವಂಚನೆಯಿಂದ ರಾಜ್ಯದ ತೆರಿಗೆ ಸಂಗ್ರಹ ಪ್ರಮಾಣ ಶೇ 15ರಿಂದ ಕೆಳಗೆ ಜಾರಿ ಶೇ 9ಕ್ಕೆ ಕುಸಿದಿದೆ. ಈ ದೊಡ್ಡ ಕುಸಿತಕ್ಕೆ ಕೇಂದ್ರದ ಮಲತಾಯಿ ಧೋರಣೆ ಮತ್ತು ವಂಚನೆಯೇ ಕಾರಣ
- ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ ಸಂಸದರು ಕೋಲೆ ಬಸವನ ರೀತಿಯಲ್ಲಿ ಮೋದಿ ಅವರ ಎದುರಿಗೆ ತಲೆ ಅಲ್ಲಾಡಿಸುವುದು ಬಿಟ್ಟರೆ ರಾಜ್ಯದ ಪಾಲನ್ನು ಬಾಯಿ ಬಿಟ್ಟು ಕೇಳಲೇ ಇಲ್ಲ
- ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಲು ವಿಶೇಷ ಅನುದಾನವಾಗಿ ₹11,495 ಕೋಟಿ ಕೊಡಲಾಗುವುದು ಎಂದು ಕೇಂದ್ರ ಪ್ರಕಟಿಸಿತು. ಆದರೆ, ಈ ಹಣ ಕೊಡಬೇಡಿ ಎಂದು ತಡೆ ಹಿಡಿದವರೇ ನಿರ್ಮಲಾ ಸೀತಾರಾಮನ್. ಆದರೆ, ಈಗೇಕೆ ಸುಳ್ಳು ಹೇಳುತ್ತಿದ್ದೀರಿ ನಿರ್ಮಲಾ ಮೇಡಂ
- ರಾಜ್ಯಕ್ಕೆ ಭೀಕರ ಬರಗಾಲ ಬಂತು. ರಾಜ್ಯದ ಪಾಲಿನ ಬರ ಪರಿಹಾರ ಕೊಡಿ ಎಂದು ಸೆಪ್ಟೆಂಬರ್‌ನಿಂದ ಒತ್ತಾಯಿಸುತ್ತಲೇ ಇದ್ದೇವೆ. ಆದರೆ, ಇದುವರೆಗೂ ಒಂದೇ ಒಂದು ರೂಪಾಯಿ ಬರ ಪರಿಹಾರ ಕೊಟ್ಟಿಲ್ಲ
- ರಾಯಚೂರಿಗೆ ಏಮ್ಸ್ ಕೊಡುತ್ತೇವೆ ಎಂದು ಭರವಸೆ ನೀಡಿದರು. ಮುಖ್ಯಮಂತ್ರಿ-ಯಾದ ಬಳಿಕ ನಾನು ಮೂರು ಬಾರಿ ಪತ್ರ ಬರೆದೆ. ಆದರೆ, ಇವತ್ತಿನವರೆಗೂ ಏಮ್ಸ್ ಮಂಜೂರಾಗಲಿಲ್ಲ. ಪತ್ರಗಳಿಗೆ ಉತ್ತರವೂ ಬರಲಿಲ್ಲ
- ರಾಜ್ಯದ ಜನರಿಗೆ ಇಷ್ಟೆಲ್ಲಾ ದ್ರೋಹ ಮಾಡಿ ಈಗ ನಮ್ಮ ಗ್ಯಾರಂಟಿ ಯೋಜನೆಗಳನ್ನು ‘ಬಿಟ್ಟಿಭಾಗ್ಯ’ ಎನ್ನುತ್ತಿದ್ದಾರೆ. ಬಡವರು, ಮಧ್ಯಮ ವರ್ಗದವರಿಗೆ ನೆರವು ನೀಡುವುದು ಬಿಟ್ಟಿಭಾಗ್ಯವೇ
- ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಈಗ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳುತ್ತಾ ಕುಳಿತಿದ್ದಾರೆ. ಹಾಗಿದ್ದರೆ, ಮೇಕೆದಾಟು, ಕೃಷ್ಣ ಮೇಲ್ದಂಡೆ ಹಾಗೂ ಮಹದಾಯಿ ಯೋಜನೆಗೆ ಅವರು ಅನುಮತಿ ಕೊಡಿಸಲಿ. ರಾಜ್ಯದ ಪಾಲಿನ ಹಣ ಕೊಡಿಸಲಿ



‘ಆಯೋಗದ ಶಿಫಾರಸಿಗಿಂತ ಹೆಚ್ಚು ಹಣ’

ನವದೆಹಲಿ: ‘13 ಬಾರಿ ಬಜೆಟ್ ಮಂಡಿಸಿರುವ ಅನುಭವ ಹೊಂದಿರುವ ಸಿದ್ದರಾಮಯ್ಯ ಅವರ ಆರೋಪ ಆಘಾತಕಾರಿ. ಅವರಿಗೆ ಹಣಕಾಸು ಆಯೋಗದ ಶಿಫಾರಸುಗಳ ಕುರಿತು ಅರಿವೇ ಇದ್ದಂತಿಲ್ಲ. ರಾಜ್ಯದ ಜನರ ಮನಸ್ಸಿನಲ್ಲಿ ವಿಷಕಾರಿ ಅಂಶಗಳನ್ನು ತುಂಬುವ ಪ್ರಯತ್ನ ಮಾಡುತ್ತಿದ್ದಾರೆ. ಇದರಲ್ಲಿ ಅವರು ಯಶಸ್ಸು ಸಾಧಿಸುವುದಿಲ್ಲ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ನಿರ್ಮಲಾ ಅವರು ಹೇಳಿದ್ದೇನು?

- 13ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ತೆರಿಗೆ ಪಾಲಿನ ರೂಪದಲ್ಲಿ ರಾಜ್ಯಕ್ಕೆ ₹61,691 ಕೋಟಿ ನೀಡಲಾಗಿತ್ತು. 14ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ₹1,15,309 ಕೋಟಿ ಕೊಡಲಾಗಿತ್ತು. 15ನೇ ಹಣಕಾಸು ಆಯೋಗದ ಶಿಫಾರಸಿನ ಮೇರೆಗೆ ನಾಲ್ಕು ವರ್ಷಗಳಲ್ಲೇ ₹1,29,854 ಕೋಟಿ ಒದಗಿಸಲಾಗಿದೆ. ಈ ವರ್ಷದ ಮಾರ್ಚ್ ಅಂತ್ಯದ ವೇಳೆಗೆ ₹1.79 ಲಕ್ಷ ಕೋಟಿಗೆ ಏರಲಿದೆ
- ಯುಪಿಎ ಸರ್ಕಾರದ ಅವಧಿಯಲ್ಲಿ ಕರ್ನಾಟಕಕ್ಕೆ ತೆರಿಗೆ ಪಾಲಿನ ರೂಪದಲ್ಲಿ ₹81,795 ಕೋಟಿ ಕೊಡಲಾಗಿತ್ತು. ಎನ್‌ಡಿಎ ಅವಧಿಯಲ್ಲಿ ₹2,85,452 ಕೋಟಿ ನೀಡಲಾಗಿದೆ. ಅನುದಾನ ಪ್ರಮಾಣ ಶೇ 250ರಷ್ಟು ಹೆಚ್ಚಳವಾಗಿದೆ. ಆದರೆ, ಶೂನ್ಯ ಅನುದಾನ ಒದಗಿಸಲಾಗಿದೆ ಎಂದು ಕಾಂಗ್ರೆಸ್‌ನವರು ಅಪಪ್ರಚಾರ ಮಾಡುತ್ತಿದ್ದಾರೆ
- 2004ರಿಂದ 2014ರ ಅವಧಿಯಲ್ಲಿ ರಾಜ್ಯಕ್ಕೆ ಅನುದಾನ ಹಾಗೂ ಸಹಾಯಧನದ ರೂಪದಲ್ಲಿ ₹60,779 ಕೋಟಿಯಷ್ಟೇ ಕೊಡಲಾಗಿತ್ತು. ಕಳೆದ 10 ವರ್ಷಗಳಲ್ಲಿ ₹2,08,832 ಕೋಟಿ ನೀಡಲಾಗಿದೆ ಮಾರ್ಚ್ ಅಂತ್ಯಕ್ಕೆ ₹2,26,837 ಕೋಟಿ ಆಗಲಿದೆ. ಜತೆಗೆ, ಈ ವರ್ಷ ಹೆಚ್ಚುವರಿ ಅನುದಾನ ರೂಪದಲ್ಲಿ ₹18,005 ಕೋಟಿ ಕೊಡಲಾಗುತ್ತಿದೆ.
- ತೆರಿಗೆದಾರರ ಹಣವನ್ನು ಬಳಸಿಕೊಂಡು ತೆರಿಗೆದಾರರಿಗೇ ಸುಳ್ಳು ಹೇಳುತ್ತಿದೆ ಕಾಂಗ್ರೆಸ್. ಕರ್ನಾಟಕದ ಕಾಂಗ್ರೆಸ್ ಸರ್ಕಾರಕ್ಕೆ ಕಿಂಚಿತ್ತೂ ನಾಚಿಕೆ ಇಲ್ಲ. ಪತ್ರಿಕೆಗಳ ಮುಖಪುಟದಲ್ಲಿ ಸುಳ್ಳು ಆರೋಪಗಳ ಜಾಹೀರಾತು ನೀಡಿ ತೆರಿಗೆದಾರರ ಹಣ ಪೋಲು ಮಾಡುತ್ತಿದೆ
- ಎಲ್ಲ ರಾಜ್ಯಗಳಿಗೆ 2017ರಿಂದ 2022ರ ಅವಧಿಯ ವರೆಗೆ ಮಾತ್ರ ಜಿಎಸ್‌ಟಿ ಪರಿಹಾರ ನೀಡಲಾಗಿದೆ. ಆದರೆ, ಕರ್ನಾಟಕ ಸರ್ಕಾರವು 2023 ಹಾಗೂ 2024ರ ಜಿಎಸ್‌ಟಿ ಪರಿಹಾರ ನೀಡಿಲ್ಲ ಎಂದು ಆರೋಪ ಮಾಡುತ್ತಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ರಾಜ್ಯಕ್ಕೆ ನಯಾಪೈಸೆ ಜಿಎಸ್‌ಟಿ ಪರಿಹಾರ ಬಾಕಿ ಇರಿಸಿಕೊಂಡಿಲ್ಲ
- ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆಯ ಸ್ಥಾನಮಾನ ನೀಡಿ 2023ರ ಬಜೆಟ್‌ನಲ್ಲಿ ₹5,300 ಕೋಟಿ ಹಂಚಿಕೆ ಮಾಡಲಾಗಿದೆ. ಆದರೆ, ಕರ್ನಾಟಕದ ಕಾಂಗ್ರೆಸ್ ಸರ್ಕಾರ ತನ್ನ ಬಜೆಟ್‌ನಲ್ಲಿ ಈ ಯೋಜನೆಗೆ ಯಾವುದೇ ಹಣ ಮೀಸಲಿಟ್ಟಿಲ್ಲ
- ಕರ್ನಾಟಕಕ್ಕೆ ಬರ ಪರಿಹಾರ ಬಿಡುಗಡೆ ಮಾಡುವ ಸಂಬಂಧ ತಜ್ಞರ ಸಮಿತಿ ಕಳುಹಿಸಿ ವರದಿ ಪಡೆಯಲಾಗಿದೆ. ಇದನ್ನು ಸಚಿವರ ಉನ್ನತ ಮಟ್ಟದ ಸಮಿತಿ ಪರಿಶೀಲನೆ ನಡೆಸುತ್ತಿದೆ. ಬರ ಪರಿಹಾರ ಹಾಗೂ ಪ್ರಕೃತಿ ವಿಕೋಪ ನಿರ್ವಹಣೆಗೆ ರಾಜ್ಯಕ್ಕೆ ₹4,659 ಕೋಟಿ ಹಂಚಿಕೆ ಮಾಡಲಾಗಿದೆ. ಬರ ನಿರ್ವಹಣೆಗೆ ಮುಂಗಡ ಹಣ ನೀಡಲಾಗಿದೆ

‘ಫೇಲಾದ ಡಬಲ್ ಎಂಜಿನ್’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಮ್ಮ ಹೋರಾಟದ ಬಗ್ಗೆ ಬಿಜೆಪಿಯವರು ಟೀಕೆ ಟಿಪ್ಪಣಿ ಮಾಡುತ್ತಿದ್ದಾರೆ. ಟೀಕೆ ಮಾಡುತ್ತಿರುವ ನಮ್ಮ ಬಿಜೆಪಿ ಸ್ನೇಹಿತರಿಗೆ ನಾನು ಕೇಳುವುದಿಷ್ಟೇ. ಜನ ನಿಮ್ಮ 26 ಸಂಸದರನ್ನು ಆರಿಸಿದ್ದಾರೆ. ನೀವು ಒಂದು ದಿನ ರಾಜ್ಯದ ಪರವಾಗಿ ಹೋರಾಟ ಮಾಡಲಿಲ್ಲ. ರಾಜ್ಯದ ಹಿತದ ಬಗ್ಗೆ ಸರ್ಕಾರದ ಮೇಲೆ ಒತ್ತಡ ಹಾಕಲಿಲ್ಲ. ಡಬಲ್ ಎಂಜಿನ್ ಸರ್ಕಾರ ಇದ್ದರೂ ಎಂಜಿನ್‌ಗಳು ಫೇಲ್ ಆದವು. ಮುಖ್ಯ-ಮಂತ್ರಿಗಳು ನಿಮ್ಮನ್ನು ಕರೆದುಕೊಂಡು ಹೋದರೂ ನೀವು ಪ್ರಧಾನಿ ಮುಂದೆ ತುಟಿ ಬಿಚ್ಚಲಿಲ್ಲ. ಹೀಗಾಗಿ ಗಾಂಧಿ ಪ್ರತಿಮೆ ಮುಂದೆ ನಿಂತು ಪ್ರತಿಭಟನೆ ಮಾಡುವ ನೈತಿಕತೆ ನಿಮಗಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಡಿ.ಕೆ.ಶಿ ಮಾತಿನ ಮುಖ್ಯಾಂಶಗಳು:

- ಕಳೆದ ವರ್ಷ ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ಇದ್ದಾಗ ಕೇಂದ್ರ ಬಜೆಟ್‌ನಲ್ಲಿ ನಿರ್ಮಲಾ ಸೀತಾರಾಮನ್ ಅವರು ಅನೇಕ ಯೋಜನೆಗಳಿಗೆ ಅನುದಾನ ಘೋಷಣೆ ಮಾಡಿದ್ದರು. ಘೋಷಣೆಯಾಗಿ ಒಂದು ವರ್ಷವಾದರೂ ಇದುವರೆಗೂ ಒಂದು ರೂಪಾಯಿ ಕೂಡ ಬಿಡುಗಡೆ ಮಾಡಿಲ್ಲ.
- ರಾಜ್ಯದ ಬೊಕ್ಕಸದಲ್ಲಿ ಹಣ ಖಾಲಿಯಾಗಿಲ್ಲ. ಸರ್ಕಾರ ನಡೆಸುವ ಸಾಮರ್ಥ್ಯ ನಮಗಿದೆ. ಕೇಂದ್ರದ ಬಿಜೆಪಿ ಸರ್ಕಾರ ನಮ್ಮ ಪಾಲಿನ ಹಣ ನೀಡಲಿ ಸಾಕು.

‘ಕಾಂಗ್ರೆಸ್ ವಾದ ರಾಷ್ಟ್ರ ವಿರೋಧಿ’

‘ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂಬ ಕಾಂಗ್ರೆಸ್‌ನ ಆರೋಪವು ಒಕ್ಕೂಟ ವ್ಯವಸ್ಥೆಗೆ ವಿರೋಧ. ಜತೆಗೆ, ಇದು ರಾಷ್ಟ್ರ ವಿರೋಧಿ’ ಎಂದು ರಾಜ್ಯವನ್ನು ಪ್ರತಿನಿಧಿಸುವ ಬಿಜೆಪಿ ಸಂಸದರು ತಿರುಗೇಟು ನೀಡಿದರು.

ಸಂಸದರಾದ ತೇಜಸ್ವಿ ಸೂರ್ಯ, ಪ್ರತಾಪಸಿಂಹ, ಎಸ್.ಮುನಿಸ್ವಾಮಿ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿ, ‘ಕರ್ನಾಟಕ ಸರ್ಕಾರವು 2002ರಿಂದ 2022ರ ಅವಧಿಯಲ್ಲಿ ಬರ ಪರಿಹಾರ ಕೇಳಿದ್ದು ₹20 ಸಾವಿರ ಕೋಟಿ. ಆದರೆ, ಈ ವರ್ಷ ₹18,900 ಕೋಟಿ ಬರ ಪರಿಹಾರ ನೀಡಬೇಕೆಂದು ಪ್ರಸ್ತಾವ ಸಲ್ಲಿಸಿದೆ. ಈ ಪ್ರಸ್ತಾವವೇ ಅವೈಜ್ಞಾನಿಕ’ ಎಂದು ಬಣ್ಣಿಸಿದರು.

‘ವಿಧಾನಸಭಾ ಚುನಾವಣೆಗೆ ಮುನ್ನ ನೀಡಿರುವ ಭರವಸೆಗಳನ್ನು ಈಡೇರಿಸಲು ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಕಾಂಗ್ರೆಸ್ ಮುಖಂಡರು ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕರು ನಾಟಕಗಳನ್ನು ನಿಲ್ಲಿಸಿ ರಾಜ್ಯದಲ್ಲಿ ಇನ್ನಾದರೂ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿ’ ಎಂದು ಅವರು ಹೇಳಿದರು.

ಗ್ರಾಮೀಣಾಭಿವೃದ್ಧಿಗೆ ಯುಪಿಎಗಿಂತ ಹೆಚ್ಚು ಹಣ: ಗಿರಿರಾಜ್ ಸಿಂಗ್

‘ಕರ್ನಾಟಕದ ಗ್ರಾಮೀಣಾಭಿವೃದ್ಧಿ ಯೋಜನೆಗಳಿಗೆ ಯುಪಿಎ ಅಧಿಕಾರದ ಅವಧಿಗಿಂತ ಎನ್‌ಡಿಎ ಅವಧಿಯಲ್ಲಿ ಅಧಿಕ ಅನುದಾನ ಒದಗಿಸಲಾಗಿದೆ’ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಹೇಳಿದರು.

‘ಯುಪಿಎ ಅವಧಿಯಲ್ಲಿ ರಾಜ್ಯಕ್ಕೆ ₹24,544 ಕೋಟಿ ಒದಗಿಸಲಾಗಿತ್ತು. ಎನ್‌ಡಿಎ ಅವಧಿಯಲ್ಲಿ ಈ ಮೊತ್ತ ₹1,93,662 ಕೋಟಿಗೆ ಏರಿದೆ’ ಎಂದು ಅವರು ತಿಳಿಸಿದರು.

ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯಕ್ಕೆ ₹972 ಕೋಟಿ ಮಾತ್ರ ಬಾಕಿ ಉಳಿದಿದೆ ಎಂದು ಅವರು ಸ್ಪಷ್ಟಪಡಿಸಿದರು. ‘ರಾಜ್ಯದಲ್ಲಿ ಬಿಬಿಎಂಪಿ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳ ಚುನಾವಣೆಗಳನ್ನು ನಡೆಸದ ಕಾರಣಕ್ಕೆ ಸ್ಥಳೀಯ ಸಂಸ್ಥೆಗಳ ಅನುದಾನ ಬಾಕಿ ಇರಿಸಿಕೊಳ್ಳಲಾಗಿದೆ’ ಎಂದೂ ಅವರು ಹೇಳಿದರು.

ಸಿ.ಎಂ ಜನಸ್ಪಂದನಕ್ಕೆ ವಿಧಾನಸೌಧ ಸಜ್ಜು

ಒಂದನೇ ಪುಟದಿಂದ...

ವಿಧಾನಸೌಧದ ಒಳಭಾಗದಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದು, ಶಾಮಿಯಾನ ಅಳವಡಿಸಿ ನೆರಳಿನ ಸೌಲಭ್ಯ ಕಲ್ಪಿಸಲಾಗಿದೆ.

ಇಲಾಖಾವಾರು ಸಹಾಯ ಕೇಂದ್ರ: ಸಾರ್ವಜನಿಕರಿಂದ ದೂರು ಮತ್ತು ಮನವಿಗಳನ್ನು ಸ್ವೀಕರಿಸಲು ಇಲಾಖಾವಾರು ಸಹಾಯ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಜನಸ್ಪಂದನಕ್ಕೆ ಬರುವ ನಾಗರಿಕರು ಆಯಾ ಇಲಾಖೆಯ ಸಹಾಯ ಕೇಂದ್ರಕ್ಕೆ ತೆರಳಿ ತಮ್ಮ ದೂರು ಅಥವಾ ಮನವಿಗಳನ್ನು ಸಲ್ಲಿಸಬೇಕು ಎಂದು ಮುಖ್ಯಮಂತ್ರಿಯವರ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಏನೆಲ್ಲಾ ಸೌಲಭ್ಯಗಳು ಇರಲಿವೆ?

- ವೃದ್ಧರು, ಹಿರಿಯ ನಾಗರಿಕರು, ಅಂಗವಿಕಲರು ಮತ್ತು ಗರ್ಭಿಣಿಯರಿಗಾಗಿ ಬ್ಯಾಟರಿ ಚಾಲಿತ ಬಗ್ಗಿ ಹಾಗೂ ಗಾಲಿ ಕುರ್ಚಿಗಳು
- ಜನಸ್ಪಂದನಕ್ಕೆ ಬರುವ ನಾಗರಿಕರಿಗೆ ಊಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಹತ್ತು ಸಾವಿರ ಮಂದಿಗೆ ಊಟ ಪೂರೈಕೆಗೆ ಸಿದ್ಧತೆ
- ಜನಸ್ಪಂದನಕ್ಕೆ ಬರುವ ಸಾರ್ವಜನಿಕರು ಮತ್ತು ಅಂಗವಿಕಲರಿಗಾಗಿ ಶೌಚಾಲಯ ವ್ಯವಸ್ಥೆ
- ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಬಿಎಂಟಿಸಿ ವತಿಯಿಂದ ಉಚಿತ ಬಸ್ ಪ್ರಯಾಣದ ವ್ಯವಸ್ಥೆ

ಸ್ವಾಗತ ಕೇಂದ್ರ ಮತ್ತು ಮುಖ್ಯಮಂತ್ರಿ-ಯವರ ವೇದಿಕೆಗಳ ಜತೆಗೆ ಇಲಾಖಾವಾರು 28 ಸಹಾಯ ಕೇಂದ್ರಗಳು ಇರಲಿವೆ. ಎಲ್ಲ ಇಲಾಖೆಗಳಿಗೂ ನೋಡಲ್ ಅಧಿಕಾರಿಗ-ಳನ್ನು ನೇಮಿಸಲಾಗಿದೆ. ವಿಧಾನಸೌಧದ ಆವರಣ ಪ್ರವೇಶಿಸುವ ನಾಗರಿಕರನ್ನು ವಿಚಾರಿಸಿ, ನಿರ್ದಿಷ್ಟ ಸಹಾಯ ಕೇಂದ್ರಕ್ಕೆ ಕಳುಹಿಸುವ ಕೆಲಸವನ್ನು ಈ ಅಧಿಕಾರಿಗಳು ಮಾಡುತ್ತಾರೆ. ಅಲ್ಲಿ ಇಲಾಖೆಯ ಕಾರ್ಯದರ್ಶಿ, ಅಧೀನ ಇಲಾಖೆಯ ಮುಖ್ಯಸ್ಥರು ಮತ್ತು ಸಚಿವಾಲಯದ ಸಿಬ್ಬಂದಿ ಅಹವಾಲು ಸ್ವೀಕರಿಸುತ್ತಾರೆ ಎಂದು ಮಾಹಿತಿ ನೀಡಿದೆ.

3,738 ಅರ್ಜಿ ವಿಲೇವಾರಿ: 2023ರ ನವೆಂಬರ್ 27ರಂದು ಸಿದ್ದರಾಮಯ್ಯ ಅವರು ರಾಜ್ಯಮಟ್ಟದ ಮೊದಲ ಜನಸ್ಪಂದನ ಕಾರ್ಯಕ್ರಮ ನಡೆಸಿದ್ದರು. ಆಗ, 4,030 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಈವರೆಗೆ 3,738 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಮುಖ್ಯಮಂತ್ರಿಯವರ ಸಚಿವಾಲಯ ತಿಳಿಸಿದೆ.

‘ಕೆಪಿಟಿಸಿಎಲ್: ತಾತ್ಕಾಲಿಕ ನೇಮಕಾತಿ ಆದೇಶ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿನ (ಕೆಪಿಟಿಸಿಎಲ್) 404 ಸಹಾಯಕ ಎಂಜಿನಿಯರ್ ಹುದ್ದೆಗಳ (ಎಇ) ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಅರ್ಹ ಅಭ್ಯರ್ಥಿಗಳಿಗೆ ತಾತ್ಕಾಲಿಕ ನೇಮಕಾತಿ ಆದೇಶ ವಿತರಿಸುವಂತೆ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿದೆ.

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಜಿ.ಶ್ರುತಿ ಸೇರಿದಂತೆ 50ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿದ್ದ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ

ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘2023ರ ಜನವರಿ 3ರಂದು ಪ್ರಕಟಿಸಿದ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಅಂಕಪಟ್ಟಿ ಅನುಸಾರ 404 (313 ಮೂಲ ವೃಂದ, 91 ಕಲ್ಯಾಣ ಕರ್ನಾಟಕ ವೃಂದ) ಅಭ್ಯರ್ಥಿಗಳಿಗೆ ತಾತ್ಕಾಲಿಕ ನೇಮಕಾತಿ ಆದೇಶ ನೀಡಿ’ ಎಂದು ಕೆಪಿಟಿಸಿಎಲ್‌ಗೆ ನ್ಯಾಯಪೀಠ ನಿರ್ದೇಶಿಸಿದೆ.

‘ಈ ನೇಮಕಾತಿಗಳು ಹೈಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತವೆ ಎಂದು ನೇಮಕಾತಿ ಆದೇಶಗಳಲ್ಲಿ ನಮೂದಿಸಬೇಕು. ಒಂದೊಮ್ಮೆ ಮೇಲ್ಮನವಿ ಪುರಸ್ಕೃತಗೊಂಡು ಮೇಲ್ಮನವಿದಾರರು ಆಯ್ಕೆಗೊಂಡರೆ ಸೇವಾ ಹಿರಿತನ ಮತ್ತು ರೋಸ್ಟರ್ ಪಾಲಿಸಬೇಕು’ ಎಂದು ಸೂಚಿಸಿರುವ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 13ಕ್ಕೆ ಮುಂದೂಡಿದೆ.

ನೇಮಕಾತಿ ಸಂಬಂಧ ಕೆಪಿಟಿಸಿಎಲ್ 2023ರ ಫೆಬ್ರುವರಿ 4ರಂದು ಪ್ರಕಟಿಸಿದ್ದ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಏಕಸದಸ್ಯ ನ್ಯಾಯಪೀಠ ರದ್ದುಪಡಿಸಿತ್ತು. ಈ ಪಟ್ಟಿಯಲ್ಲಿ ಅರ್ಹತೆ ಪಡೆದಿದ್ದ ಅಭ್ಯರ್ಥಿಗಳು ಈ ಮೇಲ್ಮನವಿ ಸಲ್ಲಿಸಿದ್ದಾರೆ.

‘ಸಾರಥಿ’ಗೆ ತಾಂತ್ರಿಕ ಸಮಸ್ಯೆ: ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆಯ ‘ಸಾರಥಿ’ ವೆಬ್‌ಸೈಟ್‌ನಲ್ಲಿ ಒಂದು ವಾರದಿಂದ ತಾಂತ್ರಿಕ ಸಮಸ್ಯೆ ಉಂಟಾಗಿದೆ. ಇದರಿಂದ ಡಿಎಲ್, ಎಲ್‌ಎಲ್‌ಆರ್ ಪಡೆಯಲು ಸಾರ್ವಜನಿಕರು ಪರದಾಡು-ವಂತಾಗಿದೆ.

ಸರ್ವರ್ ಸಮಸ್ಯೆಯಲ್ಲ, ರಾಷ್ಟ್ರೀಯ ಮಾಹಿತಿ ಕೇಂದ್ರದಿಂದ (ಎನ್‌ಐಸಿ) ಡೇಟಾ ಸರಿಯಾಗಿ ಸಿಗದೇ ಇರುವುದರಿಂದ ದೇಶದಾದ್ಯಂತ ಈ ಸಮಸ್ಯೆ ಉಂಟಾಗಿದೆ ಎಂದು ಸಾರಿಗೆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಚಾಲನಾ ಪರವಾನಗಿ (ಡಿಎಲ್), ಚಾಲನಾ ಕಲಿಕಾ ನೋಂದಣಿ (ಎಲ್‌ಎಲ್‌ಆರ್), ನಕಲು ಪ್ರತಿ ಪಡೆಯಲು, ಡಿಎಲ್ ನವೀಕರಣ, ತಿದ್ದುಪಡಿ ಮಾಡಲು ಸಾರ್ವಜನಿಕರು ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಪ್ರತಿದಿನ ಬಂದು ವಾಪಸ್ ಹೋಗುತ್ತಿದ್ದಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಏನು ಮಾಡಲಾರದೇ ಕೈಚೆಲ್ಲುತ್ತಿದ್ದಾರೆ. ಮೇಲಧಿಕಾರಿಗಳತ್ತ ಕೈ ತೋರುತ್ತಿದ್ದಾರೆ.

‘ಹಿಂದೆ ಪ್ರಾದೇಶಿಕ ಸಾರಿಗೆ ಕಚೇರಿ ಮಟ್ಟದಲ್ಲಿಯೇ ಇವೆಲ್ಲ ಪ್ರಕ್ರಿಯೆ ನಡೆಯುತ್ತಿತ್ತು. ಈಗ ಕೇಂದ್ರೀಕೃತ ವ್ಯವಸ್ಥೆಯನ್ನು ಜಾರಿ ಮಾಡಿದ್ದಾರೆ. ಸರ್ವರ್ ಸಮಸ್ಯೆಯಾದರೆ ದೇಶದೆಲ್ಲೆಡೆ ಅದು ಪರಿಣಾಮ ಬೀರುತ್ತಿದೆ. ಈಗ ಅಗತ್ಯಕ್ಕೆ ಅನುಗುಣವಾಗಿ ಡೇಟಾ ಒದಗಿ-ಸದಿರುವುದರಿಂದ ಒಂದು ವಾರದಿಂದ ಯಾವುದೇ ಕೆಲಸಗಳಾಗುತ್ತಿಲ್ಲ. ಜನರು ನಮಗೆ ಶಾಪ ಹಾಕಿ ಹೋಗುತ್ತಿದ್ದಾರೆ’ ಎಂದು ಆರ್‌ಟಿಒ ಒಬ್ಬರು ಹೇಳಿದರು.

ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರದ ವೈಫಲ್ಯ ಖಂಡಿಸಿ ಪ್ರತಿಭಟನೆ • ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಧರಣಿ

ಸಿ.ಎಂ ಕಚೇರಿಗೆ ನುಗ್ಗಲು ಬಿಜೆಪಿ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಬರ ಪರಿಸ್ಥಿತಿ ನಿಭಾಯಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ಬುಧವಾರ ಮುಖ್ಯಮಂತ್ರಿ ಕಚೇರಿಗೆ ನುಗ್ಗಲು ಯತ್ನಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿ ಶಾಸಕರನ್ನು ಬಂಧಿಸಿದ ಪೊಲೀಸರು, ನಂತರ ಬಿಡುಗಡೆ ಮಾಡಿದರು.

ರಾಜ್ಯದ ನ್ಯಾಯಯುತ ತೆರಿಗೆ ಪಾಲಿಗೆ ಆಗ್ರಹಿಸಿ ಅತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವರು ಹಾಗೂ ಕಾಂಗ್ರೆಸ್ ಶಾಸಕರು ದೆಹಲಿ ಚಲೋ ಹಮ್ಮಿಕೊಂಡಿದ್ದರೆ, ಇತ್ತ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಬಿಜೆಪಿಯ ಶಾಸಕರು ಪ್ರತಿಭಟನೆ ನಡೆಸಿದರು.

ವಿಧಾನಸೌಧದ ನಾಲ್ಕೂ ಪ್ರವೇಶ ದ್ವಾರಗಳಿಗೆ ಬೆಳಿಗ್ಗೆಯಿಂದಲೇ ಬೀಗ ಹಾಕಿದ್ದು ಬಿಜೆಪಿ ನಾಯಕರ ಆಕ್ರೋಶಕ್ಕೆ ಕಾರಣವಾಯಿತು. ನಂತರ ಬೀಗ ತೆರವುಗೊಳಿಸಿ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆ ನಿರತ ಬಿಜೆಪಿ ನಾಯಕರನ್ನು ವಶಕ್ಕೆ ಪಡೆದ ಪೊಲೀಸರು ನಂತರ ಹೈಗ್ರೌಂಡ್ಸ್ ಠಾಣೆ ಆವರಣದಲ್ಲಿ ಬಿಡುಗಡೆ ಮಾಡಿದರು.

‘ವಿಧಾನಸೌಧದ ದ್ವಾರಗಳಿಗೆ ಬುಧವಾರ ಬೀಗ ಹಾಕುವ ಮೂಲಕ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರಿಗೆ ಪ್ರವೇಶ ನಿರಾಕರಿಸಲಾಗಿದೆ. ರಾಜ್ಯದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಇದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆಕ್ರೋಶ ಹೊರಹಾಕಿದರು.

‘ರಾಜ್ಯದ ಖಜಾನೆ ಖಾಲಿಯಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಆರ್ಥಿಕ ಪರಿಸ್ಥಿತಿ ಸರಿಯಾಗಿ ನಿಭಾಯಿಸದೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಗ ದೆಹಲಿ ಚಲೋ ನಾಟಕ ಮಾಡುತ್ತಿದ್ದಾರೆ. ಬಿಜೆಪಿ ಅವಧಿಯಲ್ಲಿ ಇದೇ ಕಾಂಗ್ರೆಸ್ ನಾಯಕರು ಮೇಕೆದಾಟು ಹೋರಾಟ ಮಾಡಿದ್ದರು. ಅದೇ ರೀತಿ ದೆಹಲಿ ಚಲೋ ಸಹ ಮತದಾರರ ಕಣ್ಣಿಗೆ ಮಣ್ಣೆರಚುವ ನಾಟಕ. ಅವರ ನಾಟಕಕ್ಕೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮತದಾರರು ತಕ್ಕಪಾಠ ಕಲಿಸಲಿದ್ದಾರೆ’ ಎಂದು ಅವರು ಹೇಳಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕದ ಬಿಜೆಪಿ ಸಂಸದರು ದೆಹಲಿಯಲ್ಲಿ ಸಂಸತ್ ಭವನ ಹತ್ತಿರ ಇರುವ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಕಾಂಗ್ರೆಸ್ ವಿರುದ್ಧ ಬುಧವಾರ ಪ್ರತಿಭಟಿಸಿದರು —ಪಿಟಿಐ ಚಿತ್ರ

ರೈತರು ಬರ ಪರಿಹಾರ, ಹಾಲಿನ ಸಹಾಯಧನ ಕೇಳುತ್ತಿದ್ದಾರೆ. ಬಡವರು ಅಕ್ಕಿ, ನಿರುದ್ಯೋಗಿಗಳು ₹3 ಸಾವಿರದ ನಿರೀಕ್ಷೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ದೆಹಲಿಯಲ್ಲಿ ಕುಳಿತಿದೆ

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ.

ಬರ ಪರಿಸ್ಥಿತಿ ನಿಭಾಯಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಅಸಮರ್ಥ ಆಡಳಿತದ ವಿರುದ್ಧ ಜಿಲ್ಲೆಗಳಲ್ಲೂ ಹೋರಾಟ ಹಮ್ಮಿಕೊಳ್ಳಲಾಗುವುದು. ರೈತರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಚುನಾವಣೆ ಬಳಿಕ ಕಾಂಗ್ರೆಸ್ ಇಬ್ಭಾಗ’

ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾದ ಒಂದು ತಿಂಗಳಲ್ಲಿ ಕಾಂಗ್ರೆಸ್ ಇಬ್ಭಾಗವಾಗಲಿದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕದ ಇತಿಹಾಸದಲ್ಲಿ ಇಷ್ಟು ದೊಡ್ಡ ನಾಟಕ ಮಾಡಿದ ಸರ್ಕಾರ ನೋಡಿರಲಿಲ್ಲ. ಸಿದ್ದರಾಮಯ್ಯ ತತ್ವ-ಸಿದ್ಧಾಂತ ಗಾಳಿಗೆ ತೂರಿ ತಮ್ಮ ಸ್ಥಾನ ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಆರಂಭವಾಗಿಲ್ಲ. ಬರ ಪರಿಹಾರ ನೀಡಿಲ್ಲ. ಯಾವ ನೈತಿಕತೆ ಇಟ್ಟುಕೊಂಡು ದೆಹಲಿಯಲ್ಲಿ ಪ್ರತಿಭಟನೆ ಮಾಡಿದ್ದಾರೆ ಎಂದು ಅವರು ಪ್ರಶ್ನಿಸಿದರು.

ಮೋದಿಯವರು ರಾಜ್ಯಕ್ಕೆ ಸ್ಮಾರ್ಟ್ ಸಿಟಿ, ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ಕೈಗಾರಿಕೆಗಳನ್ನು ನೀಡಿದ್ದಾರೆ. ಮೋದಿಯವರು ಪ್ರಧಾನಿಯಾಗಿರುವಾಗ ಮುಖ್ಯಮಂತ್ರಿ ಆಗಿರುವುದು ಸಿದ್ದರಾಮಯ್ಯನವರ ಪುಣ್ಯ. ಮನಮೋಹನ್ ಸಿಂಗ್ ಸರ್ಕಾರ ಇದ್ದಿದ್ದರೆ ನಿಮಗೆ ಚಿಪ್ಪು ಕೊಡುತ್ತಿದ್ದರು ಎಂದು ಬೊಮ್ಮಾಯಿ ಹೇಳಿದರು.

ಮಜಾ ಮಾಡಲು ದೆಹಲಿಗೆ: ಅಶೋಕ

ಕಾಂಗ್ರೆಸ್ ನಾಯಕರು ದೆಹಲಿಗೆ ಮಜಾ ಮಾಡಲು ಹೋಗಿದ್ದು, ವಿಧಾನಸೌಧ ಖಾಲಿಯಾಗಿ ಅಧಿಕಾರಿಗಳಿಗೆ ಕೆಲಸವಿಲ್ಲದಂತಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳ ಜತೆಗೆ ಜನರಿಗೆ ನಾಮ ಹಾಕುವ ಗ್ಯಾರಂಟಿಯನ್ನೂ ನೀಡಿದೆ. ಖಜಾನೆ ಖಾಲಿ ಮಾಡಿಕೊಂಡ ಸರ್ಕಾರ ಬೀಗ ಹಾಕಿಕೊಳ್ಳುವ ಸ್ಥಿತಿ ಬಂದಿದೆ. ಸಾಲ ಮಾಡಿಯಾದರೂ ರೈತರ ಜತೆ ನಿಲ್ಲಬೇಕು ಎನ್ನುವುದು ಬಿಜೆಪಿ ಯೋಚನೆ, ಸಾಲ ಮಾಡಿ ಕಾರ್ಯಕರ್ತರಿಗೆ ಬಿರಿಯಾನಿ ತಿನ್ನಿಸುವುದು ಎಂದು ಕಾಂಗ್ರೆಸ್ ಮನಸ್ಥಿತಿ ಎಂದು ಟೀಕಿಸಿದರು.

ಬಿಜೆಪಿ ಕಚೇರಿಗೆ ನುಗ್ಗಲು ಮುಂದಾದ ಕಾಂಗ್ರೆಸ್ ಕಾರ್ಯಕರ್ತರು

ಬೆಂಗಳೂರು: ಅನುದಾನ ತಾರತಮ್ಯ, ಬರ ಪರಿಹಾರ ಹೀಗೆ ಹಲವು ವಿಚಾರಗಳಲ್ಲಿ ಕರ್ನಾಟಕಕ್ಕೆ ಅನ್ಯಾಯ ವಾಗುತ್ತಿದೆ ಎಂದು ಅತ್ತ ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದರೆ, ಇತ್ತ ಮಲ್ಲೇಶ್ವರದಲ್ಲಿ-ರುವ ಬಿಜೆಪಿ ರಾಜ್ಯ ಕಚೇರಿಗೆ ಯುವ ಕಾಂಗ್ರೆಸ್ ಕಾರ್ಯಕರ್ತರು ನುಗ್ಗಲು ಯತ್ನಿಸಿದರು.

ಕಚೇರಿಯ ಮುಂಭಾಗದಲ್ಲಿ ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ಕಚೇರಿಯ ಒಳಗೆ ಪ್ರವೇಶಿಸಲು ಯುವ ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದಾಗ ಪೊಲೀಸರು ತಡೆದರು. ಈ ವೇಳೆ ನೂಕಾಟ, ತಳ್ಳಾಟ ನಡೆಯಿತು. ಪ್ರತಿಭಟನಾನಿರತರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸುವ ವೇಳೆ ಅಲ್ಲಿದ್ದ ಬಿಜೆಪಿ ಕಾರ್ಯಕರ್ತರು ತೀವ್ರ ಪ್ರತಿರೋಧ ವ್ಯಕ್ತಪಡಿಸಿದರು. ಅಲ್ಲದೆ, ಕಾಂಗ್ರೆಸ್ ಕಾರ್ಯಕರ್ತರತ್ತ ನುಗ್ಗಲು ಯತ್ನಿಸಿದರು. ಆಗ ಪೊಲೀಸರು ಮಧ್ಯಪ್ರವೇಶಿಸಿ ತಡೆದರು. ಹನುಮಧ್ವಜ ಹಿಡಿದು ಕಾಂಗ್ರೆಸ್‌ಗೆ ಧಿಕ್ಕಾರ ಕೂಗಿದ ಬಿಜೆಪಿ ಕಾರ್ಯಕರ್ತರು, ಮೋದಿ ಪರ ಘೋಷಣೆ ಮೊಳಗಿಸಿದರು. ಈ ವೇಳೆ ಎರಡೂ ಕಡೆಯ ಕಾರ್ಯಕರ್ತರನ್ನು ತಡೆಯಲು ಪೊಲೀಸರು ಹರಸಾಹಸಪಟ್ಟರು.

ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ಎಸ್‌ಸಿ ಘಟಕದ ಅಧ್ಯಕ್ಷ ಆರ್. ಧರ್ಮಸೇನ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ವಿಜಯೇಂದ್ರ ಮನೆಗೆ ಮುತ್ತಿಗೆ

ಶಿವಮೊಗ್ಗದ ಬೈಪಾಸ್ ರಸ್ತೆಯಲ್ಲಿರುವ ಬಿ.ವೈ.ವಿಜಯೇಂದ್ರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಎನ್‌ಎಸ್‌ಯುಐ ಕಾರ್ಯಕರ್ತರನ್ನು ವಶಕ್ಕೆ ಪಡೆದು ಪೊಲೀಸರು ಕರೆದೊಯ್ದರು

ಶಿವಮೊಗ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ‘ದೆಹಲಿ ಚಲೋ’ ಪ್ರತಿಭಟನೆ ಬೆಂಬಲಿಸಿ ಬುಧವಾರ ಇಲ್ಲಿ ಯುವ ಕಾಂಗ್ರೆಸ್ ಹಾಗೂ ಎನ್‌ಎಸ್‌ಯುಐ ಸಂಘಟನೆಯಿಂದ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಲಾಯಿತು.

ಎನ್‌ಎಸ್‌ಯುಐ ಕಾರ್ಯಕರ್ತರು ಶಿವಮೊಗ್ಗದ ಭದ್ರಾವತಿ ಬೈಪಾಸ್ ರಸ್ತೆಯಲ್ಲಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮನೆಗೆ ಮುತ್ತಿಗೆ ಹಾಕಲು ಮುಂದಾದರು. ಗೇಟ್ ಹೊರಗೆ ಅವರನ್ನು ತಡೆದ ಪೊಲೀಸರು 33 ಮಂದಿ ಕಾರ್ಯಕರ್ತರನ್ನು ವಶಕ್ಕೆ ಪಡೆದು ಅಲ್ಲಿಂದ ಕರೆದೊಯ್ದರು.

ಯುವ ಕಾಂಗ್ರೆಸ್ ಸದಸ್ಯರು ವಿನೋಬನಗರದ ಪೊಲೀಸ್ ಚೌಕಿಯಲ್ಲಿ ಪ್ರತಿಭಟನೆ ನಡೆಸಿ ಸಮೀಪದಲ್ಲಿರುವ ಸಂಸದ ಬಿ.ವೈ.ರಾಘವೇಂದ್ರ ಅವರ ಮನೆಯತ್ತ ತೆರಳಲು ಮುಂದಾದರು. ಅವರನ್ನು ತಡೆದ ಪೊಲೀಸರು ವಶಕ್ಕೆ ಪಡೆದರು. ಕೇಂದ್ರ ಸರ್ಕಾರ ಕರ್ನಾಟಕದ ವಿಚಾರದಲ್ಲಿ ಮಲತಾಯಿ ಧೋರಣೆ ತಾಳಿದೆ ಎಂದು ಆರೋಪಿಸಿ ಪ್ರತಿಭಟನಕಾರರು ಘೋಷಣೆ ಕೂಗಿದರು.

ಕಾಂಗ್ರೆಸ್ ಭವನಕ್ಕೆ ನುಗ್ಗಲು ಬಿಜೆಪಿ ಕಾರ್ಯಕರ್ತರ ಯತ್ನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ದೆಹಲಿಯಲ್ಲಿ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸುತ್ತಿರುವು-ದನ್ನು ವಿರೋಧಿಸಿ ಇಲ್ಲಿನ ಕಾಂಗ್ರೆಸ್ ಭವನಕ್ಕೆ ಬುಧವಾರ ನುಗ್ಗಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರೈತರ ನೆರವಿಗೆ ಬರುತ್ತಿಲ್ಲ. ಹೈನುಗಾರರ ಪ್ರೋತ್ಸಾಹಧನದ ಬಾಕಿ ಹಣ ₹716 ಕೋಟಿ ಬಿಡುಗಡೆಗೊಳಿಸುತ್ತಿಲ್ಲ’ ಎಂದು ಆರೋಪಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿದ ಕಾರ್ಯಕರ್ತರು, ಅಲ್ಲಿಂದ ಕಾಂಗ್ರೆಸ್ ಭವನದವರೆಗೆ ಮೆರವಣಿಗೆ ನಡೆಸಿದರು.

ಭವನದೊಳಗೆ ನುಗ್ಗಲು ಯತ್ನಿಸಿದ ಅವರನ್ನು ಪೊಲೀಸರು ಮತ್ತು ಕಾರ್ಯಕರ್ತರು ತಡೆದರು. ಆಗ ವಾಗ್ವಾದ, ನೂಕಾಟ ನಡೆಯಿತು. ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಇದಕ್ಕೆ ಪ್ರತಿಯಾಗಿ ಪ್ರತಿಭಟಿಸಿದ ಕಾಂಗ್ರೆಸ್ ಕಾರ್ಯಕರ್ತರು, ಬಿಜೆಪಿ ವಿರುದ್ಧ ಹರಿಹಾಯ್ದರು.

ಸಾಲ ಪಡೆಯುವುದರ ಮೇಲೆ ಮಿತಿ ಹೇರಿರುವ ಕ್ರಮ ಕುರಿತು ಕೇಂದ್ರದ ವಿವರಣೆ

ರಾಜ್ಯಗಳ ಸಾಲ– ದೇಶದ ಮೇಲೆ ಪರಿಣಾಮ

ನವದೆಹಲಿ (ಪಿಟಿಐ): ರಾಜ್ಯಗಳು ಯಾವ ನಿಯಂತ್ರಣವೂ ಇಲ್ಲದೆ ಸಾಲ ಪಡೆಯುತ್ತಿದ್ದರೆ ಇಡೀ ದೇಶದ ಸಾಲದ ಶ್ರೇಯಾಂಕದ ಮೇಲೆ ಪರಿಣಾಮ ಉಂಟಾಗುತ್ತದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿವರಿಸಿದೆ.

'ಕೇರಳ ರಾಜ್ಯದ ಆರ್ಥಿಕ ಸೌಧದಲ್ಲಿ ಹಲವು ಒಡಕುಗಳು ಇವೆ' ಎಂದು ಕೂಡ ಕೇಂದ್ರವು ತಿಳಿಸಿದೆ.

ಕೇರಳ ಸರ್ಕಾರ ಪಡೆಯಬಹುದಾದ ಸಾಲದ ಮೊತ್ತದ ಮೇಲೆ ಮಿತಿ ವಿಧಿಸಿರುವ ಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರವು ಈ ವಿವರಣೆ ನೀಡಿದೆ. ಸಾರ್ವಜನಿಕ ಹಣಕಾಸು ನಿರ್ವಹಣೆಯು ರಾಷ್ಟ್ರೀಯ ವಿಚಾರ ಎಂದು ಸುಪ್ರೀಂ ಕೋರ್ಟ್‌ಗೆ ನೀಡಿರುವ ವಿವರಣೆಯಲ್ಲಿ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಹೇಳಿದ್ದಾರೆ.

ಅನುತ್ಪಾದಕ ವೆಚ್ಚಗಳಿಗೆ ಅಥವಾ ಸರಿಯಾದ ಗುರಿ ಇಲ್ಲದ ಸಬ್ಸಿಡಿಗಳಿಗೆ ಹಣ ಹೊಂದಿಸಲು ರಾಜ್ಯವು ಅನಿಯಂತ್ರಿತವಾಗಿ ಸಾಲ ಮಾಡುತ್ತಿದ್ದರೆ, ಹಣಕಾಸು ಮಾರುಕಟ್ಟೆಯಿಂದ ಸಾಲ ಪಡೆಯುವುದಕ್ಕೆ ಖಾಸಗಿಯವರಿಗೂ ತೊಂದರೆ ಉಂಟಾಗುತ್ತದೆ ಎಂದು ಕೇಂದ್ರ ತಿಳಿಸಿದೆ.

'ರಾಜ್ಯಗಳು ಮಾಡುವ ಸಾಲವು ದೇಶದ ಸಾಲದ ಶ್ರೇಯಾಂಕದ ಮೇಲೆ ಪರಿಣಾಮ ಉಂಟುಮಾಡುತ್ತದೆ. ಸಾಲ ತೀರಿಸುವಲ್ಲಿ ಯಾವುದೇ ರಾಜ್ಯ ವಿಫಲವಾದಲ್ಲಿ ವಿಶ್ವಾಸಾರ್ಹತೆಗೆ ಪೆಟ್ಟು ಬೀಳುತ್ತದೆ. ಅದರಿಂದಾಗಿ ಇಡೀ ದೇಶದ ಹಣಕಾಸಿನ ಸ್ಥಿರತೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ' ಎಂದು ವೆಂಕಟರಮಣಿ ಅವರು ಹೇಳಿದ್ದಾರೆ.

ಅನಿಯಂತ್ರಿತವಾಗಿ ಸಾಲ ಮಾಡುವುದರಿಂದ ಖಾಸಗಿ ಉದ್ದಿಮೆಗಳು ಪಡೆಯುವ ಸಾಲ ಕೂಡ ದುಬಾರಿ ಆಗುತ್ತದೆ. ಆಗ ಮಾರುಕಟ್ಟೆಯಲ್ಲಿ ಸರಕುಗಳ ಉತ್ಪಾದನೆ, ಪೂರೈಕೆ ಹಾಗೂ ಸೇವೆಗಳ ಲಭ್ಯತೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ಅಟಾರ್ನಿ ಜನರಲ್ ನೀಡಿರುವ ವಿವರಣೆಯಲ್ಲಿ ಉಲ್ಲೇಖಿಸಲಾಗಿದೆ.

'ರಾಜ್ಯವು ವಿಪರೀತವಾಗಿ ಸಾಲ ಮಾಡಿ, ಅದನ್ನು ತೀರಿಸಲು ತೆಗೆದಿರಿಸಬೇಕಾದ ಮೊತ್ತ ಹೆಚ್ಚಾದಾಗ ಅಭಿವೃದ್ಧಿ ಕಾರ್ಯಗಳಿಗೆ ಸಿಗುವ ಮೊತ್ತವು ಕಡಿಮೆ ಆಗುತ್ತದೆ. ಇದು ಜನರನ್ನು ದಾರಿದ್ರ್ಯಕ್ಕೆ ನೂಕುತ್ತದೆ, ರಾಜ್ಯದ ವರಮಾನ ತಗ್ಗುತ್ತದೆ. ಆ ಮೂಲಕ ರಾಷ್ಟ್ರದ ವರಮಾನ ಕೂಡ ಕಡಿಮೆ ಆಗುತ್ತದೆ. ಆಗ ಸಾಮಾಜಿಕವಾಗಿಯೂ ಹಲವು ಸಮಸ್ಯೆಗಳು ಉಂಟಾಗಬಹುದು' ಎಂದು ವಿವರಣೆಯಲ್ಲಿ ಹೇಳಲಾಗಿದೆ.

ಯಾವುದೇ ಮೂಲದಿಂದ ಸಾಲ ಪಡೆಯಲು ಪ್ರತಿ ರಾಜ್ಯವೂ ಕೇಂದ್ರದಿಂದ ಅನುಮತಿ ಪಡೆದುಕೊಳ್ಳಲೇಬೇಕು ಎಂದು ವೆಂಕಟರಮಣಿ ತಿಳಿಸಿದ್ದಾರೆ.

ರಾಜ್ಯಗಳಿಗೆ ಸಾಲ ಪಡೆಯಲು ಅನುಮತಿ ನೀಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಇಡೀ ದೇಶದ ಆರ್ಥಿಕ ಸ್ಥಿರತೆಯನ್ನು ಗಮನದಲ್ಲಿ ಇರಿಸಿಕೊಂಡಿರುತ್ತದೆ. ತಾರತಮ್ಯ ಇಲ್ಲದ ರೀತಿಯಲ್ಲಿ, ಪಾರದರ್ಶಕವಾಗಿ, ಹಣಕಾಸು ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಸಾಲ ಪಡೆಯುವ ಮಿತಿಯನ್ನು ನಿರ್ಧರಿಸಲಾಗುತ್ತದೆ ಎಂದು ವಿವರಿಸಿದ್ದಾರೆ.

ಕೇರಳದ ವಾದ ಹೀಗಿದೆ: ರಾಜ್ಯದ ಹಣಕಾಸಿನ ನಿರ್ವಹಣೆಯು ಸ್ವಾಯತ್ತ ಅಧಿಕಾರ, ಆ ಅಧಿಕಾರಕ್ಕೆ ಮಿತಿಗಳನ್ನು ಹೇರುವಂತೆ ಇಲ್ಲ. ಆದರೆ ಕೇಂದ್ರ ಸರ್ಕಾರವು ಸಾಲ ಪಡೆಯುವುದರ ಮೇಲೆ ಮಿತಿ ಹೇರಿ ಈ ಅಧಿಕಾರದ ವಿಚಾರವಾಗಿ ಹಸ್ತಕ್ಷೇಪ ನಡೆಸುತ್ತಿದೆ ಎಂದು ಕೇರಳ ಸರ್ಕಾರ ಸಲ್ಲಿಸಿರುವ ಅರ್ಜಿಯಲ್ಲಿ ದೂರಲಾಗಿದೆ. ಈ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು.

ಸಂವಿಧಾನವು ರಾಜ್ಯಗಳಿಗೆ ಹಣಕಾಸಿನ ಸ್ವಾಯತ್ತೆಯನ್ನು ನೀಡಿದೆ. ರಾಜ್ಯಗಳ ಸಾಲದ ಮಿತಿ ಎಷ್ಟಿರಬೇಕು ಎಂಬುದನ್ನು ರಾಜ್ಯ ಸರ್ಕಾರ ರೂಪಿಸುವ ಕಾನೂನು ತೀರ್ಮಾನಿಸಬೇಕು ಎಂದು ಕೇರಳ ಸರ್ಕಾರವು ಅರ್ಜಿಯಲ್ಲಿ ಹೇಳಿದೆ. ಕೇಂದ್ರದ ಕ್ರಮವು ಒಕ್ಕೂಟ ಸ್ವರೂಪಕ್ಕೆ ವಿರುದ್ಧವಾಗಿದೆ ಎಂದು ಅದು ಹೇಳಿದೆ.

ಕೇಂದ್ರದಿಂದ 'ಯುದ್ಧ' ಘೋಷಣೆ: ಟಿಎಂಸಿ ಆರೋಪ

ಮಮತಾ ಬ್ಯಾನರ್ಜಿ

ಕೋಲ್ಕತ್ತ: 'ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳದ ವಿರುದ್ಧ ಎಲ್ಲ ಕ್ಷೇತ್ರಗಳಲ್ಲೂ ಯುದ್ಧ ಘೋಷಿಸಿದೆ' ಎಂದು ತೃಣಮೂಲ ಕಾಂಗ್ರೆಸ್ ಪಕ್ಷ (ಟಿಎಂಸಿ) ಆರೋಪಿಸಿದೆ.

'ನರೇಗಾ, ವಸತಿ (ಆವಾಸ್) ಯೋಜನೆ, ಗ್ರಾಮೀಣ ರಸ್ತೆ (ಗ್ರಾಮ ಸಡಕ್) ಯೋಜನೆಗಳಿಗೆ ಅನುದಾನ ತಡೆಹಿಡಿದಿರುವ ಕೇಂದ್ರ ಸರ್ಕಾರವು ಇದೀಗ ಸರ್ವ ಶಿಕ್ಷಾ ಅಭಿಯಾನದ ಅನುದಾನವನ್ನೂ ಸ್ಥಗಿತಗೊಳಿಸಿದೆ' ಎಂದು ಟಿಎಂಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

'ಪಶ್ಚಿಮ ಬಂಗಾಳಕ್ಕೆ ಸರ್ವ ಶಿಕ್ಷಾ ಅಭಿಯಾನದಡಿ ಬರಬೇಕಾದ ಅನುದಾನ ₹ 1,754 ಕೋಟಿ. ಆದರೆ ಕೇವಲ ₹ 311 ಕೋಟಿ ಬಿಡುಗಡೆಯಾಗಿದೆ' ಎಂದು ಅದು ತಿಳಿಸಿದೆ.

ಇದನ್ನು 'ಹಣಕಾಸಿನ ಭಯೋತ್ಪಾದನೆ' ಎಂದು ಕರೆದಿರುವ ಟಿಎಂಸಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸೇಡಿನ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದೆ. ಅಲ್ಲದೆ ತನ್ನ ಪೋಸ್ಟ್‌ನಲ್ಲಿ ಮಾಧ್ಯಮ ವರದಿಯೊಂದರ ಲಿಂಕ್ ಅನ್ನು ನಮೂದಿಸಿದೆ.

ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೆ ಹಣವನ್ನು ಸ್ಥಗಿತಗೊಳಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಕೋಲ್ಕತ್ತದಲ್ಲಿ ಇದೇ 13ರವರೆಗೆ ಧರಣಿ ಮುಂದುವರಿಯುತ್ತದೆ. ಅಗತ್ಯವಿದ್ದರೆ ಆ ಬಳಿಕವೂ ಮುಂದುವರಿಯಲಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಹೇಳಿದರು.

'ನನಗೆ ಶೀತ ಮತ್ತು ಜ್ವರ ಇದೆ. ಆರೋಗ್ಯ ಸುಧಾರಣೆ ಆಗುವ ನಿರೀಕ್ಷೆಯಿದ್ದು, ಗುರುವಾರ ಬಜೆಟ್ ಮಂಡನೆ ವೇಳೆ ಅಧಿವೇಶನದಲ್ಲಿ ಹಾಜರಿರುವುದಾಗಿ' ಅವರು ತಿಳಿಸಿದರು.

ಎಲ್‌ಡಿಎಫ್ ಪ್ರತಿಭಟನೆ ಇಂದು

ಪಿಣರಾಯಿ ವಿಜಯನ್

ತಿರುವನಂತಪುರ (ಪಿಟಿಐ): ಆರ್ಥಿಕ ವಿಚಾರಗಳಲ್ಲಿ ಕೇಂದ್ರ ಸರ್ಕಾರವು ದಕ್ಷಿಣ ಭಾರತದ ರಾಜ್ಯಗಳನ್ನು ನಿರ್ಲಕ್ಷಿಸುತ್ತಿದೆ ಎಂದು ಆರೋಪಿಸಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಆಡಳಿತಾರೂಢ ಎಲ್‌ಡಿಎಫ್ ಗುರುವಾರ ದೆಹಲಿಯಲ್ಲಿ ಪ್ರತಿಭಟನೆ ನಡೆಸಲಿದೆ.

ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ನೀಡಿದ್ದ ಆಹ್ವಾನವನ್ನು ಕಾಂಗ್ರೆಸ್ ನೇತೃತ್ವದ ಯುಡಿಎಫ್ ತಿರಸ್ಕರಿಸಿದೆ. ಆದರೆ, ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದಾರೆ.

ಕೇರಳದ ಆಡಳಿತಾರೂಢ ಎಲ್‌ಡಿಎಫ್‌ನ ಸಚಿವರು, ಶಾಸಕರು ಮತ್ತು ಸಂಸದರು ಗುರುವಾರ ಬೆಳಿಗ್ಗೆ 11 ಗಂಟೆಗೆ ನಡೆಯುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಎಲ್ಲ ರಾಜ್ಯಗಳ ಸಾಂವಿಧಾನಿಕ ಹಕ್ಕುಗಳನ್ನು ಕಾಪಾಡುವ ಉದ್ದೇಶದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ರಾಜ್ಯಗಳಿಗೆ ನ್ಯಾಯಯುತವಾಗಿ ದೊರೆಯಬೇಕಾದ ಪಾಲನ್ನು ಕೇಳುವುದು ಪ್ರತಿಭಟನೆಯ ಉದ್ದೇಶವಾಗಿದೆ ಎಂದು ವಿಜಯನ್ ಹೇಳಿದ್ದಾರೆ.

'ಹಣಕಾಸಿನ ಸಂಯುಕ್ತ ವ್ಯವಸ್ಥೆಯ ರಕ್ಷಣೆಗಾಗಿ ನಡೆಯುವ ಈ ಪ್ರತಿಭಟನೆಗೆ ನಮ್ಮ ಬೆಂಬಲ ಇದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಹೇಳಿದ್ದಾರೆ.

ರಾಜ್ಯದ ಎಲ್ಲ ಆರ್ಥಿಕ ಸಮಸ್ಯೆಗಳಿಗೆ ಕೇಂದ್ರವನ್ನು ದೂಷಿಸುವ ಎಡಪಕ್ಷದ ಧೋರಣೆ ಸರಿಯಲ್ಲ ಎಂದು ಹೇಳಿರುವ ಯುಡಿಎಫ್, ಪ್ರತಿಭಟನೆಯಲ್ಲಿ ಭಾಗವಹಿಸಲು ನಿರಾಕರಿಸಿದೆ. ಕೇರಳದ ಆರ್ಥಿಕ ಸಂಕಷ್ಟಕ್ಕೆ ರಾಜ್ಯ ಸರ್ಕಾರದ ದುರುಪಯೋಗವೇ ಮುಖ್ಯ ಕಾರಣ. ತೆರಿಗೆ ಸಂಗ್ರಹ, ಚಿನ್ನದ ಮಾರಾಟ, ಐಜಿಎಸ್‌ಟಿಯಲ್ಲಿ ತನ್ನ ಪಾಲು ಸ್ವೀಕಾರ ಸೇರಿದಂತೆ ಹಲವು ವಿಷಯಗಳಲ್ಲಿ ರಾಜ್ಯ ಸರ್ಕಾರದ ಲೋಪಗಳಿಂದ ಆರ್ಥಿಕವಾಗಿ ಕೆಟ್ಟ ಪರಿಸ್ಥಿತಿ ಎದುರಾಗಿದೆ ಎಂದು ಯುಡಿಎಫ್ ದೂರಿದೆ.

ತಮಿಳುನಾಡು: 15 ಮಾಜಿ ಶಾಸಕರು ಬಿಜೆಪಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ 15 ಮಂದಿ ಮಾಜಿ ಶಾಸಕರು, ಒಬ್ಬ ಸಂಸದ ಸೇರಿದಂತೆ ಹಲವು ಮಂದಿ ಮುಖಂಡರು ಬುಧವಾರ ಬಿಜೆಪಿಗೆ ಸೇರ್ಪಡೆಗೊಂಡರು.

ಬಿಜೆಪಿಗೆ ಸೇರ್ಪಡೆಗೊಂಡವರಲ್ಲಿ ಎಐಎಡಿಎಂಕೆ ಪಕ್ಷದ ಮುಖಂಡರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಕೇಂದ್ರ ಸಚಿವರಾದ ರಾಜೀವ್ ಚಂದ್ರಶೇಖರ್, ಎಲ್. ಮುರುಗನ್ ಹಾಗೂ ಪಕ್ಷದ ತಮಿಳುನಾಡು ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ಉಪಸ್ಥಿತಿಯಲ್ಲಿ ಇವರು ಪಕ್ಷಕ್ಕೆ ಸೇರ್ಪಡೆಯಾದರು.

'ಮಾಜಿ ಶಾಸಕರು ಮತ್ತು ಮುಖಂಡರ ಸೇರ್ಪಡೆಯಿಂದ ಪಕ್ಷಕ್ಕೆ ಬಲ ಬಂದಿದೆ' ಎಂದು ಅಣ್ಣಾಮಲೈ ಹೇಳಿದರು.

ಬಿಜೆಪಿಗೆ ಪಕ್ಷದ ಬಾಗಿಲು ಮುಚ್ಚಿದೆ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆಗೆ ಪಕ್ಷವು ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದಿರುವ ಎಐಎಡಿಎಂಕೆ ಸಂಘಟನಾ ಕಾರ್ಯದರ್ಶಿ ಡಿ. ಜಯಕುಮಾರ್, 'ಬಿಜೆಪಿಗೆ ಪಕ್ಷದ ಬಾಗಿಲು ಮುಚ್ಚಿದೆ' ಎಂದು ಹೇಳಿದ್ದಾರೆ.

ಎಐಎಡಿಎಂಕೆಗೆ ಬಿಜೆಪಿಯ ಬಾಗಿಲು ತೆರೆದಿದೆ ಎಂದು ಈಚೆಗೆ ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿರುವುದಕ್ಕೆ ಪ್ರತಿಕ್ರಿಯಿಸಿರುವ ಅವರು, 'ನಮ್ಮ ಪಕ್ಷದ ನಿಲುವಿನಂತೆ ಒಂದು ಕಾಲದಲ್ಲಿ ಬಿಜೆಪಿಯು ಮಿತ್ರ ಪಕ್ಷವಾಗಿತ್ತು. ಆದರೆ ಈಗ ನಾವು ಆ ಪಕ್ಷವನ್ನು ವಿರೋಧಿಸುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

ಸೊರೇನ್ ವಾಟ್ಸ್‌ಆ್ಯಪ್ ಸಂದೇಶದ ವಿವರ ಸಲ್ಲಿಸಿದ ಇ.ಡಿ

ಹೇಮಂತ್

ರಾಂಚಿ (ಪಿಟಿಐ): ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ಅವರ ನಿಕಟವರ್ತಿಯೊಬ್ಬರ ನಡುವಿನ ವಾಟ್ಸ್‌ಆ್ಯಪ್ ಸಂದೇಶದ ವಿವರಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಹಣದ ಅಕ್ರಮ ವರ್ಗಾವಣೆ ತಡೆ ನ್ಯಾಯಾಲಯಕ್ಕೆ ಸಲ್ಲಿಸಿದೆ.

ರಾಜ್ಯ ಸರ್ಕಾರದ ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆ ಬಗ್ಗೆ ಇದರಲ್ಲಿ ಚರ್ಚಿಸಲಾಗಿದೆ. ಭಾರಿ ಮೊತ್ತದ ಹಣದ ವಹಿವಾಟನ್ನು ಇದು ಒಳಗೊಂಡಿದೆ ಎಂದು ಆರೋಪಿಸಲಾಗಿದೆ.

ನ್ಯಾಯಾಲಯವು ಸೊರೇನ್ ಅವರನ್ನು ಇನ್ನೂ ಐದು ದಿನಗಳ ಮಟ್ಟಿಗೆ ಇ.ಡಿ. ವಶಕ್ಕೆ ಒಪ್ಪಿಸಿದೆ. ಸೊರೇನ್ ಅವರನ್ನು ಜನವರಿ 31ರಂದು ಬಂಧಿಸಲಾಗಿದೆ. ಸೊರೇನ್ ಅವರಿಗೆ ಸಂಬಂಧಿಸಿದ ಹಲವು ಆಸ್ತಿಗಳ ಬಗ್ಗೆ ವಿವರಗಳು ಲಭ್ಯವಾಗಿವೆ, ಆದರೆ ಅವುಗಳ ಬಗ್ಗೆ ಸೊರೇನ್ ಅವರು ಮಾಹಿತಿ ನೀಡುತ್ತಿಲ್ಲ ಎಂದು ಇ.ಡಿ. ಅಧಿಕಾರಿಗಳು ಕೋರ್ಟ್‌ಗೆ ತಿಳಿಸಿದ್ದಾರೆ.

ಬೇರೆ ರಾಜ್ಯಗಳಿಗೆ ಕಾರ್ಮಿಕರ ವಲಸೆ: ಬಿಜೆಡಿ ವಿರುದ್ಧ ವಾಗ್ದಾಳಿ

'ಒಡಿಶಾ: ಬಿಜೆಪಿ–ಬಿಜೆಡಿ ಪಾಲುದಾರಿಕೆ'

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರೂರ್ಕೆಲಾದಲ್ಲಿ ಬುಧವಾರ ಬೆಂಬಲಿಗರತ್ತ ಕೈಬೀಸಿದರು —ಪಿಟಿಐ ಚಿತ್ರ

ರೂರ್ಕೆಲಾ (ಒಡಿಶಾ) (ಪಿಟಿಐ): 'ಒಡಿಶಾದಲ್ಲಿ ಬಿಜೆಪಿ ಮತ್ತು ಬಿಜೆಡಿ ಪಾಲುದಾರಿಕೆ ಹೊಂದಿವೆ' ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ರಾಜ್ಯದ ಜನರ ಹಿತಾಸಕ್ತಿ ಕಾಪಾಡುವುದಕ್ಕಾಗಿಯೇ ಕಾಂಗ್ರೆಸ್ ಈ ಎರಡು ಪಕ್ಷಗಳನ್ನು ವಿರೋಧಿಸುತ್ತಿದೆ' ಎಂದು ಬುಧವಾರ ಹೇಳಿದರು.

ಒಡಿಶಾ ಪ್ರವೇಶಿಸಿದ ಭಾರತ ಜೋಡೊ ನ್ಯಾಯ ಯಾತ್ರೆ ಅಂಗವಾಗಿ, ರೂರ್ಕೆಲಾದಲ್ಲಿ ನಡೆದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಪಾಲುದಾರಿಕೆಯಲ್ಲಿ ಒಡಿಶಾ ಸರ್ಕಾರ ನಡೆಸುತ್ತಿದ್ದಾರೆ. ಸಂಸತ್‌ನಲ್ಲಿ ಬಿಜೆಡಿ ಸಂಸದರು ಬಿಜೆಪಿಗೆ ಬೆಂಬಲ ನೀಡುತ್ತಾರೆ. ಅದೇ ರೀತಿ, ಬಿಜೆಪಿ ಆಣತಿಯಂತೆ ಬಿಜೆಡಿಯವರು ಕಾಂಗ್ರೆಸ್ ನಾಯಕರ ಮಾತಿಗೆ ಅಡ್ಡಿಯನ್ನುಂಟು ಮಾಡುತ್ತಾರೆ' ಎಂದು ಟೀಕಿಸಿದರು.

'ದ್ವೇಷ ತುಂಬಿದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆಯುವುದಕ್ಕಾಗಿ ನಾನು ಒಡಿಶಾಕ್ಕೆ ಬಂದಿದ್ದೇನೆ' ಎಂದೂ ರಾಹುಲ್ ಗಾಂಧಿ ಹೇಳಿದರು.

ಬಿಜೆಡಿ ನೇತೃತ್ವದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ರಾಜ್ಯ ಸರ್ಕಾರ ಬಡ ಜನರಿಗಾಗಿ ಯಾವ ಕಾರ್ಯಕ್ರಮಗಳನ್ನು ರೂಪಿಸಿಲ್ಲ. ಹೀಗಾಗಿ, ಅಂದಾಜು 30 ಲಕ್ಷ ಜನರು ಉದ್ಯೋಗ ಅರಸಿ ಇತರ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ಇನ್ನೊಂದೆಡೆ, ರಾಜ್ಯದ ಸಂಪತ್ತು ಲೂಟಿ ಮಾಡುವುದಕ್ಕಾಗಿ 30 ಜನ ಕೋಟ್ಯಾಧಿಪತಿಗಳು ಇಲ್ಲಿಗೆ ಬಂದಿದ್ದಾರೆ' ಎಂದರು.

'ಒಡಿಶಾದಲ್ಲಿ ಬುಡಕಟ್ಟು ಸಮುದಾಯದವರ ಜನಸಂಖ್ಯೆ ದೊಡ್ಡದಿದೆ. ಆದರೆ, ಬುಡಕಟ್ಟು ಜನರು ಹಾಗೂ ದಲಿತರನ್ನು ರಾಜ್ಯ ಸರ್ಕಾರ ಸತತವಾಗಿ ನಿರ್ಲಕ್ಷಿಸುತ್ತಾ ಬಂದಿದೆ' ಎಂದರು. ಎಐಸಿಸಿಯ ಒಡಿಶಾ ಉಸ್ತುವಾರಿ ಅಜಯ್ ಕುಮಾರ್, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶರತ್ ಪಟ್ನಾಯಕ್ ಭಾಗವಹಿಸಿದ್ದರು.

ಎನ್‌ಸಿಪಿ ಶರದ್ ಬಣಕ್ಕೆ ಹೊಸ ಹೆಸರು

ನವದೆಹಲಿ (ಪಿಟಿಐ): ಎನ್‌ಸಿಪಿಯ ಶರದ್ ಪವಾರ್ ಬಣಕ್ಕೆ ಚುನಾವಣಾ ಆಯೋಗವು 'ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ– ಶರದ್‌ಚಂದ್ರ ಪವಾರ್' ಎಂಬ ಹೆಸರನ್ನು ಬುಧವಾರ ಹಂಚಿಕೆ ಮಾಡಿದೆ.

ಮುಂಬರುವ ರಾಜ್ಯಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮೂರು ಹೊಸ ಹೆಸರುಗಳನ್ನು ಸೂಚಿಸುವಂತೆ ಆಯೋಗವು ಸಲಹೆ ನೀಡಿತ್ತು. ಅದರಂತೆ ಶರದ್ ಬಣವು, 'ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ–ಶರದ್‌ಚಂದ್ರ ಪವಾರ್', 'ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ–ಶರದ್ ರಾವ್ ಪವಾರ್' ಮತ್ತು 'ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ–ಶರದ್ ಪವಾರ್' ಹೆಸರುಗಳನ್ನು ಸೂಚಿಸಿತ್ತು.

'ಆಲದ ಮರ' ಚಿಹ್ನೆಯನ್ನು ತಮ್ಮ ಬಣಕ್ಕೆ ನೀಡಬೇಕು ಎಂದೂ ಪವಾರ್ ಬಣವು ಆಯೋಗವನ್ನು ಕೋರಿತ್ತು.

ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ನೇತೃತ್ವದ ಎನ್‌ಸಿಪಿ ಬಣವನ್ನೇ ನೈಜ ಎನ್‌ಸಿಪಿ ಎಂದು ಮಂಗಳವಾರ ಪ್ರಕಟಿಸಿದ್ದ ಚುನಾವಣಾ ಆಯೋಗವು, ಪಕ್ಷದ 'ಗೋಡೆ ಗಡಿಯಾರ' ಚಿಹ್ನೆಯನ್ನೂ ಅದೇ ಬಣಕ್ಕೆ ಹಂಚಿಕೆ ಮಾಡಿತ್ತು.

17ಕ್ಕೆ ಹಾಜರಾಗಲು ಕೇಜ್ರಿವಾಲ್‌ಗೆ ನೋಟಿಸ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ ದೂರಿನ ಮೇರೆಗೆ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ಗೆ ಬುಧವಾರ ದೆಹಲಿ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

ಇದೇ 17ರಂದು ವಿಚಾರಣೆಗೆ ಹಾಜರಾಗುವಂತೆ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ದಿವ್ಯಾ ಮಲ್ಹೋತ್ರಾ ಆದೇಶಿಸಿದ್ದಾರೆ.

ಈ ವಿಚಾರದಲ್ಲಿ ತನ್ನ ವಾದ ಮುಕ್ತಾಯಗೊಳಿಸಿರುವುದಾಗಿ ಇ.ಡಿ ಕೋರ್ಟ್‌ಗೆ ಹೇಳಿಕೆ ಸಲ್ಲಿಸಿದ ಬಳಿಕ ನ್ಯಾಯಾಧೀಶರು ಆದೇಶ ಕಾಯ್ದಿರಿಸಿದ್ದರು. 5ನೇ ನೋಟಿಸ್‌ಗೂ ಕೇಜ್ರಿವಾಲ್ ಗೈರಾದ ನಂತರ ಅವರ ವಿರುದ್ಧ ಇ.ಡಿ ಫೆ.3ರಂದು ನ್ಯಾಯಾಲಯದಲ್ಲಿ ದೂರು ದಾಖಲಿಸಿತ್ತು.

ಆಮ್ ಆದ್ಮಿ ಪಕ್ಷದ ಎಎಪಿ ಸಂಚಾಲಕರೂ ಆದ ಕೇಜ್ರಿವಾಲ್ ಅವರು ಈ ಹಿಂದೆ 'ಈ ಸಮನ್ಸ್‌ಗಳು ಕಾನೂನುಬಾಹಿರ ಮತ್ತು ರಾಜಕೀಯ ಪ್ರೇರಿತ. ಚುನಾವಣಾ ಪ್ರಚಾರಕ್ಕೆ ಹೋಗದಂತೆ ನನ್ನನ್ನು ತಡೆಯುವ ಉದ್ದೇಶದಿಂದ ಸಮನ್ಸ್ ನೀಡಲಾಗಿದೆ' ಎಂದು ಆರೋಪಿಸಿ ಇ.ಡಿಗೆ ಪತ್ರ ಬರೆದಿದ್ದರು.

ಕಾರ್ಮಿಕನ ಹತ್ಯೆಗೈದ ಉಗ್ರರು

ಶ್ರೀನಗರ(ಪಿಟಿಐ): ನಗರದ ಹಬ್ಬಾ ಕದಲ್ ಪ್ರದೇಶದಲ್ಲಿ ಉಗ್ರರು ಬುಧವಾರ ನಡೆಸಿದ ದಾಳಿಯಲ್ಲಿ ಪಂಜಾಬ್ ಮೂಲದ ಕಾರ್ಮಿಕ ಹತನಾಗಿದ್ದು, ಮತ್ತೊಬ್ಬ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಮೃತಸರ ನಿವಾಸಿ ಅಮ್ರಿತ್ ಪಾಲ್ ಸಿಂಗ್ ಹತ್ಯೆಯಾದ ಕಾರ್ಮಿಕ. ರೋಹಿತ್ ಎಂಬ ಕಾರ್ಮಿಕ ಗಾಯಗೊಂಡಿದ್ದು, ಎಸ್‌ಎಂಎಚ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

'ಸ್ಥಳೀಯರಲ್ಲದವರನ್ನು ಗುರಿಯಾಗಿಸಿ ಉಗ್ರರು ದಾಳಿ ಮಾಡಿ ನಡೆಸಿದ ಈ ವರ್ಷದ ಮೊದಲ ಹತ್ಯೆ ಇದಾಗಿದೆ. ಗುಂಡಿನ ದಾಳಿಯಿಂದಾಗಿ ಅಮ್ರಿತ್ ಪಾಲ್ ಸಿಂಗ್ ಸ್ಥಳದಲ್ಲಿಯೇ ಮೃತಪಟ್ಟ' ಎಂದು ಪೊಲೀಸರು ಹೇಳಿದ್ದಾರೆ.

ಕರ್ನಾಟಕ ಹೈಕೋರ್ಟ್ ಸಿಜೆ ಅಂಜಾರಿಯಾ ಹೆಸರು ಶಿಫಾರಸು



ಅಂಜಾರಿಯಾ

ನವದೆಹಲಿ (ಪಿಟಿಐ): ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸ್ಥಾನಕ್ಕೆ ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರನ್ನು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶಿಫಾರಸು ಮಾಡಿದೆ.

ಕರ್ನಾಟಕ ಹೈಕೋರ್ಟ್‌ನ ಈಗಿನ ಮುಖ್ಯ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರು ಫೆಬ್ರುವರಿ 24ರಂದು ನಿವೃತ್ತರಾಗಲಿದ್ದಾರೆ. ನ್ಯಾಯಮೂರ್ತಿ ಕುಮಾರ್ ಅವರ ನಿವೃತ್ತಿಯ ದಿನದಿಂದ ಅನ್ವಯವಾಗುವಂತೆ ನ್ಯಾಯಮೂರ್ತಿ ಅಂಜಾರಿಯಾ ಅವರನ್ನು ಮುಖ್ಯ ನ್ಯಾಯಮೂರ್ತಿ ಆಗಿ ನೇಮಿಸಲು ಕೊಲಿಜಿಯಂ ಶಿಫಾರಸು ಮಾಡಿದೆ.

ದೋಣಿಯಲ್ಲಿ ಅಕ್ರಮವಾಗಿ ಬಂದ ಮೂವರ ಬಂಧನ

ಮುಂಬೈ (ಪಿಟಿಐ): ಕುವೈತ್‌ನಿಂದ ಪಾಕಿಸ್ತಾನದ ಮೂಲಕ ಸಮುದ್ರ ಮಾರ್ಗವಾಗಿ ದೋಣಿಯಲ್ಲಿ ಭಾರತದ ತೀರವನ್ನು ಅಕ್ರಮವಾಗಿ ಪ್ರವೇಶಿಸಿದ ತಮಿಳುನಾಡು ಮೂಲದ ಮೂವರನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ.

ನಿಟ್ಸೋ ಡಿಟ್ಟೊ (31), ವಿಜಯ್ ವಿನಯ್ ಆಂಥೋನಿ (29), ಜೆ. ಸಹಾಯತ್ತ ಅನೀಶ್ (29) ಬಂಧಿತರು. ಇವರನ್ನು ಇಲ್ಲಿನ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಬುಧವಾರ ಹಾಜರುಪಡಿಸಿದ್ದು, ಫೆ.10ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಇವರ ವಿರುದ್ಧ ಪಾಸ್‌ಪೋರ್ಟ್ ನಿಯಮಗಳನ್ನು ಪಾಲಿಸದಿರುವ ಆಪಾದನೆಯಡಿ ಪ್ರಕರಣ ದಾಖಲಿಸಲಾಗಿದೆ. ಮಂಗಳವಾರ ಬೆಳಿಗ್ಗೆ ಮುಂಬೈ ಕರಾವಳಿಯಲ್ಲಿ ಗಸ್ತು ತಿರುಗುತ್ತಿದ್ದಾಗ ದೋಣಿ ಪತ್ತೆಯಾಗಿತ್ತು.

'ವಿಭಜನೆ ಸಂಕಥನ ನಿಲ್ಲಿಸಿ'

ಒಂದನೇ ಪುಟದಿಂದ...

ಬಜೆಟ್ ಅಧಿವೇಶನ ಅಂಗವಾಗಿ, ರಾಷ್ಟ್ರಪತಿಯವರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ರಾಜ್ಯಸಭೆಯಲ್ಲಿ ಉತ್ತರಿಸಿದ ಅವರು, 'ದೇಶವನ್ನು ಉತ್ತರ ಮತ್ತು ದಕ್ಷಿಣ ಎಂಬುದಾಗಿ ಬಿಂಬಿಸುವಂತಹ ಜಾಹೀರಾತುಗಳನ್ನು ನೀಡುವ ಮೂಲಕ ಕರ್ನಾಟಕ ಸರ್ಕಾರ ಇಂತಹ ಸಂಕಥನ ನಿರ್ಮಿಸುತ್ತಿದೆ' ಎಂದರು. ರಾಜ್ಯಕ್ಕೆ ತೆರಿಗೆ ಪಾಲು ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ರಾಷ್ಟ್ರ ರಾಜಧಾನಿಯಲ್ಲಿ ಕೈಗೊಂಡಿರುವ ಪ್ರತಿಭಟನೆ ಕುರಿತು ವಾಗ್ದಾಳಿ ನಡೆಸಿದರು.

90 ನಿಮಿಷ ಮಾತನಾಡಿದ ಅವರು, ತಮ್ಮ ಸರ್ಕಾರದ ಸಾಧನೆಗಳನ್ನು ಕೂಡ ವಿವರಿಸಿದರು.

'ನನ್ನ ತೆರಿಗೆ, ನನ್ನ ಹಣ (ನನ್ನ ತೆರಿಗೆ, ನನ್ನ ಹಕ್ಕು) ಎಂಬ ಘೋಷವಾಕ್ಯದಡಿ ಪ್ರತಿಭಟನೆ ನಡೆಸಲಾಗುತ್ತಿದೆ. ದೇಶವನ್ನು ಒಡೆಯುವ ಈ ಹೊಸ ಸಂಕಥನಕ್ಕೆ ರಾಜ್ಯ ಸರ್ಕಾರವೊಂದರ ಬೆಂಬಲವಿದೆ. ರಾಷ್ಟ್ರೀಯ ಪಕ್ಷವೊಂದರಿಂದ ಇಂತಹ ವಿಚಾರ ಬರುತ್ತಿರುವುದು ನೋವಿನ ಸಂಗತಿ' ಎಂದರು.

'ಈ ವಿಷಯವನ್ನು ಬಹಳ ನೋವಿನಿಂದ ಹಂಚಿಕೊಳ್ಳುತ್ತಿದ್ದೇನೆ. ರಾಜಕೀಯ ಲಾಭಗಳಿಗಾಗಿ, ಇತ್ತೀಚಿನ ದಿನಗಳಲ್ಲಿ ದೇಶವನ್ನು ಒಡೆಯುವಂತಹ ಮಾತುಗಳನ್ನಾಡಲಾಗುತ್ತಿದೆ. ಇಡೀ ಒಂದು ರಾಜ್ಯವೇ ಇಂತಹ ಭಾಷೆಯಲ್ಲಿ ಮಾತನಾಡುತ್ತಿದೆ. ಈ ದೇಶಕ್ಕೆ ಇದಕ್ಕಿಂತ ಘೋರವಾದುದು ಏನೂ ಇಲ್ಲ' ಎಂದು ಹೇಳಿದರು.

'ಜಾರ್ಖಂಡ್‌ನ ಕ್ರೀಡಾಪಟುವೊಬ್ಬರು ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪದಕ ಗೆದ್ದರೆ, ಅದು ಈಶಾನ್ಯ ಭಾಗದ ರಾಜ್ಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೇ ಗೌರವದ ವಿಷಯ. ಹಿಮಾಲಯದಲ್ಲಿ ಹುಟ್ಟಿ ಹರಿಯುವ ನದಿ ನೀರನ್ನು ಇತರ ರಾಜ್ಯಗಳಿಗೆ ಹಂಚಿಕೆ ಮಾಡುವುದಿಲ್ಲ ಎಂದು ಯಾರಾದರೂ ಹೇಳಿದರೆ, ಆಗ ದೇಶದ ಗತಿ ಏನು? ಇಂತಹ ಮಾತುಗಳಿಗೆ ಕೊನೆ ಬೇಡವೇ?' ಎಂದು ಹೇಳಿದರು.

'ಕಲ್ಲಿದ್ದಲು ನಿಕ್ಷೇಪಗಳಿಂದ ಸಂಪದ್ಭರಿತ ರಾಜ್ಯವೊಂದು, ಈ ಪ್ರಾಕೃತಿಕ ಸಂಪತ್ತನ್ನು ಇತರ ರಾಜ್ಯಗಳೊಂದಿಗೆ ಹಂಚಿಕೊಳ್ಳುವುದಿಲ್ಲ ಎಂದು ಹೇಳಿದರೆ? ಕೋವಿಡ್ ಪಿಡುಗಿನ ಸಂದರ್ಭದಲ್ಲಿ, ಈಶಾನ್ಯ ರಾಜ್ಯಗಳು ತಮ್ಮಲ್ಲಿ ಉತ್ಪಾದನೆಯಾದ ಆಮ್ಲಜನಕವನ್ನು ಇತರ ಭಾಗಗಳಿಗೆ ಕೊಡುವುದಿಲ್ಲ ಎಂದು ಹೇಳಿದ್ದರೆ ಏನಾಗುತ್ತಿತ್ತು' ಎಂದು ಹರಿತ ಮಾತುಗಳಲ್ಲಿ ಹೇಳಿದರು.

'ಭಾರತ ನಮ್ಮ ಪಾಲಿಗೆ ತುಂಡು ಭೂಮಿಯಲ್ಲ. ಇದು ಮಾನವನ ದೇಹವಿದ್ದಂತೆ. ಪಾದಕ್ಕೆ ಮುಳ್ಳು ಚುಚ್ಚಿದಾಗ, ಅದು ಕಾಲಿಗೆ ಚುಚ್ಚಿದ್ದು ನನಗೆ ಸಂಬಂಧವಿಲ್ಲ ಎಂದು ಕೈ ಹೇಳುವುದಿಲ್ಲ. ಅದೇ ರೀತಿ, ದೇಶದ ಯಾವುದೇ ಭಾಗದಲ್ಲಿ ಕಂಡುಬರುವ ನೋವನ್ನು ಪ್ರತಿಯೊಬ್ಬ ಪ್ರಜೆಯೂ ಅನುಭವಿಸುತ್ತಾನೆ' ಎಂದು ಹೇಳಿದರು.

'40 ಸ್ಥಾನ ಉಳಿಸಿಕೊಳ್ಳುವಂತೆ ಪ್ರಾರ್ಥಿಸುವೆ'

ತಮ್ಮ ಭಾಷಣದಲ್ಲಿ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದ ಮೋದಿ, 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳ ನಾಯಕರು ಆಡಿದ ಮಾತುಗಳನ್ನು ಉಲ್ಲೇಖಿಸುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಕುಟುಕಿದರು.

'ಲೋಕಸಭಾ ಚುನಾವಣೆಗಳಲ್ಲಿ 40 ಸ್ಥಾನಗಳ ಗಡಿ ದಾಟಲು ಕಾಂಗ್ರೆಸ್ ಪಕ್ಷ ಹೆಣಗಾಡಲಿದೆ ಎಂಬುದಾಗಿ 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷ ಟಿಎಂಸಿಯ ನಾಯಕಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಪಶ್ಚಿಮ ಬಂಗಾಳದಿಂದ ನಿಮಗೆ ಸವಾಲು ಒಡ್ಡಲಾಗಿದೆ. ಆದರೆ, ನೀವು 40 ಸ್ಥಾನಗಳನ್ನು ಗೆಲ್ಲುವಂತಾಗಲಿದೆ ಎಂದು ನಾನು ಪ್ರಾರ್ಥಿಸುತ್ತೇನೆ' ಎಂದು ಮೋದಿ ಹೇಳಿದರು.

'ಕಾಂಗ್ರೆಸ್ ಈಗ ಹಳತಾದ ಪಕ್ಷವಾಗಿದ್ದು, ತನ್ನ ಸಂಘಟನಾ ಕಾರ್ಯವನ್ನು ಹೊರಗುತ್ತಿಗೆಗೆ ನೀಡಿದೆ ಎಂಬುದು ನನಗೆ ಮನವರಿಕೆಯಾಗಿದೆ' ಎಂದು ಛೇಡಿಸಿದರು.

'ಹಲವು ದಶಕಗಳ ಕಾಲ ದೇಶವನ್ನು ಆಳಿದ ಪಕ್ಷ ಅಧೋಗತಿಗೆ ಇಳಿಯುತ್ತಿದೆ. ಇದು ನಮಗೆ ಖುಷಿ ತರುವ ಸಂಗತಿಯಲ್ಲ. ನಿಮ್ಮ ಬಗ್ಗೆ ನಮಗೆ ಸಹಾನುಭೂತಿ ಇದೆ. ಆದರೆ, ರೋಗಿಯೇ.. ಮಾಡಿಕೊಂಡಾಗ ವೈದ್ಯರು ಏನು ಮಾಡಲು ಸಾಧ್ಯ? ಇದರ ಬಗ್ಗೆ ಹೆಚ್ಚಿಗೆ ಏನು ಹೇಳಲಿ?' ಎಂದು ವ್ಯಂಗ್ಯವಾಡಿದರು. 'ರಾಜ್ಯಸಭೆಯಲ್ಲಿ ಸುದೀರ್ಘ ಅವಧಿಗೆ ಮಾತನಾಡಲು ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಕಾಶ ಲಭಿಸಿತು. ಆದರೆ, ತನಗೆ ಇಂತಹ ಅವಕಾಶ ಸಿಕ್ಕಿದ್ದಾದರೂ ಹೇಗೆ ಎಂಬ ಬಗ್ಗೆ ಸ್ವತಃ ಖರ್ಗೆ ಅವರಿಗೆ ಅಚ್ಚರಿಯಾಗಿದೆ' ಎಂದು ಹೇಳಿದರು.

ರಾಹುಲ್ ಗಾಂಧಿ ವಿರುದ್ಧವೂ ಟೀಕೆ ಮಾಡಿದ ಮೋದಿ, 'ಕಾಂಗ್ರೆಸ್ ಪಕ್ಷ ತನ್ನ ಯುವರಾಜನಿಗಾಗಿ ಸ್ಟಾರ್ಟ್ ಅಪ್‌ಗೆ ಪ್ರಯತ್ನಿಸುತ್ತಿದೆ. ಆದರೆ, ಅದಕ್ಕೆ ಚಾಲನೆಯೇ ಸಿಗುತ್ತಿಲ್ಲ' ಎಂದರು.

ದೇಶದ ಜ್ವಲಂತ ಸಮಸ್ಯೆಗಳಾದ ನಿರುದ್ಯೋಗ, ಬೆಲೆ ಏರಿಕೆ, ಆರ್ಥಿಕ ಅಸಮಾನತೆಯಂತಹ ವಿಷಯಗಳ ಬದಲು ಕಾಂಗ್ರೆಸ್ ಟೀಕಿಸುವ ಬಗ್ಗೆಯೇ ಪ್ರಧಾನಿ ಮೋದಿ ಮಾತು ಕೇಂದ್ರೀಕೃತವಾಗಿತ್ತು

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ನೆಹರೂ ಬಗ್ಗೆ ತಿಳಿಯಲು ಮೋದಿ ಅಧ್ಯಯನ ನಡೆಸುವ ಅಗತ್ಯವಿದೆ. ಮೀಸಲಾತಿ ಸೌಲಭ್ಯ ಕೊಟ್ಟವರು ಯಾರು? ಮೀಸಲಾತಿ ಬಗ್ಗೆ ಆರ್‌ಎಸ್‌ಎಸ್‌ನ ನಿಲುವು ಏನು ಎಂಬುದು ಅವರಿಗೆ ಗೊತ್ತಿದೆಯೇ?

ಕೆ.ಸಿ.ವೇಣುಗೋಪಾಲ್ ಎಐಸಿಸಿ ಪ್ರಧಾನ ಕಾರ್ಯದರ್ಶಿ

3ನೇ ಅವಧಿಗೆ ಸರ್ಕಾರ: ಮೋದಿ ವಿಶ್ವಾಸ

ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಭಾರಿ ಬಹುಮತ ಪಡೆದು, ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯುವ ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ, ' ಮೂರನೇ ಅವಧಿಯಲ್ಲಿ ನಮ್ಮ ಸರ್ಕಾರವು ತನ್ನೆಲ್ಲ ಶಕ್ತಿ ಬಳಸಿ, ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಲಿದೆ' ಎಂದರು.

'ಸಬ್ ಕಾ ಸಾಥ್ ಎಂಬುದು ಕೇವಲ ಘೋಷಣೆಯಲ್ಲ; ಅದು ಮೋದಿಯ ಗ್ಯಾರಂಟಿ. ಮೂರನೇ ಅವಧಿಗೆ ನಮ್ಮ ಸರ್ಕಾರ ಅಧಿಕಾರಕ್ಕೇರುವ ದಿನಗಳು ದೂರ ಇಲ್ಲ ಕೆಲವರು ಈ ಮೂರನೇ ಅವಧಿಯ ಸರ್ಕಾರವನ್ನು ಮೋದಿ 3.0 ಸರ್ಕಾರ ಎಂದು ಕರೆಯುತ್ತಾರೆ' ಎಂದರು.

ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ದೇಶದ ಆರ್ಥಿಕತೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಿಲ್ಲ ಎಂದು ಟೀಕಿಸಿದ ಅವರು, ಹತ್ತು ವರ್ಷಗಳಲ್ಲಿ ತಮ್ಮ ಸರ್ಕಾರ, ಸಮಾಜದ ಎಲ್ಲ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದೆ ಎಂದು ಹೇಳಿದರು.

ಮೋದಿ ಭಾಷಣ ಒಕ್ಕೂಟ ವ್ಯವಸ್ಥೆಯನ್ನು ಹತ್ಯೆ ಮಾಡಿ, ಕೈಗಳಿಗೆ ರಕ್ತ ಮೆತ್ತಿಕೊಂಡಿರುವ ವ್ಯಕ್ತಿಯು ಒಕ್ಕೂಟ ವ್ಯವಸ್ಥೆ ಬಗ್ಗೆ ಟೊಳ್ಳು ಮಾತುಗಳನ್ನಾಡಿದಂತಿತ್ತು

ಡೆರೆಕ್ ಒಬ್ರಯಾನ್ ಟಿಎಂಸಿ ರಾಜ್ಯಸಭಾ ಸದಸ್ಯ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ದಯೆ ಇಲ್ಲದವನು ಸುಟ್ಟ ಬೀಜದಂತೆ ನಿಷ್ಪ್ರಯೋಜಕ.
-ಮಹಾವೀರ

ಜನಸಂಖ್ಯೆ ಏರಿಕೆ ಪರಿಶೀಲನೆಗೆ ಮೊದಲು ಜನಗಣತಿ ನಡೆಸಿ

'ಜನಸಂಖ್ಯೆ ಹೆಚ್ಚಳ ಮತ್ತು ಜನಸಂಖ್ಯಾ ಸ್ವರೂಪದಲ್ಲಿ ಆಗಿರುವ ಬದಲಾವಣೆ'ಯಿಂದ ಎದುರಾಗಬಹುದಾದ ಸವಾಲುಗಳ ಕುರಿತು ಪರಿಶೀಲನೆ ನಡೆಸಲು ಉನ್ನತಾಧಿಕಾರದ ಸಮಿತಿ ರಚಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಧ್ಯಂತರ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದೊಂದು ಕುತೂಹಲಕರ ಹೇಳಿಕೆ. ಈ ಸಮಿತಿಯ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ. ಹಾಗೆಯೇ ಈ ಸಮಿತಿಯು ಯಾವ ಕೆಲಸ ಮಾಡಬೇಕು ಎಂಬ ನಿರೀಕ್ಷೆ ಇದೆ ಎಂಬುದೂ ತಿಳಿದಿಲ್ಲ. ಜನಸಂಖ್ಯೆಯು ವೇಗವಾಗಿ ಬೆಳೆಯುತ್ತಿದೆ ಎಂದಾದರೆ ಅದು ತುರ್ತಾಗಿ ಗಮನಹರಿಸಬೇಕಾದ ಸವಾಲು ಎಂಬ ಭಾವನೆ ಇದೆ. ಭಾರತವು ಚೀನಾವನ್ನು ಹಿಂದಿಕ್ಕಿ ಜಗತ್ತಿನ ಅತ್ಯಂತ ಹೆಚ್ಚು ಜನಸಂಖ್ಯೆ ಇರುವ ದೇಶ ಎಂಬ ಸ್ಥಾನವನ್ನು ಪಡೆದುಕೊಂಡಿದೆ ಎಂಬುದು ನಿಜ. ಆದರೆ, ಭಾರತದ ಜನಸಂಖ್ಯೆಯು ಸ್ಥಿರಗೊಳ್ಳುತ್ತಿದೆ ಎಂಬುದು ವಾಸ್ತವ. ಹತ್ತು ವರ್ಷಕ್ಕೊಮ್ಮೆ ನಡೆಸಲಾಗುವ ಜನಗಣತಿಯು 2011ರಲ್ಲಿ ನಡೆದಿತ್ತು. ಆದರೆ, ಸರ್ಕಾರ ಈವರೆಗೂ ಅದನ್ನು ನಡೆಸಿಲ್ಲ. ಹಾಗಾಗಿ, ಜನಸಂಖ್ಯೆ ಎಷ್ಟಿದೆ ಎಂಬುದರ ಅಧಿಕೃತ ಮಾಹಿತಿ ಇಲ್ಲ. ಸರ್ಕಾರವು ಸದ್ಯದಲ್ಲಿ ಜನಗಣತಿ ನಡೆಸುವ ಯೋಜನೆಯನ್ನೂ ಮಾಡಿರುವಂತೆ ಕಾಣುತ್ತಿಲ್ಲ.

ಉದ್ದೇಶಿತ ಉನ್ನತಾಧಿಕಾರ ಸಮಿತಿಯ ಕುರಿತ ವಿವರಗಳನ್ನು ಸರ್ಕಾರ ಬಹಿರಂಗಪಡಿಸಬೇಕು

ಜನಗಣತಿಯಿಂದ ದೊರೆಯುವ ಜನಸಂಖ್ಯೆ ಕುರಿತ ಅಧಿಕೃತ ಮಾಹಿತಿ ಇಲ್ಲದಿದ್ದರೂ ನೀತಿ ನಿರೂಪಣೆ ಮತ್ತು ಯೋಜನೆಗಳ ರೂಪಿಸುವಿಕೆ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆ. ಮಾದರಿ ನೋಂದಣಿ ವ್ಯವಸ್ಥೆಯ 2020ರ ವರದಿ ಮತ್ತು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ವರದಿ (2019-21) ಪ್ರಕಾರ, ದೇಶದಲ್ಲಿ ಒಟ್ಟು ಫಲವಂತಿಕೆ ದರವು (ಟಿಎಫ್‌ಆರ್) 2.0ಗೆ ಇಳಿದಿದೆ. ಇದು, ಜನಸಂಖ್ಯೆಯ ಮಟ್ಟ ಕಾಯ್ದುಕೊಳ್ಳಲು ಬೇಕಿರುವ ದರವಾದ 2.1ಕ್ಕಿಂತಲೂ ಕಡಿಮೆ. ಉತ್ತರಪ್ರದೇಶ, ಬಿಹಾರದಂತಹ ಕೆಲವು ರಾಜ್ಯಗಳಲ್ಲಿ ಮಾತ್ರ ಟಿಎಫ್‌ಆರ್ ಹೆಚ್ಚು ಇದೆ. ಈ ರಾಜ್ಯಗಳಲ್ಲಿಯೂ ಟಿಎಫ್‌ಆರ್ ಕುಸಿಯುತ್ತಿದೆ. ದಕ್ಷಿಣದ ರಾಜ್ಯಗಳಲ್ಲಿ ಆರೋಗ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿನ ಪ್ರಗತಿಯಿಂದಾಗಿ ಜನಸಂಖ್ಯೆ ಏರಿಕೆ ದರವು ಕುಸಿಯುತ್ತಲೇ ಬಂದಿದೆ. ಸಮುದಾಯಗಳನ್ನು ನೋಡುವುದಾದರೆ, ಮುಸ್ಲಿಂ ಸಮುದಾಯದಲ್ಲಿ ಒಂದು ಕಾಲದಲ್ಲಿ ಜನಸಂಖ್ಯೆ ಏರಿಕೆ ದರವು ಹೆಚ್ಚು ಇತ್ತು. ಆದರೆ ಈಗ, ಜನಸಂಖ್ಯೆ ಏರಿಕೆ ದರವು ಕುಸಿಯುತ್ತಿರುವ ಪ್ರಮಾಣವು ಈ ಸಮುದಾಯದಲ್ಲಿಯೇ ಹೆಚ್ಚು. ಕೆಲವು ಪ್ರದೇಶಗಳಲ್ಲಿ ಅಂತೂ ಜನಸಂಖ್ಯೆ ಮಟ್ಟ ಕಾಯ್ದುಕೊಳ್ಳಲು ಬೇಕಾದ ಅಪೇಕ್ಷಣೀಯ ದರಕ್ಕಿಂತ ಕೆಳಗೆ ಇದೆ. ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಹೀಗೆ ಆಗಿದೆ. ಆದ್ದರಿಂದ, ಜನಸಂಖ್ಯೆ ಏರಿಕೆಯು ದೇಶವು ಎದುರಿಸುತ್ತಿರುವ ಗಂಭೀರವಾದ ಸಮಸ್ಯೆ ಎಂದು ಪರಿಗಣಿಸಿ ರೂಪಿಸಬಹುದಾದ ಯಾವುದೇ ನೀತಿ ಅಥವಾ ನಿರ್ಧಾರವು ತಪ್ಪುಗ್ರಹಿಕೆಯಿಂದ ಕೂಡಿದ್ದಾಗಿರುತ್ತದೆ. ಜನಸಂಖ್ಯೆ ಏರಿಕೆಯು ದೇಶದ ಮುಂದಿರುವ ಗಂಭೀರ ಸವಾಲು ಎಂದು ಕೆಲವು ಗುಂಪುಗಳು ಮಾಡುತ್ತಿರುವ ಪ್ರತಿಪಾದನೆ ಸ್ವಹಿತಾಸಕ್ತಿಯದ್ದಾಗಿದೆ.

ದೇಶದಲ್ಲಿ ಜನಸಂಖ್ಯೆ ಏರಿಕೆಯು ಈಗಿನ ದರದಲ್ಲಿಯೇ ಇದ್ದರೆ, ಜನಸಂಖ್ಯೆ ನಿಯಂತ್ರಣಕ್ಕಾಗಿ ಬಲವಂತದ ಕ್ರಮಗಳನ್ನು ಕೈಗೊಳ್ಳುವ ಅಗತ್ಯ ಇಲ್ಲ. ಕೆಲವು ದೇಶಗಳಲ್ಲಿ ಕೆಲವು ವರ್ಷಗಳ ಹಿಂದೆ, ಸರ್ಕಾರಗಳೇ ಮಧ್ಯಪ್ರವೇಶಿಸಿ ಜನಸಂಖ್ಯೆ ನಿಯಂತ್ರಣದ ಕ್ರಮಗಳನ್ನು ಕೈಗೊಂಡಿವೆ. ಆದರೆ, ಅವು ಅಲ್ಲಿನ ಜನಸಂಖ್ಯಾ ಸ್ವರೂಪದ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ. ಜನಸಂಖ್ಯೆ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದ ಕೆಲವು ದೇಶಗಳು ನಿಯಂತ್ರಣದ ನೀತಿಯ ಬದಲಿಗೆ ಜನಸಂಖ್ಯೆ ಹೆಚ್ಚಳದ ನೀತಿಗೆ ಒತ್ತು ನೀಡಬೇಕಾಗಿ ಬಂದದ್ದೂ ಇದೆ. ಇದಕ್ಕೆ ಒಂದು ಉದಾಹರಣೆ ಚೀನಾ. ಕುಟುಂಬದ ಗಾತ್ರದ ಆಧಾರದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳು, ಕಲ್ಯಾಣ ಯೋಜನೆಗಳ ಸೌಲಭ್ಯ ಲಭ್ಯ ಎಂಬ ನಿಯಮ ರೂಪಿಸುವುದು ಕೆಟ್ಟ ನೀತಿ. ಇಂತಹ ಸಲಹೆಗಳು ಹಿಂದೆ ಕೇಳಿಬಂದಿದ್ದವು. ಮುಸ್ಲಿಂ ಸಮುದಾಯದ ಜನಸಂಖ್ಯೆಯು ವೇಗವಾಗಿ ಬೆಳೆಯುತ್ತಿದೆ; ಹೀಗಾಗಿ, ಮುಂದೊಂದು ದಿನ ಈ ದೇಶದಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗಲಿದ್ದಾರೆ ಎಂಬ ಸಂಕಥನವನ್ನು ಬಹಳ ಹಿಂದಿನಿಂದಲೂ ಪ್ರಚುರಪಡಿಸಲಾಗುತ್ತಿದೆ. ಆದರೆ, ಇದು ಸಂಪೂರ್ಣವಾಗಿ ಆಧಾರರಹಿತ ಎಂದು ಜನಸಂಖ್ಯಾಶಾಸ್ತ್ರಜ್ಞರು ಮತ್ತು ಪರಿಣತರು ಹೇಳಿದ್ದಾರೆ. ಹೊಸದಾಗಿ ರಚನೆ ಆಗಲಿರುವ ಸಮಿತಿಯು ಇಂತಹ ಯೋಚನೆಗಳ ಆಧಾರದಲ್ಲಿ ಕೆಲಸ ಮಾಡಲಾರದು ಎಂದು ಆಶಿಸೋಣ. ಸಮಿತಿಯ ಕುರಿತ ವಿವರಗಳನ್ನು ಸರ್ಕಾರವು ಬಹಿರಂಗಪಡಿಸಬೇಕು. ಆದರೆ, ಎಲ್ಲಕ್ಕಿಂತ ಮುಖ್ಯವಾಗಿ, ಜನಸಂಖ್ಯೆ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಜನಗಣತಿಯನ್ನು ಮೊದಲಿಗೆ ನಡೆಸಬೇಕು.

ದಿನದ ಟ್ವೀಟ್

ಖಾಸಗಿತನಕ್ಕೆ ಧಕ್ಕೆಯಾಗದಿರಲಿ

ಜನನ ಮತ್ತು ಮರಣವನ್ನು ನೋಂದಾಯಿಸಲಾಗದ ದೇಶವು (2011ರ ನಂತರ ಜನಗಣತಿ ನಡೆದಿಲ್ಲ ಮತ್ತು ಸಾಂಕ್ರಾಮಿಕದ ತರುವಾಯ ಅಂಕಿಅಂಶದ ಕೊರತೆ ಎದುರಾಗಿದೆ) ಸಹಜೀವನ ಸಂಬಂಧವನ್ನು (ಲಿವ್-ಇನ್ ರಿಲೇಷನ್‌ಶಿಪ್) ನೋಂದಾಯಿಸಲು ಬಯಸುತ್ತದೆ.

(ಸಹಜೀವನ ಸಂಬಂಧದ ನೋಂದಣಿಯನ್ನು ಕಡ್ಡಾಯಗೊಳಿಸಲು ಮುಂದಾಗಿರುವ ಉತ್ತರಾಖಂಡದ ಪ್ರಸ್ತಾವಿತ ಕಾಯ್ದೆಗೆ ಪ್ರತಿಕ್ರಿಯೆ)

ಸುಶಾಂತ್ ಸಿಂಗ್, ಉಪನ್ಯಾಸಕ, ಲೇಖಕ

ಕಿಡಿನುಡಿ

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಆಗುತ್ತಿದ್ದ ಅನ್ಯಾಯದ ವಿರುದ್ಧ, ಭ್ರಷ್ಟಾಚಾರ, ಸ್ವಜನಪಕ್ಷಪಾತದ ವಿರುದ್ಧ ಗಟ್ಟಿ ಧ್ವನಿಯಾಗಿದ್ದ ದಕ್ಷ ಐಎಎಸ್ ಅಧಿಕಾರಿ ಕೆ.ಎಸ್.ಲತಾ ಕುಮಾರಿ ಅವರಿಗೆ ಕಡ್ಡಾಯವಾಗಿ ರಜೆ ಕೊಟ್ಟು ಕಳಿಸಿ, ಆಯೋಗದಲ್ಲಿ ನಡೆಯುವ 'ಆಂತರಿಕ' ಕೆಲಸಗಳಿಗೆ ಸರ್ಕಾರ ಕೆಂಪುಹಾಸು ಹಾಕಿಕೊಡುವ ಮೂಲಕ ಭ್ರಷ್ಟಾಚಾರವನ್ನು, 'ಕೊಡುವುದು-ತೆಗೆದುಕೊಳ್ಳುವುದನ್ನು' ಕಾನೂನುಬದ್ಧಗೊಳಿಸುವ ಮಹತ್ಕಾರ್ಯವನ್ನು ಮಾಡಿದೆ.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಸೋಮವಾರ, 8-2-1999

● **ವಿಶ್ವದಾಖಲೆ ಸರಿಗಟ್ಟಿದ ಅನಿಲ್ ಕುಂಬ್ಳೆ**

ನವದೆಹಲಿ, ಫೆ. 7– ಕನ್ನಡ ನಾಡಿನ ಹೆಮ್ಮೆಯ ಕ್ರಿಕೆಟ್ ಪಟು ಅನಿಲ್ ಕುಂಬ್ಳೆ, ಪಾಕಿಸ್ತಾನದ ನಾಯಕ ವಾಸಿಂ ಅಕ್ರಂ ಅವರ ವಿಕೆಟ್ ಪಡೆದು ಪಾಕಿಸ್ತಾನವನ್ನು 212 ರನ್‌ಗಳಿಂದ ಸೋಲಿಸುತ್ತಿದ್ದಂತೆಯೇ ಮೇಲಕ್ಕೆ ಹಾರಿದಾಗ ಇಡೀ ಆಕಾಶವನ್ನೇ ಬಾಚಿಕೊಳ್ಳುವಂತೆ ತೋರಿತ್ತು. ಕ್ರಿಕೆಟ್ ಜಗತ್ತಿನ ಒಂದು ಅಪರೂಪದ, ಅಮೋಘ ಸಾಧನೆಯನ್ನು ಅವರು ಸರಿಗಟ್ಟಿದ್ದರು. ಅವರ ಹತ್ತು ವಿಕೆಟ್‌ಗಳ ಸಾಧನೆಗೆ ರಾಷ್ಟ್ರದ ರಾಜಧಾನಿಯಷ್ಟೇ ಅಲ್ಲ ಇಡೀ ಭಾರತವೇ ಹರುಷದಿಂದ ಕುಣಿದು ಕುಪ್ಪಳಿಸಿತ್ತು.

ಜಾವಗಲ್ ಶ್ರೀನಾಥ್ ಮತ್ತು ವೆಂಕಟೇಶ ಪ್ರಸಾದ್ ತಮ್ಮ ಜೊತೆಗಾರ, ಸ್ನೇಹಿತನನ್ನು ಎತ್ತಿಕೊಂಡು ಬಂದಾಗ, ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ ಒಂದು ಜೀವವೂ ಕುಳಿತಿರಲಿಲ್ಲ. ಭಾರತ ತಂಡದ ಈ ಸಂಭ್ರಮದಲ್ಲಿ, ದೊಡ್ಡ ಅಂತರದಿಂದಲೇ ಸೋತಿದ್ದ ಪಾಕಿಸ್ತಾನದ ಆಟಗಾರರೂ ಪಾಲ್ಗೊಂಡರು. 122 ವರ್ಷಗಳ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ, ಇನಿಂಗ್ಸ್ ಒಂದರಲ್ಲಿ ಎಲ್ಲ ಹತ್ತು ವಿಕೆಟ್‌ಗಳನ್ನು ಪಡೆದ ಎರಡನೇ ಬೌಲರ್ ಎಂಬ ಹಿರಿಮೆ ಅನಿಲ್ ಅವರದ್ದಾಯಿತು. 43 ವರ್ಷಗಳ ಹಿಂದೆ ಈ ವಿಶ್ವ ದಾಖಲೆಯನ್ನು ಸ್ಥಾಪಿಸಿದ್ದ ಇಂಗ್ಲೆಂಡ್‌ನ ಜಿಮ್ ಲೇಕರ್ ಇಂದು ಅನಿಲ್ ಅವರ ಅಪ್ರತಿಮ ಸಾಧನೆ ನೋಡಲು ಬದುಕಿಲ್ಲ.

50 ವರ್ಷಗಳ ಹಿಂದೆ

ಶುಕ್ರವಾರ, 8-2-1974

● **ರಾಜ್ಯ ಸರ್ಕಾರ ಸಾರ್ವಜನಿಕ ಸಹಭಾಗಿತ್ವದಿಂದ ವಿಜಯನಗರ ಉಕ್ಕು ಕಾರ್ಖಾನೆ ಆರಂಭಿಸಲಿ**

ಬೆಂಗಳೂರು, ಫೆ. 7– ಕೇಂದ್ರದ ನೆರವನ್ನು ಕಾದು ವಿಳಂಬ ಸಮಸ್ಯೆ ಎದುರಿಸುವ ಬದಲು, ಕರ್ನಾಟಕ ಸರ್ಕಾರವು ತನ್ನ ಹಾಗೂ ಸಾರ್ವಜನಿಕರ ಸಹಭಾಗಿತ್ವದಿಂದ ವಿಜಯ ನಗರ ಉಕ್ಕು ಕಾರ್ಖಾನೆಯ ನಿರ್ಮಾಣವನ್ನು ಆರಂಭಿಸಬೇಕು ಎಂದು ಸಂಸ್ಥಾ ಕಾಂಗ್ರೆಸ್ ನಾಯಕ ಎಸ್.ನಿಜಲಿಂಗಪ್ಪ ಅವರು ಸಲಹೆ ನೀಡಿದ್ದಾರೆ.

ಇಂದು ಬೆಳಿಗ್ಗೆ ಪತ್ರಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡಿದ ನಿಜಲಿಂಗಪ್ಪ ಅವರು, ರಾಷ್ಟ್ರದಲ್ಲಿರುವ ಉಕ್ಕು ಕಾರ್ಖಾನೆಗಳನ್ನೆಲ್ಲ ಏಕ ನಿಯಂತ್ರಣದ ಆಶ್ರಯದಲ್ಲಿಡುವ ಬದಲು, ಎಲ್ಲವೂ ಸ್ವತಂತ್ರ ಘಟಕಗಳಾಗಿ, ಪರಸ್ಪರ ಸ್ಪರ್ಧೆಯಿಂದ ಕೆಲಸ ಮಾಡುವಂಥ ವ್ಯವಸ್ಥೆ ಏರ್ಪಡಿಸಬೇಕು ಎಂದು ಹೇಳಿದರು.

● **ಇಲಿಗಳ ಮೆರವಣಿಗೆ**

ಅಹಮದಾಬಾದ್, ಫೆ. 7– ಗುಜರಾತ್ ಸಂಪುಟದಲ್ಲಿರುವ ಸಚಿವರನ್ನು ಪ್ರತಿನಿಧಿಸುವ 21 ಇಲಿಗಳನ್ನು ಮೆರವಣಿಗೆಯಲ್ಲಿ ಇಂದು ಕೊಂಡೊಯ್ಯಲಾಯಿತು.

ವಿಶ್ವವಿದ್ಯಾನಿಲಯ ಆವರಣದಿಂದ ಹೊರಟ ಈ ಮೆರವಣಿಗೆಯನ್ನು ಬರೋಡ ವಿದ್ಯಾರ್ಥಿಗಳ ಮಹಾಸಂಘ ಏರ್ಪಡಿಸಿತ್ತು.

ಪೊಲೀಸರು ಇಲಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು, ವಿದ್ಯಾರ್ಥಿ ಸಂಘದ ಅಧ್ಯಕ್ಷ ನರೇಂದ್ರ ತಿವಾರಿ ಸೇರಿದಂತೆ 9 ಮಂದಿ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದರು.

ಅಪಾಯ ಬಂತೆಂಬ ಕಹಳೆಯೂ ರಕ್ಷಾಗೋಡೆಯೂ ಒಟ್ಟೊಟ್ಟಿಗೇ ಏಳುತ್ತಿವೆ

ಗಂಡುಗಲಿಗಳಿಗೇ ಗಂಡಾಂತರ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಸುಮಾರು ಎಂಟು ಸಾವಿರ ವರ್ಷಗಳ ಹಿಂದೆ ಸೈಬೀರಿಯಾದಲ್ಲಿ ಕಡವೆಗಳನ್ನು ಹೋಲುವ ಎಲ್ಕ್ ಎಂಬ ಪ್ರಾಣಿಗಳಿದ್ದವು. ಅವಕ್ಕೆ ಭಾರೀ ಗಾತ್ರದ ಕೊಂಬುಗಳಿದ್ದವು. ಚಿಕ್ಕ ತಲೆಯ ಮೇಲೆ ಮೂರೂವರೆ ಮೀಟರ್ ವಿಸ್ತಾರದ ಕೊಂಬುಗಳು. ಕವಲುಗಳಾಗಿ, ಕೆಲವೆಡೆ ಹಲಗೆಯಂತೆ ಅಗಲಗಲ ಇರುತ್ತಿದ್ದವು. ಅಂಥ ವೈಭವದ ಕೊಂಬು ಅವಕ್ಕೆ ಏಕೆ ಮೊಳೆಯಿತೆಂಬುದು ನಮಗೆ ಗೊತ್ತೇ ಇದೆ. ತಾನೇ ಸುಂದರ, ತಾನೇ ಬಲಿಷ್ಠನೆಂದು ತೋರಿಸುತ್ತ ತನ್ನ ವಂಶವಾಹಿಯನ್ನೇ ಎಲ್ಲೆಡೆ ಬಿತ್ತಲೆಂದು ನಿಸರ್ಗವೇ ಅನೇಕ ಜೀವಜಂತುಗಳ ಗಂಡುಗಲಿಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿಟ್ಟಿದೆ.

ಐರೋಪ್ಯದ ಭೂಭಾಗದಲ್ಲಿ ಸುತ್ತಾಡುತ್ತಿದ್ದ 'ಐರಿಶ್ ಎಲ್ಕ್' ಹೆಸರಿನ ಈ ಜೀವಿ ಸಂಪೂರ್ಣ ನಿರ್ವಂಶ ಆಗಿದ್ದು ಹೇಗೆ ಎಂಬುದರ ಬಗ್ಗೆ ವಿಜ್ಞಾನಿಗಳು ಬಹಳಷ್ಟು ಚರ್ಚಿಸಿದ್ದಾರೆ. ಅವುಗಳ ಪಳೆಯುಳಿಕೆಗಳ ದಂತಪಂಕ್ತಿಯಲ್ಲಿ ಸಿಲುಕಿದ್ದ ಆಹಾರ ಕಣಗಳ ಡಿಎನ್‌ಎಯನ್ನೂ ಓದಿಯಾಗಿದೆ. ಹಿಮಯುಗ ಕಳೆದು, ಕ್ರಮೇಣ ಭೂಮಿ ಬೆಚ್ಚಗಾಗುತ್ತ ಬಂದಂತೆ ಎಲ್ಲೆಡೆ ಅರಣ್ಯಗಳು ಮತ್ತೆ ಬೆಳೆಯತೊಡಗಿದ್ದವು. ಸಾಲದ್ದಕ್ಕೆ ಮನುಷ್ಯ ಎಂಬ ಜೀವಿ ಭರ್ಜಿ, ಕೊಡಲಿ ಹೊತ್ತು ದೊಡ್ಡ ಮೃಗಗಳನ್ನೂ ಅಟ್ಟಿಸಿಕೊಂಡು ಹೋಗಿ ಕೊಲ್ಲತೊಡಗಿದ್ದ. ಕೊಂಬಿನ ಕಾರಣದಿಂದಾಗಿ ಅರಣ್ಯಗಳಲ್ಲಿ ಓಡಾಡಲಾಗದ ಎಲ್ಕ್‌ಗಳು ಮೇವಿಗಾಗಿ ಬಯಲಿಗೆ ಬಂದು ಪೊದೆಗಳಲ್ಲಿ, ಕೆಸರು ಮಡುಗಳಲ್ಲಿ ಸಿಕ್ಕಿಬಿದ್ದು ಬೇಟೆಗಾರರಿಗೆ ಸುಲಭದಲ್ಲಿ ಬಲಿಯಾಗತೊಡಗಿದ್ದವು.

ಪ್ರತಿಷ್ಠೆಯ ಪ್ರತೀಕವೆನಿಸಿದ ಕೋಡುಗಳನ್ನೇ ಒಂದು ರೂಪಕವಾಗಿ ನಾವು ಇಂದಿನ ಅನೇಕ ಸಂದರ್ಭಗಳಿಗೆ ಅನ್ವಯಿಸಿ ನೋಡಬಹುದು. ಮುಖ್ಯವಾಗಿ ಇಡೀ ಮನುಕುಲವೇ ಕೋಡು ಮೂಡಿಸಿಕೊಂಡಂತೆ ವಿಜೃಂಭಿಸುತ್ತಿದೆ. ಹೊರಲಾರದ ಹೊರೆ ಹೊತ್ತು ತನ್ನ ಅಸ್ತಿತ್ವಕ್ಕೇ ಸಂಚಕಾರ ಬರುವಂಥ ಪರಿಸ್ಥಿತಿಯನ್ನು ನಿರ್ಮಿಸಿಕೊಂಡಿದೆ. ಜಾಗತಿಕ ವಾಣಿಜ್ಯ ಶಕ್ತಿಗಳು ಈಚೆಗೆ ದಾವೋಸ್‌ನಲ್ಲಿ ಸಭೆ ಸೇರುವ ತುಸು ಮುಂಚೆ, ಮನುಕುಲಕ್ಕೆ ಎದುರಾಗಿರುವ ಮಹಾನ್ ಸಂಕಟಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದವು. ಅದರಲ್ಲಿ ಮೊದಲ ಸ್ಥಾನ ಹವಾಗುಣ ವೈಪರೀತ್ಯಕ್ಕೆ, ಎರಡನೆಯ ಸ್ಥಾನ ಯಾಂತ್ರಿಕ ಬುದ್ಧಿಮತ್ತೆಗೆ ಮತ್ತು ಮೂರನೆಯ ಸ್ಥಾನ 'ಸಾಮಾಜಿಕ ತುಮುಲ'ಗಳಿಗೆ ಸಿಕ್ಕಿತ್ತು. ('ಸಾಮಾಜಿಕ ತುಮುಲ'ಕ್ಕೆ ತುಸು ವಿವರಣೆ ಹೀಗಿದೆ: ಈ ವರ್ಷ ಭಾರತ, ಅಮೆರಿಕ, ಬ್ರೆಜಿಲ್, ಇಂಡೊನೇಷ್ಯ ಮುಂತಾದ 64 ರಾಷ್ಟ್ರಗಳು ಮತ್ತು ಐರೋಪ್ಯ ಸಂಘದಲ್ಲಿ ಚುನಾವಣೆ ನಡೆಯಲಿದೆ. ಇಷ್ಟೊಂದು ದೇಶಗಳಲ್ಲಿ ಒಂದೇ ವರ್ಷ ಚುನಾವಣೆ ಬಂದಿದ್ದು, ಭೂಮಿಯ ಶೇ 49ರಷ್ಟು ಜನರು ಮತಗಟ್ಟೆಗೆ ಹೋಗುತ್ತಿರುವುದು ಅಷ್ಟಗ್ರಹ ಯೋಗದಷ್ಟೇ ಅಪರೂಪ. ಸುಳ್ಳುಸುದ್ದಿ, ಡೀಪ್‌ಫೇಕ್‌ಗಳಿಂದಾಗಿ ಭಾರೀ ಪ್ರಮಾಣದಲ್ಲಿ ಸಾಮಾಜಿಕ ಧ್ರುವೀಕರಣ ಆಗಲಿದ್ದು, ಮುಂದಿನ ಕೆಲ ವರ್ಷಗಳಲ್ಲಿ ಜಾಗತಿಕ ಸಮತೋಲ ಬಿಗಡಾಯಿಸಲಿದೆ ಎಂಬುದು 'ವಿಶ್ವ ಆರ್ಥಿಕ ವೇದಿಕೆ'ಯ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ).

ಮನುಕುಲದ ಸಂಕಟಗಳ ಈ ಪಟ್ಟಿಯಲ್ಲಿ ಸೇರಬೇಕಿದ್ದ ಇನ್ನೊಂದು ಸಂಗತಿಯೂ ತೀರಾ ಗಂಭೀರದ್ದೆಂದು ಇದೀಗ ವಿಜ್ಞಾನಿಗಳು ಚರ್ಚಿಸುತ್ತಿದ್ದಾರೆ. ಅದು ವೀರ್ಯಾಣು ದೌರ್ಬಲ್ಯಕ್ಕೆ ಸಂಬಂಧಿಸಿದ್ದು. ಹಿಂದಿನ 70 ವರ್ಷಗಳಿಂದ ಪುರುಷರ ವೀರ್ಯಾಣುಗಳು ದುರ್ಬಲವಾಗುತ್ತಿವೆ. ಈಚೆಗೆ ಮತ್ತೊಮ್ಮೆ ನಡೆಸಿದ ವಿಶ್ವಮಟ್ಟದ ಸಮೀಕ್ಷೆಯ ಪ್ರಕಾರ, ಸುದೃಢ ವೀರ್ಯಾಣುಗಳ ಸಂಖ್ಯೆಯಲ್ಲಿ ಶೇ 50ರಷ್ಟು ಇಳಿಕೆಯಾಗಿದ್ದು ಈ ಇಳಿಕೆಯ ವೇಗವೇ ಆತಂಕಕಾರಿ ಎಂದು ಸಂಶೋಧಕರು ಹೇಳಿದ್ದನ್ನು 'ನ್ಯೂ ಸೈಂಟಿಸ್ಟ್' ಪತ್ರಿಕೆ ಹೋದ ವಾರ ವರದಿ ಮಾಡಿದೆ. ಸಂತಾನ ವೈಫಲ್ಯಕ್ಕೆ ಕಾರಣಗಳು ಇಂತಿವೆ: ಕೃತಕ ಕೆಮಿಕಲ್‌ಗಳ, ಕೃಷಿವಿಷಗಳ ಅತಿ ಬಳಕೆ, ಸೂಕ್ಷ್ಮ ಪ್ಲಾಸ್ಟಿಕ್ ಕಣಗಳ ಮಾಲಿನ್ಯ ಮತ್ತು ಅದರಿಂದ ದೇಹದಲ್ಲಿನ ಎಂಡೊಕ್ರೈನ್ ವ್ಯವಸ್ಥೆಯ ಏರುಪೇರು... ಹೀಗೆ ಮನುಷ್ಯ ತಾನು ಸೃಷ್ಟಿಸಿಕೊಂಡ ಸೌಲಭ್ಯಜಾಲದಲ್ಲಿ ತಾನೇ ಸಿಲುಕುತ್ತಿದ್ದಾನೆ.

ವಿಜ್ಞಾನದ ಬ್ಯೂಟಿ ಏನೆಂದರೆ, ಅದು ಎಚ್ಚರಿಕೆಯ ಕಹಳೆಯನ್ನೂ ಮೊಳಗಿಸುತ್ತದೆ, ರಕ್ಷಣೆಯ ಗೋಡೆಯನ್ನೂ ನಿರ್ಮಿಸುತ್ತ ಹೋಗುತ್ತದೆ. ಸಂತಾನ ವೈಫಲ್ಯವನ್ನು ಸದ್ಯಕ್ಕೆ ಬದಿಗಿಡೋಣ. ಬೆಂಗಳೂರು ಒಂದರಲ್ಲೇ ಇಂದು 60ಕ್ಕೂ ಹೆಚ್ಚು ಅಧಿಕೃತ 'ಸಂತಾನ ಸಹಾಯ ಕೇಂದ್ರ'ಗಳಿವೆ. ಭೂಮಿ ಇನ್ನಷ್ಟು ಬಿಸಿಯಾಗದಂತೆ ತಡೆಯಲು ಏನೆಲ್ಲ ಕ್ರಾಂತಿಕಾರಿ ಹೆಜ್ಜೆಗಳು ಮೂಡುತ್ತಿವೆ. ಈ ವಾರದ ವಿಶೇಷ ಸುದ್ದಿ ಏನೆಂದರೆ, ಭೂಮಿಯ ಆಳದಿಂದ ನೇರವಾಗಿ ಜಲಜನಕ (ಹೈಡ್ರೋಜನ್) ಅನಿಲವನ್ನೇ ಹೊರಕ್ಕೆ ತೆಗೆಯುವ ವಿಧಾನಗಳ ಪರೀಕ್ಷೆ ಆರಂಭವಾಗಿದೆ. ನಮಗೆಲ್ಲ ಗೊತ್ತಿರುವಂತೆ, ಸಿಎನ್‌ಜಿ ಅಥವಾ ನೈಸರ್ಗಿಕ ಅನಿಲದ ಬದಲು ವಾಹನಗಳಲ್ಲಿ ಹೈಡ್ರೋಜನ್ ಅನಿಲವನ್ನೇ ತುಂಬಿಸಿಕೊಂಡು ಗಾಡಿ ಓಡಿಸಿದರೆ, ಹೊಗೆ ಕೊಳವೆಯಲ್ಲಿ ಬರೀ ನೀರಾವಿ ಹೊರಕ್ಕೆ ಬರುತ್ತದೆ ವಿನಾ ಕಾರ್ಬನ್ ಸೂಸುವುದಿಲ್ಲ. ಅಂಥ ಪರಿಶುದ್ಧ ಅನಿಲ ಸಂಪತ್ತಿನ ಒಡೆಯರಾಗಲು ಜಗತ್ತಿನಾದ್ಯಂತ ಭಾರೀ ಪೈಪೋಟಿ ನಡೆಯುತ್ತಿದೆ.



ಸದ್ಯ ರಾಜಸ್ಥಾನದಲ್ಲಿ 'ಅದಾನಿ ಗ್ರೀನ್ ಎನರ್ಜಿ' ಕಂಪನಿ ಜಗತ್ತಿನಲ್ಲೇ ಅತಿ ದೊಡ್ಡ, 726 ಚ.ಕಿ.ಮೀ. ವಿಸ್ತೀರ್ಣದ ಸೌರ ಮತ್ತು ಗಾಳಿಯಂತ್ರಗಳನ್ನು ಸ್ಥಾಪಿಸತೊಡಗಿದೆ. ಖಾವ್ಡಾ ಹೆಸರಿನ ಊರಿನ ಸುತ್ತ ನಿರ್ಜನ, ಉಪ್ಪುಜೌಳಿನಲ್ಲಿ ಅರಳುತ್ತಿರುವ ಈ ಸೋಲಾರ್ ಪಾರ್ಕ್ ಇಡೀ ಸಿಂಗಪುರ ದೇಶಕ್ಕಿಂತ ದೊಡ್ಡದಾಗಿದ್ದು ಅದನ್ನು ಬಾಹ್ಯಾಕಾಶದಿಂದಲೂ ನೋಡಬಹುದಾಗಿದೆ ಎಂದು ಎ.ಪಿ. ವಾರ್ತಾ ಸಂಸ್ಥೆ ಸಚಿತ್ರ ವರದಿಯನ್ನು ಪ್ರಕಟಿಸಿದೆ. ಅದರಲ್ಲಿನ ಚಿತ್ರಗಳನ್ನು ನೋಡಿದರೆ ವಿಶಾಲ ಕಛ್‌ನ ಮರುಭೂಮಿಯ ಮೇಲೆ ಉಕ್ಕು ಅಲ್ಯೂಮಿನಿಯಂ ಪಂಜರವನ್ನೇ ಹಾಸಿದಂತೆ ಕಾಣುತ್ತಿದೆ. ಇಡೀ ಜಾಲ ಪೂರ್ಣಗೊಂಡಾಗ 30 ಸಾವಿರ ಮೆಗಾವಾಟ್ ವಿದ್ಯುತ್ (ಕೈಗಾ ಅಣುಶಕ್ತಿ ಸ್ಥಾವರಕ್ಕಿಂತ 40 ಪಟ್ಟು ಹೆಚ್ಚು) ಶಕ್ತಿ ಅದಾನಿ ಕಂಪನಿಯ ಕೈಗೆಟುಕಲಿದೆ. ಆ ವಿದ್ಯುತ್ತಿನಿಂದ ನೀರನ್ನು ವಿಭಜಿಸಿದರೆ ಜಲಜನಕ, ಆಮ್ಲಜನಕ ಪ್ರತ್ಯೇಕ ಸಿಗುತ್ತವಲ್ಲ?

ಅಷ್ಟೆಲ್ಲ ಸುತ್ತುಬಳಸಿನ ಮಾರ್ಗದ ಬದಲು, ನೆಲದಾಳದಲ್ಲಿ ಮೆಲ್ಲಗೆ ಸೂಸುತ್ತಿರುವ ಹೈಡ್ರೋಜನ್ ಅನಿಲವನ್ನೇ ಸಂಗ್ರಹಿಸಿ ಮೇಲೆತ್ತಿ ತಂದರೆ? ಹಾಗೆಲ್ಲ ಪಾತಾಳಕ್ಕೆ ಕನ್ನ ಕೊರೆದರೆ ಕಚ್ಚಾತೈಲ ಅಥವಾ ಅದರದ್ದೇ ಕೊಳಕು ಅನಿಲ ಸಿಗುತ್ತದೆ ವಿನಾ ಜಲಜನಕ ಸಿಗುವುದು ಅಸಂಭವ ಎಂದೇ ಇದುವರೆಗೆ ಪರಿಗಣಿಸಲಾಗಿತ್ತು. ಆದರೆ ಅಂಥ ಭೂಗತ ಜಲಜನಕವನ್ನು ತೆಗೆಯಲು ಸಾಧ್ಯವಿದೆ ಎಂಬ ಸೂಚನೆ ಸಿಕ್ಕಿದೆ. ವಿವಿಧ ದೇಶಗಳಲ್ಲಿ ಅಂಥ ಅತ್ಯುತ್ತಮ ನಿಕ್ಷೇಪಗಳ ಪತ್ತೆಗೆ ಪೈಪೋಟಿ ಆರಂಭವಾಗಿದೆ. ಆ ಜಲಜನಕಕ್ಕೆ 'ಗೋಲ್ಡ್ ಹೈಡ್ರೋಜನ್' ಎಂತಲೇ ಹೆಸರನ್ನೂ ಇಡಲಾಗಿದೆ. ಕೊಲ್ಲಿರಾಷ್ಟ್ರ ಓಮನ್‌ನಲ್ಲಿ ಮೊದಲ ಕೊಳವೆ ಬಾವಿ ಕೊರೆಯಲು ಸಿದ್ಧತೆ ನಡೆದಿದೆ. ಇತ್ತ ವಿದ್ಯುತ್ ಶಕ್ತಿಯ ಶೇಖರಣೆಗೆ ಬೇಕಾದ ಬ್ಯಾಟರಿ ತಾಂತ್ರಿಕತೆಗೂ ಹೊಸ ತಂತ್ರಜ್ಞಾನ ರೂಪುಗೊಳ್ಳುತ್ತಿದೆ. ಲಿಥಿಯಮ್ ಬದಲಿಗೆ ಕಾಂಕ್ರೀಟ್‌ಗೇ ಹಂಡೆಮಸಿಯನ್ನು ಸೇರಿಸಿ ಅದನ್ನೇ ಬ್ಯಾಟರಿಯಾಗಿ ಪರಿವರ್ತಿಸುವ ಚಿಕ್ಕ ಯತ್ನಕ್ಕೆ ಫಲ ಸಿಕ್ಕಿದೆ. ಇನ್ನೇನು, ಮನೆಯ ಅಡಿಪಾಯ, ಗೋಡೆ, ರಸ್ತೆಯಲ್ಲೇ ಶಕ್ತಿ ಶೇಖರಣೆ ಮಾಡಲು ಸಾಧ್ಯವಾದೀತು. ಚೀನಾದಲ್ಲಿ ರಸ್ತೆಯ ಮೇಲಿನ ಬಿಳಿಪಟ್ಟೆಯನ್ನೇ ಮೂಸುತ್ತ ಸಾಗುವ ಹಳಿರಹಿತ ರೈಲು ಆಗಲೇ ಬಂದಾಗಿದೆ. ಆ ಪಟ್ಟೆಯ ತಳಕ್ಕೆ ಬ್ಯಾಟರಿ ಜೋಡಿಸುವುದಷ್ಟೇ ಬಾಕಿ.

ಇವೆಲ್ಲವುಗಳ ನಡುವೆ ಎಲಾನ್ ಮಸ್ಕ್ ಒಡೆತನದ ನ್ಯೂರಾಲಿಂಕ್ ಕಂಪನಿ ಹೊಸದೊಂದು ಕ್ರಾಂತಿಗೆ ಅಡಿಯಿಟ್ಟಿದೆ. ಮನುಷ್ಯನ ಮಿದುಳಿನ ನರತಂತುವಿಗೆ ಇಲೆಕ್ಟ್ರಾನಿಕ್ ಬಿಲ್ಲೆಯನ್ನು ಜೋಡಿಸಿ ಅಮೆರಿಕ ಸರ್ಕಾರದ ಮಾನ್ಯತೆಯನ್ನೂ ಪಡೆದಿದೆ. 'ಟೆಲಿಪಥಿ' ಹೆಸರಿನ ಈ ಬಿಲ್ಲೆಯನ್ನು ಹುದುಗಿಸಿಕೊಂಡರೆ ಲಕ್ವ ಹೊಡೆದ ನಿಶ್ಚಲ ವ್ಯಕ್ತಿಯೂ ಕಂಪ್ಯೂಟರಿನಲ್ಲಿ ಅಕ್ಷರ ಜೋಡಣೆ ಮಾಡಬಹುದು, ಗೇಮ್ಸ್ ಆಡಬಹುದು. ಇದು ಆರಂಭ ಮಾತ್ರ. ಮುಂದೆ ಅತಿಬಳಕೆ, ದುರ್ಬಳಕೆಯ ದಿಸೆಯಲ್ಲಿ ಇದು ವಿಕಾಸವಾದರೆ ಮನುಷ್ಯ- ರೋಬಾಟ್ ವ್ಯತ್ಯಾಸ ಮಸುಕಾದೀತು.

ಅಂತೂ ತನ್ನ ಹಣೆಬರಹವನ್ನು ತಾನೇ ಬರೆದುಕೊಳ್ಳುವ ಹಂತಕ್ಕೆ ಮನುಕುಲ ಬಂದು ನಿಂತಿದೆ. 'ಸ್ವಯಮಪಿ ಲಿಖಿತಂ ಸ್ವಯಂ ನ ವಾಚಯತಿ' (ತಾನು ಬರೆದುದನ್ನು ತಾನೇ ಓದಲಾಗದ) ಸ್ಥಿತಿಗೆ ಅದು ಹೊರಳದಂತಾದರೆ ಸಾಕೇನೊ.

ಚುರುಮುರಿ

ಸಂತ್ರಸ್ತ ಸತಿ!

● ಚಂದ್ರಕಾಂತ ವಡ್ಡು

'ನಿಮಗೆ ಈ ಜನ್ಮದಲ್ಲಿ ಬುದ್ಧಿ ಬರೋದಿಲ್ಲ ಬಿಡಿ...' ತಿಂಗಳೇಶನ ಹೆಂಡತಿ ಕ್ಲಾಸ್ ಆರಂಭಿಸಿದಳು.

'ನೀನು ಹೇಳಿದ ಮೇಲೆ ನಿಜ ಅಂತ ಒಪ್ಪುತ್ತೇನೆ. ಆದರೆ ನನಗೆ ಮುಂದಿನ ಜನ್ಮದಲ್ಲಿ ನಂಬಿಕೆ ಇಲ್ಲವಲ್ಲಾ...' ಕಾವೇರಿದ ವಾತಾವರಣದಲ್ಲೂ ತಿಂಗಳೇಶನ ತಣ್ಣನೆಯ ಪ್ರತಿಕ್ರಿಯೆ.

'ಅದಿಲ್ಲದಿದ್ದರೇ ಒಳ್ಳೆಯದು ಬಿಡಿ. ಇನ್ನೊಂದು ಜನ್ಮದ ಹೆಂಡತಿಗಾದರೂ ಈ ಶಾಲು, ಪೇಟ, ಸ್ಮರಣಿಕೆ ಜೋಡಿಸಿಡುವ ತಾಪತ್ರಯ ತಪ್ಪುತ್ತದೆ'.

ಹೊರಗೆ ಸನ್ಮಾನಗಳಿಗೆ ಭಾಜನ ಆಗುವ ತಿಂಗಳೇಶ ಮನೆಯಲ್ಲಿ ಹೆಂಡತಿಯ ಟೀಕೆಗಳಿಗೆ ಸುಗ್ರಾಸ ಭೋಜನ!

'ಅಯ್ಯೋ ಅದಕ್ಯಾಕೆ ತಲೆಕೆಡಿಸಿಕೊಳ್ತಿ, ಶಾಲುಗಳು ಚಳಿಗಾಲದಲ್ಲಿ ಉಪಯೋಗ ಆಗುತ್ತವೆ. ಪೇಟ ಮತ್ತು ಸ್ಮರಣಿಕೆಗಳಿಗೆ ಹೊಸ ಮನೆಯಲ್ಲಿ ದೊಡ್ಡ ಶೋಕೇಸ್ ಮಾಡಿಸೋಣ'.

'ನಿಮ್ಮ ಜನ್ಮಕ್ಕೆ ಹೊಸ ಮನೆ ಬೇರೆ ಕೇಡು. ಅದು ಕೂಡ ಈ ಜನ್ಮದಲ್ಲಿ ಸಾಧ್ಯವಿಲ್ಲ ಬಿಡಿ'.

'ಈ ಜನ್ಮದಲ್ಲಿ ಸಾಧ್ಯವಿಲ್ಲ, ಮುಂದಿನ ಜನ್ಮ ಇಲ್ಲ. ಮೋದಿ ಸೋಲಲ್ಲ, 'ಇಂಡಿಯಾ' ಗೆಲ್ಲಲಿ ಅಂದಂಗಾಯಿತು'.

'ನಿಮ್ಮ ಜನ್ಮಕ್ಕೆ ಬೆಂಕಿ ಹಾಕ... ಹೆಂಡತಿ ಮಕ್ಕಳು ಯಾಕ್ರೀ ಬೇಕಿತ್ತು... ಒಂದು ನಗದು ಪ್ರಶಸ್ತಿ ತರುವ ಯೋಗ್ಯತೆ ಇಲ್ಲ...' ಜನ್ಮ ಜಾಲಾಡಲು ಹಟ ತೊಟ್ಟಿದ್ದಳು ಸಂತ್ರಸ್ತ ಸತಿ.

ಸಂಭಾಷಣೆ ಆಲಿಸುತ್ತಿದ್ದ ಮಗನಿಗೆ, ಇದೇನು ಮುದ್ದಣ ಮನೋರಮೆಯರ ಸಲ್ಲಾಪವೋ ಯತ್ನಾಳ– ವಿಜಯೇಂದ್ರ ಪ್ರಲಾಪವೋ ಸಿದ್ದರಾಮಯ್ಯ– ಡಿಕೆಶಿ ಬಣಗಳ ಆಲಾಪವೋ ಅರ್ಥವಾಗದೆ ಮತದಾರ ಪ್ರಭುವಿನಂತೆ ಗೊಂದಲಗೊಂಡಿದ್ದ.

'ಅಮ್ಮಾ... ಚಂಪಾ ಅಂಕಲ್ ಹೇಳಿದ, ಪ್ರಶಸ್ತಿ ಪಡಕೊಳ್ಳುವವರ, ಹೊಡಕೊಳ್ಳುವವರ ಕಾಲ ಹೋಗಿ ಈಗ ಕೊಂಡುಕೊಳ್ಳುವವರ ಕಾಲ ಬಂದಿದೆ'.

'ನಿಮ್ಮಪ್ಪನಿಗೆ ಅರ್ಥಶಾಸ್ತ್ರ ಅರ್ಥ ಆಗೋದಿಲ್ಲ. ನೀನೇ ಆನ್‌ಲೈನಿನಲ್ಲಿ ಅರ್ಜಿ ಹಾಕಿ ಹತ್ತು ಲಕ್ಷದ ಪ್ರಶಸ್ತಿ ಬರೋಹಾಗೆ ಮಾಡು, ಅರ್ಧ ಹಣ ಖರ್ಚಾದರೂ ಪರವಾಗಿಲ್ಲ!'

ಸಂಗತ

ಮತ್ತೆ ಶುರುವಾಗಿದೆ 'ಕೋಳಿ ಜಗಳ'!

ಆಮದು ಕೋಳಿಮಾಂಸದ ಮೇಲಿನ ಸುಂಕವನ್ನು ಸರ್ಕಾರ ಇಳಿಸಿರುವುದು, ಸ್ಥಳೀಯ ಕುಕ್ಕುಟ ಉದ್ಯಮದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ

● ಶಿಶಿರ ವಸಿಷ್ಠ

ಹದಿನೇಳು ವರ್ಷಗಳ ಹಳೆಯ ಜಗಳವೀಗ ಮತ್ತೆ ಶುರುವಾಗುತ್ತಿದೆ. ಅದು ಅಂತಿಂತಹ ಜಗಳವಲ್ಲ, 'ಕೋಳಿ ಜಗಳ'. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಕೋಳಿ ಮತ್ತು ಬಾತುಕೋಳಿಗಳ ಮಾಂಸದ ಕುರಿತಾದ ಜಗಳ. ಇದೇನು ಬೀಗರೂಟಕ್ಕೆ ಮಾಡಿಸಿದ ಬಾಡೂಟದ ಜಗಳ ಎಂದುಕೊಂಡಿರಾ? ಅಲ್ಲ. ಇದು ನಮ್ಮ ಮತ್ತು ಅಮೆರಿಕ ದೇಶದ ನಡುವಿನ ಮಾಂಸ ವ್ಯವಹಾರದ ಜಗಳ. ಇದನ್ನು ಬಗೆಹರಿಸಲು ವಿಶ್ವ ವಾಣಿಜ್ಯ ಸಂಘಟನೆ (ಡಬ್ಲ್ಯುಟಿಒ) ಎಂಬ ಪಂಚಾಯಿತಿ ಕಟ್ಟೆ ಇದೆ.

2007ರಲ್ಲಿ ಭಾರತವು ಅಮೆರಿಕದಿಂದ ಆಮದಾಗುತ್ತಿದ್ದ ಪೌಲ್ಟ್ರಿ ಉತ್ಪನ್ನಗಳ ಮೇಲೆ ನಿಷೇಧ ಹೇರಿತ್ತು. ಆಗ ಹಕ್ಕಿಜ್ವರದ ಆತಂಕ ಹೆಚ್ಚಾಗಿದ್ದುದರಿಂದ ಕೋಳಿಮಾಂಸದ ಆಮದಿಗೆ ಕಟ್ಟುನಿಟ್ಟಿನ ನಿಷೇಧವಿತ್ತು. ಭಾರತದ ಈ ನಿರ್ಧಾರವನ್ನು ಡಬ್ಲ್ಯುಟಿಒ ಎದುರು ಪ್ರಶ್ನಿಸಿದ ಅಮೆರಿಕ, ಏಳು ವರ್ಷಗಳ ನಂತರ ಕೇಸು ಗೆದ್ದು ಬೀಗಿತ್ತು. ಒಲ್ಲದ ಮನಸ್ಸಿನಿಂದ 2017ರಲ್ಲಿ ಕೋಳಿಮಾಂಸದ ಆಮದಿಗೆ ಒಪ್ಪಿದ ನಾವು, ಅಲ್ಲಿನ ಉತ್ಪನ್ನದ ಮೇಲೆ ಅತಿ ಹೆಚ್ಚು ತೆರಿಗೆ ವಿಧಿಸಿ ಆಮದು ಮಾಡಿಕೊಳ್ಳಲು ಶುರುಮಾಡಿದೆವು. ದೇಸಿ ಕೋಳಿಮಾಂಸದ ಮಾರುಕಟ್ಟೆಯನ್ನು ಸಂರಕ್ಷಿಸಲು ನಾವು ತೆಗೆದುಕೊಂಡ ಈ ನಿರ್ಧಾರ ಬಹಳ ಕಾಲ ನಿಲ್ಲಲಿಲ್ಲ.

ದೇಶದ ಪೌಲ್ಟ್ರಿ ಉದ್ಯಮದ ಉತ್ಪನ್ನದ ಶೇ 10ರಷ್ಟಿರುವ ಬಾತುಕೋಳಿ ಮಾಂಸವು ಕೋಳಿಮಾಂಸದ ನಂತರದ ಸ್ಥಾನದಲ್ಲಿದೆ. ಭಾರತದ ಪೂರ್ವ ಮತ್ತು ದಕ್ಷಿಣ ಭಾರತದ ಕರಾವಳಿಯುಕ್ತ ರಾಜ್ಯಗಳು ದೇಶದ ಮೊಟ್ಟೆ ಉತ್ಪಾದನೆಯ ಒಟ್ಟು ಪ್ರಮಾಣದ ಶೇ 7ರಷ್ಟನ್ನು ಪೂರೈಸುತ್ತಿವೆ ಎಂದು ಲೆಕ್ಕ ನೀಡುವ ಇಟಾನಗರದ ಬಾನಾಡಿ ಸಂಶೋಧನಾ ಸಂಸ್ಥೆಯ ತಜ್ಞರು, ನಮ್ಮ ಮಾರುಕಟ್ಟೆಯನ್ನು ಉಳಿಸಿಕೊಳ್ಳುವ ಉದ್ದೇಶವಿದ್ದರೆ ಈಗ ಆಮದಾಗುತ್ತಿರುವ ಸಂಸ್ಕರಿತ ಮಾಂಸಕ್ಕೆ ಅತಿ ಹೆಚ್ಚಿನ ಸುಂಕ ಹಾಕಬೇಕು ಎಂದಿದ್ದಾರೆ. ಆದರೆ ಆಗುತ್ತಿರುವುದೇನು? ಹಿಂದಿನ ಡಿಸೆಂಬರ್‌ವರೆಗೆ ಆಮದಾಗುತ್ತಿದ್ದ ಕೋಳಿ ಹಾಗೂ ಬಾತುಕೋಳಿ ಮಾಂಸದ ಮೇಲೆ ಶೇ 30ರಷ್ಟು ಆಮದು ಸುಂಕವಿತ್ತು. ಕೇಂದ್ರ ಸರ್ಕಾರ ಈಗ ಅದನ್ನು ಶೇ 5ಕ್ಕೆ ಇಳಿಸಿದೆ.

ಕೋಳಿಮಾಂಸದ ಮಾರುಕಟ್ಟೆಗೆ ಹೋಲಿಸಿದರೆ ಬಾತುಕೋಳಿ ಮಾಂಸದ ನಮ್ಮ ಮಾರುಕಟ್ಟೆ ತೀರಾ ಸೀಮಿತ ಎಂದಿರುವ ಉತ್ಪಾದಕರು, ಸರ್ಕಾರದ ಈ ನಿರ್ಧಾರದಿಂದ ನಮ್ಮ ಸ್ಥಳೀಯ ಮಾರುಕಟ್ಟೆ ವಲಯಕ್ಕೆ ತೀವ್ರ ಹೊಡೆತ ಬೀಳುತ್ತದೆ, ಈ ನಿರ್ಧಾರದ ವಿರುದ್ಧ ಕಾನೂನು ಹೋರಾಟ ಮಾಡಲು ಸಿದ್ಧರಿದ್ದೇವೆ ಎಂದಿದ್ದಾರೆ. ವಿಶೇಷವಾಗಿ, ಬಾತುಕೋಳಿ ಸಾಕಾಣಿಕೆಯಲ್ಲಿ ತೊಡಗಿರುವವರೆಲ್ಲ ಬುಡಕಟ್ಟು ಸಮುದಾಯಕ್ಕೆ ಸೇರಿದ ಬಡವರು, ಇವರ ಹೊಟ್ಟೆಯ ಮೇಲೆ ಹೊಡೆಯುವುದು ಎಷ್ಟು ಸರಿ ಎಂಬ ಪ್ರಶ್ನೆ ಎದ್ದಿದೆ. ಅಮೆರಿಕದಿಂದ ಬರುವ ಕೋಳಿಮಾಂಸ, ಬಾತುಕೋಳಿ ಮಾಂಸವು ಅತ್ಯಂತ ಕಡಿಮೆ ಬೆಲೆಗೆ ದೊರಕುವುದರಿಂದ ಜನ ಅದನ್ನೇ ಕೊಳ್ಳುತ್ತಾರೆ, ಆಗ ನಮ್ಮ ಗತಿಯೇನು ಎಂದು ಕೇಳುತ್ತಾರೆ ಪೌಲ್ಟ್ರಿ ಉದ್ಯಮ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಎಫ್.ಎಮ್.ಶೇಖ್.

'ಅಮೆರಿಕದವರು ಕೋಳಿಯ ಎದೆ ಭಾಗದ ಮಾಂಸವನ್ನು (ಫಿಲ್ಲೆಟ್) ತಾವೇ ಇಟ್ಟುಕೊಂಡು ಬರೀ ಕಾಲು, ಮತ್ತಿತರ ಭಾಗಗಳನ್ನು ಹೊರಗಡೆಯವರಿಗೆ ಕಳಿಸುತ್ತಾರೆ. ಇದು ಅವರಿಗೆ ತ್ಯಾಜ್ಯ ಸಮಾನವಾದ್ದರಿಂದ ಬೇಕಾಬಿಟ್ಟಿ ಬೆಲೆಗೆ ಮಾರುತ್ತಾರೆ. ಆಗ ನಮ್ಮ ಕೋಳಿಮಾಂಸದ ಬೆಲೆ ಹೆಚ್ಚು ಎನ್ನಿಸಿ, ಜನ ಅಮೆರಿಕ ಕಳಿಸುವ ಮಾಂಸಕ್ಕೇ ಮುಗಿಬೀಳುವ ಸಾಧ್ಯತೆಯಿದೆ. ಹಾಗಾದರೆ ನಮ್ಮ ಉದ್ಯಮದ ಗತಿಯೇನು?' ಎನ್ನುತ್ತಾರೆ.

ತಮ್ಮ ದೇಶದಲ್ಲಿ ಕೋಳಿಕಾಲಿನ ಮಾಂಸದ ವಿಲೇವಾರಿಗೆ ತಗಲುವ ಖರ್ಚಿಗಿಂತ ಅದರ ರಫ್ತಿನ ಖರ್ಚು ಕಡಿಮೆಯಾದ್ದರಿಂದ ಅಮೆರಿಕ ತನಗೆ ಬೇಡದ ಮಾಂಸವನ್ನು ನಮಗೆ ತಳ್ಳುತ್ತಿದೆ. ಅಮೆರಿಕದಲ್ಲಿ ಕುಲಾಂತರಿ ಕೋಳಿ ತಳಿಗಳು ಬಹಳಷ್ಟಿವೆ. ತೆರಿಗೆಯೂ ಸೇರಿ ಅಲ್ಲಿಂದ ಬರುವ ಒಂದು ಟನ್ ಸಂಸ್ಕರಿತ ಕೋಳಿಕಾಲಿನ ಮಾಂಸಕ್ಕೆ ತಗಲುವ ಹಣ ಒಂದೂ ಕಾಲು ಲಕ್ಷ ರೂಪಾಯಿ. ನಮ್ಮಲ್ಲೇ ಸಂಸ್ಕರಿಸಿದರೆ ಅದಕ್ಕೆ ಒಂದೂವರೆ ಲಕ್ಷ ರೂಪಾಯಿ ಬೇಕು. ಹಾಗಾಗಿ ಅಲ್ಲಿಂದ ಬರುವ ಮಾಂಸವೇ ಅಗ್ಗ. ಇದು ಸರ್ಕಾರಕ್ಕೆ ಅಪೇಕ್ಷಣೀಯ. ಈಗಾಗಲೇ ನಮ್ಮಲ್ಲಿ ಬ್ರಾಯ್ಲರ್ ಕೋಳಿಗಳ ಉತ್ಪಾದನೆ ಅಗತ್ಯಕ್ಕಿಂತ ಜಾಸ್ತಿ ಇದೆ. ಕೆಲವು ಕಂಪನಿಗಳು ಉತ್ಪಾದಕರೊಂದಿಗೆ ಒಪ್ಪಂದ ಮಾಡಿಕೊಂಡಿರುವುದರಿಂದ ಬೆಲೆ ನಿಯಂತ್ರಣದಲ್ಲಿದೆ.

ಸ್ಥಳೀಯ ಕುಕ್ಕುಟ ಉದ್ಯಮವನ್ನು ಸದೃಢವಾಗಿಸಲು ಹೊರಗಿನಿಂದ ಬರುವ ಉತ್ಪನ್ನದ ಮೇಲಿನ ತೆರಿಗೆ ಹೆಚ್ಚಿಸುವ ಬದಲು ಕಡಿತ ಮಾಡಿದರೆ ನಮ್ಮ ಉದ್ಯಮ ನೆಲಕಚ್ಚುವುದ ರಲ್ಲಿ ಯಾವ ಅನುಮಾನವೂ ಇಲ್ಲ. 2007ರಲ್ಲಿ ಆಮದು ನಿಷೇಧಿಸಿದಾಗ ಬರೀ 5 ಲಕ್ಷದಷ್ಟಿದ್ದ ಪೌಲ್ಟ್ರಿ ಉದ್ಯಮಗಳು ಮುಂದಿನ ಐದು ವರ್ಷಗಳಲ್ಲಿ 5.2 ಕೋಟಿಯಷ್ಟಾಗಿ ಅಸಾಧಾರಣ ಬೆಳವಣಿಗೆಯಾಗಿತ್ತು. ಭಾರತದ ಕೃಷಿ ಉದ್ಯಮಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಂಡ ಕ್ಷೇತ್ರವಿದು.

ನಮ್ಮ ಹೊಲ, ಗದ್ದೆ, ತೋಟಗಳ ಬೆಳೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ 2ರಷ್ಟಿದ್ದರೆ, ಬ್ರಾಯ್ಲರ್ ಕೋಳಿ ಮೊಟ್ಟೆಗಳ ಬೆಳವಣಿಗೆ ಪ್ರಮಾಣ ಶೇ 8-10ರಷ್ಟಿದೆ. ಅಭಿವೃದ್ಧಿ ಬಯಸುವ ದೇಶಗಳ ನಾಯಕನಂತಿರುವ ಭಾರತ, ತಾನೇ ಅಮೆರಿಕದೆದುರು ಮಂಡಿಯೂರಿದರೆ, ನಮ್ಮನ್ನು ಬೆಂಬಲಿಸುತ್ತಿರುವ ಸಾಧಾರಣ ದೇಶಗಳ ಗತಿಯೇನು? ಡಬ್ಲ್ಯುಟಿಒ ನಿರ್ದೇಶನವು ಭಾರತ ಮಾತ್ರವಲ್ಲದೆ ಇತರ ದೇಶಗಳಿಗೂ ಆರ್ಥಿಕ ಆಘಾತ ತರಲಿದೆ ಎಂಬ ಮಾತು ವಿಶ್ವದಾದ್ಯಂತ ಕೇಳಿಬರುತ್ತಿದೆ. ಸಂಬಂಧಪಟ್ಟವರು ಕೇಳಿಸಿಕೊಳ್ಳುತ್ತಿದ್ದಾರೆಯೇ?

ವಾಚಕರ ವಾಣಿ

ಹಾಸ್ಟೆಲ್ ಸಮಸ್ಯೆ: ಅಧಿಕಾರಿಗಳು ನಿಷ್ಠೆ ಮೆರೆಯಲಿ

ಮುಖ್ಯಮಂತ್ರಿ ಕೆಲವು ತಿಂಗಳ ಹಿಂದೆ ವಿದ್ಯಾರ್ಥಿ ನಿಲಯಗಳಿಗೆ ದಿಢೀರ್ ಭೇಟಿ ನೀಡಿದ್ದರು. ಇನ್ನು ಕೆಲವೆಡೆ ಕೆಲವು ಸಚಿವರು ಸಹ ಭೇಟಿ ನೀಡಿ, ಆಹಾರದ ಗುಣಮಟ್ಟದ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು. ಆದರೆ ಬಹುತೇಕ ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ ಸಿಗುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳು ಹಣ ಕೊಟ್ಟು ಹೊರಗಡೆ ಆಹಾರ ಸೇವಿಸುತ್ತಿದ್ದಾರೆ.

ತುಮಕೂರಿನ ಹಾಸ್ಟೆಲ್ ಪಕ್ಕ ಇರುವ ಹೋಟೆಲ್‌ಗಳಿಗೆ ಊಟ ಮಾಡಲು ಹೋದವರ ಬಳಿ ವಿದ್ಯಾರ್ಥಿಗಳು ತಮ್ಮ ಸಮಸ್ಯೆಯನ್ನು ತೋಡಿಕೊಳ್ಳುತ್ತಾರೆ. ಅಧಿಕಾರಿಗಳ ಗಮನಕ್ಕೆ ತರುವಂತೆ ತಿಳಿಸಿದರೆ, ತಮ್ಮನ್ನು ಹಾಸ್ಟೆಲ್‌ನಿಂದ ಹೊರಹಾಕುತ್ತಾರೆ ಎನ್ನುತ್ತಾರೆ. ಯಾವಾಗಲೋ ಒಂದು ಬಾರಿ ಭೇಟಿ ನೀಡುವ ಶಾಸಕರು, ಮಂತ್ರಿಗಳಿಂದ ಸಮಸ್ಯೆ ಬಗೆಹರಿಯದು. ಅಧಿಕಾರಿಗಳು ನಿಷ್ಠೆಯಿಂದ ಕೆಲಸ ಮಾಡಿದರೆ ಮಾತ್ರ ಇಂತಹ ಸಮಸ್ಯೆಗೆ ಪರಿಹಾರ ಸಿಗಬಹುದು.

ಸಣ್ಣಮಾರಪ್ಪ, ಚಂಗಾವರ, ಶಿರಾ

ಕನ್ನಡ ಕಲಿಕೆ: ನಿಯಮದ ಮಾಹಿತಿ ಸ್ಪಷ್ಟಪಡಿಸಿ

ನನ್ನ ಮಕ್ಕಳನ್ನು ಖಾಸಗಿ ಶಾಲೆಗೆ ನೋಂದಾಯಿಸುವಾಗ, 8ನೇ ತರಗತಿಯವರೆಗೆ ಕನ್ನಡವನ್ನು ಒಂದು ಭಾಷೆಯಾಗಿ ಆಯ್ಕೆ ಮಾಡಿಕೊಳ್ಳಲೇಬೇಕು ಎಂದು ಶಾಲೆಯವರು ತಿಳಿಸಿದರು. ಇದು, ಒಂದರಿಂದ ಎಂಟನೇ ತರಗತಿಯವರೆಗೆ ಕರ್ನಾಟಕದಲ್ಲಿ ಕಲಿಯುವ ಎಲ್ಲ ಮಕ್ಕಳೂ ದ್ವಿತೀಯ ಅಥವಾ ತೃತೀಯ ಭಾಷೆಯ ಆಯ್ಕೆಯಾಗಿ (ಐಜಿಸಿಎಸ್‌ಇ, ಐ.ಬಿ ಬೋರ್ಡ್‌ನ್ನು ಹೊರತುಪಡಿಸಿ) ಕನ್ನಡ ಕಲಿಯಲೇಬೇಕು ಎಂದು ಸರ್ಕಾರ ಮಾಡಿದ ನಿಯಮ ಎಂದು ನಾವು ತಿಳಿದಿದ್ದೆವು. ಆದರೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ನನ್ನ ನಿವಾಸದ ಸಮೀಪ ಎರಡು ಶಾಲೆಗಳು ಐದನೇ ತರಗತಿಯಲ್ಲೇ ಕಡ್ಡಾಯ ಕನ್ನಡ ಕಲಿಕೆಯನ್ನು ತೆಗೆದುಹಾಕಿವೆ. ಈ ಶಾಲೆಯ ಮಕ್ಕಳು ಹಿಂದಿ, ಫ್ರೆಂಚ್, ಸಂಸ್ಕೃತ, ಮ್ಯಾಂಡರಿನ್‌ನಂತಹ ಐಚ್ಛಿಕ ಭಾಷೆಗಳನ್ನು ಆಯ್ದುಕೊಂಡು, ಕನ್ನಡದಿಂದ ತಪ್ಪಿಸಿಕೊಂಡೆವು ಎಂಬ ಹುಸಿಭ್ರಮೆಯಲ್ಲಿದ್ದಾರೆ.

ಇದರೊಂದಿಗೆ, ಕೆಲವು ಶಾಲೆಗಳು ಕನ್ನಡವನ್ನು ದ್ವಿತೀಯ ಭಾಷೆಯಾಗಿಯೇ ತೆಗೆದುಕೊಳ್ಳಬೇಕೆಂದು ಒತ್ತಾಯ ಹೇರಿ, ತೃತೀಯ ಭಾಷೆಯಾಗಿ ಆಯ್ದುಕೊಳ್ಳುವ ಅವಕಾಶವನ್ನು ಸಂಪೂರ್ಣವಾಗಿ ತೆಗೆದುಹಾಕಿವೆ. ದ್ವಿತೀಯ ಭಾಷೆಯಾದ ಕನ್ನಡದ ಪಾಠ, ಪದ್ಯಗಳು ಕಠಿಣವೆನ್ನಿಸಿ, ಈ ಶಾಲೆಯ ಮಕ್ಕಳು ಕನ್ನಡದ ಕುರಿತಾಗಿ ವಿನಾಕಾರಣ ಭಯ ಬೆಳೆಸಿಕೊಂಡಿದ್ದಾರೆ. ಅಂತರ್ಜಾಲದಲ್ಲಿ ಬಹಳಷ್ಟು ಜಾಲಾಡಿದರೂ ಕಡ್ಡಾಯ ಕನ್ನಡ ಕಲಿಕೆಯ ಬಗ್ಗೆಯಾಗಲೀ ದ್ವಿತೀಯ- ತೃತೀಯ ಭಾಷೆಯಾಗಿ ಕನ್ನಡದ ಆಯ್ಕೆಯ ಬಗೆಗಾಗಲೀ ಸರಿಯಾದ ಮಾಹಿತಿ ಸಿಗುವುದಿಲ್ಲ. ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು ಕಡ್ಡಾಯ ಕನ್ನಡ ಕಲಿಕೆ ನಿಯಮದ ಕುರಿತಾಗಿ ಸರಿಯಾದ ಮಾಹಿತಿಯನ್ನು ಸಿಬಿಎಸ್‌ಇ, ಐಸಿಎಸ್‌ಇ ಬೋರ್ಡ್ ಜೊತೆಗೆ ಹಂಚಿಕೊಂಡರೆ, ಯಾವ ಶಾಲೆ ಈ ನಿಯಮಗಳನ್ನು ಪಾಲಿಸುತ್ತಿಲ್ಲ ಎಂಬ ಬಗ್ಗೆ ಮಾಹಿತಿ ಕಲೆಹಾಕಬಹುದು. ಅದಕ್ಕೆ ತಕ್ಕಂತೆ ಮುಂದಿನ ಕ್ರಮ ಕೈಗೊಂಡರೆ, ಎಲ್ಲ ಪಾಲಕರಿಗೂ, ಕನ್ನಡ ಎಂದರೆ ಗುಮ್ಮ ಎಂದುಕೊಂಡಿರುವ ಮಕ್ಕಳಿಗೂ ಮನಸ್ಸು ತುಸು ಹಗುರವಾದೀತು.

ಪೂರ್ಣಿಮಾ ಭಟ್ಟ ಸಣ್ಣಕೇರಿ, ಬೆಂಗಳೂರು

ಅಸಾಮಾನ್ಯ ನಿರ್ಲಕ್ಷ್ಯ ತೆರೆದಿಟ್ಟ ಸಾಹಸಗಾಥೆ

ಶಿರಸಿಯ ಅಂಗನವಾಡಿ ಮಕ್ಕಳ ನೀರಿನ ದಾಹ ತಣಿಸಲು ಗೌರಿ ನಾಯ್ಕ ಎಂಬುವರು ಸ್ವತಃ ಬಾವಿ ತೋಡುತ್ತಿರುವುದರ ಸಾಹಸದ ಕತೆಯು (ಪ್ರ.ವಾ., ಫೆ. 7) ಹೃದಯ ತಟ್ಟಿತು. ದಿನವೂ ಒಂದೂವರೆ ಅಡಿ ಆಳದಷ್ಟು ನೆಲವನ್ನು ಅಗೆದು ಒಂದು ತಿಂಗಳಲ್ಲಿ ಬಾವಿಯನ್ನು ಪೂರ್ತಿಗೊಳಿಸಬೇಕು ಎಂಬ ಗುರಿಯನ್ನು ಇಟ್ಟುಕೊಂಡಿರುವ ಗೌರಿ ಅವರದು ಮಾತೃ ಹೃದಯ. 15 ಮಕ್ಕಳಿರುವ ಈ ಶಾಲೆಯಲ್ಲಿ ಕೆಲಸಕ್ಕಿರುವ ಇವರು ಯಾರ ಸಹಾಯವನ್ನೂ ಕೇಳದೆ, ಯಾರ ಹಂಗಿನ ದುಡ್ಡಿಗೂ ಕೈ ಒಡ್ಡದೆ, ಮಕ್ಕಳು ನೀರಿಗಾಗಿ ಪರಿತಪಿಸುವುದನ್ನು ಕಂಡು ಕಠಿಣವಾದ ಈ ಕೆಲಸಕ್ಕೆ ಮುಂದಾಗಿರುವುದನ್ನು ನೋಡಿದರೆ, ಮಕ್ಕಳ ಬಗೆಗಿನ ಅವರ ಅಸಾಮಾನ್ಯ ಪ್ರೀತಿಯ ಅರಿವಾಗುತ್ತದೆ. ಹೆಣ್ಣುಮಗಳ ಈ ಸಾಹಸವನ್ನು ಶಾಲೆಯ ಶಿಕ್ಷಕರು, ಗ್ರಾಮ ಪಂಚಾಯಿತಿ, ಜಿಲ್ಲೆಯ ಅಧಿಕಾರಿಗಳು ಗಮನಿಸಿ, ಗೌರವಿಸಿ ಹಣದ ರೂಪದಲ್ಲಿ ಬಹುಮಾನವನ್ನು ಕೊಡಬೇಕಾದದ್ದು ಯೋಗ್ಯವಾದ ಪ್ರತಿಕ್ರಿಯೆ.

ಅಂದರೆ, ಸರ್ಕಾರವು ಅಂಗನವಾಡಿಗಳತ್ತ ತೋರುತ್ತಿರುವ ನಿರ್ಲಕ್ಷ್ಯದ ಪರಮಾವಧಿಯ ಕಲ್ಪನೆ ನಮಗೆ ಬರುತ್ತದೆ. ಮೊಟ್ಟೆ, ಹಾಲಿನಂತಹ ಪದಾರ್ಥಗಳನ್ನು ಕೊಡುತ್ತೇವೆಂದು ಸಾರಿ ಹೇಳಿ ತಮ್ಮ ಔದಾರ್ಯವನ್ನು ತೋರುತ್ತಿರುವ ನಮ್ಮ ಸರ್ಕಾರವು ಪುಟ್ಟ ಮಕ್ಕಳಿಗಾಗಿ ಒಂದು ಗಟ್ಟಿಮುಟ್ಟಾದ ಕಟ್ಟಡ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆಯಂತಹ ಮೂಲ ಸೌಕರ್ಯಗಳನ್ನು ಮೊದಲು ಒದಗಿಸುವಂತಾಗಲಿ. ನಮ್ಮ ನಾಡಿನ ಮಕ್ಕಳೇ ನಮ್ಮ ನಿಜವಾದ ಆಸ್ತಿ, ಅವರು ಸುಖವಾಗಿದ್ದರೆ ನಾಡೂ ಸುಖವಾಗಿ ಇರಬಹುದು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಒಗ್ಗಟ್ಟು ಒಡೆಯುತ್ತಿದೆ ಫ್ಲೆಕ್ಸ್ ಹಾವಳಿ

ನಗರ, ಪಟ್ಟಣಗಳಲ್ಲಿ ಮಾತ್ರವಲ್ಲ ಹಳ್ಳಿ ಹಳ್ಳಿಗಳಲ್ಲೂ ಇತ್ತೀಚೆಗೆ ಫ್ಲೆಕ್ಸ್ ಹಾವಳಿ ಹೆಚ್ಚಾಗಿದೆ. ಮುಖ್ಯ ರಸ್ತೆಗಳ ವಿದ್ಯುತ್ ಕಂಬ, ಮರಗಳಲ್ಲಿ ಎಡೆಯಿಲ್ಲದಂತೆ ಫ್ಲೆಕ್ಸ್ ಹಾಕಿ ಊರಿನ ಸೌಂದರ್ಯವನ್ನೇ ಹಾಳುಮಾಡಲಾಗುತ್ತಿದೆ. ರಾಜಕಾರಣಿಗಳ ಹುಟ್ಟುಹಬ್ಬದ ನೆಪದಲ್ಲಿ ಪೈಪೋಟಿ ಮೇಲೆ ಬೃಹತ್ ಕಟೌಟ್‌ಗಳನ್ನು ಅಳವಡಿಸಲಾಗುತ್ತಿದೆ. ಕೆಲವು ಕಡೆ ಫ್ಲೆಕ್ಸ್ ವಿಚಾರವಾಗಿ ಯುವಕರು ಬಡಿದಾಡಿಕೊಂಡಿರುವುದೂ ಉಂಟು. ಇನ್ನು ಕೆಲವೆಡೆ ಫ್ಲೆಕ್ಸ್ ಹರಿದುಹಾಕಿದ್ದು ಘರ್ಷಣೆಗೆ ಕಾರಣವಾಗಿದೆ. ಹಳ್ಳಿಗಳಲ್ಲಿ ನಡೆಯುವ ಹಬ್ಬ ಹರಿದಿನಗಳಲ್ಲಿ ಯುವಕರಿಗೆ ಹಣ ನೀಡಿ, ರಾಜಕಾರಣಿಗಳಿಗೆ ಸಂಬಂಧಿಸಿದ ಫ್ಲೆಕ್ಸ್ ಪೈಪೋಟಿಯಲ್ಲಿ ರಾರಾಜಿಸುವಂತೆ ಮಾಡಲಾಗುತ್ತದೆ. ಕೆಲವೊಮ್ಮೆ ಊರಿನ ಒಗ್ಗಟ್ಟು ಮುರಿದುಬೀಳಲು ಕಾರಣವಾಗುತ್ತಿದೆ.

ರಸ್ತೆಗಳಲ್ಲಿ ಅಳವಡಿಸುವ ಕೆಲವು ಫ್ಲೆಕ್ಸ್ ಕಳಚಿಬೀಳುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ದ್ವಿಚಕ್ರ ವಾಹನ ಸವಾರರು ಹೆಚ್ಚಿನ ಅಪಾಯ ಎದುರಿಸುತ್ತಿದ್ದಾರೆ. ಫ್ಲೆಕ್ಸ್ ಅಳವಡಿಕೆಯ ಮೇಲೆ ನಿಷೇಧ ಹೇರುವ ಮೂಲಕ ಈ ಸಮಸ್ಯೆಯನ್ನು ನಿವಾರಿಸಬೇಕಾಗಿದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ತೀವ್ರ ಬರ’ ಘೋಷಣೆ ಪ್ರಕ್ರಿಯೆ ಸಂಕೀರ್ಣಗೊಳಿಸಿದ ಕೇಂದ್ರ ಸರ್ಕಾರ

ಬರವು ಸಾಧಾರಣ ಮಟ್ಟದಲ್ಲಿದೆಯೇ ಅಥವಾ ತೀವ್ರ ಮಟ್ಟದಲ್ಲಿದೆಯೇ ಎಂಬುದನ್ನು ಲೆಕ್ಕಾಚಾರ ಮಾಡುವುದು ಬರ ನಿರ್ವಹಣೆಯಲ್ಲಿ ಅತ್ಯಂತ ಪ್ರಮುಖವಾದ ಘಟ್ಟ. ಬರವು ಸಾಧಾರಣ ಮಟ್ಟದಲ್ಲಿ ಇದ್ದರೆ ಸರ್ಕಾರಗಳು ಕೈಗೊಳ್ಳಬೇಕಾದ ಪರಿಹಾರ ಕಾರ್ಯಕ್ರಮಗಳು ಕಡಿಮೆ ಪ್ರಮಾಣದ್ದು ಆಗಿರುತ್ತವೆ. ಆದರೆ ಬರವು ತೀವ್ರ ಸ್ವರೂಪದ್ದು ಆಗಿದ್ದರೆ, ಸರ್ಕಾರಗಳು ದೊಡ್ಡ ಪ್ರಮಾಣದ ಪರಿಹಾರ ಕಾರ್ಯಗಳನ್ನೇ ಕೈಗೆತ್ತಿಕೊಳ್ಳಬೇಕಾಗುತ್ತದೆ. ಈ ಮೊದಲು ಬರದ ತೀವ್ರತೆಯನ್ನು ಲೆಕ್ಕ ಹಾಕುವ ಮಾನದಂಡಗಳು ಸರಳವಾಗಿದ್ದವು. ಆದರೆ ಕೇಂದ್ರದ ಎನ್‌ಡಿಎ ಸರ್ಕಾರವು 2016 ಮತ್ತು 2020ರಲ್ಲಿ ಜಾರಿಗೆ ತಂದ ಬರ ನಿರ್ವಹಣೆ ಕೈಪಿಡಿಯು, ಬರ ಘೋಷಣೆ ಮತ್ತು ಬರದ ತೀವ್ರತೆ ಲೆಕ್ಕಾಚಾರದ ಪ್ರಕ್ರಿಯೆಗಳನ್ನು ಸಂಕೀರ್ಣಗೊಳಿಸಿದೆ. ಈ ಹಿಂದಿನ ಲೆಕ್ಕಾಚಾರದಲ್ಲಿ ತೀವ್ರ ಬರ ಎನಿಸಿಕೊಳ್ಳುತ್ತಿದ್ದ ಸ್ಥಿತಿಯು ಈಗಿನ ಲೆಕ್ಕಾಚಾರದಲ್ಲಿ ತೀವ್ರ ಬರ ಎನಿಸಿಕೊಳ್ಳದೇ ಇರುವ ಸಾಧ್ಯತೆಯೇ ಹೆಚ್ಚು. ತೀವ್ರ ಬರ ಎಂದು ಕೇಂದ್ರ ಸರ್ಕಾರ ಪರಿಗಣಿಸದಿದ್ದರೆ, ಅದು ಅನುದಾನವನ್ನೂ ಕೊಡಬೇಕಿಲ್ಲ

ಬಾಗಲಕೋಟೆಯ ಸಾಲಾಗುಂದಿ ಗ್ರಾಮದ ಬಳಿ ಘಟಪ್ರಭಾ ನದಿಯು ನೀರಿಲ್ಲದೆ ಬತ್ತಿ ಹೋಗಿದೆ
ಚಿತ್ರ: ಸಂಗಮೇಶ ಬಡಿಗೇರ

ಪ್ರಜಾವಾಣಿ ವಾರ್ತೆ

‘ರಾಜ್ಯಗಳಲ್ಲಿ ತೀವ್ರ ಬರ ಇದ್ದರಷ್ಟೇ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ನೆರವನ್ನು ಕೋರಬೇಕು’ ಎನ್ನುತ್ತದೆ ಬರ ನಿರ್ವಹಣಾ ಕೈಪಿಡಿ–2020. ಆದರೆ ಬರವು ತೀವ್ರ ಸ್ವರೂಪದ್ದು ಎಂದು ಸಾಬೀತುಮಾಡಲು ಸಾಧ್ಯವಾಗದೇ ಇರುವಷ್ಟರಮಟ್ಟಿಗೆ ಸಂಕೀರ್ಣವಾದ ನಿಯಮಗಳನ್ನು ಕೇಂದ್ರ ಸರ್ಕಾರ ರೂಪಿಸಿದೆ. ರಾಜ್ಯಗಳಲ್ಲಿನ ಬರವು ತೀವ್ರ ಸ್ವರೂಪದ್ದು ಎಂದು ಘೋಷಿಸಲು ಅಥವಾ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲದಿದ್ದರೆ, ರಾಜ್ಯಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ಹೆಚ್ಚುವರಿ ಅನುದಾನವನ್ನು ನೀಡುವ ಪ್ರಮೇಯವೇ ಬರುವುದಿಲ್ಲ.

(ಕೆಲವು ಸಂದರ್ಭಗಳಲ್ಲಿ ರಾಜ್ಯಗಳಲ್ಲಿ ಸಾಧಾರಣ ಬರ ಇದ್ದರೂ ರಾಜ್ಯ ಸರ್ಕಾರಗಳು ಕೇಂದ್ರದ ನೆರವನ್ನು ಕೋರಬಹುದು ಎಂದು ಕೈಪಿಡಿಯಲ್ಲಿ ಹೇಳಲಾಗಿದೆ. ಆದರೆ ಅಂತಹ ಸಂದರ್ಭಗಳು ಯಾವುವು ಎಂಬುದನ್ನು ಕೈಪಿಡಿಯಲ್ಲಿ ವಿವರಿಸಿಲ್ಲ).

2010ರಲ್ಲಿ ಯುಪಿಎ ಸರ್ಕಾರವು ಜಾರಿಗೆ ತಂದಿದ್ದ ಬರ ನಿರ್ವಹಣಾ ಕೈಪಿಡಿಯ ಪ್ರಕಾರ ಬರ ಮತ್ತು ತೀವ್ರ ಎಂದು ಘೋಷಿಸಲು ವಾಸ್ತವಿಕ ಮಳೆಯಲ್ಲಾದ ಕೊರತೆಯನ್ನು ಲೆಕ್ಕ ಹಾಕಲಾಗುತ್ತಿತ್ತು. ಜತೆಗೆ ಕೃಷಿ ಭೂಮಿಯಲ್ಲಿ ಬರಬೇಕಿದ್ದ ಇಳುವರಿ ಮತ್ತು ಅದಕ್ಕೆ ದೊರೆಯುತ್ತಿದ್ದ ಬೆಲೆ ಹಾಗೂ ಬಂದ ಇಳುವರಿ ಮತ್ತು ಅದಕ್ಕೆ ದೊರೆತ ಬೆಲೆಯಲ್ಲಿನ ವ್ಯತ್ಯಾಸವನ್ನು ಪರಿಗಣಿಸಲಾಗುತ್ತಿತ್ತು. ಇವುಗಳ ಆಧಾರದಲ್ಲಿ ಬರದ ತೀವ್ರತೆ ಎಷ್ಟು ಎಂಬುದನ್ನು ನಿರ್ಧರಿಸಲಾಗುತ್ತಿತ್ತು.

ಆದರೆ 2016ರಲ್ಲಿ ಜಾರಿಗೆ ತಂದ ಮತ್ತು 2020ರಲ್ಲಿ ಪರಿಷ್ಕರಿಸಲಾದ ಕೈಪಿಡಿಯ ಪ್ರಕಾರ ಬರದ ತೀವ್ರತೆ ನಿರ್ಧರಿಸಲು ನಾಲ್ಕು ಪ್ರಮುಖ ಸೂಚ್ಯಂಕಗಳನ್ನು ರೂಪಿಸಲಾಗಿದೆ. ಆ ಸೂಚ್ಯಂಕಗಳೂ ಹಲವು ಉಪ ಸೂಚ್ಯಂಕಗಳನ್ನು ಒಳಗೊಂಡಿವೆ. ಅವುಗಳಲ್ಲಿ ಮೂರನೇ ಎರಡರಷ್ಟು ಸೂಚ್ಯಂಕಗಳಲ್ಲಿ ತೀವ್ರ ಬರ ಎಂಬುದು ಸಾಬೀತಾದರೆ ಮಾತ್ರ ತೀವ್ರ ಬರ ಎಂದು ಪರಿಗಣಿಸಲಾಗುತ್ತದೆ.

ಬರದ ತೀವ್ರತೆ ನಿರ್ಧರಿಸುವ ಮಾನದಂಡಗಳು

2010ರ ಬರ ನಿರ್ವಹಣೆ ಕೈಪಿಡಿ

- ಜೂನ್‌ನಿಂದ ಸೆಪ್ಟೆಂಬರ್ ನಡುವೆ ನಾಲ್ಕು ವಾರಗಳಲ್ಲಿ ಮಳೆಯಾಗದೇ (ವಾಡಿಕೆಯ ಶೇ 50 ಮತ್ತು ಅದಕ್ಕಿಂತ ಕಡಿಮೆ) ಇದ್ದರೆ ಅದನ್ನು **ಕೃಷಿ ಬರ** ಎಂದು ಪರಿಗಣಿಸಲಾಗುತ್ತಿತ್ತು
- ಹಿಂಗಾರು ಮತ್ತು ಮುಂಗಾರು ಮಳೆಯ ಪ್ರಮಾಣವು ವಾಡಿಕೆಗಿಂತ **ಶೇ 20ರಷ್ಟು** ಕಡಿಮೆಯಾದರೆ ಅದನ್ನು **ಬರ ವರ್ಷ** ಎಂದು ಪರಿಗಣಿಸಲಾಗುತ್ತಿತ್ತು
- ಹಿಂಗಾರು ಮತ್ತು ಮುಂಗಾರು ಮಳೆಯ ಪ್ರಮಾಣವು ವಾಡಿಕೆಗಿಂತ **ಶೇ 25– ಶೇ40ರಷ್ಟು** ಕಡಿಮೆಯಾದರೆ ಅದನ್ನು **ತೀವ್ರ ಬರ ವರ್ಷ** ಎಂದು ಪರಿಗಣಸಲಾಗುತ್ತಿತ್ತು

2020ರ ಕೈಪಿಡಿಯ ಪ್ರಕಾರ ಈ ನಾಲ್ಕು ಸೂಚ್ಯಂಕಗಳಲ್ಲಿ ರಾಜ್ಯ ಸರ್ಕಾರವು ತನ್ನಿಚ್ಛೆಯ ಮೂರು ಸೂಚ್ಯಂಕಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಆ ಮೂರರಲ್ಲಿ ಕನಿಷ್ಠ ಎರಡು ಸೂಚ್ಯಂಕಗಳು ‘ತೀವ್ರ ಬರ’ ಎಂಬುದನ್ನು ಸೂಚಿಸುತ್ತಿರಬೇಕು ಮತ್ತು ಒಂದು ಸೂಚ್ಯಂಕವು ‘ಸಾಧಾರಣ ಬರ’ ಎಂದಾದರೂ ಸೂಚಿಸಬೇಕು. ಆಗ ಮಾತ್ರ ಅದನ್ನು ‘ತೀವ್ರ ಬರ’ ಎಂದು ಪರಿಗಣಿಸಲಾಗುತ್ತದೆ. ಉದಾಹರಣೆಗೆ: ಮಳೆ ಸೂಚ್ಯಂಕ ಮತ್ತು ಜಲ ಸೂಚ್ಯಂಕವು ತೀವ್ರ ಬರ ಎಂದು ತೋರಿಸುತ್ತಿದ್ದರೂ, ಹಸಿರು ಸೂಚ್ಯಂಕ ಮತ್ತು ತೇವಾಂಶ ಸೂಚ್ಯಂಕವು ಸಾಮಾನ್ಯ ಎಂದು ತೋರಿಸಿದರೆ ಆ ಸ್ಥಿತಿಯನ್ನು ‘ತೀವ್ರ ಬರ’ ಎಂದು ಘೋಷಿಸಲು ಸಾಧ್ಯವಿಲ್ಲ. ಆಗ ಕೇಂದ್ರ ಸರ್ಕಾರವು ರಾಜ್ಯಕ್ಕೆ ಹೆಚ್ಚುವರಿ ಅನುದಾನ ಅಥವಾ ಪರಿಹಾರ ಕೊಡಬೇಕಾಗುವುದಿಲ್ಲ.

2020ರ ಬರ ನಿರ್ವಹಣೆ ಕೈಪಿಡಿ

ಈ ಕೈಪಿಡಿ ಪ್ರಕಾರ ಮಳೆ ಕೊರತೆ, ಬೆಳೆ ಸ್ಥಿತಿ ಯಾವುದನ್ನೂ ನೇರವಾದ ಸಾಂಖ್ಯಿಕ ಮಾದರಿಯಲ್ಲಿ ಲೆಕ್ಕಾಚಾರ ಮಾಡುವುದಿಲ್ಲ. ಬದಲಿಗೆ ಅವುಗಳನ್ನು ಸೂಚ್ಯಂಕಗಳನ್ನಾಗಿ ಪರಿವರ್ತಿಸಲಾಗುತ್ತದೆ. ಸೂಚ್ಯಂಕಗಳ ಆಧಾರದಲ್ಲಿ ಬರದ ಸ್ಥಿತಿಯನ್ನು ನಿರ್ಧರಿಸಲಾಗುತ್ತದೆ.

1. ಮಳೆ ಸೂಚ್ಯಂಕ

- ವಾಡಿಕೆ ಮಳೆಯಲ್ಲಿ **ಶೇ 60ರಿಂದ ಶೇ99ರಷ್ಟು** ಕೊರತೆಯಾದರೆ ಅದನ್ನು ತೀವ್ರ ಕೊರತೆ ಎಂದು ಪರಿಗಣಿಸಲಾಗುತ್ತದೆ. ಬೇಸಾಯದ ಋತುವಿನಲ್ಲಿ **ಸತತ ನಾಲ್ಕು ವಾರ** ಮಳೆ ಕೊರತೆಯಾದರೆ (ವಾಡಿಕೆಯಲ್ಲಿ ಶೇ 50ಕ್ಕಿಂತಲೂ ಹೆಚ್ಚು ಕೊರತೆ) ಮಾತ್ರ ಅದನ್ನು ತೀವ್ರ ಕೊರತೆ ಎಂದು ಮತ್ತೊಂದು ಉಪಸೂಚ್ಯಂಕದಲ್ಲಿ ಪರಿಗಣಿಸಲಾಗುತ್ತದೆ
- ಇವುಗಳ ಆಧಾರದಲ್ಲಿ ‘ಪ್ರಮಾಣಿತ ಸರಾಸರಿ ಮಳೆ ಸೂಚ್ಯಂಕ–ಎಸ್‌ಪಿಐ’ ಅನ್ನು ನಿರ್ಧರಿಸಲಾಗುತ್ತದೆ. ಈ ಸೂಚ್ಯಂಕದಲ್ಲಿ ಮಳೆ ಕೊರತೆಯನ್ನು ಸ್ವಲ್ಪ ಕೊರತೆ, ಸಾಧಾರಣ ಕೊರತೆ, ತೀವ್ರ ಕೊರತೆ ಮತ್ತು ಅತಿ ಕೊರತೆ ಎಂದು ವರ್ಗೀಕರಿಸಲಾಗಿದೆ. ಇದರಲ್ಲಿ ತೀವ್ರ ಕೊರತೆ ಬಂದರೆ ಮಾತ್ರ ಅದನ್ನು ತೀವ್ರ ಬರ ಎಂದು ಪರಿಗಣಿಸಲು ಅವಕಾಶವಿದೆ

2. ಹಸಿರು ಸೂಚ್ಯಂಕ

- ದೂರಸಂವೇದಿ ಉಪಗ್ರಹಗಳ ಚಿತ್ರಗಳು ಮತ್ತು ಇನ್ಫ್ರಾ ರೆಡ್ ಚಿತ್ರಗಳ ನೆರವಿನಿಂದ ಹಸಿರು ಸೂಚ್ಯಂಕವನ್ನು ನಿರ್ಧರಿಸಲಾಗುತ್ತದೆ. ಇದರಲ್ಲಿ ಹಸಿರು ಸೂಚ್ಯಂಕ ಮತ್ತು ತೇವ ಸೂಚ್ಯಂಕ ಎಂಬ ಎರಡು ಉಪ ಸೂಚ್ಯಂಕಗಳಿವೆ. ಉಪಗ್ರಹಳ ಚಿತ್ರಗಳಲ್ಲಿ **ಹಸಿರು ಮತ್ತು ತೇವಾಂಶವು ದಟ್ಟವಾಗಿ (ಇನ್ಫ್ರಾ ರೆಡ್‌ನಲ್ಲಿ ಧನಾತ್ಮಕ ಸಂಖ್ಯೆಗಳು) ಕಂಡರೆ ಬರ ಇಲ್ಲ** ಎಂದು ಪರಿಗಣಿಸಲಾಗುತ್ತದೆ.

ಈ ಸೂಚ್ಯಂಕದ ದೊಡ್ಡ ಕೊರತೆ ಅಂದರೆ, ಪೈರು ಅಥವಾ ಗಿಡ ತೆನೆಕಟ್ಟಿದೆಯೇ ಇಲ್ಲವೇ ಎಂಬುದನ್ನು ಪರಿಗಣಿಸುವುದೇ ಇಲ್ಲ. ಬದಲಿಗೆ ಹಸಿರಿನ ಪ್ರಮಾಣವನ್ನು ಮಾತ್ರ ಪರಿಗಣಿಸುತ್ತದೆ

- ಹಸಿರು ಸ್ಥಿತಿ ಸೂಚ್ಯಂಕದ ಪ್ರಕಾರ, ಹಸಿರಿನ ಪ್ರಮಾಣವು ಶೇ 40ಕ್ಕಿಂತ ಕಡಿಮೆ ಇದ್ದರಷ್ಟೇ ತೀವ್ರ ಬರ ಎಂದು ನಿರ್ಧರಿಸಲು ಪರಿಗಣಿಸಲಾಗುತ್ತದೆ

3. ಮಣ್ಣಿನ ತೇವಾಂಶ ಸೂಚ್ಯಂಕ

- ಇದರಲ್ಲಿ ಹಲವು ಉಪಸೂಚ್ಯಂಕಗಳು ಇವೆ. ಮಣ್ಣಿನಲ್ಲಿನ ತೇವಾಂಶದ ಪ್ರಮಾಣವು ಶೇ 50ಕ್ಕಿಂತ ಕಡಿಮೆ ಇದ್ದರಷ್ಟೇ ತೀವ್ರ ಬರ ಇದೆ ಎಂದು ಪರಿಗಣಿಸಲಾಗುತ್ತದೆ. ಬೇಸಾಯದ ಋತುವಿನ ಎಲ್ಲಾ ಹಂತದಲ್ಲಿನ ತೇಂವಾಶದ ಪ್ರಮಾಣ ಶೇ 50ರಷ್ಟನ್ನು ಮುಟ್ಟಿದರೆ ಅದು ತೀವ್ರ ಬರ ಎನಿಸಿಕೊಳ್ಳುವುದಿಲ್ಲ

4. ಜಲಸೂಚ್ಯಂಕಗಳು

- **ಜಲಾಶಯ ಸಂಗ್ರಹ ಸೂಚ್ಯಂಕ:** ಜಲಾಶಯಗಳಲ್ಲಿನ 10 ವರ್ಷಗಳ ಸರಾಸರಿ ಸಂಗ್ರಹ ಪ್ರಮಾಣದ **ಶೇ 40–60ರಷ್ಟು** ಕೊರತೆಯಾಗಿದ್ದರೆ ಮಾತ್ರ ಅದನ್ನು ತೀವ್ರ ಕೊರತೆ ಎಂದು ಪರಿಗಣಿಸಲಾಗುತ್ತದೆ.
- **ಅಂತರ್ಜಲ ಬರ ಸೂಚ್ಯಂಕ:** ನೆಲಮಟ್ಟದಿಂದ ಅಂತರ್ಜಲ ಎಷ್ಟು ಆಳಕ್ಕೆ ಕುಸಿದಿದೆ, ದೀರ್ಘಾವಧಿಯಲ್ಲಿ ಅತ್ಯಂತ ಆಳದ ಅಂತರ್ಜಲ ಮಟ್ಟವನ್ನು ಲೆಕ್ಕಾಚಾರ ಮಾಡಿ ಇದನ್ನು ನಿರ್ಧರಿಸಲಾಗುತ್ತದೆ
- **ಹರಿಯುವ ಜಲಮೂಲಗಳ ಸೂಚ್ಯಂಕ:** ನದಿ–ಹಳ್ಳ–ತೊರೆಗಳಲ್ಲಿ ಬೇಸಾಯದ ಋತುವಿನಲ್ಲಿ ಎಷ್ಟು ನೀರು ಹರಿದಿದೆ ಎಂಬುದನ್ನು ಲೆಕ್ಕಾಚಾರ ಮಾಡಿ ಈ ಸೂಚ್ಯಂಕವನ್ನು ನಿರ್ಧರಿಸಲಾಗತ್ತದೆ. ನೀರಿನ ಹರಿವಿನ ಪ್ರಮಾಣ ತೀವ್ರವಾಗಿ ಕುಸಿದಿದ್ದರಷ್ಟೇ ಅದನ್ನು ತೀವ್ರ ಕೊರತೆ ಎಂದು ಪರಿಗಣಿಸಲಾಗುತ್ತದೆ

ಬಿತ್ತನೆ ಪ್ರಮಾಣವೇ ಮುಖ್ಯ, ಬೆಳೆಯ ಸ್ಥಿತಿಯಲ್ಲ...

ಇದು ಹಸಿರು ಸೂಚ್ಯಂಕದ ಒಂದು ಉಪಸೂಚ್ಯಂಕ. ಬರವನ್ನು ಅಳೆಯುವ ಹಲವು ಮಾನದಂಡಗಳಲ್ಲಿ ಬಿತ್ತನೆ, ಕೈಗೆ ಬಂದ ಬೆಳೆ ಪ್ರಮಾಣ ಮತ್ತು ಅದರಿಂದ ಬಂದ ಆದಾಯ– ಇವುಗಳೂ ಮುಖ್ಯ ಮಾನದಂಡಗಳಾಗಿವೆ. ಬೆಳೆ ನಷ್ಟವನ್ನು ಹಣದ ರೂಪದಲ್ಲಿ ಅಳತೆ ಮಾಡುವ ಕ್ರಮವನ್ನು ಈ ಹಿಂದೆ ಅನುಸರಿಸಲಾಗುತ್ತಿತ್ತು. ಎಷ್ಟು ಆದಾಯ ನಷ್ಟವಾಗಿದೆ ಎನ್ನುವುದರ ಮೇಲೆ ಬರ ಘೋಷಣೆ ಮಾಡಬೇಕೇ ಬೇಡವೇ ಎಂದು ನಿರ್ಧರಿಸಲಾಗುತ್ತಿತ್ತು. ಆದರೆ, ಈಗ ನಿಯಮಗಳು ಬದಲಾಗಿದ್ದು, ಹೆಚ್ಚು ಸಂಕೀರ್ಣವಾಗಿವೆ. ಎಷ್ಟು ಪ್ರದೇಶದಲ್ಲಿ ಬಿತ್ತನೆ ಕಾರ್ಯ ಆಗಿದೆ ಎನ್ನುವುದರ ಮೇಲೆ ಈಗ ಬರವನ್ನು ನಿರ್ಧರಿಸಲಾಗುತ್ತದೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಅವಧಿಯಲ್ಲಿ ರೂಪಿಸಿದ ನಿಯಮಗಳ ಪ್ರಕಾರ, ಬೆಳೆ ನಷ್ಟದ ಪ್ರಮಾಣವನ್ನು ಆಣೆವಾರಿ ಅಥವಾ ಪೈಸೆವಾರಿ ಲೆಕ್ಕದಲ್ಲಿ ಅಳೆಯಲಾಗುತ್ತಿತ್ತು. ಉದಾಹರಣೆಗೆ, ಒಂದು ಎಕರೆ ಪ್ರದೇಶದಲ್ಲಿ ಭತ್ತವನ್ನು ಬೆಳೆಯಲಾಗುತ್ತಿದೆ. ಒಂದು ಎಕರೆ ಭೂಮಿಯಲ್ಲಿ ಆ ಪ್ರದೇಶದ ಸರಾಸರಿ ಇಳುವರಿ ಪ್ರಮಾಣವು 18 ಕ್ವಿಂಟಲ್ ಎಂದಿಟ್ಟುಕೊಳ್ಳಿ. ಆ ಜಮೀನಿನಲ್ಲಿ 9 ಕ್ವಿಂಟಲ್ ಇಳುವರಿ ದೊರೆತರೆ (ಶೇ 50ರಷ್ಟು ಕಡಿಮೆ) ಅದನ್ನು ಬರ ಎಂದು ಘೋಷಿಸಲಾಗುತ್ತಿತ್ತು. ಮುಂಗಾರು ಬೆಳೆ ಹಾಗೂ ಹಿಂಗಾರು ಬೆಳೆಗಳ ನಷ್ಟಗಳಿಗೂ ಇದೇ ಸೂತ್ರವೇ ಅನ್ವಯ.

ಆದರೆ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಈ ನಿಯಮಗಳಿಗೆ ಕೆಲವು ಬದಲಾವಣೆಗಳನ್ನು 2020ರಲ್ಲಿ ತಂದಿತು. ನೂತನ ನಿಮಯಗಳ ಪ್ರಕಾರ, ಬಿತ್ತನೆ ಪ್ರದೇಶದ ಪ್ರಮಾಣ ಎಷ್ಟು ಎಂಬುದೇ ಬರ ಎಂದು ಘೋಷಿಸಲು ಇರುವ ಪ್ರಮುಖ ಮಾನದಂಡವಾಗಿದೆ.

‘ಬರವು ಎಷ್ಟು ಪ್ರದೇಶದಲ್ಲಿ ವಿಸ್ತರಿಸಿದೆ ಮತ್ತು ಎಷ್ಟು ತೀವ್ರವಾಗಿದೆ ಎಂಬುದನ್ನು ಬಿತ್ತನೆ ಪ್ರದೇಶ ಪ್ರಮಾಣವು ಸೂಚಿಸುತ್ತದೆ. ಜೊತೆಗೆ, ಬಿತ್ತನೆ ಕಾರ್ಯವು ನೇರವಾಗಿ ಮಳೆಯ ಮೇಲೆ ಅವಲಂಬಿತವಾಗಿದೆ. ಒಂದು ವೇಳೆ ಮಳೆ ಪ್ರಮಾಣವು ಕಡಿಮೆ ಇದ್ದರೆ, ಬಿತ್ತನೆ ಪ್ರದೇಶವು ಕಡಿಮೆ ಇರಲಿದೆ. ಆದ್ದರಿಂದಲೇ ನೀರಿನ ಲಭ್ಯತೆಯ ಕುರಿತು ಬಿತ್ತನೆ ಪ್ರದೇಶದ ಪ್ರಮಾಣವು ನಿಖರ ಮಾಹಿತಿಯನ್ನು ನೀಡುತ್ತದೆ’ ಎಂದು ಕೈಪಿಡಿಯಲ್ಲಿ ವಿವರಿಸಲಾಗಿದೆ.

ಜುಲೈ ಅಥವಾ ಆಗಸ್ಟ್ ಹೊತ್ತಿಗೆ ಮುಂಗಾರು ಬೆಳೆಗಳ ಬಿತ್ತನೆ ಕಾರ್ಯ ಮುಗಿಯುತ್ತದೆ. ಮಳೆಯು ಒಂದೆರಡು ತಿಂಗಳು ಆಚೆ–ಈಚೆ ಬಂದರೂ, ಬಿತ್ತನೆ ಕಾರ್ಯವು ಅದರನ್ವಯ ಮುಗಿಯುತ್ತದೆ. ಒಂದು ವೇಳೆ, ಜುಲೈ ಅಥವಾ ಆಗಸ್ಟ್ ಹೊತ್ತಿಗೆ ಸಾಮಾನ್ಯವಾಗಿ ಇರಬೇಕಿದ್ದ ಬಿತ್ತನೆ ಪ್ರದೇಶಕ್ಕಿಂತ ಶೇ 85ರಷ್ಟು ಇದ್ದರೆ ಅದನ್ನು ಬರದ ಪರಿಸ್ಥಿತಿ ಎಂದು ಘೋಷಣೆ ಮಾಡಲಾಗುತ್ತದೆ. ಒಂದು ವೇಳೆ ಈ ಪ್ರದೇಶವು ಶೇ 75ರಷ್ಟಕ್ಕಿಂತ ಕಡಿಮೆ ಇದ್ದರೆ, ಅದನ್ನು ತೀವ್ರ ಬರ ಎಂದು ಘೋಷಣೆ ಮಾಡಲಾಗುತ್ತದೆ.

ಹಿಂಗಾರು ಬೆಳೆಗಳ ಬಿತ್ತನೆ ಕಾರ್ಯದಲ್ಲಿಯೂ (ಅಕ್ಟೋಬರ್‌ನಿಂದ ನವೆಂಬರ್) ಇದೇ ಸೂತ್ರವನ್ನು ಅನುಸರಿಸಲಾಗುತ್ತದೆ. ಬಿತ್ತನೆ/ನಾಟಿ ನಡೆದ ಹೊಲ–ಗದ್ದೆಗಳಲ್ಲಿ ಬೆಳೆ ಹಾಳಾಗಿದೆಯೇ ಅಥವಾ ಉತ್ತಮವಾಗಿದೆಯೇ ಎಂಬುದನ್ನು ಇಲ್ಲಿ ಪರಿಗಣಿಸುವುದೇ ಇಲ್ಲ.

ಆಧಾರ: ಬರ ನಿರ್ವಹಣೆ ಕೈಪಿಡಿ–2010, ಬರ ನಿರ್ವಹಣೆ ಕೈಪಿಡಿ ಮಾರ್ಗಸೂಚಿಗಳು 2016 ಮತ್ತು 2020, 2023ರ ಬರ: ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾರ್ಯಯೋಜನೆ, ಬರ ನಿರ್ವಹಣಾ ಅಂತರ ಸಚಿವಾಲಯ ತಂಡಕ್ಕೆ ಮಾರ್ಗಸೂಚಿಗಳು–2023, ಪಿಟಿಐ

ಫೆ.16ಕ್ಕೆ ‘ಕೆಟಿಎಂ’ ಬಿಡುಗಡೆ

‘ದಿಯಾ’ ಸಿನಿಮಾ ಖ್ಯಾತಿಯ ದೀಕ್ಷಿತ್ ಶೆಟ್ಟಿ ಅಭಿನಯದ ‘ಕೆಟಿಎಂ’ ಸಿನಿಮಾ ಫೆ.16 ರಂದು ತೆರೆ ಕಾಣುತ್ತಿದೆ. ಇತ್ತೀಚೆಗೆ ಚಿತ್ರದ ಹೊಸ ಹಾಡು ‘ಎಲ್ಲಾ ನೀನೇನೆ’ ಬಿಡುಗಡೆಯಾಗಿದೆ.

‘ಎಲ್ಲಾ ನೀನೇನೆ’ ಹಾಡಿಗೆ ಧನಂಜಯ್ ರಂಜನ್ ಸಾಹಿತ್ಯ ಬರೆದಿದ್ದು, ಚೇತನ್ ರಾವ್ ಹಾಗೂ ಸಂಚಿತ್ ಹೆಗಡೆ ಜೊತೆಗೂಡಿ ಧ್ವನಿಯಾಗುವುದರ ಜೊತೆಗೆ ಸಂಗೀತ ಒದಗಿಸಿದ್ದಾರೆ. ಹಾಡಿನಲ್ಲಿ ದೀಕ್ಷಿತ್‌ಗೆ ಸಂಜನಾ ದಾಸ್ ಜೋಡಿಯಾಗಿದ್ದಾರೆ.

ಈ ಹಿಂದೆ ‘ಅಥರ್ವ’ ಸಿನಿಮಾ ನಿರ್ದೇಶಿಸಿದ್ದ ಅರುಣ್ ‘ಕೆಟಿಎಂ’ ಸಿನಿಮಾಗೆ ಆ್ಯಕ್ಷನ್-ಕಟ್ ಹೇಳಿದ್ದಾರೆ. ಮಹಾಸಿಂಹ ಮೂವೀಸ್ ಬ್ಯಾನರ್‌ನಲ್ಲಿ ವಿನಯ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ನವಿರಾದ ಪ್ರೇಮ್‌ಕಹಾನಿ ಇರುವ ಈ ಸಿನಿಮಾದಲ್ಲಿ ದೀಕ್ಷಿತ್ ಶೆಟ್ಟಿ ನಾಲ್ಕು ವಿಭಿನ್ನ ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸಿನಿಮಾದಲ್ಲಿ ಕಾಜಲ್ ಕುಂದರ್ ಹಾಗೂ ಸಂಜನಾ ನಾಯಕಿಯರಾಗಿದ್ದಾರೆ. ಉಷಾ ಭಂಡಾರಿ, ಪ್ರಕಾಶ್ ತುಮ್ಮಿನಾಡು, ಬಿಗ್‌ಬಾಸ್ ಖ್ಯಾತಿಯ ತುಕಾಲಿ ಸಂತು, ರಘು ರಮಣಕೊಪ್ಪ, ಶಾನಿಲ್ ಗುರು, ಬಾಬು ಹಿರಣಯ್ಯ, ದೇವ್ ದೇವಯ್ಯ, ಅಭಿಷೇಕ್ ಮೊದಲಾದವರು ತಾರಾಬಳಗದಲ್ಲಿದ್ದಾರೆ. ಸಿನಿಮಾಗೆ ನವೀನ್ ಛಾಯಾಚಿತ್ರಗ್ರಹಣ, ಅರ್ಜುನ್ ಕಿಟ್ಟು ಸಂಕಲನವಿದೆ. ಉಡುಪಿ, ಮಂಗಳೂರು, ಕಾರ್ಕಳ, ಬೆಂಗಳೂರು ಸುತ್ತಮುತ್ತ ಸಿನಿಮಾದ ಚಿತ್ರೀಕರಣ ನಡೆದಿದೆ.

‘ಮಲೆನಾಡ ಗೊಂಬೆ’ಗೆ ಉಪೇಂದ್ರ ಮೆಚ್ಚುಗೆ

ಈ ಹಿಂದೆ ‘ರಾಜಹಂಸ’ ಚಿತ್ರದಲ್ಲಿ ನಟಿಸಿದ್ದ ಗೌರಿಶಂಕರ್ ಹಾಗೂ ಬಿಂದು ಶಿವರಾಂ ಜೋಡಿಯಾಗಿ ನಟಿಸಿರುವ ‘ಕೆರೆಬೇಟೆ’ ಚಿತ್ರದ ‘ಮಲೆನಾಡ ಗೊಂಬೆ’ ಎಂಬ ಹಾಡನ್ನು ಇತ್ತೀಚೆಗಷ್ಟೇ ನಟ ಉಪೇಂದ್ರ ಬಿಡುಗಡೆ ಮಾಡಿದರು.

‘ಚಿತ್ರದ ಟೀಸರ್ ನೋಡಿದೆ. ಬಹಳ ಚೆನ್ನಾಗಿದೆ. ಹಾಡು ಕೂಡ ಸೊಗಸಾಗಿ ಮೂಡಿಬಂದಿದೆ. ಮಲೆನಾಡಿನ ಸುಂದರ ಚಿತ್ರಣವಿದೆ. ಈ ತಂಡ ಇನ್ನೊಂದಷ್ಟು ಸಿನಿಮಾ ಮಾಡುವ ರೀತಿಯಲ್ಲಿ ಹರಸಿ. ಚಿತ್ರಮಂದಿರಕ್ಕೇ ಬಂದು ಈ ಸಿನಿಮಾ ನೋಡಿ’ ಎಂದು ಉಪೇಂದ್ರ ತಂಡಕ್ಕೆ ಶುಭ ಹಾರೈಸಿದರು.

ಈಗಾಗಲೇ ಟೀಸರ್‌ನಿಂದ ಗಮನ ಸೆಳೆದಿರುವ ಈ ಚಿತ್ರಕ್ಕೆ ರಾಜ್‌ಗುರು ಆ್ಯಕ್ಷನ್ ಕಟ್ ಹೇಳಿದ್ದಾರೆ. ‘ಮಲೆನಾಡ ಗೊಂಬೆ’ ಹಾಡಿನಲ್ಲಿ ನಾಯಕ–ನಾಯಕಿ ಪ್ರೇಮ ಪಯಣದ ಜೊತೆಗೆ ಮಲೆನಾಡಿನ ದೃಶ್ಯವೈಭವವಿದೆ. ಗಗನ್ ಬದೇರಿಯ ಸಂಗೀತವಿದ್ದು, ಈ ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯ ಬರೆದಿದ್ದಾರೆ.

‘ಸಿಗಂದೂರು, ಕೋಗಾರಿನ ಕಾಡು ಸೇರಿದಂತೆ ಮಲೆನಾಡಿನ ಸುಂದರ ತಾಣಗಳಲ್ಲಿ ಚಿತ್ರೀಕರಣಗೊಂಡಿದೆ. ಭಾರೀ ಮಳೆ, ರಕ್ತ ಹೀರುವ ಇಂಬಳಗಳ ನಡುವೆ ಈ ಹಾಡಿನ ಚಿತ್ರೀಕರಣ ಒಂದು ವಿಭಿನ್ನ ಅನುಭವವಾಗಿತ್ತು. ಮಾ.15 ರಂದು ಸಿನಿಮಾ ತೆರೆಗೆ ಬರುತ್ತಿದೆ’ ಎಂದರು ಗೌರಿಶಂಕರ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಸುರಕ್ಷಿತ ವಲಯವೆಂಬ ಪಂಜರ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಅಲ್ಕಟ್ರಾಝ್ ಎಂಬುದು ಕ್ಯಾಲಿಫೋರ್ನಿಯಾದ ಪುಟ್ಟ ದ್ವೀಪ. ಅಲ್ಲಿ ಜಗತ್ತಿನಲ್ಲಿಯೇ ಅತೀ ಹೆಚ್ಚು ಭದ್ರತೆಯುಳ್ಳ ಸೆರೆಮನೆಯಿತ್ತು. ಅತ್ಯಂತ ಕುಖ್ಯಾತ ಖೈದಿಗಳನ್ನು ಅಲ್ಕಟ್ರಾಝ್‌ಗೆ ಕಳುಹಿಸುತ್ತಿದ್ದರು. ಸೆರೆಮನೆ ಎಂದ ಮೇಲೆ ಅಲ್ಲಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸದೇ ಇರುತ್ತಾರೆಯೇ? ಎಷ್ಟೇ ಭದ್ರತೆಯಿದ್ದರೂ ಹೇಗಾದರೂ ಮಾಡಿ ತಪ್ಪಿಸಿಕೊಳ್ಳಲು ಪ್ರಯತ್ನ ಪಡುತ್ತಲೇ ಇರುವ ಭೂಪರೂ ಇದ್ದರು. ಸಮುದ್ರದಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಅಲ್ಲಿಂದ ಪಾರಾಗಲು ಇರುವ ಏಕೈಕ ಮಾರ್ಗವೆಂದರೆ ನೀರು ಮಾತ್ರ. ಎಂತಹ ಕೊರೆವ ತಣ್ಣನೆಯ ನೀರಿದ್ದರೂ ಖೈದಿಗಳು ಈಜಿ ಪಾರಾಗಲು ಪ್ರಯತ್ನಿಸುತ್ತಿದ್ದರು. ಅದಕ್ಕೆ ಇಲ್ಲಿನ ಅಧಿಕಾರಿಗಳು ಒಂದು ಉಪಾಯ ಹೂಡಿದ್ದರು. ಅದೇನೆಂದರೆ ದಿನವೂ ಆ ಖೈದಿಗಳಿಗೆ ಬಿಸಿನೀರಿನ ಸ್ನಾನವನ್ನು ಕಡ್ಡಾಯವಾಗಿಸಿದ್ದರು. ಜೈಲಿನಲ್ಲಿ ಅಪರೂಪವೆನಿಸುವ ಈ ವ್ಯವಸ್ಥೆ ಖೈದಿಗಳಿಗೆ ಚಳಿಯ ವಾತಾವರಣಕ್ಕೆ ಒಳ್ಳೆಯದೇ ಆಯಿತು ಎಂದುಕೊಂಡಿರಾ? ಒಳ್ಳೆಯದೇ. ಆದರೆ ಅಧಿಕಾರಿಗಳ ಉದ್ದೇಶ ಅದಲ್ಲ. ದಿನವೂ ಬಿಸಿ ನೀರಿನ ಸ್ನಾನ ಮಾಡುವುದರಿಂದ ತಣ್ಣನೆಯ ನೀರಿನಲ್ಲಿ ಕಿಲೋಮೀಟರುಗಟ್ಟಲೆ ಈಜುವ ಸಾಮರ್ಥ್ಯ ಖೈದಿಗಳಲ್ಲಿ ಇರುತ್ತಲೇ ಇರಲಿಲ್ಲ. ದೇಹ ಬಿಸಿನೀರಿನ ಶಾಖಕ್ಕೆ ಒಗ್ಗಿಹೋಗಿರುವುದರಿಂದ ದಿನಗಟ್ಟಲೆ ಈಜಿ ಪಾರಾಗುವುದು ಅಸಾಧ್ಯ ಎಂಬುದು ಗೊತ್ತಿದ್ದುದರಿಂದಲೇ ಅಧಿಕಾರಿಗಳು ಈ ಮಾರ್ಗ ಅನುಸರಿಸುತ್ತಿದ್ದರು.

ದೇಹವಿರಲೀ ಮನಸ್ಸಿರಲೀ ಸುಖಕ್ಕೆ ಒಗ್ಗಿಕೊಂಡರೆ ಹೇಗೆ ಅದು ನಮ್ಮನ್ನು ನಮಗರಿವಿಲ್ಲದೇ ಬಂಧನಕ್ಕೆ ಒಳಪಡಿಸಿಬಿಡುತ್ತದೆ ಎಂಬುದಕ್ಕೆ ಈ ಉದಾಹರಣೆ ಅತ್ಯಂತ ಸೂಕ್ತವಾದದ್ದು. ಬೆಳಿಗ್ಗೆ ಬೇಗ ಎದ್ದು ವಾಕ್ ಹೋಗುತ್ತೇನೆ, ಜಿಮ್‌ನಲ್ಲಿ ಬೆವರಿಳಿಸುತ್ತೇನೆ, ದಿನವೂ ಆರು ಗಂಟೆ ಓದುತ್ತೇನೆ, ಮೊಬೈಲ್ ನೋಡುವುದನ್ನು ಕಡಿಮೆ ಮಾಡುತ್ತೇನೆ, ಪುಸ್ತಕ ಓದುತ್ತೇನೆ ಎಂದೆಲ್ಲ ಹೊಸವರ್ಷದ ಆರಂಭದಲ್ಲಿ ಪ್ರತಿಜ್ಞೆಗಳನ್ನು ಮಾಡಿ ವಾರದೊಳಗೆ ಮತ್ತೆ ಹಳೆಯ ದಿನಚರಿಗೇ ಮರಳುವವರ ಸಂಖ್ಯೆ ಶೇಕಡಾ ತೊಂಬತ್ತೈದಕ್ಕಿಂತಲೂ ಜಾಸ್ತಿ.

ಕಾರಣ ನಾವು ನಮ್ಮ ಮಾಮೂಲಿ ದಿನಚರಿಯ ಸುಖಕ್ಕೆ ಒಗ್ಗಿಕೊಂಡು ಬಿಟ್ಟಿದ್ದೇವೆ. ಬೆಳಿಗ್ಗೆ ಐದು ಗಂಟೆಗೆ ಏಳ ಹೊರಟರೆ ಬೆಚ್ಚನೆಯ ಹಾಸಿಗೆಯ ಆರಾಮವನ್ನು ಕಳೆದುಕೊಳ್ಳಲು ಇಷ್ಟವಾಗುವುದಿಲ್ಲ. ಓದಲೆಂದು ಹೊರಟರೆ ಮೊಬೈಲ್‌ನಲ್ಲಿ ರೀಲ್ಸ್ ನೋಡುವುದು ಮುಗಿಯುವುದೇ ಇಲ್ಲ. ಮನಸ್ಸು ಸದಾ ಒಂದು ಸುರಕ್ಷತೆಯ ಬೆಚ್ಚನೆಯ ವಲಯದಲ್ಲಿ ಇರಲು ಬಯಸುತ್ತದೆ. ಹೊಸತನ್ನು ಪ್ರಯತ್ನಿಸಲು, ಸಾಹಸ ಕಾರ್ಯಗಳನ್ನು ಕೈಗೊಳ್ಳಲು ಇದೇ ಕಂಫರ್ಟ್ ಝೋನಿನ ಆರಾಮವೇ ತಡೆಯುತ್ತದೆ. ಎಲ್ಲ ಬದಲಾವಣೆಯೂ, ಬೆಳವಣಿಗೆಯೂ, ಸಾಧನೆಯೂ, ಬಿಡುಗಡೆಯೂ ಈ ಸುರಕ್ಷಿತ ವಲಯವೆಂಬ ಪಂಜರದ ಹೊರಗೇ ಇದೆ ಎಂಬ ಸಾಮಾನ್ಯ ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು. ಈ ಮಿತಿಯನ್ನು ಮೀರದೇ, ಬಂಧನದಿಂದ ಹೊರಬಾರದೇ ಬೆಳವಣಿಗೆಯೆಂಬುದು ಕನ್ನಡಿಯೊಳಗಿನ ಗಂಟು ಅಷ್ಟೇ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ಫೆಬ್ರುವರಿ 8, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ತ್ರಯೋದಶಿ ಗಂ. 11-18 **ನಕ್ಷತ್ರ:** ಉತ್ತರಾಷಾಢ ಗಂ. 26-14 **ಯೋಗ:** ಸಿದ್ಧಿ(ಆಸ್ರಿಕ್) ಗಂ. 23-09 **ಕರಣ:** ವಣಿಜ ಗಂ. 11-18, ಮಕರ ಮಾಸದ 25 ನೇ ದಿನ, **ಮಳೆನಕ್ಷತ್ರ:** ಧನಿಷ್ಠಾ 1.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-59 **ಸೂರ್ಯಾಸ್ತ :** 06-30
ಮುಸ್ಲಿಂ ದಿನಾಂಕ : 27 ರಜಬ್
ಅದೃಷ್ಟ ಸಂಖ್ಯೆ : 4, 1

ಮೇಷ: ಸರ್ಕಾರಿ ಕಾಮಗಾರಿಯ ವ್ಯವಹಾರಕ್ಕೆ ಸಂಬಂಧಿಸಿದ ಹಾಗೂ ರಾಜಕೀಯ ಸ್ಥಾನ ಪಡೆಯುವ ಬಗ್ಗೆ ವರಿಷ್ಠರೊಂದಿಗೆ ಮಾತುಕತೆಗಳು ನಡೆಯಲಿವೆ. ಹಣಕಾಸಿನ ವಹಿವಾಟು ಉತ್ತಮವಾಗಿರಲಿದೆ.

ವೃಷಭ: ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ ಸ್ವ ಪ್ರಯತ್ನ ದಿಂದ ಕೆಲಸದಲ್ಲಿ ಮುನ್ನುಗ್ಗಿ. ಯೋಗ್ಯ ವಯಸ್ಕರಿಗೆ ವಿವಾಹ ಭಾಗ್ಯ ಒದಗಿಬರುವುದು. ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಲಾಭ ಪಡೆಯುವಿರಿ.

ಮಿಥುನ: ಸಾಲಬಾಧೆಯಂತಹ ಪರಿಸ್ಥಿತಿಯಲ್ಲಿ ಸಹೋದರರು ಸಹಕರಿಸುವರು. ಆಗೊಂದು ಈಗೊಂದು ಸಲ ಅನವಶ್ಯಕವಾಗಿ ನೆರೆಹೊರೆಯವರ ಕಿರಿಕಿರಿ ತಪ್ಪದು. ಹಿಂದಿನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ.

ಕರ್ಕಾಟಕ: ಈ ದಿನ ಯಾವುದೇ ಕೆಲಸಗಳನ್ನು ಮುಂದುಹಾಕದೆ ಪೂರ್ಣಗೊಳಿಸಲು ಯತ್ನಿಸಿ. ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ, ಸಮಯ ಮಾತ್ರ ಹಾಳಾಗುವುದು ಎಂದು ತಿಳಿದಿರಲಿ.

ಸಿಂಹ: ಕಳೆದು ಹೋದ ವಸ್ತುಗಳನ್ನು ಹುಡುಕಲು ಸಮಯ ಉಪಯೋಗಿಸುವುದು ನಿಷ್ಪ್ರಯೋಜಕವಾಗುವುದು. ಪ್ರೀತಿ ಮತ್ತು ಆನಂದ ತುಂಬಿದ ಹರ್ಷದಾಯಕವಾದ ದಿನ ಇದಾಗಿದೆ. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ಕನ್ಯಾ: ಏನನ್ನಾದರೂ ಸಾಧಿಸಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಗಣಿತ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡುವ ನಿಮ್ಮ ಕನಸಿಗೆ ಪುಷ್ಟಿ ಸಿಗಲಿದೆ. ಜೀವನ ಶೈಲಿ ಬದಲಾಗುವುದು.

ತುಲಾ: ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆ ಬರುವುದು. ಆದರೆ, ಈ ವಿಚಾರಕ್ಕೆ ಸಂಬಂಧಿಸಿದಂತೆ ಇಂದು ಯಾವುದೇ ತೀರ್ಮಾನ ತೆಗೆದುಕೊಳ್ಳಬೇಡಿ. ನೂತನ ವಸ್ತ್ರ ಖರೀದಿಯ ಯೋಗವಿದೆ.

ವೃಶ್ಚಿಕ: ನಿಮ್ಮ ಪ್ರಗತಿಯನ್ನು ಬಹಳಷ್ಟು ಜಾಗದಲ್ಲಿ ಪ್ರಶಂಸಿಸುತ್ತಿರುವುದರಿಂದ ಕಾರ್ಯ ಕ್ಷೇತ್ರದಲ್ಲಿ ಹೊಸದೊಂದು ಹುಮ್ಮಸ್ಸು ಬರುವುದರ ಜೊತೆ-ಜೊತೆಗೆ ವೃತ್ತಿಪರವಾದ ಶತ್ರುಗಳ ಸಂಖ್ಯೆಯು ಗಗನವನ್ನು ಮುಟ್ಟಲಿದೆ.

ಧನು: ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿ ವ್ಯವಸ್ಥಿತವಾದ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅವರ ಭವಿಷ್ಯ ಉತ್ತಮವಾಗುವುದು. ಉದ್ಯೋಗದಲ್ಲಿರುವ ಒತ್ತಡವನ್ನು ನಿವಾರಿಸಿಕೊಳ್ಳುವುದು ಕಷ್ಟವಾಗುತ್ತದೆ.

ಮಕರ: ಕಾಲು ನೋವು ನಿವಾರಿಸಿಕೊಳ್ಳಲು ತೈಲ ಲೇಪನ, ಬಿಸಿನೀರಿನ ಶಾಖದಂಥ ಮಾರ್ಗ ಅನುಸರಿಸುವುದು ಉಪಯೋಗಕಾರಿ. ಮಗನ ಕ್ಷೇಮಕ್ಕಾಗಿ ಧಾರ್ಮಿಕ ಕಾರ್ಯ ಅಥವಾ ವ್ರತಾಚರಣೆ ಮಾಡುವುದು ಉತ್ತಮ.

ಕುಂಭ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಸಮಸ್ಯೆಯನ್ನು ಎದುರಿಸಬೇಕಾಗಬಹುದು. ಕೆಲಸದಲ್ಲಿ ಉಂಟಾದ ಪ್ರಮುಖ ಬದಲಾವಣೆಯು ಗಮನಕ್ಕೆ ಬರಲಿದೆ.

ಮೀನ: ನೂತನ ವ್ಯಾಪಾರ ಆರಂಭವನ್ನು ನಿರ್ಧರಿಸಿದವರಿಗೆ ಮಧ್ಯವರ್ತಿಗಳಿಂದ ಸಹಾಯ ಸಿಗುವುದು. ಕೆಂಪು ಬಣ್ಣದ ಉಡುಪು ಧರಿಸುವುದರಿಂದ ಕಾರ್ಯಾನುಕೂಲವಾಗುತ್ತದೆ. ವೈಯಕ್ತಿಕ ವಿಚಾರಗಳ ಬಗ್ಗೆ ಗಮನಹರಿಸಿ.

ಪದಬಂಧ 5585

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವೆ ರಾಜಿ ಮಾಡಿಕೊಂಡರೂ ಈತ ಸೋತವನು (4)
3.ವಿದ್ಯೆಯನ್ನು ಕಲಿಸುವ ಶಾಲೆ (4)
5.ಕಬ್ಬಿಗ ಇಲ್ಲಿದ್ದಾನೆ (2)
7.ಧಾನ್ಯಗಳನ್ನು ಕೇರುವ ಸಾಧನ (3)
8.ಉತ್ತರದವರ ನಲ್ಲಿ (2)
10.ಜನರಲ್ಲಿ ಜಾಗೃತಿ ಮೂಡಿಸಿದ ಪರಿಶೆ (2)
11.ಸಡಗರ ಹೀಗೆ ಬಂದಿದೆ (3)
13.ಕಠೋರವಾದ ಕೈ! (2)
15.ಮೋಕ್ಷಕ್ಕೆ ಸಾಧಕವಾದ ಪರಮಾತ್ಮನ ಅರಿವು (4)
16.ಮುಚ್ಚಳವಿರುವ ಡಬ್ಬಿ (4)

ಮೇಲಿಂದ ಕೆಳಕ್ಕೆ
1.ಪದ ಹೇಳಿ ಗಳಿಸಿರುವ ಬಿಲ್ಲೆ (3)
2.ಬಿದಿರಿನ ತಟ್ಟಿಯನ್ನು ಹೀಗೂ ಹೇಳುವರು (3)
3.ಕ್ರೀಡಾಶೀಲ ವ್ಯಕ್ತಿಯಿವನು (3)
4.ಯಮನ ಹತ್ತಿರವಿರುವ ಜೋಡಿ (3)
6.ಗೆಲುವನ್ನು ಗಳಿಸುವುದಕ್ಕಾಗಿ ಕೈಗೊಳ್ಳುವ ಪ್ರಯಾಣ (5)
8.ಒಳ್ಳೆತನದ ಸೋಗಿನಲ್ಲಿ ಮೋಸಮಾಡುವವನು (5)
10.ಈತ ಎಚ್ಚರಗೊಂಡವನು (3)
11.ರಾಜಿಗೊಂದು ಪರ್ಯಾಯ ಪದ (3)
12.ಕರುವಿಗೆ ತೋರಿರುವ ದಯೆ (3)
14.ಈತ ವಿಲಾಸಪ್ರಿಯ (3)

1			2	■	3			4
	■	■		■		■	■	
5	6	■	7			■	8	9
■		■	■	■	■	■		■
■		■	■	■	■	■		■
■		■	■	■	■	■		■
10		■	11		12	■	13	14
	■	■		■		■	■	
15				■	16			

5584ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಸಂಸ್ಕೃತ 3.ವಸಂತ
5.ನವದಂಪತಿ 7.ತನುಜ
8.ತಾಕತ್ತು 11.ಉಗುರು
13.ವ್ಯವಕಲನ 15.ವನಿತೆ
16.ನಡುಪ್ರಾಯ

ಮೇಲಿಂದ ಕೆಳಕ್ಕೆ:
1.ಅಭಿಜಾತ 2.ತಲ್ಲೀನ
4.ಸಂಪ್ರತಿ 6.ದಂಡೆತ್ತು
8.ನುಡಿ 9.ತಾರಕ
10.ಹಂಗು 12.ರುಗ್ಣಾಲಯ
13.ವ್ಯಸನಿ 14.ನವೀನ

ಸುಡೊಕು 5970

				7		6		2
		5	2		9			
2	8			1			9	5
	5		7			8		
	2			8		5		9
8		6		9	1			
6				5		9		7
		8					5	
5		3		6		1		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5969 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಮುಂಬೈ ಧಾರಣೆ

ಶೇಂಗಾ 07-02-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1525)
ಒಂದು ವಾರದ ಡೆಲಿವರಿ	1485 (1520)
ಸೋಯಾ ಕಚ್ಚಾ	850 (843)
ಪಾಮ್ ವಾರದ ಡೆಲಿವರಿ	850 (848)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹62,450 (62,300)

ಬೆಳ್ಳಿ ಕೆ.ಜಿ ₹69,900 (70,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು 34



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,929
ಇಂದಿನ ಅಂತ್ಯ	21,930
▲	01
ದಿನದ ಗರಿಷ್ಠ	22,053

ವಿನಿಮಯ ದರ

$ ಡಾಲರ್	82.96
£ ಪೌಂಡ್	104.84
€ ಯುರೊ	89.36
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹78
ಮೈಸೂರು	
100ಕ್ಕೆ	₹587

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1480 (1515)
ಸೋಯಾ (ರಿಫೈನ್ಡ್)	₹890 (885)
ಸೂರ್ಯಕಾಂತಿ (ರಿಫೈನ್ಡ್)	₹910 (900)
ಪಾಮೋಲಿನ್	₹852 (850)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹308-456
ದ್ವಿತಳಿ (ಬಿ.ವಿ)	₹286-580

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹161.50
ಆರ್‌ಎಸ್‌ಎಸ್-5	₹156.50
ಗುಡ್ ಲಾಟ್	₹139.50

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ರೆಪೊ ದರ ಯಥಾಸ್ಥಿತಿ ಸಾಧ್ಯತೆ?

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಅವರ ನೇತೃತ್ವದಲ್ಲಿ ನಡೆದಿರುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯ ನಿರ್ಧಾರಗಳು ಗುರುವಾರ ಪ್ರಕಟವಾಗಲಿವೆ.

ಸದ್ಯ ರೆಪೊ ದರವು ಶೇ 6.5 ರಷ್ಟಿದೆ. ದೇಶದಲ್ಲಿ ಚಿಲ್ಲರೆ ಹಣದುಬ್ಬರವು ಶೇ 6ರ ಹತ್ತಿರದಲ್ಲಿದೆ. ಹಾಗಾಗಿ, ದ್ವೈಮಾಸಿಕ ಹಣಕಾಸು ನೀತಿ ಪರಾಮರ್ಶೆಯಲ್ಲಿ ರೆಪೊ ದರವನ್ನು ಶೇ6.5ರಲ್ಲಿಯೇ ಉಳಿಸಿಕೊಳ್ಳುವ ಸಾಧ್ಯತೆ ಇದೆ. ಇದರಿಂದ ಗೃಹ ಸಾಲದ ಇಎಂಐ ಇಳಿಕೆಯ ನಿರೀಕ್ಷೆಯಲ್ಲಿದ್ದ ಸಾಲಗಾರರಿಗೆ ನಿರಾಶೆಯಾಗುವುದು ಸಹಜ ಎಂದು ಮೂಲಗಳು ಹೇಳಿವೆ. ಹಣದುಬ್ಬರವನ್ನು ನಿಯಂತ್ರಿಸುವ ದೃಷ್ಟಿಯಿಂದ 2023ರ ಫೆಬ್ರುವರಿಯಲ್ಲಿ ನಡೆದ ಎಂಪಿಸಿ ಸಭೆಯಲ್ಲಿ ರೆಪೊ ದರವನ್ನು ಶೇ 6.25 ರಿಂದ ಶೇ 6.5ಕ್ಕೆ ಹೆಚ್ಚಿಸಲಾಗಿತ್ತು. ಆ ನಂತರ ನಡೆದ ಸಭೆಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ.

2023–24ನೇ ಹಣಕಾಸು ವರ್ಷದ ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು ಶೇ7.44ರಷ್ಟು ಗರಿಷ್ಠ ಮಟ್ಟದಲ್ಲಿ ದಾಖಲಾಗಿತ್ತು. ಡಿಸೆಂಬರ್‌ನಲ್ಲಿ ಶೇ5.69ರಷ್ಟು ದಾಖಲಾಗಿದೆ. ಹಣದುಬ್ಬರವನ್ನು ಶೇ 4ರಿಂದ ಶೇ6ರಲ್ಲಿ ನಿಯಂತ್ರಿಸಲು ಆರ್‌ಬಿಐ ಮಿತಿ ಹಾಕಿಕೊಂಡಿದೆ.

ಪವರ್ ಗ್ರಿಡ್‌ಗೆ ಶೇ 10.5 ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪವರ್ ಗ್ರಿಡ್ ಕಾರ್ಪೊರೇಷನ್ 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹4,028 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,645 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ತ್ರೈಮಾಸಿಕದಲ್ಲಿ ಲಾಭವು ಶೇ10.5ರಷ್ಟು ಏರಿಕೆ ಆಗಿದೆ. ಒಟ್ಟು ವರಮಾನವು ₹11,530 ಕೋಟಿಯಿಂದ ₹11,819 ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ಪ್ರತಿ ಈಕ್ವಿಟಿ ಷೇರಿಗೆ ₹4.50 ಲಾಭಾಂಶ ನೀಡಲು ಕಂಪನಿಯ ನಿರ್ದೇಶಕರ ಮಂಡಳಿಯು ಅನುಮೋದನೆ ನೀಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	42000-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಕುಮಟ	
ಬೆಟ್ಟೆ	40809-44009
ಚಿಪ್ಪು	26569-32099
ಕೋಕ	16099-27509
ಫ್ಯಾಕ್ಟರಿ	11509-21299
ಹಳೆಚಾಲಿ	35509-38009
ಹೊಸಚಾಲಿ	32509-34499
ಶಿವಮೊಗ್ಗ	
ಬೆಟ್ಟೆ	27069-55019
ಗೊರಬಲು	18005-37011
ರಾಶಿ	31799-48599
ಸರಕು	52000-83500
ಸಿದ್ದಾಪುರ	
ಬಿಳಿಗೋಟು	22899-31481
ಚಾಲಿ	33099-37009
ಕೋಕ	12189-31899
ಹೊಸಚಾಲಿ	29099-35899
ಕೆಂಪುಗೋಟು	25689-36099
ರಾಶಿ	44799-47319
ತಟ್ಟಿಬೆಟ್ಟೆ	36689-42099
ಶಿರಸಿ	
ಬೆಟ್ಟೆ	37269-44199
ಬಿಳಿಗೋಟು	21199-33333
ಚಾಲಿ	35209-39001
ಕೆಂಪುಗೋಟು	31698-31698
ರಾಶಿ	44899-48989

6.25 ಲಕ್ಷ ಕ್ವಿಂಟಲ್‌ಗೆ ಅನುಮತಿ: ದಾಸ್ತಾನು ಇರುವ ಪೂರ್ಣ ಕೊಬ್ಬರಿ ಖರೀದಿಸಲು ಒತ್ತಾಯ

ಉಂಡೆ ಕೊಬ್ಬರಿ ಖರೀದಿಗೆ ಮಿತಿ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಋತುವಿನಡಿ ಕೇಂದ್ರ ಸರ್ಕಾರವು ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆಯಲ್ಲಿ (ಎಂಎಸ್‌ಪಿ) ಒಟ್ಟು 6.25 ಲಕ್ಷ ಕ್ವಿಂಟಲ್ (62,500 ಟನ್) ಉಂಡೆ ಕೊಬ್ಬರಿ ಖರೀದಿಗೆ ನಿರ್ಧರಿಸಿದೆ.

ಕಳೆದ ಋತುವಿನಲ್ಲಿ ರಾಜ್ಯದ ರೈತರಿಂದ 5 ಲಕ್ಷ ಕ್ವಿಂಟಲ್ ಖರೀದಿಸಿತ್ತು. ಇದಕ್ಕೆ ಹೋಲಿಸಿದರೆ ಈ ವರ್ಷ ಹೆಚ್ಚುವರಿಯಾಗಿ 1.25 ಲಕ್ಷ ಕ್ವಿಂಟಲ್‌ನಷ್ಟು ಕೊಬ್ಬರಿ ಖರೀದಿಸಲಿದೆ.

ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಎಫ್‌ಎಕ್ಯೂ ಗುಣಮಟ್ಟದ ಕೊಬ್ಬರಿ ಖರೀದಿಗೆ ಒಟ್ಟು 48 ನೋಂದಣಿ ಕೇಂದ್ರಗಳನ್ನು ತೆರೆದಿದ್ದು, ಮೂರು ದಿನಗಳಿಂದ ನೋಂದಣಿ ಪ್ರಕ್ರಿಯೆ ನಡೆಯುತ್ತಿದೆ. ಕರ್ನಾಟಕದಲ್ಲಿ ನಾಫೆಡ್ ಖರೀದಿ ಏಜೆನ್ಸಿಯಾಗಿದೆ.

ರೈತರ ಆತಂಕ ಏನು?: ಕಳೆದ ವರ್ಷ ಫೆಬ್ರುವರಿಯಿಂದ ಜುಲೈವರೆಗೆ ಖರೀದಿ ಪ್ರಕ್ರಿಯೆ ನಡೆದಿತ್ತು. ರೈತರ ಒತ್ತಾಯದ ಮೇರೆಗೆ ಈ ಅವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿತ್ತು. ಈ ಬಾರಿ ಏಪ್ರಿಲ್‌ವರೆಗೆ ಮಾತ್ರವೇ ಖರೀದಿಗೆ ಸರ್ಕಾರ ಸಮಯ ನಿಗದಿಪಡಿಸಿರುವುದು ರೈತರನ್ನು ಆತಂಕದ ಮಡುವಿಗೆ ದೂಡಿದೆ.

ಅಂಕಿ ಅಂಶಗಳು

₹12,000 ಕ್ವಿಂಟಲ್‌ಗೆ ನಿಗದಿಯಾಗಿರುವ ಬೆಂಬಲ ಬೆಲೆ

₹1,500 ರಾಜ್ಯ ಸರ್ಕಾರದ ಪ್ರೋತ್ಸಾಹ ಧನ

1.33 ಲಕ್ಷ ಟನ್ ಕಳೆದ ವರ್ಷ ದೇಶದಲ್ಲಿ ಕೇಂದ್ರದಿಂದ ಖರೀದಿಸಿದ್ದ ಒಟ್ಟು ಕೊಬ್ಬರಿ

₹1,493 ಕೋಟಿ ಬೆಂಬಲ ಬೆಲೆಯಡಿ ಕಳೆದ ವರ್ಷ ರೈತರಿಗೆ ಪಾವತಿಸಿದ ಮೊತ್ತ

ನೋಂದಣಿ ಪ್ರಕ್ರಿಯೆ ಚುರುಕು

‘ನೋಂದಣಿ ಕೇಂದ್ರಗಳಲ್ಲಿ ಸರ್ವರ್ ಸಮಸ್ಯೆಯಿಲ್ಲ. ನೆಟ್‌ವರ್ಕ್ ಸಮಸ್ಯೆ ಇರುವ ಕೇಂದ್ರಗಳಲ್ಲಷ್ಟೇ ನೋಂದಣಿ ನಿಧಾನಗತಿಯಲ್ಲಿತ್ತು. ಅಂತಹ ಕೇಂದ್ರಗಳಲ್ಲಿ ಸಮಸ್ಯೆ ಸರಿಪಡಿಸಿ ಪ್ರಕ್ರಿಯೆಯನ್ನು ಚುರುಕುಗೊಳಿಸಲಾಗಿದೆ’ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಆರ್. ಶ್ರೀಧರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬುಧವಾರದವರೆಗೆ 3.60 ಲಕ್ಷ ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ 20,978 ರೈತರು ಹೆಸರು ನೋಂದಾಯಿಸಿದ್ದಾರೆ. ಇನ್ನು ಎರಡು– ಮೂರು ದಿನಗಳಲ್ಲಿ ಸರ್ಕಾರವು ಖರೀದಿಗೆ ನಿಗದಿಪಡಿಸಿರುವ ಮಿತಿಗೆ ಅನುಗುಣವಾಗಿ ನೋಂದಣಿ ಪ್ರಕ್ರಿಯೆಯು ಪೂರ್ಣಗೊಳ್ಳುವ ನಿರೀಕ್ಷೆಯಿದೆ’ ಎಂದರು.

> **ಬೆಂಬಲ ಬೆಲೆಯಡಿ ಖರೀದಿಸುವ ಕೊಬ್ಬರಿಯನ್ನು ಮಾರಾಟ ಮಾಡಿದ ಬಳಿಕ ಕೇಂದ್ರ ಸರ್ಕಾರವು ಮತ್ತೆ ರೈತರಿಂದ ಖರೀದಿ ಪ್ರಕ್ರಿಯೆ ಆರಂಭಿಸುವ ನಿರೀಕ್ಷೆಯಿದೆ**
> **ಜ್ಯೋತಿ ಪಾಟೀಲ್,** ನಾಫೆಡ್‌ನ ರಾಜ್ಯ ಮುಖ್ಯಸ್ಥೆ

ಸರ್ಕಾರವು ಕಳೆದ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಕೊಬ್ಬರಿಗೆ ಬೆಂಬಲ ಬೆಲೆ ಘೋಷಿಸಿತ್ತು. ದರ ಕುಸಿತದಿಂದ ಕಂಗಾಲಾಗಿದ್ದ ರೈತರು ಆಗಿನಿಂದಲೇ ನಾಫೆಡ್ ಕೇಂದ್ರಗಳಲ್ಲಿ ಮಾರಾಟಕ್ಕೆ ದಾಸ್ತಾನು ಮಾಡಿದ್ದಾರೆ.

ಆದರೆ, 6.25 ಲಕ್ಷ ಕ್ವಿಂಟಲ್ ಖರೀದಿಗೆ ಮಿತಿ ನಿಗದಿಪಡಿಸಿದೆ. ಈ ಮಿತಿ ಪೂರ್ಣಗೊಂಡ ಬಳಿಕ ಹೆಚ್ಚುವರಿ ಖರೀದಿಗೆ ಅವಕಾಶ ಇರುವುದಿಲ್ಲ. ಅಲ್ಲದೆ, ಖರೀದಿ ಪ್ರಕ್ರಿಯೆಗೆ ಮೂರು ತಿಂಗಳಷ್ಟೇ ಸಮಯ ನಿಗದಿಪಡಿಸಲಾಗಿದೆ. ಇದು ರೈತರ ಆತಂಕಕ್ಕೆ ಕಾರಣವಾಗಿದ್ದು, ನೋಂದಣಿಗಾಗಿ ಸಾಲುಗಟ್ಟಿ ನಿಲ್ಲುವಂತಾಗಿದೆ.

ಎಂದಿನಿಂದ ಖರೀದಿ?: ‘ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಪೋರ್ಟಲ್‌ನಲ್ಲಿ ನೋಂದಣಿಯಾದ ರೈತರ ದತ್ತಾಂಶವು ನಾಫೆಡ್‌ನ ಇ-ಸಮೃದ್ಧಿ ಪೋರ್ಟಲ್‌ಗೆ ರವಾನೆಯಾದ ಬಳಿಕ ಖರೀದಿ ಪ್ರಕ್ರಿಯೆಯನ್ನು ಆರಂಭಿಸಲಾಗುವುದು’ ಎಂದು ನಾಫೆಡ್‌ನ ರಾಜ್ಯ ಮುಖ್ಯಸ್ಥೆ ಜ್ಯೋತಿ ಪಾಟೀಲ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮಾನದಂಡ ಮಾರ್ಪಾಡಿಗೆ ಮನವಿ

‘ನನಗೆ ಆರು ಎಕರೆ ತೋಟವಿದ್ದು, 300 ತೆಂಗಿನ ಮರಗಳಿವೆ. 50 ಸಾವಿರಕ್ಕೂ ಹೆಚ್ಚು ಸಿಪ್ಪೆ ಕೊಬ್ಬರಿ ದಾಸ್ತಾನಿದೆ. ಇದನ್ನು ಸುಲಿದರೆ ಸುಮಾರು 75 ಕ್ವಿಂಟಲ್‌ನಷ್ಟು ಕೊಬ್ಬರಿ ಸಿಗಲಿದೆ’ ಎಂದು ಹಾಸನ ಜಿಲ್ಲೆಯ ಚನ್ನರಾಯ-ಪಟ್ಟಣ ತಾಲ್ಲೂಕಿನ ಕಾವಲ ಹೊಸೂರು ಗ್ರಾಮದ ತೆಂಗು ಬೆಳೆಗಾರ ಹೊಂಗ್ಯಪ್ಪ ತಿಳಿಸಿದರು.

‘ಆದರೆ, ಸರ್ಕಾರ ನಿಗದಿಪಡಿ-ಸಿರುವ ಮಾನದಂಡದ ಅನ್ವಯ ಐದು ಎಕರೆ ತೋಟ ಇದ್ದವರಿಂದ ಗರಿಷ್ಠ 18 ಕ್ವಿಂಟಲ್‌ನಷ್ಟು ಮಾತ್ರವೇ ಕೊಬ್ಬರಿ ಖರೀದಿಸಲಾಗುತ್ತದೆ. ಒಂದು ವರ್ಷದಿಂದಲೂ ಕೊಬ್ಬರಿ ದಾಸ್ತಾನು ಇಟ್ಟಿದ್ದೇನೆ. ಉಳಿದ ಕೊಬ್ಬರಿಯನ್ನು ಏನು ಮಾಡಬೇಕು ಎಂಬುದು ತೋಚುತ್ತಿಲ್ಲ. ರೈತರ ಬಳಿ ದಾಸ್ತಾನು ಇರುವ ಸಂಪೂರ್ಣ ಕೊಬ್ಬರಿಯನ್ನು ಸರ್ಕಾರ ಖರೀದಿಸಬೇಕು’ ಎಂದು ಆಗ್ರಹಿಸಿದರು.

ಎರಡನೇ ದಿನವೂ ಪೇಟಿಎಂ ಷೇರು ಚೇತರಿಕೆ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರು ಮೌಲ್ಯವು ಬುಧವಾರವೂ ಏರಿಕೆ ಕಂಡಿದೆ.

ಪೇಟಿಎಂ ಪೇಮೆಂಟ್ ಬ್ಯಾಂಕ್‌ಗೆ ವಿಧಿಸಿರುವ ನಿರ್ಬಂಧ ಕುರಿತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಆರ್‌ಬಿಐ ಜೊತೆ ಕಂಪನಿಯ ಸಿಇಒ ವಿಜಯ್ ಶೇಖರ್ ಶರ್ಮಾ ಮಾತುಕತೆ ನಡೆಸಿದ ನಂತರ ಷೇರುಗಳು ಏರಿಕೆಯ ಹಾದಿ ಹಿಡಿದಿವೆ.

ಬಿಎಸ್‌ಇಯಲ್ಲಿ ಪೇಟಿಎಂ ಷೇರಿನ ಮೌಲ್ಯ ಶೇ 10 ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 9.99ರಷ್ಟು ಏರಿಕೆ ಕಂಡಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹496.75 ಮತ್ತು ₹496.25ಕ್ಕೆ ತಲುಪಿದೆ. ಎರಡು ದಿನಗಳಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ₹3,720 ಕೋಟಿ ಸೇರ್ಪಡೆಯಾಗಿದೆ.

ಸೆನ್ಸೆಕ್ಸ್ ಇಳಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 34 ಅಂಶ ಇಳಿಕೆಯಾಗಿ 72,152ರಲ್ಲಿ ಸ್ಥಿರಗೊಂಡಿತು. ಹೂಡಿಕೆದಾರರು ಬ್ಯಾಂಕಿಂಗ್ ಮತ್ತು ಫಾರ್ಮಾ ಷೇರುಗಳನ್ನು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದ್ದರಿಂದ ಟಿಸಿಎಸ್, ಇನ್ಫೊಸಿಸ್ ಮತ್ತು ಟೆಕ್ ಮಹೀಂದ್ರ ಷೇರುಗಳು ಕುಸಿತ ಕಂಡವು. ಅಲ್ಲದೇ, ಆರ್‌ಬಿಐ ಗುರುವಾರ ರೆಪೊ ದರದ ಬಗ್ಗೆ ಪ್ರಕಟಿಸಲಿರುವ ನಿರ್ಧಾರದತ್ತ ಹೂಡಿಕೆದಾರರು ಚಿತ್ತ ಹರಿಸಿದ್ದು ಕೂಡ ಇಳಿಕೆಗೆ ಕಾರಣವಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕಟ್ಟಡ ಕುಸಿತ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಊಟಿಯಲ್ಲಿ ನಿರ್ಮಾಣ ಹಂತದ ಕಟ್ಟಡವೊಂದು ಬುಧವಾರ ಕುಸಿದು ಆರು ಮಹಿಳಾ ಕಾರ್ಮಿಕರು ಮೃತಪಟ್ಟಿದ್ದಾರೆ. ಅವಶೇಷದಡಿ ಸಿಲುಕಿದವರ ರಕ್ಷಣೆಗೆ ಕಾರ್ಯಾಚರಣೆ ನಡೆಯುತ್ತಿದೆ – ಪಿಟಿಐ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9035482999, 6366430366

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ : 7019132200, 080-25300714

Multiple Vacancy
REQUIRED, EXPERIENCED Telecaller & LoanRecovery Supervisor For BankLoan collection. Salary 30,000+ Incentive Contact: 9620206756

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ
Travel
ಸುಸಜ್ಜಿತ ವ್ಯವಸ್ಥೆಗಳೊಂದಿಗೆ 20.02.2024 ರಿಂದ 11 ದಿನಗಳ ಗುಜರಾತ್ ಮಹಾಕಾಳೇಶ್ವರ ಓಂಕಾರೇಶ್ವರ. 24.03.2024 12.04.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ. 11.03.2024 12.04.2024 ರಿಂದ 11 ದಿನಗಳ ಅಯೋಧ್ಯಾ,ಮುಕ್ತಿನಾಥ,ಕಾಶಿ. 25.04.2024 ರಿಂದ ವೈಷ್ಣೋದೇವಿ,ಕಾಶ್ಮೀರ್. 17.05.2024 26.05.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 12.04.2024 ರಿಂದ 11/16 ದಿನಗಳ ಪುರಿ,ಕೋಲ್ಕತಾ ಡಾರ್ಜಲಿಂಗ್ ಗ್ಯಾಂಗ್‌ಟಾಕ್/ ನೇಪಾಳ. 27.02.2024 11.03.2024 ರಿಂದ 5 ದಿನಗಳ ದುಬೈ,ಅಬುದಾಬಿ. 24.03.2024 25.04.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 25.04.2024 30.05.2024 ರಿಂದ 13/16 ದಿನಗಳ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

CONNECT
Classroom Desks
Officetech ISO 9001-2015 BIFMA Certified Company

STRONG DESIGN GUARANTEES LIFETIME INVESTMENT
OTS OFFICETECH SYSTEMS PVT. LTD.
No. 6/8, Commanders Place, Near Richmond Circle, Raja Ram Mohan Roy Road, Bangalore - 560025.
Mob: 98450 48194, 98450 48053
(080) 2222 9111, 2212 1500, 98457 57501 www.officetech.in
marketing@officetech.in | otsofficetech@gmail.com
ISO 9001-2015 Certified & BIFMA Certified Branded Company
Karnataka | Kerala | Tamilnadu | Andhra Pradesh | Telangana | Goa | Maharashtra

★ಶ್ರೇಯಸ್ ಟೂರ್ಸ್★ 02.03.2024,12.04.2024 10ದಿನಗಳು ಅಖಂಡನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ) 13.03.2024,13.04.2024 6ದಿನಗಳು ಭೂತಾನ್ ರಾಷ್ಟ್ರದ ತಿಂಪೂ,ಪಾರೋ,ಪುನಕಾ ಪೂಚಲಿಂಗ್.20.03.2024 12/20ದಿನಗಳು ಈಶಾನ್ಯ ಭಾರತದ (ಸೆವೆನ್‌ಸಿಸ್ಟರ್ಸ) ಅಸ್ಸಾಂ.ಅರುಣಾಚಲ. ಮೇಘಾಲಯ.ಮಣಿಪುರ.ತ್ರಿಪುರ. ಮಿಝೋರಾಂ,ನಾಗಲ್ಯಾಂಡ್. 9743351212, 9206979202, 8792319181, 6366322639

8 ದಿನಗಳ ಇಂಡೋನೇಷ್ಯಾ ಮತ್ತು ಮಲೇಷಿಯಾ. 6 ದಿನಗಳ ಬಾಲಿ. 7 ದಿನಗಳ ಸಿಂಗಾಪೂರ್ ಮತ್ತು ಮಲೇಷಿಯಾ. 18 ದಿನಗಳ ಗ್ರ್ಯಾಂಡ್ ಯು.ಕೆ ಮತ್ತು ಯುರೋಪ್ ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ,ಬೆಂಗಳೂರು.04. 9900080796, 9900080792

ವಿಮಾನದಲ್ಲಿ ಕಾಶಿ ಅಯೋಧ್ಯ 20.03.2024, 7 ದಿನಗಳು. ಚಾರಧಾಮ್ ಯಾತ್ರೆ 23.05.2024 ಮತ್ತು 05.06.2024, 13ದಿನಗಳು. ಸಂಪರ್ಕಿಸಿ. ನಿಸರ್ಗ ಹಾಲಿಡೇಸ್ ಬೆಂಗಳೂರು. 9880241669, 9900664943

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ನೀವು ನಿಮ್ಮ ಮನೆ/ಸೈಟ್ ಮಾರಾಟ/ ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
ರಿಯಲ್ ಎಸ್ಟೇಟ್
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ! ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನ್ಯಾಯಮೂರ್ತಿಗಳ ನಿವೃತ್ತಿ ವಯಸ್ಸು ಹೆಚ್ಚಳಕ್ಕೆ ಕೇಂದ್ರದ ಆಕ್ಷೇಪ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ನಿವೃತ್ತಿ ವಯಸ್ಸನ್ನು ಕಾರ್ಯಕ್ಷಮತೆಯ ಆಧಾರದಲ್ಲಿ ವಿಸ್ತರಿಸುವುದು ಕಾರ್ಯಸಾಧು ಅಲ್ಲ ಎಂದು ಕೇಂದ್ರ ಸರ್ಕಾರವು ಸಂಸತ್ತಿನ ಸಮಿತಿಯೊಂದಕ್ಕೆ ತಿಳಿಸಿದೆ. ನಿವೃತ್ತಿ ವಯಸ್ಸನ್ನು ಈ ರೀತಿಯಲ್ಲಿ ಹೆಚ್ಚಿಸುವುದರಿಂದ ಸಂಸತ್ತಿನ ಅಧಿಕಾರವು ಇನ್ನಷ್ಟು ಕುಗ್ಗುತ್ತದೆ, ಅನಗತ್ಯವಾದ ಪಕ್ಷಪಾತಕ್ಕೆ ಇದು ದಾರಿ ಮಾಡಿಕೊಡಬಹುದು ಎಂದು ಕೂಡ ಕೇಂದ್ರ ವಿವರಿಸಿದೆ.

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ನಿವೃತ್ತಿ ವಯಸ್ಸನ್ನು ಈಗಿರುವುದಕ್ಕಿಂತ ಹೆಚ್ಚು ಮಾಡಲು ಕಾರ್ಯಕ್ಷಮತೆಯ ಮೌಲ್ಯಮಾಪನ ವ್ಯವಸ್ಥೆ ಜಾರಿಗೆ ಬರಬೇಕು ಎಂದು ಕಾನೂನು ಮತ್ತು ಸಿಬ್ಬಂದಿ ಕುರಿತ ಸಂಸತ್ತಿನ ಸ್ಥಾಯಿ ಸಮಿತಿಯು ಶಿಫಾರಸು ಮಾಡಿತ್ತು.

ಈಗಿರುವ ನಿಯಮಗಳ ಪ್ರಕಾರ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು 65ನೆಯ ವಯಸ್ಸಿಗೆ ನಿವೃತ್ತರಾಗುತ್ತಾರೆ, ಹೈಕೋರ್ಟ್ ನ್ಯಾಯ-ಮೂರ್ತಿಗಳು 62ನೆಯ ವಯಸ್ಸಿನಲ್ಲಿ ನಿವೃತ್ತರಾಗುತ್ತಾರೆ.

‘ನ್ಯಾಯಮೂರ್ತಿಗಳ ನಿವೃತ್ತಿಯ ವಯಸ್ಸನ್ನು ಹೆಚ್ಚು ಮಾಡುವ ಸಂದರ್ಭದಲ್ಲಿ, ಅವರ ಆರೋಗ್ಯ ಪರಿಸ್ಥಿತಿ, ಅವರು ನೀಡಿದ ತೀರ್ಪುಗಳ ಗುಣಮಟ್ಟ, ತೀರ್ಪುಗಳ ಸಂಖ್ಯೆಯನ್ನು ಆಧರಿಸಿ ಅವರ ಕಾರ್ಯಕ್ಷಮ-ತೆಯ ಮರುಮೌಲ್ಯಮಾಪನ ಮಾಡಬಹುದು. ಇದಕ್ಕಾಗಿ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಒಂದು ವ್ಯವಸ್ಥೆಯನ್ನು ರೂಪಿಸಬಹುದು’ ಎಂದು ಬಿಜೆಪಿಯ ಸುಶೀಲ್ ಕುಮಾರ್ ಮೋದಿ ನೇತೃತ್ವದ ಸಮಿತಿಯು ಶಿಫಾರಸು ಮಾಡಿತ್ತು.

ಈ ಶಿಫಾರಸಿಗೆ ಉತ್ತರವಾಗಿ ಕೇಂದ್ರ ಸರ್ಕಾರವು, ನಿವೃತ್ತಿಯ ವಯಸ್ಸನ್ನು ಹೆಚ್ಚು ಮಾಡುವುದಕ್ಕೆ ಕಾರ್ಯಕ್ಷಮತೆಯ ಮೌಲ್ಯ-ಮಾಪನವನ್ನು ಆಧರಿಸುವುದು ‘ಕಾರ್ಯಸಾಧು ಆಗಲಿಕ್ಕಿಲ್ಲ ಮತ್ತು ಉದ್ದೇಶಿತ ಫಲಿತಾಂಶವನ್ನು ಅದು ನೀಡದೆಯೂ ಇರಬಹುದು’ ಎಂದು ಹೇಳಿದೆ.

ಶಿಫಾರಸು ಜಾರಿಗೆ ಬಂದರೆ ‘ಸುಪ್ರೀಂ ಕೋರ್ಟ್‌ನ ಕೊಲಿಜಿಯಂಗೆ ನ್ಯಾಯಮೂರ್ತಿಗಳ ಮೌಲ್ಯಮಾಪನ ನಡೆಸಲು ಅಧಿಕಾರ ನೀಡಿದಂತಾಗುತ್ತದೆ. ಇದರಿಂದ ಸಂಸತ್ತಿನ ಅಧಿಕಾರವು ಇನ್ನಷ್ಟು ಕಡಿಮೆ ಆಗುತ್ತದೆ’ ಎಂದು ಕೇಂದ್ರ ಹೇಳಿದೆ. ಕೇಂದ್ರವು ನೀಡಿದ ಪ್ರತಿಕ್ರಿಯೆ-ಯನ್ನು ಪರಿಗಣಿಸಿದ ನಂತರದಲ್ಲಿ ತಾನು ಶಿಫಾರಸಿನ ವಿಚಾರವಾಗಿ ಮುಂದಡಿ ಇರಿಸಲು ಬಯಸುವುದಿಲ್ಲ ಎಂದು ಸಮಿತಿ ಹೇಳಿದೆ. ಸಮಿತಿಯು ಇದನ್ನು ಲೋಕಸಭೆಗೆ ಬುಧವಾರ ತಿಳಿಸಿದೆ.

ಕಬ್ಬಿನ ಬಾಕಿ ಪಾವತಿ ಶೇ 99 ಗುರಿ ಸಾಧನೆ

ನವದೆಹಲಿ (ಪಿಟಿಐ): ‘ದೇಶದಲ್ಲಿ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಕಬ್ಬಿನ ಬಾಕಿ ಮೊತ್ತ ಪಾವತಿಯಲ್ಲಿ ಶೇ 99ರಷ್ಟು ಗುರಿ ಸಾಧನೆಯಾಗಿದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಬುಧವಾರ ಲೋಕಸಭೆಯಲ್ಲಿ ಮಾತನಾಡಿದ ಅವರು, ‘₹1.15 ಲಕ್ಷ ಕೋಟಿ ಬಾಕಿ ಮೊತ್ತದ ಪೈಕಿ ₹1.14 ಲಕ್ಷ ಕೋಟಿಯನ್ನು ಪಾವತಿಸಲಾಗಿದೆ. ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದನಾ ಸಾಮರ್ಥ್ಯವೂ ಹೆಚ್ಚಿದೆ. ಸಹಕಾರ ವಲಯದಲ್ಲಿರುವ ಕಾರ್ಖಾನೆಗಳು ಲಾಭದಲ್ಲಿದ್ದು, ಅಲ್ಲಿನ ನೌಕರರಿಗೆ ಉದ್ಯೋಗದ ಭದ್ರತೆ ಸಿಕ್ಕಿದೆ’ ಎಂದು ಹೇಳಿದರು.

ಉತ್ತರಪ್ರದೇಶದಲ್ಲಿ ಮೂರು ಕಾರ್ಖಾನೆಗಳಿಂದ ರೈತರಿಗೆ ₹516 ಕೋಟಿ ಬಾಕಿ ಪಾವತಿಯಾಗಿಲ್ಲ. ಆ ಕಾರ್ಖಾನೆಗಳ ವಿರುದ್ಧ ಕ್ರಮಕೈಗೊಳ್ಳ-ಲಾಗುವುದು ಎಂದರು.

ಪ್ರಕರಣದ ತನಿಖೆಗೆ ಸಮಿತಿ ರಚಿಸಿದ ಸರ್ಕಾರ

ಪಟಾಕಿ ಕಾರ್ಖಾನೆ ಸ್ಫೋಟ: ಮೂವರ ಬಂಧನ

ಹರ್ದಾ/ಭೋಪಾಲ್/ಇಂದೋರ್ (ಪಿಟಿಐ): ಮಧ್ಯಪ್ರದೇಶದ ಹರ್ದಾ ಪಟ್ಟಣದ ಪಟಾಕಿ ಕಾರ್ಖಾನೆಯಲ್ಲಿ ಮಂಗಳವಾರ ಸಂಭವಿಸಿದ್ದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಖಾನೆಯ ಇಬ್ಬರು ಮಾಲೀಕರು ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಮಾಲೀಕರಾದ ರಾಜೇಶ್ ಅಗರ್ವಾಲ್, ಸೋಮೇಶ್ ಅಗರ್ವಾಲ್ ಹಾಗೂ ಕಾರ್ಖಾನೆಯ ವ್ಯವಸ್ಥಾಪಕ ರಫಿಕ್ ಖಾನ್ ಬಂಧಿತರು ಎಂದು ಹರ್ದಾ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಕಾಂಚನ್ ಸುದ್ದಿಗಾರರಿಗೆ ತಿಳಿಸಿದರು. ಆರೋಪಿಗಳ ವಿರುದ್ಧ ಐಪಿಸಿ ಕಲಂ 304, 308, 34ರ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

ತನಿಖೆಗೆ ಮೂವರ ಸಮಿತಿ ರಚನೆ: ಪ್ರಕರಣದ ತನಿಖೆಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಗೃಹ) ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನು ಮಧ್ಯಪ್ರದೇಶ ಸರ್ಕಾರ ರಚಿಸಿದೆ. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ (ಗುಪ್ತಚರ) ಮತ್ತು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಸಮಿತಿಯ ಇತರ ಸದಸ್ಯರಾಗಿದ್ದಾರೆ. ಘಟನೆ ತಡೆಯಲು ನಿರ್ಲಕ್ಷ್ಯವಹಿಸಿದ ಅಧಿಕಾರಿಗಳನ್ನು ಗುರುತಿಸಿ, ಅವರಿಗೆ ಜವಾಬ್ದಾರಿ ನಿಗದಿಪಡಿಸುವ ಹೊಣೆಯೂ ಸಮಿತಿ ಮೇಲಿದೆ ಎಂದು ಮೂಲಗಳು ತಿಳಿಸಿವೆ.



ಹರ್ದಾದಲ್ಲಿ ಪಟಾಕಿ ದುರಂತ ಸಂಭವಿಸಿದ ಪ್ರದೇಶಕ್ಕೆ ಬುಧವಾರ ಭೇಟಿ ನೀಡಿದ ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಪರಿಶೀಲನೆ ನಡೆಸಿದರು —ಪಿಟಿಐ ಚಿತ್ರ

ಸ್ಫೋಟಕ್ಕೆ ಕಾರಣ ಇನ್ನೂ ತಿಳಿದು ಬಂದಿಲ್ಲ. ದುರಂತದಲ್ಲಿ ಒಟ್ಟು 11 ಮಂದಿ ಮೃತಪಟ್ಟು, 174 ಮಂದಿ ಗಾಯಗೊಂಡಿದ್ದರು. ಇವರಲ್ಲಿ 34 ಮಂದಿಯನ್ನು ಚಿಕಿತ್ಸೆಗಾಗಿ ಭೋಪಾಲ್ ಮತ್ತು ಹೋಶಂಗಾಬಾದ್ ಆಸ್ಪತ್ರೆಗೆ ದಾಖಲಿಸಲಾಗಿದೆ. 140 ಮಂದಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆರು ಗೋದಾಮಿಗೆ ಬೀಗ: ಪಟಾಕಿ ದುರಂತದ ಬೆನ್ನಲ್ಲೇ ತೀವ್ರ ಕಾರ್ಯಾಚರಣೆ ನಡೆಸಿದ ಇಂದೋರ್ ಜಿಲ್ಲಾಡಳಿತವು ನಿಯಮ ಮೀರಿ ಪಟಾಕಿ ಸಂಗ್ರಹಿಸಿದ್ದ ಆರು ಪಟಾಕಿ ಗೋದಾಮುಗಳಿಗೆ ಬೀಗ ಜಡಿದಿದೆ.

ಆರು ಗೋದಾಮುಗಳಲ್ಲಿ ಒಂದು ವಸತಿ ಪ್ರದೇಶದಲ್ಲಿದ್ದರೆ, ಇತರ ಗೋದಾಮುಗಳು ಅನುಮತಿ ಪಡೆದ-ದ್ದಕ್ಕಿಂತ ಹೆಚ್ಚು ಪಟಾಕಿಗಳನ್ನು ಸಂಗ್ರ-ಹಿಸಿದ್ದವು. ಅಲ್ಲದೆ ಅಗತ್ಯ ರಕ್ಷಣಾ ಮತ್ತು ಭದ್ರತಾ ವ್ಯವಸ್ಥೆ ಹೊಂದಿರಲಿಲ್ಲ ಎಂದು ಇಂದೋರ್ ಜಿಲ್ಲಾಧಿಕಾರಿ ಆಶಿಶ್ ಸಿಂಗ್ ತಿಳಿಸಿದ್ದಾರೆ.

ಎಸ್.ಪಿ ವರ್ಗಾವಣೆ: ದುರಂತ ಸಂಭವಿಸಿದ ಬೆನ್ನಲ್ಲೇ ಹರ್ದಾದ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಕಾಂಚನ್ ಅವರನ್ನು ಸರ್ಕಾರ ಭೋಪಾಲ್‌ನಲ್ಲಿರುವ ರಾಜ್ಯ ಪೊಲೀಸ್ ಪ್ರಧಾನ ಕಚೇರಿಗೆ ವರ್ಗಾಯಿಸಿ ಆದೇಶ ಹೊರಡಿಸಿದೆ.

ಮೀಸಲಾತಿ: ಉಪ ವರ್ಗೀಕರಣಕ್ಕೆ ಕೇಂದ್ರ ಸರ್ಕಾರದ ಬೆಂಬಲ

ನವದೆಹಲಿ (ಪಿಟಿಐ): ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಉಪ ವರ್ಗೀಕರಣ ತರುವುದಕ್ಕೆ ತನ್ನ ಬೆಂಬಲ ಇದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ.

ಮೀಸಲಾತಿ ನೀತಿಯಲ್ಲಿ ತನಗೆ ಬದ್ಧತೆ ಇದೆ, ನೂರಾರು ವರ್ಷಗಳ ಕಾಲ ತಾರತಮ್ಯ ಅನುಭವಿಸಿದವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವ ಕ್ರಮ ಇದು ಎಂದು ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಉಪ ವರ್ಗೀಕರಣ ತರುವ ಅಧಿಕಾರವು ರಾಜ್ಯಗಳಿಗೆ ಇಲ್ಲ ಎಂದು 2004ರ ತೀರ್ಪಿನ ಸಿಂಧುತ್ವವನ್ನು ಪರಿಶೀಲಿಸುತ್ತಿದೆ.

ಉಪ ವರ್ಗೀಕರಣವು ಮೀಸಲಾತಿಯ ಉದ್ದೇಶವನ್ನು ಮುಂದಕ್ಕೆ ಒಯ್ಯಲು ನೆರವಾಗುತ್ತದೆ ಎಂದು ಕೇಂದ್ರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದ್ದಾರೆ. ಇ.ವಿ. ಚಿನ್ನಯ್ಯ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ವಿರೋಧಿಸುವುದಾಗಿ ತಿಳಿಸಿದ್ದಾರೆ.

‘ಶತಮಾನಗಳ ಕಾಲ ತಾರತಮ್ಯ ಕಂಡಿರುವ ಹಿಂದುಳಿದ ವರ್ಗಗಳಿಗೆ ಬೆಂಬಲವಾಗಿ ನಿಲ್ಲುವುದು, ಅವಕಾಶ ಗಳಲ್ಲಿ ಸಮಾನತೆಯನ್ನು ತರುವುದು ಮೀಸಲಾತಿಯ ಹಿಂದಿನ ಉದ್ದೇಶ’ ಎಂದು ಮೆಹ್ತಾ ವಿವರಿಸಿದ್ದಾರೆ. ಪರಿಶಿಷ್ಟ ಜಾತಿಗಳಲ್ಲಿ ಉಪ ವರ್ಗೀಕರಣವು ಸಂವಿಧಾನದ 14ನೆಯ ವಿಧಿಗೆ ವಿರುದ್ಧವಾಗಿದೆ ಎಂದು ಚಿನ್ನಯ್ಯ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಹೇಳಿತ್ತು.

2004ರ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಇರುವ ಜಾತಿಗಳನ್ನು ಅಲ್ಲಿಂದ ತೆಗೆಯುವ ಅಧಿಕಾರ ಇರುವುದು ಸಂಸತ್ತಿಗೆ ಮಾತ್ರವೇ ವಿನಾ ವಿಧಾನ ಮಂಡಲಗಳಿಗೆ ಅಲ್ಲ ಎಂದು ಹೇಳಿತ್ತು.

ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಒಳ ವರ್ಗೀಕರಣಕ್ಕೆ ಅವಕಾಶ ಕಲ್ಪಿಸಬಹುದೇ, ಇಂತಹ ಉಪ ವರ್ಗೀಕರಣಕ್ಕೆ ರಾಜ್ಯಗಳಿಗೆ ಅವಕಾಶ ಕಲ್ಪಿಸುವ ಕಾನೂನನ್ನು ವಿಧಾನಸಭೆಗಳು ರೂಪಿಸಬಹುದೇ ಎಂಬ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್ ಪರಿಶೀಲನೆಗೆ ಒಳಪಡಿಸಿದೆ.

‘ಅವಕಾಶಗಳಲ್ಲಿನ ಸಮಾನತೆಯ ಪರಿಕಲ್ಪನೆಯು ಎರಡು ಹಂತಗಳಲ್ಲಿ ಕಾರ್ಯರೂಪಕ್ಕೆ ಬರುತ್ತದೆ. ಮೊದಲನೆಯ ಹಂತವು ಸಾಮಾನ್ಯ ವರ್ಗ ಹಾಗೂ ಹಿಂದುಳಿದ ವರ್ಗಗಳ ನಡುವೆ; ಎರಡನೆಯ ಹಂತವು, ಹಿಂದುಳಿದ ವರ್ಗಗಳ ನಡುವೆ ಕಾರ್ಯರೂಪಕ್ಕೆ ಬರುತ್ತದೆ. ಚಿನ್ನಯ್ಯ ಪ್ರಕರಣದಲ್ಲಿ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳನ್ನು ಒಂದೇ ಕಡೆ ಸೇರಿಸಿರುವುದು ಅವಕಾಶಗಳ ಸಮಾನತೆಯ ಖಾತರಿಗೆ ಅಡ್ಡಿ’ ಎಂದು ಮೆಹ್ತಾ ಹೇಳಿದ್ದಾರೆ.

ಇಂಡಿಯನ್ ಸೂಪರ್ ಲೀಗ್: ಮಿಂಚಿದ ರ್‍ಯಾನ್ ವಿಲಿಯಮ್ಸ್

ಬಿಎಫ್‌ಸಿಗೆ ಮಣಿದ ಚೆನ್ನೈಯಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರ್‍ಯಾನ್ ವಿಲಿಯಮ್ಸ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 1–0ಯಿಂದ ಚೆನ್ನೈಯಿನ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಇಲ್ಲಿನ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ರ್‍ಯಾನ್ ಅವರು 62ನೇ ನಿಮಿಷದಲ್ಲಿ ಗೆಲುವಿನ ಗೋಲು ದಾಖಲಿಸಿದರು. ಈ ಗೆಲುವಿನಿಂದಿಗೆ ಬಿಎಫ್‌ಸಿ ತಂಡವು ಪಾಯಿಂಟ್ ಪಟ್ಟಿಯಲ್ಲಿ 6ನೇ ಸ್ಥಾನಕ್ಕೆ ಬಡ್ತಿ ಪಡೆದಿದೆ.

ಈತನಕ 14 ಪಂದ್ಯಗಳನ್ನು ಆಡಿರುವ ಬಿಎಫ್‌ಸಿ ಮೂರರಲ್ಲಿ ಗೆಲುವು ಪಡೆದಿದೆ. ಐದು ಪಂದ್ಯಗಳಲ್ಲಿ ಡ್ರಾ ಸಾಧಿಸಿದ್ದರೆ, ಉಳಿದ ಆರರಲ್ಲಿ ಸೋತು ಒಟ್ಟು 14 ಪಾಯಿಂಟ್ ಸಂಪಾದಿಸಿದೆ. ಚೆನ್ನೈಯಿನ್ ತಂಡವು ಆಡಿರುವ 13 ಪಂದ್ಯಗಳಲ್ಲಿ ತಲಾ ಮೂರು ಪಂದ್ಯಗಳಲ್ಲಿ ಜಯ ಹಾಗೂ ಡ್ರಾ ಸಾಧಿಸಿದ್ದರೆ, ಉಳಿದ 7 ಪಂದ್ಯಗಳಲ್ಲಿ ಪರಾಭವಗೊಂಡು 12 ಅಂಕದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದೆ.

ಹೈದರಾಬಾದ್ ಎಫ್‌ಸಿಯಿಂದ ಈಚೆಗೆ ಬಿಎಫ್‌ಸಿ ತೆಕ್ಕೆಗೆ ಬಂದ ನಿಖಿಲ್ ಪೂಜಾರಿ ಮತ್ತು ಚಿಂಗಂಬಮ್ ಶಿವಾಲ್ಡೋ ಸಿಂಗ್ ಅವರಿಗೆ ಬಿಎಫ್‌ಸಿ ಮುಖ್ಯ ಕೋಚ್ ಗೆರಾರ್ಡ್ ಜರಗೋಜಾ ಆಡುವ ತಂಡದಲ್ಲಿ ಅವಕಾಶ ನೀಡಿದರು.

ಗೋಲು ಗಳಿಸಿದ ಸಂಭ್ರಮದಲ್ಲಿ ಬೆಂಗಳೂರು ಎಫ್‌ಸಿ ತಂಡದ ರ್‍ಯಾನ್ ವಿಲಿಯಮ್ಸ್ –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಪಂದ್ಯದ ಆರಂಭದಿಂದಲೂ ರಕ್ಷಣಾತ್ಮಕವಾಗಿ ಆಟವಾಡಿದ ಬಿಎಫ್‌ಸಿ ಆಟಗಾರರಿಗೆ ಎದುರಾಳಿ ಆಟಗಾರರು ತೀವ್ರ ಸವಾಲು ಒಡ್ಡಿದರು. ಒಂದು ಹಂತದಲ್ಲಿ ಚೆನ್ನೈಯಿನ್‌ನ ಆಕಾಶ್ ಸಾಂಗ್ವಾನ್ ಮತ್ತು ರಹೀಮ್ ಅಲಿ ಅವರು ನಿಖಿಲ್ ಅವರಿಗೆ ಪದೇ ಪದೇ ಸವಾಲು ಒಡ್ಡಿದರು. ಆದರೆ, ನಿಖಿಲ್ ರಕ್ಷಣೆಯಲ್ಲಿ ಚಾಣಾಕ್ಷತೆ ಮೆರೆದರು. ಈ ಮಧ್ಯೆ ಜಾವಿ ಹೆರ್ನಾಂಡೆಜ್ ಅವರು ಫ್ರೀ ಕಿಕ್‌ನಲ್ಲಿ ಒದ್ದ ಚೆಂಡನ್ನು ಸುನಿಲ್ ಚೆಟ್ರಿ ಗೋಲಾಗಿ ಪರಿವರ್ತಿಸಲು ವಿಫಲರಾದರು. ಹೀಗಾಗಿ, ಮೊದಲಾರ್ಧ ಗೋಲುರಹಿತವಾಗಿತ್ತು.

ದ್ವಿತೀಯಾರ್ಧದಲ್ಲಿ ಉಭಯ ತಂಡಗಳ ಆಟಗಾರರು ಮೇಲುಗೈ ಸಾಧಿಸಲು ಬಿರುಸಿನ ಹೋರಾಟ ನಡೆಸಿದರು.

ಈ ಮಧ್ಯೆ ರ್‍ಯಾನ್ ಬಿಎಫ್‌ಸಿ ತಂಡಕ್ಕೆ ಮುನ್ನಡೆ ಒದಗಿಸಿದ ಬಳಿಕ ಚೆನ್ನೈಯಿನ್ ಆಟಗಾರರು ಸಮಬಲ ಸಾಧಿಸಲು ತೀವ್ರ ಯತ್ನ ನಡೆಸಿದರು. ಆದರೆ, ಪ್ರಯತ್ನ ಕೈಗೂಡಲಿಲ್ಲ.

‘ರಿಷಭ್ ಸಂಪೂರ್ಣ ಐಪಿಎಲ್ ಟೂರ್ನಿ ಆಡಬಹುದು’

ರಿಷಭ್ ಪಂತ್

ಮೆಲ್ಬರ್ನ್(ಪಿಟಿಐ): ದೀರ್ಘ ಕಾಲದ ನಂತರ ಕ್ರಿಕೆಟ್ ಕಣಕ್ಕೆ ಮರಳುವ ತಯಾರಿಯಲ್ಲಿರುವ ರಿಷಭ್ ಪಂತ್ ಅವರು ಮುಂಬರುವ ಐಪಿಎಲ್ ಟೂರ್ನಿಯಲ್ಲಿ ಬ್ಯಾಟರ್ ಆಗಿ ಲಭ್ಯರಾಗಲಿದ್ದಾರೆ. ಆದರೆ ಅವರು ವಿಕೆಟ್‌ಕೀಪಿಂಗ್ ಮಾಡುವ ಕುರಿತು ಇನ್ನೂ ಖಚಿತವಾಗಿಲ್ಲ ಎಂದು ಡೆಲ್ಲಿ ಕ್ಯಾಪಿಟಲ್ಸ್ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಹೇಳಿದ್ದಾರೆ.

2022ರ ಡಿಸೆಂಬರ್‌ನಲ್ಲಿ ನಡೆದಿದ್ದ ಭೀಕರ ಕಾರು ಅಪಘಾತದಲ್ಲಿ ರಿಷಭ್ ತೀವ್ರವಾಗಿ ಗಾಯಗೊಂಡಿದ್ದರು. ಆಗ ಅವರಿಗೆ ಅಸ್ಥಿಮಜ್ಜೆ ಮರುಜೋಡಣೆಗಾಗಿ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿತ್ತು. ಈ ಕುರಿತು ಇಎಸ್‌ಪಿಎನ್‌ಕ್ರಿಕ್‌ಇನ್ಫೋ ವೆಬ್‌ಸೈಟ್‌ನೊಂದಿಗೆ ಮಾತನಾಡಿರುವ ಅವರು, ‘ಐಪಿಎಲ್ ಟೂರ್ನಿಯಲ್ಲಿ ಆಡುವುದರ ಬಗ್ಗೆ ರಿಷಭ್‌ಗೆ ಪೂರ್ಣ ವಿಶ್ವಾಸವಿದೆ. ಆದರೆ ಅವರು ಕೇವಲ ಬ್ಯಾಟಿಂಗ್, ಇಲ್ಲವೇ ವಿಕೆಟ್‌ಕೀಪಿಂಗ್ ಮಾಡುವರೇ ಎಂಬುದನ್ನು ಸ್ಪಷ್ಟಪಡಿಸಿಲ್ಲ’ ಎಂದರು

ನಂಬರ್ 1 ಸ್ಥಾನಕ್ಕೇರಿದ ಭಾರತ ತಂಡದ ಮೊದಲ ವೇಗಿ

ಐಸಿಸಿ ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ಬೂಮ್ರಾ

ದುಬೈ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಈ ಸ್ಥಾನಕ್ಕೇರಿದ ಭಾರತ ತಂಡದ ಮೊದಲ ವೇಗಿಯಾಗಿದ್ದಾರೆ.

ಬುಧವಾರ ಪ್ರಕಟವಾದ ರ‍್ಯಾಂಕಿಂಗ್ ಪಟ್ಟಿಯಲ್ಲಿ ಬೂಮ್ರಾ ತಮ್ಮ ‘ಗೆಳೆಯ’ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರನ್ನು ಹಿಂದಿಕ್ಕಿದ್ದಾರೆ. ಅಶ್ವಿನ್ ಮೂರನೇ ಸ್ಥಾನಕ್ಕಿಳಿದಿದ್ದಾರೆ. ಅಷ್ಟೇ ಅಲ್ಲ ಬೂಮ್ರಾ ಅವರು ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಹಾಗೂ ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಅವರನ್ನೂ ಹಿಂದೆ ಹಾಕಿದ್ದಾರೆ.

ಐಸಿಸಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದ ಭಾರತದ ನಾಲ್ಕನೇ ಬೌಲರ್ ಅವರಾಗಿದ್ದಾರೆ. ಅಶ್ವಿನ್, ರವೀಂದ್ರ ಜಡೇಜ ಹಾಗೂ ಬಿಷನ್ ಸಿಂಗ್ ಬೇಡಿ ಅವರೂ ಹಿಂದೆ ಇಂತಹ ಸಾಧನೆ ಮಾಡಿದ್ದರು. ಬೂಮ್ರಾ ಅವರು ಈಚೆಗೆ ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ಗಳಲ್ಲಿ ಅಮೋಘವಾಗಿ ಬೌಲಿಂಗ್ ಮಾಡಿದ್ದರು.

ಬೂಮ್ರಾ 881 ರೇಟಿಂಗ್ ಪಾಯಿಂಟ್ಸ್ ಹೊಂದಿದ್ದಾರೆ. ಅಶ್ವಿನ್ (904) ಮತ್ತು ರವೀಂದ್ರ ಜಡೇಜ (899) ಅವರು ಉತ್ತಮ ರೇಟಿಂಗ್ ಪಾಯಿಂಟ್ಸ್ ಗಳಿಸಿರುವ ಭಾರತೀಯ ಬೌಲರ್‌ಗಳಾಗಿದ್ದಾರೆ. ಅಶ್ವಿನ್ ಮತ್ತು ಜಡೇಜ ಅವರು ಮಾರ್ಚ್ 2017ರಿಂದ ಜಂಟಿ ಅಗ್ರ ರ‍್ಯಾಂಕ್‌ನಲ್ಲಿದ್ದರು.

ಬ್ಯಾಟಿಂಗ್ ವಿಭಾಗದಲ್ಲಿ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು 37 ಸ್ಥಾನಗಳ ಬಡ್ತಿ ಪಡೆದಿದ್ದಾರೆ. 29ನೇ ಸ್ಥಾನ ಕ್ಕೇರಿದ್ದಾರೆ. ವಿಶಾಖಪಟ್ಟಣದಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಅವರು ದ್ವಿಶತಕ ಹೊಡೆದಿದ್ದರು. ಅದೇ ಪಂದ್ಯದಲ್ಲಿ ಶತಕ ಗಳಿಸಿದ್ದ ಶುಭಮನ್ ಗಿಲ್ 14 ಸ್ಥಾನಗಳ ಬಡ್ತಿ ಪಡೆದು 38ನೇ ಸ್ಥಾನಕ್ಕೇರಿದ್ದಾರೆ.

ಇಂಗ್ಲೆಂಡ್ ತಂಡದ ಬ್ಯಾಟರ್ ಜ್ಯಾಕ್ ಕ್ರಾಲಿ ಅವರೂ ತಮ್ಮ ಜೀವನದ ಶ್ರೇಷ್ಠ ಸಾಧನೆಯಾಗಿ 22ನೇ ಸ್ಥಾನಕ್ಕೇರಿದ್ದಾರೆ. ಲೆಗ್‌ಸ್ಪಿನ್ನರ್ ರೆಹಾನ್ ಅಹಮದ್ 14 ಸ್ಥಾನಗಳ ಬಡ್ತಿ ಪಡೆದಿದ್ದಾರೆ. ಟಾಮ್ ಹಾರ್ಟ್ಲಿ ಅವರು ಐದು ವಿಕೆಟ್ ಮತ್ತು 50 ರನ್ ಗಳಿಸಿದ ಸಾಧನೆ ಮಾಡಿದ್ದರು. ಅದರೊಂದಿಗೆ 103ರಿಂದ 95ನೇ ಸ್ಥಾನಕ್ಕೇರಿದ್ದಾರೆ.

ಮುಂದಿನ ಟೆಸ್ಟ್‌ಗೆ ವಿರಾಟ್ ಕೊಹ್ಲಿ ಅನುಮಾನ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಇಂಗ್ಲೆಂಡ್ ಎದುರಿನ ಸರಣಿಯ ಮೂರನೇ ಮತ್ತು ನಾಲ್ಕನೇ ಟೆಸ್ಟ್‌ಗಳಲ್ಲಿ ಆಡುವುದು ಅನುಮಾನವಾಗಿದೆ.

ವೈಯಕ್ತಿಕ ಕಾರಣಗಳಿಂದಾಗಿ ಕೊಹ್ಲಿ ಅವರು ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಆಡಿರಲಿಲ್ಲ. ಸರಣಿಯ ಕೊನೆಯ ಮತ್ತು ಐದನೇ ಪಂದ್ಯವು ಮಾರ್ಚ್ 7ರಿಂದ 11ರವರೆಗೆ ಧರ್ಮಶಾಲಾದಲ್ಲಿ ನಡೆಯಲಿದೆ. ಆ ಪಂದ್ಯದಲ್ಲಿ ವಿರಾಟ್ ಆಡುವ ಕುರಿತು ಸ್ಪಷ್ಟವಾಗಿಲ್ಲ.

ಸರಣಿಯ ಮೂರನೇ ಟೆಸ್ಟ್ ಇದೇ 15ರಿಂದ 19ರವರೆಗೆ ರಾಜ್‌ಕೋಟ್ ಮತ್ತು ನಾಲ್ಕನೇ ಪಂದ್ಯವು 23 ರಿಂದ 27ರವರೆಗೆ ರಾಂಚಿಯಲ್ಲಿ ನಡೆಯಲಿದೆ.

ವಿರಾಟ್ ಮತ್ತು ಅನುಷ್ಕಾ ದಂಪತಿಯು ತಮ್ಮ ಎರಡನೇ ಮಗುವಿನ ನಿರೀಕ್ಷೆಯಲ್ಲಿದ್ದಾರೆ ಎಂದು ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಎಬಿ ಡಿವಿಲಿಯರ್ಸ್ ಯೂಟ್ಯೂಬ್ ಕಾರ್ಯಕ್ರಮದಲ್ಲಿ ಹೇಳಿದ್ದರು. ವಿರಾಟ್ ಮತ್ತು ಡಿವಿಲಿಯರ್ಸ್ ಆಪ್ತಮಿತ್ರರಾಗಿದ್ದಾರೆ.

‘ಕೌಟುಂಬಿಕ ಕಾರಣಗಳು ಬಂದಾಗ ಆ ಆಟಗಾರನಿಗೆ ಸಂಪೂರ್ಣ ಬೆಂಬಲು ನೀಡಲು ಮಂಡಳಿ ಬದ್ಧವಾಗಿದೆ. ವಿರಾಟ್ ಕೊಹ್ಲಿ ಎಷ್ಟೇ ಸಮಯ ತೆಗೆದುಕೊಳ್ಳಲಿ. ಅದು ಅವರ ವಿವೇಚನೆಗೆ ಬಿಟ್ಟಿದ್ದು’ ಎಂದು ಬಿಸಿಸಿಐ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಬಡ್ಡಿ: ಪುಣೇರಿ, ಪ್ಯಾಂಥರ್ಸ್‌ಗೆ ಜಯ

ನವದೆಹಲಿ: ಈಗಾಗಲೇ ಪ್ಲೇ ಆಫ್‌ಗೆ ಅರ್ಹತೆ ಪಡೆದಿರುವ ಪುಣೇರಿ ಪಲ್ಟನ್ ತಂಡವು ಯಶಸ್ಸಿನ ನಾಗಾಲೋಟವನ್ನು ಮುಂದುವರಿಸಿ 40–31 ರಿಂದ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಪಲ್ಟನ್ ನಾಯಕ ಅಸ್ಲಂ ಇನಾಮದಾರ್ ಆಲ್‌ರೌಂಡ್ ಪ್ರದರ್ಶನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.

ಕನ್ನಡಿಗ ಬಿ.ಸಿ.ರಮೇಶ್ ತರಬೇತಿಯಲ್ಲಿರುವ, ಕಳೆದ ಬಾರಿಯ ರನ್ನರ್ ಅಪ್ ಪುಣೇರಿ ತಂಡ ಮೊದಲ ಎರಡು ಸ್ಥಾನಗಳಲ್ಲಿ ಒಂದನ್ನು ಪಡೆಯುವ ಹುಮ್ಮಸ್ಸಿನಲ್ಲಿದೆ.

ಅಸ್ಲಂ (11 ಪಾಯಿಂಟ್ಸ್) ಅವರಿಗೆ ರೈಡಿಂಗ್‌ನಲ್ಲಿ ಮೋಹಿತ್ ಗೋಯತ್ (7 ಅಂಕ) ಅವರಿಂದ ಉತ್ತಮ ಬೆಂಬಲ ದೊರೆಯಿತು. ವಿರಾಮದ ವೇಳೆ ಸ್ಕೋರ್ 18-13 ಆಗಿತ್ತು. ಬೆಂಗಳೂರು ಪರ ರೈಡರ್ ಸುಶೀಲ್ 9 ಪಾಯಿಂಟ್ಸ್ ಗಳಿಸಿದರೆ, ಡಿಫೆನ್ಸ್‌ನಲ್ಲಿ ಪ್ರತೀಕ್ 6 ಪಾಯಿಂಟ್ಸ್ ಪಡೆದರು.

ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ಇನ್ನೊಂದು ಪಂದ್ಯದಲ್ಲಿ 27–22 ಪಾಯಿಂಟ್‌ಗಳಿಂದ ದಬಾಂಗ್ ಡೆಲ್ಲಿ ತಂಡವನ್ನು ಸೋಲಿಸಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಫೆ.12ರಿಂದ ಬೆಂಗಳೂರು ಓಪನ್ ಟೆನಿಸ್ ಟೂರ್ನಿ

ಡೇವಿಸ್ ಕಪ್ ಆಟಗಾರರು ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದಲ್ಲಿ ಈಚೆಗೆ ನಡೆದಿದ್ದ ಡೇವಿಸ್ ಕಪ್ ಪಂದ್ಯದಲ್ಲಿ ಅಮೋಘ ಜಯ ಗಳಿಸಿದ್ದ ಭಾರತ ತಂಡದಲ್ಲಿ ಆಡಿದ್ದ ನಾಲ್ವರು ಆಟಗಾರರು ಇದೇ 12 ರಿಂದ 18ರವರೆಗೆ ನಡೆಯಲಿರುವ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ರಾಮಕುಮಾರ್ ರಾಮನಾಥನ್, ಸಾಕೇತ್ ಮೈನೇನಿ, ಶ್ರೀರಾಮ್ ಬಾಲಾಜಿ ಹಾಗೂ ನಿಕಿ ಪೂಣಚ್ಚ ಅವರು ಈ ಟೂರ್ನಿಯ ಪ್ರಮುಖ ಆಕರ್ಷಣೆಯಾಗಿದ್ದಾರೆ. ರಾಮಕುಮಾರ್ ಅವರು ಸಾಕೇತ್ ಜೊತೆಗೂಡಿ ಆಡಲಿದ್ದಾರೆ. ಈ ಜೋಡಿಯು 2022ರಲ್ಲಿ ಪ್ರಶಸ್ತಿ ಜಯಿಸಿತ್ತು. ಬಾಲಾಜಿ (ವಿಶ್ವ ರ‍್ಯಾಂಕಿಂಗ್ 78) ಅವರು ಜರ್ಮನಿಯ ಆ್ಯಂಡ್ರೆ ಬೆಗೆಮನ್ (ರ‍್ಯಾಂಕಿಂಗ್ 201) ಜೊತೆಗೆ ಆಡುವರು. 16 ತಂಡಗಳ ಡ್ರಾನಲ್ಲಿ ಈ ಜೋಡಿಯು 279ರ ಜಂಟಿ ರ‍್ಯಾಂಕ್ ಪಡೆಯಿತು.

ಮೈನೇನಿ (107) ಮತ್ತು ರಾಮಕುಮಾರ್ (210) ಜಂಟಿ 317ನೇ ರ‍್ಯಾಂಕ್‌ನಲ್ಲಿದ್ದಾರೆ. ಫ್ರಾನ್ಸ್‌ನ ಡ್ಯಾನ್ ಆ್ಯಡೆಡ್ (91) ಮತ್ತು ಕೊರಿಯಾದ ಯುನ್ ಸಾಂಗ್ ಚುಂಗ್ (167) ಜಂಟಿ 258ನೇ ರ‍್ಯಾಂಕ್‌ನಲ್ಲಿದ್ದು ಟೂರ್ನಿಯ ಅಗ್ರಸ್ಥಾನದಲ್ಲಿದೆ.

ಡ್ಯಾನ್ 11 ಡಬಲ್ಸ್ ಚಾಲೆಂಜರ್ಸ್ ಗೆಲುವು ಗಳಿಸಿದ್ದಾರೆ. ಹೋದ ಋತುವಿನಲ್ಲಿ ಅವರು ಅದ್ಭುತ ಫಾರ್ಮ್‌ನಲ್ಲಿದ್ದರು. ಅದೊಂದೇ ಅವಧಿಯಲ್ಲಿ ಅವರು 8 ಪ್ರಶಸ್ತಿ ಗೆದ್ದಿದ್ದರು. ನಿಕಿ ಪೂಣಚ್ಚ (147) ಅವರು ಈಚೆಗೆ ಇಸ್ಲಾಮಾ ಬಾದ್‌ನಲ್ಲಿ ನಡೆದಿದ್ದ ಡೇವಿಸ್ ಕಪ್ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ಮುಹಮ್ಮದ್ ಶೋಯೆಬ್ ವಿರುದ್ಧ ಆಡಿದ್ದರು. ನಿಕಿ ಅವರು ಈ ಟೂರ್ನಿಯಲ್ಲಿ ಋತ್ವಿಕ್ ಚೌಧರಿ ಬೊಲಿಪಲ್ಲಿ ಅವರೊಂದಿಗೆ ಕಣಕ್ಕಿಳಿಯುವರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆಯಲಿರುವ ಈ ಟೂರ್ನಿಯ ಸಿಂಗಲ್ಸ್‌ನಲ್ಲಿ ಸುಮಿತ್ ನಗಾಲ್ ಮುಖ್ಯ ಆಕರ್ಷಣೆಯಾಗಿದ್ದಾರೆ. ಅವರು ಈಚೆಗೆ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲಿ ಜಯಿಸಿದ್ದರು.

ಬೆಂಗಳೂರು ಓಪನ್ ಟೆನಿಸ್‌ನಲ್ಲಿ ಆಡಲಿರುವ (ಎಡದಿಂದ) ರಾಮಕುಮಾರ್ ರಾಮನಾಥನ್, ಶ್ರೀರಾಮ್ ಬಾಲಾಜಿ ಮತ್ತು ನಿಕಿ ಪೂಣಚ್ಚ –ಎಎಫ್‌ಪಿ ಚಿತ್ರ

ಮಹಿಳಾ ಹಾಕಿ: ಹ್ಯಾಟ್ರಿಕ್ ಸೋಲು

ಭುವನೇಶ್ವರ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಪಂದ್ಯದಲ್ಲಿ ಬುಧವಾರ ಆಸ್ಟ್ರೇಲಿಯಾ ವಿರುದ್ಧ 0–3ರಿಂದ ಪರಾಭವಗೊಂಡಿತು. ಆತಿಥೇಯ ತಂಡಕ್ಕೆ ಇದು ಹ್ಯಾಟ್ರಿಕ್ ಸೋಲು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ನಾಯಕಿ ಗ್ರೇಸ್ ಸ್ಟಿವರ್ಟ್ (19ನೇ ನಿಮಿಷ), ಟಾಟಮ್ ಸ್ಟೀವರ್ಟ್ (23ನೇ ನಿ) ಮತ್ತು ಕೈಟ್ಲಿನ್ ನಾಬ್ಸ್ (55ನೇ ನಿ.) ಗೋಲು ಗಳಿಸಿದರು. ಭಾರತ ತಂಡವು ಶುಕ್ರವಾರ ಅಮೆರಿಕ ವಿರುದ್ಧ ಸೆಣಸಲಿದೆ.

ಕುಸ್ತಿ ಮುಂದೂಡಿಕೆ

ನವದೆಹಲಿ (ಪಿಟಿಐ): ಗ್ವಾಲಿಯರ್‌ನಲ್ಲಿ ನಡೆಯಲಿದ್ದ 15 ಮತ್ತು 20 ವರ್ಷದೊಳಗಿನವರ ವಿಭಾಗಗಳ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಮುಂದೂಡಲಾಗಿದೆ. ಈ ಟೂರ್ನಿಯನ್ನು ಭಾರತ ಕುಸ್ತಿ ಫೆಡರೇಷನ್ ಅಡ್‌ಹಾಕ್ ಸಮಿತಿಯು ಆಯೋಜಿಸಿತ್ತು.

ಫೆ. 11 ರಿಂದ 17ರವರೆಗೆ ಚಾಂಪಿಯನ್‌ಷಿಪ್ ಆಯೋಜಿಸಲಾಗಿತ್ತು. 20 ಮತ್ತು 15 ವರ್ಷದೊಳಗಿನ ವಯೋಮಿತಿಗಳಲ್ಲಿ ಫ್ರೀಸ್ಟೈಲ್, ಗ್ರಿಕೊ ರೋಮನ್ ಶೈಲಿ ಸ್ಪರ್ಧೆಗಳಿದ್ದವು. ಮಹಿಳಾ ಚಾಂಪಿಯನ್‌ಷಿಪ್ ಕೂಡ ನಡೆಯುವುದಿತ್ತು.

‘ಪೋಕ್ಸೊ’ ಪ್ರಕರಣ: ಸಾಕ್ಷ್ಯ ಸಂಗ್ರಹ

ಬೆಂಗಳೂರು: ಭಾರತ ಸೀನಿಯರ್ ಹಾಕಿ ತಂಡದ ಆಟಗಾರ ವರುಣ್ ಕುಮಾರ್ ವಿರುದ್ಧ ದಾಖಲಾಗಿರುವ ‘ಪೋಕ್ಸೊ’ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಪ್ರಕರಣದ ತನಿಖೆ ನಡೆಸುತ್ತಿರುವ ಜ್ಞಾನಭಾರತಿ ಠಾಣೆ ಪೊಲೀಸರು, ಡಿಜಿಟಲ್ ಸಾಕ್ಷ್ಯ ಸಂಗ್ರಹಿಸಲು ಮುಂದಾಗಿದ್ದಾರೆ.

ಅತ್ಯಾಚಾರದ ದೂರು ನೀಡಿರುವ ಯುವತಿ ಹಾಗೂ ವರುಣ್ ನಡುವೆ ನಡೆದಿರುವ ಮೊಬೈಲ್ ಸಂಭಾಷಣೆ ವಿವರ, ಸಂದೇಶಗಳು ಹಾಗೂ ಧ್ವನಿ ಮುದ್ರಿಕೆಗಳೂ ಸೇರಿದಂತೆ ಇತರೆ ಸಾಕ್ಷ್ಯಾಧಾರಗಳನ್ನು ತನಿಖೆ ದೃಷ್ಟಿಯಿಂದ ಸಂಗ್ರಹಿಸಲಾಗು ತ್ತಿದೆ ಎಂದು ಪೊಲೀಸ್ ಮೂಲ ಗಳು ತಿಳಿಸಿವೆ.

‘ವರುಣ್ ಅವರನ್ನು ಇನ್ನೂ ಸಂಪರ್ಕಿಸಿಲ್ಲ. ಅವರು ಹೊರರಾಜ್ಯದಲ್ಲಿದ್ದು, ಶೀಘ್ರದಲ್ಲೇ ಅವರನ್ನು ವಿಚಾರಣೆಗೆ ಕರೆಸಲಾಗುವುದು. ಅವರು ತರಬೇತಿ ಯಲ್ಲಿರುವ ಮಾಹಿತಿಯಿದ್ದು ಅಲ್ಲಿಗೆ ಇದುವರೆಗೂ ಪೊಲೀಸ್ ತಂಡ ಕಳುಹಿಸಿಲ್ಲ. ವಿಚಾರಣೆಗೆ ಅವರೇ ಖುದ್ದು ಹಾಜರಾಗದಿದ್ದರೆ ಅವರಿರುವ ಸ್ಥಳಕ್ಕೆ ತಂಡವನ್ನು ಕಳುಹಿಸಿ ವಿಚಾರಣೆಗೆ ಕರೆತರಲಾಗುವುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಸಾಕ್ಷ್ಯಾಧಾರ ಸಂಗ್ರಹಿಸಿದ ಬಳಿಕ ಪ್ರಕರಣ ಸಂಬಂಧ ಅವರಿಬ್ಬರ ಸ್ನೇಹಿತರ ಹೇಳಿಕೆ ದಾಖಲು ಮಾಡಿಕೊಳ್ಳಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿಗೆ ಅವರ ಬಾಲ್ಯದ ದಿನ ಗಳಿಂದ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದ ಅಡಿ ವರುಣ್ ಕುಮಾರ್ ವಿರುದ್ಧ ‘ಪೋಕ್ಸೊ’ ಪ್ರಕರಣ ದಾಖಲಾಗಿದೆ. ತೆಲಂಗಾಣದ 22 ವರ್ಷದ ಯುವತಿ ದೂರು ನೀಡಿದ್ದರು.

‘2018ರಲ್ಲಿ ಇನ್‌ಸ್ಟಾಗ್ರಾಂ ಮೂಲಕ ನನಗೆ ಪರಿಚಯ ಮಾಡಿ ಕೊಂಡಿದ್ದ. ಮದುವೆಯಾಗುವುದಾಗಿ ಒಪ್ಪಿಸಿ 2019ರಲ್ಲಿ ಹೋಟೆಲ್‌ವೊಂದಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದ’ ಎಂದು ಯುವತಿ ದೂರು ನೀಡಿದ್ದರು.

ಸಿ.ಕೆ.ನಾಯ್ಡು ಟ್ರೋಫಿ: ಕರ್ನಾಟಕಕ್ಕೆ ಜಯ

ಬೆಂಗಳೂರು: ಅನೀಶ್ವರ ಗೌತಮ್ (ಔಟಾಗದೇ 64) ಮತ್ತು ಧೀರಜ್ ಜೆ.ಗೌಡ (63) ಅವರ ಅರ್ಧ ಶತಕಗಳ ನೆರವಿನಿಂದ ಕರ್ನಾಟಕ ತಂಡ, ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯಲ್ಲಿ ಪಂದ್ಯದಲ್ಲಿ ಗುಜರಾತ್ ತಂಡವನ್ನು ಬುಧವಾರ 5 ವಿಕೆಟ್‌ಗಳಿಂದ ಸೋಲಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 205 ರನ್ ಗಳಿಸಬೇಕಾಗಿದ್ದ ಕರ್ನಾಟಕ ಎರಡನೇ ಇನಿಂಗ್ಸ್‌ನಲ್ಲಿ 68 ಓವರುಗಳಲ್ಲಿ 5 ವಿಕೆಟ್ ಕಳೆದುಕೊಂಡು 208 ರನ್ ಹೊಡೆದು ಗುರಿತಲುಪಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗುಜರಾತ್: 184, ಕರ್ನಾಟಕ: 239; ಎರಡನೇ ಇನಿಂಗ್ಸ್: ಗುಜರಾತ್ 83.1 ಓವರುಗಳಲ್ಲಿ 259 (ರಿಶಿ ಪಟೇಲ್ 110); ಕರ್ನಾಟಕ: 68 ಓವರುಗಳಲ್ಲಿ 5 ವಿಕೆಟ್‌ಗೆ 208 (ಅನೀಶ್ವರ ಗೌತಮ್ ಔಟಾಗದೇ 64, ಧೀರಜ್ ಜೆ.ಗೌಡ 63; ಜಯ್ ಮಲುಸಾರೆ 20ಕ್ಕೆ2).

ಪಾಕಿಸ್ತಾನದಲ್ಲಿ ಇಂದು ಚುನಾವಣೆ

ಇಸ್ಲಾಮಾಬಾದ್ (ಪಿಟಿಐ): ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಪಾಕಿಸ್ತಾನದಲ್ಲಿ ಗುರುವಾರ ಸಾರ್ವತ್ರಿಕ ಚುನಾವಣೆ ನಡೆಯಲಿದೆ.

ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಜೈಲಿನಲ್ಲಿ ಇರುವ ಕಾರಣ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಪಾಕಿಸ್ತಾನ್ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಪಕ್ಷವು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವ ಸಾಧ್ಯತೆ ಹೆಚ್ಚಾಗಿದೆ. 74 ವರ್ಷದ ಷರೀಫ್ ದಾಖಲೆಯ ನಾಲ್ಕನೇ ಬಾರಿಗೆ ಪ್ರಧಾನಿ ಪಟ್ಟಕ್ಕೇರುವ ಉಮೇದಿನಲ್ಲಿದ್ದಾರೆ.

ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಪಕ್ಷದ ಚಿಹ್ನೆಯಾದ ‘ಕ್ರಿಕೆಟ್ ಬ್ಯಾಟ್’ ಅನ್ನು ಚುನಾವಣಾ ಆಯೋಗವು ರದ್ದುಗೊಳಿಸಿದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು. ಹೀಗಾಗಿ ಪಿಟಿಐ ತನ್ನ ಅಭ್ಯರ್ಥಿಗಳನ್ನು ಪಕ್ಷೇತರರಾಗಿ ಕಣಕ್ಕೆ ಇಳಿಸಿದೆ.

ಚುನಾವಣೆಯಲ್ಲಿ ಬಿಲಾವಲ್ ಭುಟ್ಟೊ–ಜರ್ದಾರಿ ಅವರ ಪಾಕಿಸ್ತಾನ ಪೀಪಲ್ಸ್ ಪಕ್ಷ ಸಹ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಗುರುವಾರ ಬೆಳಿಗ್ಗೆ 8 ಗಂಟೆಗೆ ಮತದಾನ ಪ್ರಕ್ರಿಯೆ ಆರಂಭವಾಗಿ ಸಂಜೆ 5 ಗಂಟೆಗೆ ಮುಕ್ತಾಯಗೊಳ್ಳಲಿದೆ. ಚುನಾವಣೆ ಇರುವ ಕಾರಣ ದೇಶದಾದ್ಯಂತ ಸಾರ್ವತ್ರಿಕ ರಜೆ ಘೋಷಿಸಲಾಗಿದೆ.

ಪಾಕಿಸ್ತಾನ ಚುನಾವಣಾ ಆಯೋಗದ ಪ್ರಕಾರ, ‘4,807 ಪುರುಷರು, 312 ಮಹಿಳೆಯರು ಮತ್ತು ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರು ಸೇರಿ 5,121 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ.

ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಯು ಒಟ್ಟು 336 ಸ್ಥಾನಗಳನ್ನು ಒಳಗೊಂಡಿದ್ದು, 265 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಒಂದು ಕ್ಷೇತ್ರದಲ್ಲಿ ಅಭ್ಯರ್ಥಿಯೊಬ್ಬರ ಕೊಲೆಯಾದ ಕಾರಣ ಅಲ್ಲಿ ಚುನಾವಣೆಯನ್ನು ಮುಂದೂಡಲಾಗಿದೆ. ಉಳಿದ 60 ಸ್ಥಾನಗಳನ್ನು ಮಹಿಳೆಯರಿಗೆ ಹಾಗೂ 10 ಸ್ಥಾನಗಳನ್ನು ಮುಸ್ಲಿಮೇತರರಿಗೆ ಮೀಸಲಿಡಲಾಗಿದೆ.

ಇದೇ ಸಂದರ್ಭದಲ್ಲಿ ನಾಲ್ಕು ಪ್ರಾಂತ್ಯಗಳ 593 ವಿಧಾನಸಭಾ ಕ್ಷೇತ್ರಗಳಿಗೂ ಚುನಾವಣೆ ನಡೆಯಲಿದ್ದು, 12,695

ಪಾಕಿಸ್ತಾನದ ಸಾರ್ವತ್ರಿಕ ಚುನಾವಣೆಯ ಮುನ್ನಾದಿನವಾದ ಬುಧವಾರ ಪಕ್ಷೇತರ ಅಭ್ಯರ್ಥಿಯೊಬ್ಬರ ಕಚೇರಿ ಹೊರಗೆ ಬಾಂಬ್ ಸ್ಫೋಟ ಸಂಭವಿಸಿದೆ –ಎಎಫ್‌ಪಿ ಚಿತ್ರ

ಬಾಂಬ್ ಸ್ಫೋಟ: 28 ಮಂದಿ ಸಾವು

ಪಿಶಿನ್ (ಪಿಟಿಐ): ನೈರುತ್ಯ ಪಾಕಿಸ್ತಾನದಲ್ಲಿ ಚುನಾವಣಾ ಅಭ್ಯರ್ಥಿಗಳ ಕಚೇರಿಗಳ ಎದುರು ಸಂಭವಿಸಿದ ಎರಡು ಪ್ರತ್ಯೇಕ ಬಾಂಬ್ ಸ್ಫೋಟಗಳಲ್ಲಿ ಕನಿಷ್ಠ 28 ಮಂದಿ ಮೃತಪಟ್ಟು, 40 ಮಂದಿ ಗಾಯಗೊಂಡಿದ್ದಾರೆ.

ಸಾರ್ವತ್ರಿಕ ಚುನಾವಣೆಯ ಮುನ್ನಾ ದಿನವೇ ಭಾರಿ ಭದ್ರತೆ ನಡುವೆಯೂ ಈ ದಾಳಿ ನಡೆದಿದೆ.

ಪಿಶಿನ್ ಜಿಲ್ಲೆಯ ಸ್ವತಂತ್ರ ಅಭ್ಯರ್ಥಿಯ ಕಚೇರಿ ಎದುರು ಸ್ಫೋಟಗೊಂಡ ಕಚ್ಚಾ ಬಾಂಬ್ ದಾಳಿಯಿಂದ 16 ಮಂದಿ ಮೃತಪಟ್ಟು, 30 ಮಂದಿ ಗಾಯಗೊಂಡಿದ್ದಾರೆ.

ಕಿಲ್ಲಾ ಸೈಫುಲ್ಲಾ ನಗರದಲ್ಲಿರುವ ಇಸ್ಲಾಮಿಸ್ಟ್ ಜಮೈತ್ ಉಲೇಮಾ–ಎ–ಇಸ್ಲಾಂ–ಎಫ್ ಪಕ್ಷದ ಅಭ್ಯರ್ಥಿಯ ಕಚೇರಿ ಬಳಿ ಎರಡನೇ ಕಚ್ಚಾ ಬಾಂಬ್ ಸ್ಫೋಟಗೊಂಡಿದೆ.

ಪರಿಣಾಮ 12 ಮಂದಿ ಮೃತಪಟ್ಟು, 20 ಮಂದಿ ಗಾಯಗೊಂಡಿದ್ದಾರೆ. ಈವರೆಗೆ ಯಾವ ಸಂಘಟನೆಯೂ ದಾಳಿಯ ಹೊಣೆ ಹೊತ್ತಿಲ್ಲ.

ಬಿಗಿ ಭದ್ರತೆ

ಚುನಾವಣಾ ಮುನ್ನಾ ದಿನವೇ ಅವಳಿ ಬಾಂಬ್ ಸ್ಫೋಟ ನಡೆದಿರುವ ಕಾರಣ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ದೇಶದಾದ್ಯಂತ 6,50,000 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಭಯೋತ್ಪಾದಕರಿಂದ ದಾಳಿ ನಡೆಸುವ ಬೆದರಿಕೆ ಇರುವುದರಿಂದ ಪೊಲೀಸ್, ಅರೆಸೇನಾ ಪಡೆ ಮತ್ತು ಸೇನಾ ಪಡೆಗಳನ್ನು ನಿಯೋಜಿಸಲಾಗಿದೆ.

ಬುಧವಾರ ಸುಮಾರು 90,000ಕ್ಕೂ ಹೆಚ್ಚು ಮತಗಟ್ಟೆಗಳಿಗೆ ಚುನಾವಣಾ ಪರಿಕರಗಳನ್ನು ಸಾಗಿಸಲಾಗಿದೆ. 29,985 ಮತಗಳಟ್ಟೆಗಳನ್ನು ‘ಅತ್ಯಂತ ಸೂಕ್ಷ್ಮ’ ಎಂದು ಪರಿಗಣಿಸಲಾಗಿದೆ.

ಅಮೆರಿಕದಲ್ಲಿ ಭಾರತದ ವಿದ್ಯಾರ್ಥಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಷಿಕಾಗೊ/ಹೈದರಾಬಾದ್: ಉನ್ನತ ವ್ಯಾಸಂಗಕ್ಕೆ ಅಮೆರಿಕಕ್ಕೆ ತೆರಳಿದ್ದ ಹೈದರಾಬಾದ್‌ನ ಐ.ಟಿ. ವಿದ್ಯಾರ್ಥಿ ಮೇಲೆ ಷಿಕಾಗೊದಲ್ಲಿ ಅಮಾನುಷವಾಗಿ ಹಲ್ಲೆ ನಡೆಸಲಾಗಿದೆ.

ಹೈದರಾಬಾದ್‌ನ ಸೈಯದ್ ಮಜಾಹಿರ್ ಅಲಿ ಇಂಡಿಯಾನಾದ ವೆಸ್ಲಿಯಾನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕ್ಯಾಂಪ್‌ಬೆಲ್ ಅವೆನ್ಯೂನಲ್ಲಿರುವ ಮನೆಯ ಬಳಿ ಅಪರಿಚಿತರು ಅವರನ್ನು ಬೆನ್ನಟ್ಟಿ ಹಲ್ಲೆ ನಡೆಸಿದ್ದಾರೆ.

‘ಮನೆಗೆ ಹಿಂದಿರುಗುವಾಗ ನಾಲ್ವರು ನನ್ನ ಮೇಲೆ ದಾಳಿ ನಡೆಸಿದರು. ನಾನು ಜಾರಿ ಬಿದ್ದೆ. ಅವರು ನನಗೆ ಒದ್ದರು. ದಯವಿಟ್ಟು ಸಹಾಯ ಮಾಡಿ’ ಎಂದು ಅಂಗಲಾಚುತ್ತಿರುವುದು ಅಲಿ ಅವರ ಸ್ನೇಹಿತರು ಚಿತ್ರೀಕರಿಸಿರುವ ವಿಡಿಯೊದಲ್ಲಿ ಸೆರೆಯಾಗಿದೆ.

ಅಲಿಯ ಪತ್ನಿ ರುದುಯ್ಯಾ ಫಾತಿಮಾ ರಜ್ವಿ ಈ ಬಗ್ಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್‌ಅವರಿಗೆ ಪತ್ರಬರೆದಿದ್ದು, ಪತಿಗೆ ತಕ್ಷಣವೇ ವೈದ್ಯಕೀಯ ನೆರವು ಒದಗಿಸುವಂತೆ ಹಾಗೂ ತನ್ನ ಮಕ್ಕಳೊಂದಿಗೆ ಅಮೆರಿಕಕ್ಕೆ ಪ್ರಯಾಣಿಸಲು ಸಹಾಯ ಮಾಡುವಂತೆ ವಿನಂತಿಸಿದ್ದಾರೆ.

ಭಾರತದ ವಿದ್ಯಾರ್ಥಿ ಸಾವು: ಅಮೆರಿಕದ ಪರ್ಡ್ಯೂ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ವ್ಯಾಸಂಗ ಮಾಡುತ್ತಿದ್ದ ಭಾರತದ ವಿದ್ಯಾರ್ಥಿಯೊಬ್ಬರ ಮೃತದೇಹ ಇಂಡಿಯಾನದಲ್ಲಿ ಪತ್ತೆಯಾಗಿದೆ. ಸಮೀರ್ ಕಾಮತ್ (23) ಮೃತ ವಿದ್ಯಾರ್ಥಿ. ಇವರು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪಿಎಚ್‌.ಡಿ ಅಧ್ಯಯನ ಮಾಡುತ್ತಿದ್ದರು ಎಂದು ವಿಶ್ವವಿದ್ಯಾಲಯದ ಸ್ವತಂತ್ರ ಸುದ್ದಿ ಮಾಧ್ಯಮ ತಿಳಿಸಿದೆ.

ಕದನ ವಿರಾಮಕ್ಕೆ ಹಮಾಸ್ ಪ್ರಸ್ತಾವ

ದೋಹಾ (ರಾಯಿಟರ್ಸ್): ಗಾಜಾದಲ್ಲಿ ನಾಲ್ಕೂವರೆ ತಿಂಗಳ ಮಟ್ಟಿಗೆ ಕದನ ವಿರಾಮ ಘೋಷಿಸುವ ಪ್ರಸ್ತಾವವನ್ನು ಹಮಾಸ್ ಬಂಡುಕೋರರು ಸಿದ್ಧಪಡಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನ ಸಮ್ಮತಿಯೊಂದಿಗೆ ಕತಾರ್ ಮತ್ತು ಈಜಿಪ್ಟ್‌ನ ಮಧ್ಯಸ್ಥಿಕೆದಾರರು ಸಲ್ಲಿಸಿದ್ದ ಪ್ರಸ್ತಾವಕ್ಕೆ ಪ್ರತಿಯಾಗಿ ಹಮಾಸ್ ಈ ಪ್ರಸ್ತಾವ ಸಿದ್ಧಪಡಿಸಿದೆ.

ಹಮಾಸ್ ಸಿದ್ಧಪಡಿಸಿರುವ ಪ್ರಸ್ತಾವನೆಯು ತಲಾ 45 ದಿನಗಳ ಮೂರು ಹಂತಗಳನ್ನು ಒಳಗೊಂಡಿದೆ. ಈ ಪ್ರಸ್ತಾವನೆಯ ಭಾಗವಾಗಿ, ಬಂಡುಕೋರರು ತಮ್ಮ ವಶದಲ್ಲಿ ಇರುವ ಇಸ್ರೇಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಿದ್ದಾರೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್, ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ಗಾಜಾದ ಮರುನಿರ್ಮಾಣ ಆಗಬೇಕು, ಇಸ್ರೇಲ್ ಪಡೆಗಳು ಸಂಪೂರ್ಣವಾಗಿ ಹಿಂದೆ ಸರಿಯಬೇಕು ಎಂದು ಹಮಾಸ್ ಹೇಳಿದೆ.

ಕತಾರ್ ಮತ್ತು ಈಜಿಪ್ಟ್‌ನ ಮಧ್ಯಸ್ಥಿಕೆದಾರರನ್ನು ಭೇಟಿ ಮಾಡಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಇಸ್ರೇಲ್‌ಗೆ ಬಂದಿದ್ದಾರೆ.

ಹಮಾಸ್ ಪ್ರಸ್ತಾವದ ಪ್ರಕಾರ, ಒತ್ತೆಯಾಳುಗಳಾಗಿ ಇರುವ ಇಸ್ರೇಲಿನ ಮಹಿಳೆಯರು, 19 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷರು, ವೃದ್ಧರು ಹಾಗೂ ರೋಗಿಗಳನ್ನು ಮೊದಲ 45 ದಿನಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್‌ನ ಜೈಲುಗಳಲ್ಲಿ ಇರುವ ಪ್ಯಾಲೆಸ್ಟೀನ್ ಮಹಿಳೆಯರನ್ನು ಹಾಗೂ ಮಕ್ಕಳನ್ನು ಬಿಡುಗಡೆ ಮಾಡಬೇಕು.

ಇನ್ನುಳಿದ ಪುರುಷ ಒತ್ತೆಯಾಳುಗಳನ್ನು ಎರಡನೇ ಹಂತದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಮೂರನೇ ಹಂತದ ಅಂತ್ಯದ ವೇಳೆಗೆ ಎರಡೂ ಕಡೆಯವರು ಯುದ್ಧವನ್ನು ಕೊನೆಗೊಳಿಸುವ ಬಗ್ಗೆ ಒಪ್ಪಂದವೊಂದಕ್ಕೆ ಬರುತ್ತಾರೆ ಎಂಬ ನಿರೀಕ್ಷೆಯು ಹಮಾಸ್ ಪ್ರಸ್ತಾವದಲ್ಲಿ ಇದೆ. ಕದನ ವಿರಾಮ ಸಾಧ್ಯವಾದರೆ ಗಾಜಾಕ್ಕೆ ಆಹಾರ ಮತ್ತು ಇತರ ಅಗತ್ಯ ವಸ್ತುಗಳ ಪೂರೈಕೆಯು ಸುಗಮವಾಗಬಹುದು.

ಪ್ಯಾಲೆಸ್ಟೀನ್ ರಾಷ್ಟ್ರ ನಿರ್ಮಾಣವಾಗದೆ ಇಸ್ರೇಲ್‌ಗೆ ಮಾನ್ಯತೆ ಇಲ್ಲ: ಸೌದಿ

ರಿಯಾದ್ (ಎಎಫ್‌ಪಿ): ಸ್ವತಂತ್ರವಾದ ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಮಾನ್ಯತೆ ಸಿಗುವವರೆಗೆ ಇಸ್ರೇಲ್ ಜೊತೆ ರಾಜತಾಂತ್ರಿಕ ಸಂಬಂಧ ಸಾಧ್ಯವಿಲ್ಲ ಎಂದು ಸೌದಿ ಅರೇಬಿಯಾ, ಅಮೆರಿಕಕ್ಕೆ ಸ್ಪಷ್ಟಪಡಿಸಿದೆ.

‘1967ರ ಗಡಿಗೆ ಅನುಗುಣವಾಗಿ ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಮಾನ್ಯತೆ ಸಿಗಬೇಕು. ಪೂರ್ವ ಜೆರುಸಲೇಂ ಅದರ ರಾಜಧಾನಿ ಆಗಿರಬೇಕು’ ಎಂದು ಸೌದಿ ಅರೇಬಿಯಾ ಹೇಳಿರುವುದಾಗಿ ಅಲ್ಲಿನ ಸೌದಿ ಪ್ರೆಸ್ ಏಜೆನ್ಸಿ ತಿಳಿಸಿದೆ.

ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ಆಕ್ರಮಣ ಕೊನೆಗೊಳ್ಳಬೇಕು, ಇಸ್ರೇಲ್ ಪಡೆಗಳು ಅಲ್ಲಿಂದ ವಾಪಸ್ಸಾಗಬೇಕು ಎಂದೂ ಸೌದಿ ಅರೇಬಿಯಾ ಹೇಳಿದೆ. ಸೌದಿ ಅರೇಬಿಯಾ ದೇಶವು ಇಸ್ರೇಲ್ ದೇಶಕ್ಕೆ ಯಾವತ್ತೂ ಮಾನ್ಯತೆ ನೀಡಿಲ್ಲ. ಸೌದಿ ಅರೇಬಿಯಾ ಮತ್ತು ಇಸ್ರೇಲ್ ನಡುವಿನ ಸಂಬಂಧ ಸುಧಾರಣೆ ಕುರಿತ ಮಾತುಕತೆಗಳು ನಡೆಯುತ್ತಿವೆ, ಮಾತುಕತೆಗಳನ್ನು ಮುಂದುವರಿಸಲು ಎರಡೂ ದೇಶಗಳಿಗೆ ಒಪ್ಪಿಗೆ ಇದೆ ಎಂದು ಅಮೆರಿಕದ ಶ್ವೇತಭವನದ ರಾಷ್ಟ್ರೀಯ ಭದ್ರತಾ ಮಂಡಳಿಯ ವಕ್ತಾರರು ನೀಡಿದ್ದ ಹೇಳಿಕೆಗೆ ಪ್ರತಿಯಾಗಿ ಸೌದಿ ಅರೇಬಿಯಾ ಈ ಸ್ಪಷ್ಟನೆ ನೀಡಿದೆ.

ಇಸ್ರೇಲ್‌ಗೆ ಮಾನ್ಯತೆ ನೀಡಬೇಕು ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಸೌದಿ ಅರೇಬಿಯಾ ಮೇಲೆ ಒತ್ತಡ ತಂದಿದ್ದಾರೆ.

ಸಿರಿಯಾ ಮೇಲೆ ಇಸ್ರೇಲ್ ದಾಳಿ

ಡಮಾಸ್ಕಸ್ (ಎಪಿ): ಸಿರಿಯಾದ ಹೊಮ್ಸ್ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಇಸ್ರೇಲ್ ಮಂಗಳವಾರ ವಾಯುದಾಳಿ ನಡೆಸಿದ್ದು ಹಲವು ನಾಗರಿಕರು ಮೃತಪಟ್ಟಿದ್ದಾರೆ ಎಂದು ಸಿರಿಯಾ ಮಿಲಿಟರಿ ಬುಧವಾರ ತಿಳಿಸಿದೆ. ದಾಳಿಯಲ್ಲಿ ಹಲವರಿಗೆ ಗಾಯಗಳಾಗಿವೆ. ಈ ವಿಚಾರವಾಗಿ ಇಸ್ರೇಲ್ ಕಡೆಯಿಂದ ಪ್ರತಿಕ್ರಿಯೆ ಬಂದಿಲ್ಲ.

ದಾಳಿ ನಡೆದಿರುವ ಬಗ್ಗೆ ಸಿರಿಯಾ ಮಿಲಿಟರಿ ಅಧಿಕಾರಿಯೊಬ್ಬರು ಮಾಹಿತಿ ನೀಡಿರುವುದಾಗಿ ಅಲ್ಲಿನ ಸರ್ಕಾರಿ ಸ್ವಾಮ್ಯದ ಸುದ್ದಿಸಂಸ್ಥೆ ಸನಾ ವರದಿ ಮಾಡಿದೆ. ಲೆಬನಾನ್‌ನ ಕರಾವಳಿ ಪಟ್ಟಣ ಟ್ರಿಪೊಲಿಗೆ ಹೊಂದಿಕೊಂಡಿರುವ ಮೆಡಿಟರೇನಿಯನ್ ಸಮುದ್ರದ ಕಡೆಯಿಂದ ಇಸ್ರೇಲ್ ದಾಳಿ ನಡೆಸಿದೆ.

ಕನಿಷ್ಠ ಆರು ಮಂದಿ ನಾಗರಿಕರು ದಾಳಿಯಲ್ಲಿ ಬಲಿಯಾಗಿದ್ದಾರೆ ಎಂದು ಬ್ರಿಟನ್ನಿನಲ್ಲಿ ಇರುವ ಮಾನವ ಹಕ್ಕು ಸಂಘಟನೆಯೊಂದು ಹೇಳಿದೆ. ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರ ಸಂಘಟನೆಯ ಇಬ್ಬರು ಈ ದಾಳಿಗೆ ಬಲಿಯಾಗಿದ್ದಾರೆ. ಸಿರಿಯಾ ಸರ್ಕಾರದ ನಿಯಂತ್ರಣದಲ್ಲಿ ಇರುವ ಪ್ರದೇಶಗಳ ಮೇಲೆ ಇಸ್ರೇಲ್ ಈಚಿನ ವರ್ಷಗಳಲ್ಲಿ ನೂರಾರು ಬಾರಿ ದಾಳಿ ನಡೆಸಿದೆ.

ಸಿರಿಯಾ ಮೇಲೆ ನಡೆಸುವ ದಾಳಿಗಳನ್ನು ಇಸ್ರೇಲ್ ಒಪ್ಪಿಕೊಳ್ಳುವುದು ಬಹಳ ಕಡಿಮೆ. ಆದರೆ, ಇರಾನ್ ಜೊತೆ ನಂಟು ಹೊಂದಿರುವ ಬಂಡುಕೋರರ ನೆಲೆಗಳನ್ನು ತಾನು ಗುರಿಯಾಗಿಸಿಕೊಳ್ಳುವುದಾಗಿ ಅದು ಹೇಳಿದೆ.

19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಮಿಂಚಿದ ಬೀಡ್ ಪ್ರತಿಭೆ

ಅಪ್ಪನ ಕನಸಿನ ಹಾದಿಯಲ್ಲಿ ಸಚಿನ್

ನವದೆಹಲಿ (ಪಿಟಿಐ): ಯುವಪ್ರತಿಭೆ ಸಚಿನ್ ದಾಸ್ ಕ್ರಿಕೆಟಿಗನಾಗಿ ಬೆಳೆಯುವುದು ಅವರ ತಾಯಿಗೆ ಇಷ್ಟವಿರಲಿಲ್ಲ. ಪೊಲೀಸ್ ಅಧಿಕಾರಿಯಾಗಿರುವ ತಾಯಿಗೆ ತಮ್ಮ ಮಗ ಓದಿನಲ್ಲಿ ಮುಂದುವರಿಯಬೇಕೆಂಬ ಆಸೆ ಇತ್ತು. ಆದರೆ ಅಪ್ಪನಿಗೆ ತಮ್ಮ ಮಗ ಕ್ರಿಕೆಟಿಗನಾಗಲಿ ಎಂಬ ಹೆಬ್ಬಯಕೆ ಇತ್ತು.

ಇದೀಗ ಸಚಿನ್ ದಾಸ್ ತಮ್ಮ ತಂದೆಯ ಕನಸನ್ನು ನನಸು ಮಾಡುವತ್ತ ದಾಪುಗಾಲಿಟ್ಟಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಭರ್ಜರಿ 96 ರನ್ ಗಳಿಸಿದ ಸಚಿನ್ ತಮ್ಮ ನಾಯಕ ಉದಯ್ ಸಹಾರನ್ (81 ರನ್) ಅವರೊಂದಿಗಿನ ಜೊತೆಯಾಟದಲ್ಲಿ ತಂಡವನ್ನು ಗೆಲ್ಲಿಸಿದರು. ಭಾರತ ತಂಡವು ಫೈನಲ್ ತಲುಪಿದೆ.

‘ಫಿನಿಷರ್’ ಕಾರ್ಯವನ್ನು ಅಚ್ಚುಕಟ್ಟಾಗಿ ನಿಭಾಯಿಸಿರುವ ಅವರು 100ರ ಸ್ಟ್ರೈಕ್‌ರೇಟ್‌ನಲ್ಲಿ ಒಟ್ಟು 294 ರನ್ ಗಳಿಸಿದ್ದಾರೆ.

‘2005ರಲ್ಲಿ ನನ್ನ ಮಗ ಜನಿಸಿದ. ನಾನು ಸಚಿನ್ ತೆಂಡೂಲ್ಕರ್ ಅವರ ಕಟ್ಟಾ ಅಭಿಮಾನಿ. ಅದಕ್ಕಾಗಿ ಮಗನಿಗೆ ಸಚಿನ್ ಎಂದು ಹೆಸರಿಟ್ಟೆ. ನನಗೆ ವಿರಾಟ್ ಕೊಹ್ಲಿಯ ಆಟವೂ ಇಷ್ಟ’ ಎಂದು ಸಂಜಯ್ ದಾಸ್ ಹೇಳುತ್ತಾರೆ. ಸಚಿನ್ ಅವರು ವಿರಾಟ್ ಅಭಿಮಾನಿಯಂತೆ.

ಸಚಿನ್ ದಾಸ್ —ಐಸಿಸಿ ಎಕ್ಸ್ ಚಿತ್ರ

ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಸಚಿನ್ ಬಾಲ್ಯದಿಂದಲೂ ಕ್ರಿಕೆಟ್ ಅಭ್ಯಾಸ ಮಾಡಿದ್ದು 11 ಯಾರ್ಡ್ಸ್ (ಅರ್ಧ ಪಿಚ್) ಅಂಕಣಗಳಲ್ಲಿ. ಆದರೆ ಈಗ 19 ವರ್ಷದ ಸಚಿನ್ 22 ಯಾರ್ಡ್ಸ್‌ನಲ್ಲಿ ಸಂಚಲನ ಮೂಡಿಸುತ್ತಿದ್ದಾರೆ.

‘ಇಲ್ಲಿ (ಬೀಡ್) ನಿಮಗೆ ಎಲ್ಲಿ ಹೋದರೂ ಅರ್ಧ ಪಿಚ್ ಮಾತ್ರ ಲಭ್ಯವಿದೆ. ಸಚಿನ್ ನಾಲ್ಕೂವರೆ ವರ್ಷದ ಬಾಲಕನಾಗಿದ್ದಾಗ ತಂದೆಯೊಂದಿಗೆ ಇಲ್ಲಿ ಬಂದಿದ್ದ. ಇಲ್ಲಿಯೇ ತರಬೇತಿ ಪಡೆದು ಬೆಳೆದ ಹುಡುಗ. ಇತ್ತೀಚೆಗೆ ದಕ್ಷಿಣ ಆಫ್ರಿಕಾಗೆ ಹೋಗುವ ಮುನ್ನವೂ ಸಚಿನ್ ಇಲ್ಲಿಯೇ ಬಂದು ಅರ್ಧ ಪಿಚ್‌ನಲ್ಲಿ ಬಹಳಷ್ಟು ಅಭ್ಯಾಸ ಮಾಡಿದ್ದರು’ ಎಂದು ಸಚಿನ್ ಬಾಲ್ಯದ ಕೋಚ್ ಶೇಖ್ ಅಜರ್ ಹೇಳಿದ್ದಾರೆ.

‘ಪೊಲೀಸ್ ಅಧಿಕಾರಿಯಾಗಿರುವ ತಾಯಿಯು ಶಿಸ್ತುಬದ್ಧ ಜೀವನ ಕಲಿಸಿದ್ದಾರೆ. ಅದ್ದರಿಂದ ಸಚಿನ್ ಕೂಡ ಶಿಸ್ತಿನಿಂದ ಬೆಳೆದಿರುವುದರಿಂದ ಕ್ರಿಕೆಟ್ ಕಲಿಕೆಯು ಸುಲಭವಾಯಿತು’ ಎಂದೂ ಅವರು ಹೇಳುತ್ತಾರೆ.

ಸಚಿನ್ ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಾರೆ. ಕೊನೆಯ ಹಂತದ ಓವರ್‌ಗಳಲ್ಲಿ ಅವರು ಉತ್ತಮವಾಗಿ ಬ್ಯಾಟ್ ಬೀಸುತ್ತಾರೆ. ವೇಗವಾಗಿ ರನ್ ಗಳಿಸುತ್ತಾರೆ. ಸೆಮಿಫೈನಲ್ ಪಂದ್ಯದಲ್ಲಿ ಅವರು ಕ್ರೀಸ್‌ಗೆ ಬಂದಾಗ ಭಾರತ ತಂಡವು 31 ರನ್‌ಗಳಿಗೆ 4 ವಿಕೆಟ್ ಕಳೆದುಕೊಡಿತ್ತು. ನಂತರ ಸಚಿನ್ ಮತ್ತು ಉದಯ್ ಅವರಿಂದಾಗಿ ಪಂದ್ಯದ ಚಿತ್ರಣವೇ ಬದಲಾಯಿತು.

ಪಾಕ್– ಆಸ್ಟ್ರೇಲಿಯಾ ಹಣಾಹಣಿ ಇಂದು

ಬೆನೋನಿ (ದಕ್ಷಿಣ ಆಫ್ರಿಕಾ), (ಪಿಟಿಐ): ವೇಗದ ಬೌಲರ್ ನಸೀಮ್ ಶಾ ಈಗಾಗಲೇ ಪಾಕಿಸ್ತಾನ ತಂಡದಲ್ಲಿ ಪ್ರಭಾವಶಾಲಿಯಾಗಿ ಗುರುತಿಸಿಕೊಂಡಿದ್ದಾರೆ. ಈಗ ಅವರ ತಮ್ಮ ಉಬೇದ್ ಶಾ ಅವರು ಐಸಿಸಿ 19 ವರ್ಷದೊಳಗಿನವ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಆಡುತ್ತಿದ್ದು, ಪಾಕಿಸ್ತಾನದ ಪ್ರಮುಖ ಅಸ್ತ್ರವಾಗಿದ್ದಾರೆ.

ಇವೆರಡು ತಂಡಗಳ ನಡುವಣ ಎರಡನೇ ಸೆಮಿಫೈನಲ್ ಪಂದ್ಯ ಗುರುವಾರ ನಡೆಯಲಿದೆ. ಈ ಪಂದ್ಯದ ವಿಜೇತರು ಫೈನಲ್‌ನಲ್ಲಿ ಪ್ರಬಲ ಭಾರತ ತಂಡವನ್ನು ಭಾನುವಾರ ಎದುರಿಸಲಿದ್ದಾರೆ. ಭಾರತ ಒಂಬತ್ತನೇ ಸಲ ಫೈನಲ್‌ನಲ್ಲಿ ಆಡುತ್ತಿದೆ.



ಉಬೇದ್ ಶಾ

ಭಾರತ– ಪಾಕಿಸ್ತಾನ ತಂಡಗಳು 2006ರಲ್ಲಿ ಯುವ ವಿಶ್ವಕಪ್ ಫೈನಲ್‌ನಲ್ಲಿ ಕೊನೆಯ ಬಾರಿ ಮುಖಾಮುಖಿ ಆಗಿದ್ದವು. ಆ ತಂಡದಲ್ಲಿ ರೋಹಿತ್ ಶರ್ಮಾ, ಚೇತೇಶ್ವರ ಪೂಜಾರ ಮತ್ತು ರವೀಂದ್ರ ಜಡೇಜ ಆಡಿದ್ದರು. ಆ ಸಲ ಫೈನಲ್‌ನಲ್ಲಿ ಸರ್ಫರಾಜ್ ಅಹ್ಮದ್ ನೇತೃತ್ವದ ಪಾಕ್ ತಂಡ ಜಯಶಾಲಿಯಾಗಿತ್ತು. ಹಾಲಿ ವಿಶ್ವಕಪ್‌ನ ಯಶಸ್ವಿ ಬೌಲರ್‌ಗಳ ಪಟ್ಟಿಯಲ್ಲಿ ಉಬೇದ್ ಎರಡನೇ ಸ್ಥಾನದಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ಕ್ವೆನ ಮೆಫಕಾ ಅಗ್ರಸ್ಥಾನದಲ್ಲಿದ್ದಾರೆ. ತಮ್ಮ ಮೊದಲ ಪಂದ್ಯದಲ್ಲಿ (ಅಫ್ಗಾನಿಸ್ತಾನ ವಿರುದ್ಧ) 26 ರನ್ನಿಗೆ 4 ವಿಕೆಟ್ ಪಡೆದ ಉಬೇದ್ ನಂತರ ಹಿಂತಿರುಗಿ ನೋಡಿಲ್ಲ. ನಿರ್ಣಾಯಕ ಸಂದರ್ಭಗಳಲ್ಲಿ ವಿಕೆಟ್ ಪಡೆಯುತ್ತ ತಂಡದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ನ್ಯೂಜಿಲೆಂಡ್‌ಗೆ 281 ರನ್ ಜಯ

ಮೌಂಟ್ (ಎಪಿ): ಪ್ರಮುಖ ಆಟಗಾರರಿಲ್ಲದೇ ಬಂದ ದಕ್ಷಿಣ ಆಫ್ರಿಕಾ ತಂಡವನ್ನು ನಿರೀಕ್ಷೆಯಂತೆ ಆತಿಥೇಯ ನ್ಯೂಜಿಲೆಂಡ್ ತಂಡ ಮೊದಲ ಟೆಸ್ಟ್ ಪಂದ್ಯದಲ್ಲಿ ಬುಧವಾರ 281 ರನ್‌ಗಳಿಂದ ಸೋಲಿಸಿತು. ಆ ಮೂಲಕ ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಪಡೆಯಿತು.

ನ್ಯೂಜಿಲೆಂಡ್ ನಾಯಕ ಟಿಮ್ ಸೌಥೀ ಪಂದ್ಯದ ನಾಲ್ಕನೇ ದಿನವಾದ ಬುಧವಾರ ಬೆಳಿಗ್ಗೆ, ನಿನ್ನೆಯ ಮೊತ್ತಕ್ಕೆ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡರು. ಗೆಲುವಿಗೆ 528 ರನ್‌ಗಳ ಭಾರಿ ಗುರಿಯನ್ನು ಎದುರಿಸಿದ ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್‌ನಲ್ಲಿ 247 ರನ್‌ಗಳಿಗೆ ಆಲೌಟ್ ಆಯಿತು.

ಎಂಟರ ಘಟ್ಟಕ್ಕೆ ಅಮಿತ್, ಆಕಾಶ್

ಸೋಫಿಯಾ (ಬಲ್ಗೇರಿಯಾ) (ಪಿಟಿಐ): ಕಾಮನ್ವೆಲ್ತ್ ಕ್ರೀಡೆಗಳ ಸ್ವರ್ಣ ವಿಜೇತ ಅಮಿತ್ ಪಂಘಲ್, ರಾಷ್ಟ್ರೀಯ ಚಾಂಪಿಯನ್ ಆಕಾಶ್ ಮತ್ತು ಅಭಿಮನ್ಯು ಲೋರಾ ಅವರು ಬುಧವಾರ ಅಮೋಘ ಪ್ರದರ್ಶನದೊಡನೆ, 75ನೇ ಸ್ಟ್ರಾಂಡ್ಜಾ ಸ್ಮಾರಕ ಬಾಕ್ಸಿಂಗ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದರು.

ಅಮಿತ್ (51 ಕೆ.ಜಿ) ಅವರು ರುಡಿಕ್ ಮಾಕ್ಸಿಮ್ ಅವರನ್ನು 5–0ಯಿಂದ ಮಣಿಸಿದರು. 71 ಕೆ.ಜಿ. ವಿಭಾಗದಲ್ಲಿ ಆಕಾಶ್, ಫ್ರಾನ್ಸ್‌ನ ಟ್ರಾವೊರ್ ಮಾಕನ್ ಅವರನ್ನು 3–1 ರಿಂದ ಸೋಲಿಸಿದರು.

ಹರಿಯಾಣದ ಅಭಿಮನ್ಯು ಅವರು 80 ಕೆ.ಜಿ. ವಿಭಾಗದಲ್ಲಿ ಫ್ರಾನ್ಸ್‌ನ ಮೋನಿ ರಾಫೆಲ್ ಅವರನ್ನು 5–0ಯಿಂದ ಸೋಲಿಸಿದರು.

ವನಿತಾ ಫುಟ್‌ಬಾಲ್ ಫೈನಲ್ ಇಂದು

ಢಾಕಾ (ಪಿಟಿಐ): ಭಾರತ ತಂಡ, ಸ್ಯಾಫ್ 19 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಗುರುವಾರ ಆತಿಥೇಯ ಬಾಂಗ್ಲಾದೇಶವನ್ನು ಎದುರಿಸಲಿದ್ದು, ಪ್ರಶಸ್ತಿ ಬರ ನೀಗಿಸುವ ಗುರಿಯಲ್ಲಿದೆ.

ಮಹಿಳಾ ಫುಟ್‌ಬಾಲ್‌ನಲ್ಲಿ ಸಾಕಷ್ಟು ಸುಧಾರಣೆಯಾಗಿದ್ದರೂ, ಸ್ಯಾಫ್ ವಯೋವರ್ಗ ಚಾಂಪಿಯನ್ ಷಿಪ್‌ನಲ್ಲಿ ಭಾರತ ಅಷ್ಟೇನೂ ಉತ್ತಮ ನಿರ್ವಹಣೆ ತೋರಿಲ್ಲ. ಕಳೆದ ವರ್ಷ ಢಾಕಾದಲ್ಲೇ ನಡೆದಿದ್ದ 20 ವರ್ಷದೊಳಗಿನವರ ಮಹಿಳಾ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಆತಿಥೇಯರು ಭಾರತ ತಂಡವನ್ನು ಸೋಲಿಸಿ ಟ್ರೋಫಿ ಗೆದ್ದಿದ್ದರು.

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ್ 1 ಆಯುರ್ವೇದಿಕ್ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದ ದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ, ಯಾವುದೇ ಅಡ್ಡ ಪರಿಣಾಮ ಇಲ್ಲ. ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.

ಸಂಪರ್ಕಿಸಿ :
08037836183

ಅಪರೂಪದ 10 ಆಯುರ್ವೇದಿಕ ಮೂಲಿಕೆಗಳ ಸಾರಗಳಿಂದ ಅಥವಾ ತೈಲಗಳಿಂದ ತಯಾರಿಸಲಾದ ಡಾ. ಆರ್ಥೋ ಸ್ಟ್ರಾಂಗ್ ಆಯಿಲ್, ನೋವಿರುವ ಭಾಗದಲ್ಲಿ ಆಳಕ್ಕಿಳಿಯುತ್ತದೆ ಮತ್ತು ಪರಿಣಾಮಕಾರಿಯಾಗಿ ನೋವು ನಿವಾರಿಸಲು ನೆರವಾಗುತ್ತದೆ. ದಿನಕ್ಕೆ 1–2 ಬಾರಿ ನೋವಿರುವ ಭಾಗದ ಮೇಲೆ 8–10 ಮಿ.ಲೀ. ಆಯಿಲ್ ಹಾಕಿ ಮೃದುವಾಗಿ ಮಸಾಜ್ ಮಾಡಿರಿ. ಇದರ ಪರಿಣಾಮಗಳು ತಾತ್ಕಾಲಿಕವಾಗಿರದೆ, ದೀರ್ಘಕಾಲದವರೆಗೆ ನೋವಿನಿಂದ ಮುಕ್ತಿ ನೀಡುತ್ತವೆ.

24x7 Helpline: 78769 77777 | www.drorthooil.com

ವೇರಿಯಂಟ್	ಎಕ್ಸ್ ಶೋರೂಂ	ಕ್ಯಾಶ್ಬ್ಯಾಕ್**	ಅಶ್ಯೂರ್ಡ್ ಎಕ್ಸ್‌ಚೇಂಜ್**	TecPac ಬೆಲೆ
ಪ್ರೀಮಿಯಂ (₹)	135463/-	6500/-	8500/-	9000/-
ಅರ್ಬೇನ್ (₹)	115001/-	5000/-	-	8000/-

ಪರಿಣಿತರಿಂದ ಉಚಿತ ವಿನಿಮಯ ಮೌಲ್ಯಮಾಪನಕ್ಕಾಗಿ ನಿಮ್ಮ ದ್ವಿಚಕ್ರ ವಾಹನವನ್ನು ತನ್ನಿ | *ಎಕ್ಸ್–ಶೋರೂಮ್ ಬೆಲೆ **ಕರ್ನಾಟಕ** | Book now at **www.chetak.com**

CHETAK EXPERIENCE CENTRES AT: INDIRANAGAR 6366817934 | RAJAJI NAGAR 6366817932 | CHANDRA LAYOUT 9886026943 | MEKRI CIRCLE 7406688896 HRBR LAYOUT 6366817933 | BANSHANKARI 6366817931 | ELECTRONIC CITY 7406688897 | MYSORE 6366948829 | MANGALORE 9606236517 | UDUPI 7204391777 HUBLI 9901698932 | BELGAUM 7349773954 | GULBARGA 9986191777 | DAVENGERE 7259137999 | HASSAN 9743808389 | BIJAPUR 8150008231

*ಚೇತಕ್ ಅರ್ಬೇನ್ ವೇರಿಯಂಟಿಗೆಪ್ರಾರಂಭವಾಗುವ FAME ಸಬ್ಸಿಡಿಯನ್ನು ಒಳಗೊಂಡಂತೆ ಪರಿಣಾಮಕಾರಿ ಎಕ್ಸ್-ಶೋರೂಮ್ ಬೆಲೆ. ಚೇತಕ್ ಚಿತ್ರವನ್ನು ಕೇವಲ ಜಾಹೀರಾತಿನ ಉದ್ದೇಶಕ್ಕಾಗಿ ಕಂಪ್ಯೂಟರ್ ಗ್ರಾಫಿಕ್ಸ್ ಸಹಾಯದಿಂದ ವಿವರಿಸಲಾಗಿದೆ. ತೋರಿಸಿರುವ ವೈಶಿಷ್ಟ್ಯಗಳು, ವಿಶೇಷಣಗಳು ಮತ್ತು ಪರಿಕರಗಳು ಪ್ರಮಾಣಿತ ಫಿಟ್‌ಮೆಂಟ್‌ನ ಭಾಗವಾಗಿರದೇ ಇರಬಹುದು ಮತ್ತು ಬದಲಾಗಬಹುದು. ನಿಜವಾದ ಬಣ್ಣಗಳು ಮತ್ತು ಅಪ್‌ಹೋಲ್‌ಸ್ಟ್ರಿ ಬದಲಾಗಬಹುದು. ಸವಾರಿ ಮಾಡುವಾಗ ದಯವಿಟ್ಟು RTO ಮಾರ್ಗಸೂಚಿಗಳನ್ನು ಅನುಸರಿಸಿ. **ಅಧಿಕೃತ ಡೀಲರ್‌ಶಿಪ್‌ನಲ್ಲಿ ಮಾತ್ರ ಆಯ್ದ ಬ್ಯಾಂಕ್‌ಗಳ ಕಾರ್ಡ್‌ಗಳ ವಿರುದ್ಧ ಕ್ಯಾಶ್‌ಬ್ಯಾಕ್. ಆಯ್ದ ಡೀಲರ್‌ಶಿಪ್‌ಗಳಲ್ಲಿ ಮಾತ್ರ ಆಫರ್. ಸೂಚನೆ ಇಲ್ಲದೆಯೇ ಕೊಡುಗೆಯನ್ನು ಹಿಂಪಡೆಯಬಹುದು/ಮಾರ್ಪಡಿಸಬಹುದು. ಇನ್‌ವಾಯ್ಸ್ ದಿನಾಂಕದಿಂದ ಆಫರ್ ಅನ್ವಯವಾಗುತ್ತದೆ. #TecPac + 2 ವರ್ಷಗಳ ಪಾವತಿಸಿದ ವಿಸ್ತೃತ ವಾರಂಟಿಯೊಂದಿಗೆ ಲಭ್ಯವಿದೆ, ಆನ್‌ಲೈನ್‌ನಲ್ಲಿ ಖರೀದಿಸಬಹುದು. ಫೈನಾನ್ಸ್ ಸ್ವಂತ ವಿವೇಚನೆಯಡಿ ನೀಡಲಾಗುವುದು.